ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆಲ್ ಇಂಡಿಯಾ ಫೈನಲ್

ಭಾರತದ ಕೊನೇರು ಹಂಪಿ ಮತ್ತು ದಿವ್ಯಾ ದೇಶ್‌ಮುಖ್ ಫಿಡೆ ವಿಶ್ವಕಪ್ ಚೆಸ್ ಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದಾರೆ. 19 ವರ್ಷದ ದಿವ್ಯಾ ದೇಶ್‌ಮುಖ್ ಮಾಜಿ ವಿಶ್ವ ನಂ.1 ಆಟಗಾರ್ತಿ ತಾನ್ ಝೊಂಗಿ ಅವರನ್ನು ಸೋಲಿಸಿದರೆ ಹಂಪಿ ಚೀನಾದ ಲೀ ತಿಂಗ್ಜೀಯನ್ನು ಸೋಲಿಸಿ ಫೈನಲ್‌ಗೇರಿದರು.

ಆಸ್ತಿ ತೆರಿಗೆ ಮೇಲೆ 1% ಫೈರ್ ಸೆಸ್ ವಿಧಿಸಲು ಸಚಿವ ಸಂಪುಟ ಸಭೆ ಅಸ್ತು

ಬಹುಮಹಡಿಗೆ ಬೆಂಕಿ ಸೆಸ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆಸ್ತಿ ತೆರಿಗೆ, ಮೆಟ್ರೋ, ಬಸ್ ಟಿಕೆಟ್ ದರ, ಹಾಲಿನ ದರ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನತೆ ಮತ್ತೊಂದು ಕರ ಭಾರ ಹೊರಲು



ಸಿದ್ಧರಾಗಬೇಕಿದೆ. ಬಹುಮಹಡಿ ಮತ್ತು ಎತ್ತರದ ಕಟ್ಟಡಗಳಿಗೆ ಆಸ್ತಿ ತೆರಿಗೆಯಲ್ಲಿ ಶೇ. ಒಂದರಷ್ಟು ಸೆಸ್ ವಿಧಿಸುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಅಗ್ನಿಶಾಮಕ ದಳದ ಕಾಯ್ದೆ ಅನ್ವಯ ಆಗುವ ಎಲ್ಲ ವಾಣಿಜ್ಯ ಕಟ್ಟಡಗಳು, ಕೈಗಾರಿಕೆಗಳು, ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳು ಸೇರಿ ಬಹುಮಹಡಿ ಕಟ್ಟಡಗಳಿಗೆ ಶೇ.1ರ ಸೆಸ್ ಅನ್ವಯವಾಗಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಪ್ರಕರಣಕ್ಕೆ ಕಾರಣಕರ್ತರಾದ ಪೊಲೀಸ್ ಅಧಿಕಾ ರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮತ್ತು ಆರ್‌ಸಿಬಿ, ಡಿಎನ್‌ಎ ಹಾಗೂ ಕೆಎಸ್‌ಸಿಎ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವ ನಿರ್ಧಾರ ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳಿಗೆ ಸಂಪುಟ ಅನುಮೋದನೆ ದೊರೆತಿದೆ.

ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಅಗ್ನಿಶಾಮಕ ಇಲಾಖೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸರಕಾರ

ಕರ್ನಾಟಕ ಫೈರ್ ಫೋರ್ಸ್ ಆ್ಯಕ್ಟ್ 1964 ರ ಕಲಂ 15 ಕ್ಕೆ ತಿದ್ದುಪಡಿ ತರಲಾಗಿದೆ. ಸದ್ಯ ಈ ತಿದ್ದುಪಡಿಯ ಪ್ರಕಾರ ಹೊಸದಾಗಿ ನಿರ್ಮಾಣವಾಗುವ ಬಹುಮಹಡಿ ಕಟ್ಟಡಗಳಿಗೆ ಮಾತ್ರ ಅಗ್ನಿ ಸೆಸ್ ಕಟ್ಟುವುದು ಅನ್ವಯ ಆಗಲಿದೆ. ಮಹಾನಗರ ಪಾಲಿಕೆ, ಪಟ್ಟಣ ಪಂಚಾಯಿತಿ, ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆಯೊಂದಿಗೆ ಸೆಸ್ ಸಂಗ್ರಹಿಸಲಾಗುವುದು. ಸದ್ಯ ಈಗಾಗಲೇ ನಿರ್ಮಾಣವಾಗಿರುವ ಬಹುಮಹಡಿ ಕಟ್ಟಡಗಳಿಗೆ ಇದು ಅನ್ವಯ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಅಸಂಘಟಿತ ವಲಯದ ಕಾರ್ಮಿಕರು ಅಪಘಾತದಲ್ಲಿ ಮರಣ ಹೊಂದಿದರೆ ಅಪಘಾತ ಪರಿಹಾರ ಮತ್ತು ಜೀವ ವಿಮೆ ಸೇರಿ ಒಟ್ಟು 4 ಲಕ್ಷ ಜೀವವಿಮೆ ಒದಗಿಸುವ ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ ಜಾರಿಗೂ ಸಂಪುಟ ಒಪ್ಪಿಗೆ ನೀಡಿದೆ. ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರ ನೀತಿ 2024 – 2029ಕ್ಕೆ ತಿದ್ದುಪಡಿ ಮಾಡಲು ಅನುಮೋದನೆ ನೀಡಿದೆ. ನೀತಿ ದಾಖಲೆಗಳಲ್ಲಿ ಸ್ಪಷ್ಟತೆ ಹಾಗೂ ನಿಖರತೆ ತರಲು ಈ ತಿದ್ದುಪಡಿ ತರಲಾಗುತ್ತಿದೆ. ಭಾಷೆ ಮತ್ತು ವಿವರಣೆಗೆ ಸೀಮಿತವಾಗಿರುವ ಬದ ಲಾವಣೆ ಪರಿಷ್ಕರಿಸಿ ನಿಖರತೆ ತರುವ ನೀತಿಗೆ ಒಪ್ಪಿಗೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಾಲ್ತುಳಿತ: ಕ್ರಿಮಿನಲ್ ಕೇಸ್‌ಗೆ ನಿರ್ಧಾರ

ಐವರು ಪೊಲೀಸ್ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ

ಆರ್‌ಸಿಬಿ ಕ್ರಿಕೆಟ್ ತಂಡದ ವಿಜಯೋತ್ಸವ ಸಮಾರಂಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಉಂಟಾದ ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿ.ಕುನ್ಹಾ ಅವರ ನೇತೃತ್ವದ ಏಕ ಸದಸ್ಯ ವಿಚಾರಣಾ ಆಯೋಗದ ವರದಿಯನ್ನು ಸಚಿವ ಸಂಪುಟ ಅಂಗೀಕರಿಸಿದೆ. ಕಾಲ್ತುಳಿತಕ್ಕೆ ಕಾರಣರಾದ ಖಾಸಗಿ ಸಂಸ್ಥೆ ಹಾಗೂ ಸರ್ಕಾರಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಖಾಸಗಿ ಸಂಸ್ಥೆಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ತೀರ್ಮಾನಿಸಿದ್ದರೆ, ಸರಕಾರಿ ಅಧಿಕಾರಿಗಳ ವಿರುದ್ಧ ಇಲಾಖಾವಾರು ವಿಚಾರಣೆ ನಡೆಸಲು ಒಳಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದರು.

ಏಕಸದಸ್ಯ ವಿಚಾರಣಾ ಆಯೋಗವು ಐಪಿಎಸ್ ಅಧಿಕಾರಿಗಳಾದ ಬಿ.ದಯಾನಂದ್, ವಿಕಾಸ್ ಕುಮಾರ್ ವಿಕಾಸ್, ಶೇಖರ್ ಟೆಕ್ಕನವರ್, ಎಸಿಪಿ ಸಿ.ಬಾಲಕೃಷ್ಣ, ಪೊಲೀಸ್ ಇನ್‌ಸ್ಪೆಕ್ಟರ್ ಗಿರೀಶ್ ಎ. ಕೆ. ವಿಜಯೋತ್ಸವನ್ನು ತಡೆಯಲು

ವಿಫಲರಾಗಿದ್ದಾರೆ ಎಂದು ತಿಳಿಸಿತ್ತು. ಆಯೋಗದ ವರದಿಯಂತೆ ಈ ಪೊಲೀಸ್ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ. ಇದಲ್ಲದೆ, ಕೆಎಸ್‌ಸಿಎ, ಡಿಎನ್‌ಎ ಹಾಗೂ ಆರ್‌ಸಿಬಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ವಿಚಾರಣಾ ಆಯೋಗದ ಶಿಫಾರಸಿನಂತೆ ಕೆಎಸ್‌ಸಿಎ ಅಧ್ಯಕ್ಷ ರಘುರಾಮ ಭಟ್, ಮಾಜಿ ಕಾರ್ಯದರ್ಶಿ ಎ.ಶಂಕರ್, ಮಾಜಿ ಖಜಾಂಜಿ ಜಯರಾಂ ಇ.ಎಸ್, ಆರ್‌ಸಿಬಿ ಸಂಸ್ಥೆಯ ಉಪಾಧ್ಯಕ್ಷ ರಾಜೇಶ್ ಮೆನನ್, ಡಿಎನ್‌ಎ ಸಂಸ್ಥೆಯ ಎಂಡಿ ಡಾ.ಟಿ. ವೆಂಕಟ್ ವರ್ಧನ್, ಉಪಾಧ್ಯಕ್ಷ ಸುನಿಲ್ ಮಾಥುರ್ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದರು.

ಹೈಕೋರ್ಟ್ ಮಾಡಿದ ತಪ್ಪು ಮಾಡಲ್ಲ, ತರಾತುರಿ ಆದೇಶ ಕೊಡಲ್ಲ ಎಂದ ಪೀಠ

ಡಿ ಗ್ಯಾಂಗ್ ಜಾಮೀನಿಗೆ ಸುಪ್ರೀಂಕೋರ್ಟ್ ಗರಂ

ದೆಹಲಿ/ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್‌ಗೆ ಜಾಮೀನು ಮಂಜೂರು ಮಾಡಿರುವ ಹೈಕೋರ್ಟ್ ಆದೇಶ

ಪ್ರಶ್ನಿಸಿ ರಾಜ್ಯ ಸರಕಾರ ಸಲ್ಲಿಸಿರುವ ಮೇಲ್ಮನವಿ ಅರ್ಜಿ ವಿಚಾರಣೆ ಪೂರ್ಣಗೊಳಿಸಿರುವ ಸುಪ್ರೀಂಕೋರ್ಟ್ ತೀರ್ಪು ಕಾದಿರಿಸಿದೆ. ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲ ಮತ್ತು ನ್ಯಾಯಮೂರ್ತಿ ಆರ್. ಮಹಾದೇವನ್ ಅವರ ನ್ಯಾಯಪೀಠವು ಜಾಮೀನು ಮಂಜೂರು ಮಾಡಿರುವ ಹೈಕೋರ್ಟ್ ಆದೇಶದ ವಿರುದ್ಧ ಮತ್ತೊಮ್ಮೆ ತೀವ್ರ ಅಸಮಾಧಾನ ಹೊರ ಹಾಕಿದೆ. ಮುಂದಿನ ಒಂದು ವಾರದೊಳಗೆ ಪ್ರಕರಣ ಸಂಬಂಧ ಲಿಖಿತ ಹೇಳಿಕೆಗಳನ್ನು ದಾಖಲಿಸುವಂತೆ ಆರೋಪಿಗಳ ಪರ ವಕೀಲರಿಗೆ ಪೀಠ ಸೂಚಿಸಿದೆ.

ಇದೇ ವೇಳೆ ಜಾಮೀನು ಮಂಜೂರು ಮಾಡಿರುವ ಹೈಕೋರ್ಟ್ ಆದೇಶದ ವಿರುದ್ಧ ನ್ಯಾಯಮೂರ್ತಿ ಪರ್ದಿವಾಲಾ ಅವರು ಬೇಸರ ವ್ಯಕ್ತಪಡಿಸಿದರು. ಪ್ರಕರಣದಲ್ಲಿ ಆರೋಪಿಗಳಿಗೆ ಜಾಮೀನು ನೀಡಿರುವ ಹೈಕೋರ್ಟ್‌ನ ಆದೇಶ ಆರೋಪಿಗಳನ್ನು ಖುಲಾಸೆಗೊಳಿಸುವ ಆದೇಶವಾಗಿದೆ ಎಂದು ಅನಿಸುತ್ತಿಲ್ಲವೇ? ಹೈಕೋರ್ಟ್ ಎಲ್ಲಾ ಜಾಮೀನು ಅರ್ಜಿಗಳ ಮೇಲೆ ಇದೇ ರೀತಿಯ ಆದೇಶವನ್ನು ಕೊಡುತ್ತದೆಯೇ? ಎಂದು ದರ್ಶನ್ ಪರ ವಕೀಲರನ್ನು ನ್ಯಾಯಮೂರ್ತಿ ಪರ್ದಿವಾಲಾ ಪ್ರಶ್ನಿಸಿದರು.

ಹೈಕೋರ್ಟ್‌ನ ವಿಧಾನ ನಮಗೆ ತೊಂದರೆಯಾಗುತ್ತಿದೆ. ಸೆಷನ್ಸ್ ಕೋರ್ಟ್ ಇಂತಹ ತಪ್ಪು ಮಾಡಿದರೆ ನಾವು ಅರ್ಥ ಮಾಡಿಕೊಳ್ಳಬಹುದು. ಆದರೆ ಹೈಕೋರ್ಟ್ ನ್ಯಾಯಮೂರ್ತಿಗಳ ಆದೇಶ ವಿವೇಚನರಹಿತ ವಾಗಿದೆ. ಇದನ್ನು ನಾವು ಪರಿಶೀಲಿಸುತ್ತಿದ್ದೇವೆ. ಹೈಕೋರ್ಟ್ ನ್ಯಾಯಾಂಗೀಯವಾಗಿ ತನ್ನ ವಿವೇಚನೆಯನ್ನು ಬಳಸಿದೆಯೇ ಎಂಬುದು ಕಳವಳಕಾರಿ ವಿಷಯ. ನಾವು ಅಪರಾಧ ಸಾಬೀತು ಅಥವಾ ಖುಲಾಸೆ ಗಾಗಿ ಯಾವುದೇ ತೀರ್ಪು ನೀಡುವುದಿಲ್ಲ ಎಂದು ನ್ಯಾಯಮೂರ್ತಿ ಪರ್ದಿವಾಲಾ ಹೇಳಿದರು. → 4

ಹೈಕೋರ್ಟ್‌ಗೆ ತರಾಟೆ!

ಆರೋಪಿಗಳು ನಿರಪರಾಧಿ ಎನ್ನುವ ರೀತಿ ಹೈಕೋರ್ಟ್ ಬೇಲ್ ಕೊಟ್ಟಿದೆ. ನಿಮಗೂ ಕೂಡ ಈ ರೀತಿ ಅನ್ನಿಸುತ್ತಿಲ್ವಾ? ಎಲ್ಲಾ ಪ್ರಕರಣಗಳಲ್ಲೂ ಹೈಕೋರ್ಟ್ ಹೀಗೆ ಮಾಡುತ್ತಾ?. ವಿಚಾರಣಾ ನ್ಯಾಯಾಲಯ ತಪ್ಪು ಮಾಡಿದರೆ ತಪ್ಪಾಗಿದೆ ಅನ್ನಬಹುದು. ಹೈಕೋರ್ಟ್ ಹೀಗೆ ಮಾಡಿದರೆ ಹೇಗೆ?. ನಾವು ಹೈಕೋರ್ಟ್ ಮಾಡಿದ ತಪ್ಪು ಮಾಡಲ್ಲ, ತರಾತುರಿಯಲ್ಲಿ ಆದೇಶ ಕೊಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಎಸ್ಸೆಸ್ಸೆಲ್ಸಿ, ಪಿಯುಗೆ 33% ಪಾಸ್ ಮಾರ್ಕ್ಸ್

ಬೆಂಗಳೂರು: ಕರ್ನಾಟಕದಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುವ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳ ಮಕ್ಕಳು ಇನ್ನುಮುಂದೆ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾದರಿಯಲ್ಲೇ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆ ಬರೆಯಲಿದ್ದು, ಲಿಖಿತ ಪರೀಕ್ಷೆ ಹಾಗೂ ಆಂತರಿಕ ಅಂಕಗಳೂ ಸೇರಿ 100ಕ್ಕೆ ಕನಿಷ್ಠ ಶೇ. 33 ಅಂಕ ಪಡೆದರೂ ಉತ್ತೀರ್ಣರಾಗಲಿದ್ದಾರೆ. ಈ ಸಂಬಂಧ ರಾಜ್ಯ ಸರಕಾರವು ಗುರುವಾರ ಅಧಿಕೃತ ಅಧಿಸೂಚನೆ ಹೊರಡಿಸಿದೆ.

ಹೊಸ ನಿಯಮಗಳು 2025–26ನೇ ಶೈಕ್ಷಣಿಕ ವರ್ಷದಿಂದ ಮತ್ತು ನಂತರದ ಶೈಕ್ಷಣಿಕ ವರ್ಷದಿಂದ ಮಂಡಳಿಯ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೆ ಅನ್ವಯವಾಗಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಎರಡೂ ಸೇರಿ ಒಟ್ಟಾರೆ ಸರಾಸರಿ 33% ಅಂಕಗಳನ್ನು ಪಡೆದು, ಒಟ್ಟು 625 ಅಂಕಗಳಿಗೆ ಕನಿಷ್ಠ 206 ಅಂಕಗಳನ್ನು ಗಳಿಸಿದಲ್ಲಿ ಮತ್ತು ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಕನಿಷ್ಠ 30% ಅಂಕಗಳನ್ನು ಪಡೆದಲ್ಲಿ ಅಂತಹ ಅಭ್ಯರ್ಥಿಯನ್ನು ಉತ್ತೀರ್ಣರೆಂದು ಘೋಷಿಸಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ಮಾಹಿತಿ ನೀಡಲಾಗಿದೆ.

ಐತಿಹಾಸಿಕ ವ್ಯಾಪಾರ ಒಪ್ಪಂದಕ್ಕೆ ಮೋದಿ–ಸ್ಟಾರ್ಮರ್ ಸಹಿ

ಭಾರತ–ಬ್ರಿಟನ್ ಮುಕ್ತ ಒಪ್ಪಂದ

ಲಂಡನ್: ಭಾರತ ಮತ್ತು ಬ್ರಿಟನ್ ನಡುವಿನ ಬಹುನಿರೀಕ್ಷಿತ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್ ಗುರುವಾರ ಸಹಿ ಹಾಕಿದ್ದಾರೆ. ಉಭಯ ನಾಯಕರೂ ಈ ಒಪ್ಪಂದ 'ಐತಿಹಾಸಿಕ' ಎಂದು ಬಣ್ಣಿಸಿದ್ದಾರೆ.

ಹಲವು ವರ್ಷಗಳ ಕಠಿಣ ಪರಿಶ್ರಮದ ನಂತರ ಎರಡೂ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದವು ಉಭಯ ದೇಶಗಳ ನಾಗರಿಕರ ಜೀವನ ಮಟ್ಟವನ್ನು ಸುಧಾರಿಸುತ್ತದೆ ಮತ್ತು ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು. ಈ ಒಪ್ಪಂದವು ಕೇವಲ ವ್ಯಾಪಾರದ ಬಗ್ಗೆ ಅಲ್ಲ, ಭಾರತ–ಬ್ರಿಟನ್ ಸಂಬಂಧಗಳಲ್ಲಿ ಹೊಸ ಆರಂಭ ಎಂದು ಕೀರ್ ಸ್ಟಾರ್ಮರ್ ಹೇಳಿದರು.

ಬ್ರಿಟನ್–ಭಾರತ ವ್ಯಾಪಾರ ಒಪ್ಪಂದದ ಸಂಕೇತವಾಗಿ ಮೋದಿ- ಸ್ಟಾರ್ಮರ್ ಚಹಾ ಸೇವನೆ

ಭಾರತಕ್ಕೆ ಅತಿ ಹೆಚ್ಚು ಲಾಭ: ಒಪ್ಪಂದದ ಅನುಷ್ಠಾನದ ನಂತರ, ಮುಂದಿನ ಕೆಲವು ವರ್ಷಗಳಲ್ಲಿ ಭಾರತದ ರಫ್ತು 10 ರಿಂದ 12 ಶತಕೋಟಿ ಡಾಲರ್‌ಗಳಷ್ಟು ಹೆಚ್ಚುವ ನಿರೀಕ್ಷೆ ಇದೆ. ಇದು ಭಾರತೀಯ ಉತ್ಪಾದನೆ ಮತ್ತು ಸೇವಾ ವಲಯವನ್ನು ಬಲಪಡಿಸುವ ನಿರೀಕ್ಷೆ ಇದೆ. → 4

ರಷ್ಯಾ ವಿಮಾನ ಪತನ 48 ಮಂದಿ ಸಾವು

ಮಾಸ್ಕೋ: ತಾಂತ್ರಿಕ ದೋಷದಿಂದ ರಷ್ಯಾದ ವಿಮಾನ ಪೂರ್ವ ಅಮುರ್ ಪ್ರದೇಶದಲ್ಲಿ ಪತನಗೊಂಡಿದ್ದು ವಿಮಾನದಲ್ಲಿದ್ದ ಎಲ್ಲ 50 ಮಂದಿ ಪ್ರಯಾಣಿಕರು ಸಾವನ್ನಪ್ಪಿದ್ದಾರೆ.

ಸೈಬೀರಿಯಾ ಮೂಲದ ಅಂಗಾರ ಎಂಬ ವಿಮಾನಯಾನ ಸಂಸ್ಥೆಯಿಂದ ನಿರ್ವಹಿಸಲ್ಪಡುತ್ತಿದ್ದ ಎಎನ್–24 ಸಂಖ್ಯೆಯ ವಿಮಾನ ಚೀನಾದ ಗಡಿಯಲ್ಲಿರುವ ಅಮುರ್ ಪ್ರದೇಶದ ಟಿಂಡಾ ಪಟ್ಟಣದ ಬಳಿ ರಾಡಾರ್‌ನಿಂದ ಸಂಪರ್ಕ ಕಳೆದುಕೊಂಡಿತು. ಇದಾದ ಕೆಲವೇ ಕ್ಷಣಗಳಲ್ಲಿ ಪತನಗೊಂಡಿರುವುದು ತಿಳಿದುಬಂದಿದೆ. ವಿಮಾನದಲ್ಲಿ ಐದು ಮಕ್ಕಳು ಸೇರಿದಂತೆ 43 ಪ್ರಯಾಣಿಕರು, ಆರು ಸಿಬ್ಬಂದಿ ಇದ್ದರು. ಈ ಘಟನೆಯು ರಷ್ಯಾದ ವಿಮಾನಯಾನ ಇತಿಹಾಸದಲ್ಲಿ ಆತಂಕಕಾರಿ ಘಟನೆಯಾಗಿದೆ. ತನಿಖೆಯನ್ನು ತೀವ್ರಗೊಳಿಸಲಾಗಿದೆ. ವಿಮಾನವು ಖಬರೋವ್ಸ್ಕ್ - ಬ್ಲಾಗೊವೆಶ್ಚೆನ್ಸ್ಕ್ -ಟಿಂಡಾ ಮಾರ್ಗದಲ್ಲಿ ಸಂಚರಿಸುತ್ತಿತ್ತು ಎಂದು ಪ್ರಾದೇಶಿಕ ಗವರ್ನರ್ ವಾಸಿಲಿ ಓರ್ಲೋವ್ ತಿಳಿಸಿದ್ದಾರೆ.

ಈ ಘಟನೆಯ ಕಾರಣದ ಬಗ್ಗೆ ಇನ್ನೂ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ, ಆದರೆ ತಾಂತ್ರಿಕ ದೋಷ, ಪಕ್ಷಿಗಳ ಡಿಕ್ಕಿ, ಅಥವಾ ಇತರ ಬಾಹ್ಯ ಕಾರಣಗಳಿರಬಹುದು ಎಂದು ಊಹಿಸಲಾಗುತ್ತಿದೆ. ತುರ್ತು ರಕ್ಷಣಾ ತಂಡಗಳು ಈಗಾಗಲೇ ತನಿಖೆ ಮತ್ತು ಶೋಧ ಕಾರ್ಯಾಚರಣೆಯಲ್ಲಿ ತೊಡಗಿವೆ.

ನಿಲ್ಲದ ಬಿಹಾರ ಗದ್ದಲ ಲೋಕ ಕಲಾಪ ಬಲಿ

ದೆಹಲಿ: ಬಿಹಾರದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆಯನ್ನು ಹಿಂಪಡೆಯುವಂತೆ ಒತ್ತಾಯಿಸಿ ಪ್ರತಿಪಕ್ಷಗಳು ನಿರಂತರ ಪ್ರತಿಭಟನೆ ನಡೆಸಿದ ಕಾರಣ, ಸತತ ನಾಲ್ಕನೇ ದಿನವಾದ ಗುರುವಾರವೂ ಲೋಕಸಭಾ ಕಲಾಪವನ್ನು ಮುಂದೂಡಲಾಯಿತು. ವಿಪಕ್ಷದ ಸದಸ್ಯರು ಘೋಷಣೆಗಳನ್ನು ಕೂಗುತ್ತಾ, ಸದನದ ಬಾವಿಗಿಳಿದು, ಫಲಕಗಳನ್ನು ಪ್ರದರ್ಶಿಸಿದರು. ಸ್ಪೀಕರ್ ಓಂ ಬಿರ್ಲಾ ಹಿರಿಯ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರ ಹೆಸರನ್ನು ಪ್ರಸ್ತಾಪಿಸಿ, ಘೋಷಣೆ ಮತ್ತು ಫಲಕಗಳ ಪ್ರದರ್ಶನವು ಸದನದ ಘನತೆಗೆ ಅನುಗುಣವಾಗಿಲ್ಲ ಎಂದು ಹೇಳಿದರು. ಗದ್ದಲ ಮುಂದುವರಿದಾಗ ದಿನದ ಮಟ್ಟಿಗೆ ಕಲಾಪವನ್ನು ಮುಂದೂಡಿದರು.

ಭಾರಿ ಮಳೆ: ದ.ಕ ಜಿಲ್ಲೆ ಶಾಲೆಗಳಿಗೆ ಇಂದು ರಜೆ

ಮಂಗಳೂರು: ಭಾರಿ ಮಳೆಯಾಗುವ ಮುನ್ಸೂಚನೆ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಅಂಗನವಾಡಿ ಕೇಂದ್ರಗಳು, ಪದವಿ ಪೂರ್ವ ಕಾಲೇಜುವರೆಗಿನ ಎಲ್ಲ ಶಾಲಾ ಕಾಲೇಜುಗಳಿಗೆ ಶುಕ್ರವಾರ ರಜೆ ಘೋಷಿಸಲಾಗಿದೆ. ಮುಂದಿನ 24 ಗಂಟೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂಬ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಮುಂಜಾಗ್ರತಾ ಕ್ರಮವಾಗಿ ರಜೆ ಘೋಷಿಸಿದೆ. ಸಾರ್ವಜನಿಕರು ಎಚ್ಚರಿಕೆ ವಹಿಸುವಂತೆ ಮತ್ತು ಅನಿವಾರ್ಯವಲ್ಲದ ಪ್ರಯಾಣವನ್ನು ತಡೆಯುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಹವಾಮಾನ ಇಲಾಖೆಯ ಪ್ರಕಾರ, ಕರಾವಳಿ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಬಿರುಗಾಳಿಯೊಂದಿಗೆ ಭಾರೀ ಮಳೆಯಾಗಲಿದೆ.

ಬನ್ನೇರುಘಟ್ಟದಿಂದ ಜಪಾನ್‌ಗೆ ಮಾವುತರ ಸಹಿತ 4 ಆನೆಗಳ ವಿಮಾನ ಯಾನ

ಆನೆಗಳಿಗೂ ಜಪಾನ್ ಪ್ರವಾಸಿ ಭಾಗ್ಯ

ಬೆಂಗಳೂರು: ಮನುಷ್ಯರಿಗೆ ವಿಮಾನ ಪ್ರಯಾಣದ ಭಾಗ್ಯ ಸಿಗುವುದನ್ನು ಕೇಳಿರುತ್ತೀರಾ. ಕೆಲವರು ವಿದೇಶದಲ್ಲಿಯೇ ನೆಲೆಸುವ ವಿಷಯವೂ ಹೊಸದೇನಲ್ಲ. ಆದರೆ ಆನೆಗಳಿಗೆ ವಿದೇಶ ಪ್ರಯಾಣ ಹಾಗೂ ಕಾಯಂ ಆಗಿ ವಿದೇಶದಲ್ಲಿಯೇ ತಂಗುವ ಭಾಗ್ಯ ಸಿಕ್ಕಿದೆ ಎಂದರೆ ನಂಬಲೇಬೇಕು.

ಬನ್ನೇರುಘಟ್ಟ ಜೈವಿಕ ಉದ್ಯಾನವನದಿಂದ ಇದೇ ಮೊದಲ ಬಾರಿಗೆ ನಾಲ್ಕು ಆನೆಗಳನ್ನು ಜಪಾನಿನ ಹಿಮೇಜಿ ಸೆಂಟ್ರಲ್ ಪಾರ್ಕ್‌ಗೆ ಕಳುಹಿಸಲಾಗುತ್ತಿದೆ. ದೆಹಲಿಯ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮೋದನೆ ಹಾಗೂ ಇತರ ಇಲಾಖೆಗಳಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರದ ಪ್ರಕಾರ, ಒಂದು ಗಂಡು ಮತ್ತು ಮೂರು ಹೆಣ್ಣಾನೆ ಸೇರಿದಂತೆ ನಾಲು ಏಷ್ಯಾ ಆನೆಗಳನ್ನು ಜಪಾನಿಗೆ ಕಳುಹಿಸಲಾಗುತ್ತಿದೆ. ಇದಕ್ಕೆ ಪ್ರತಿಯಾಗಿ, ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ 4 ಚೀತಾ, 4 ಜಾಗ್ವಾರ್, 4 ಪೂಮಾ, 3 ಚಿಂಪಾಂಜಿ ಮತ್ತು 8 ಕ್ಯಾಪುಚಿನ್ ಕೋತಿಗಳು ಬರಲಿವೆ.

ವಿಮಾನ ಏರಿದ ಗಜಪಡೆ: ಆನೆಗಳನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಒಸಾಕಾದ ಕಾನ್ಸೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕತಾರ್ ಏರ್‌ವೇಸ್‌ನ ಸರಕು ವಿಮಾನದ ಮೂಲಕ ಗುರುವಾರ ಸಾಗಿಸಲಾಯಿತು. ವಿಮಾನದ ಮೂಲಕ ಬೆಂಗಳೂರಿನಿಂದ ಜಪಾನಿನ ಹಿಮೇಜಿ ಸಫಾರಿ ಪಾರ್ಕ್‌ಗೆ ತಲಪಲು ಸುಮಾರು 20 ಗಂಟೆಗಳ ಕಾಲ ಪ್ರಯಾಣಿಸಬೇಕಿದೆ. ಕಳೆದ 6 ತಿಂಗಳುಗಳಿಂದ ಈ ಸಾಗಣೆಗಾಗಿ ಪ್ರಾಣಿಗಳಿಗೆ ತರಬೇತಿ ನೀಡಲಾಗಿದೆ. ಆನೆಗಳು ಉತ್ತಮ ಆರೋಗ್ಯ ಹೊಂದಿದ್ದು ಪ್ರಯಾಣ ಮಾಡಲು ಸಬಲವಾಗಿವೆ ಎಂಬುದನ್ನು ಖಾತರಿ ಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಮೃಗಾಲಯದಿಂದ ಮೇ 2021ರಲ್ಲಿ ಜಪಾನ್ ಟೊಯೊಹಾಶಿ ಮೃಗಾಲಯಕ್ಕೆ 3 ಆನೆಗಳನ್ನು ಕಳುಹಿಸಿದ ಬಳಿಕ, ಎರಡನೇ ಬಾರಿ ಜಪಾನ್ ಜತೆ ಪ್ರಾಣಿಗಳ ವಿನಿಮಯ ಕಾರ್ಯ ನಡೆದಿದೆ. ಹಿಮೇಜಿ ಸಫಾರಿ ಪಾರ್ಕ್‌ನ ಇಬ್ಬರು ಪಶುವೈದ್ಯರು ಮತ್ತು ಬನ್ನೇರುಘಟ್ಟ ಜೈವಿಕ ಉದ್ಯಾನದ ಇಬ್ಬರು ಪಶುವೈದ್ಯಕೀಯ ಅಧಿಕಾರಿಗಳು, ನಾಲ್ವರು ಪಾಲಕರು, ಒಬ್ಬ ಮೇಲ್ವಿಚಾರಕ ಮತ್ತು ಒಬ್ಬ ಜೀವಶಾಸ್ತ್ರಜ್ಞೆ ಆನೆಗಳ ಜತೆ ಪ್ರಯಾಣಿಸುತ್ತಿದ್ದಾರೆ.

ಏಷ್ಯನ್ ಆನೆಗಳ ಸೇರ್ಪಡೆಯು ಹಿಮೇಜಿ ಸೆಂಟ್ರಲ್ ಪಾರ್ಕ್ - ಸಫಾರಿ ಪಾರ್ಕ್‌ಗೆ ವಿಶೇಷ ಆಕರ್ಷಣೆಯಾಗಲಿದೆ. ಜಪಾನಿಯರು ಏಷ್ಯನ್ ಆನೆಗಳನ್ನುಹತ್ತಿರದಿಂದ ಕಾಣಲು ಇದು ಉತ್ತಮ ಅವಕಾಶವಾಗಿದೆ.
-ಸೂರ್ಯಸೇನ್, ಕಾರ್ಯನಿರ್ವಾಹಕ ನಿರ್ದೇಶಕ, ಬನ್ನೇರುಘಟ್ಟ ಜೈವಿಕ ಉದ್ಯಾನವನ

ಜಪಾನ್‌ಗೆ ತೆರಳಲಿರುವ ಆನೆಗಳು ಯಾವುದು?

- ಸುರೇಶ್ – 8 ವರ್ಷ
- ಗೌರಿ – 9 ವರ್ಷ
- ಶ್ರುತಿ – 7 ವರ್ಷ
- ತುಳಸಿ – 5 ವರ್ಷ

ಆನೆ ಪಾಲಕರಿಗೆ ತರಬೇತಿ

ಹಿಮೇಜಿ ಸೆಂಟ್ರಲ್ ಪಾರ್ಕ್‌ನ ಆನೆ ಪಾಲಕರು ಕಳೆದ ಮೇ 12 ರಿಂದ ಮೇ 25ರ ತನಕ ಸುಮಾರು 20 ದಿನಗಳ ಕಾಲ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ತರಬೇತಿ ಪಡೆದಿದ್ದಾರೆ.

ವಿಶ್ವವಾಣಿ ಪುಸ್ತಕ
ವಿಶ್ವವಾಣಿ ಪುಸ್ತಕದಿಂದ
ಎಂಟು ಕೃತಿಗಳ
ಲೋಕಾರ್ಪಣೆ
ಸಾನ್ನಿಧ್ಯ : ಡಾ. ಎಸ್.ಎಲ್. ಭೈರಪ್ಪ
ಪ್ರಸಿದ್ಧ ಕಾದಂಬರಿಕಾರರು
ಪುಸ್ತಕಗಳ ಬಿಡುಗಡೆ : ಡಾ. ವೀರೇಂದ್ರ ಹೆಗ್ಗಡೆ
ಧರ್ಮಾಧಿಕಾರಿಗಳು, ಧರ್ಮಸ್ಥಳ ಮತ್ತು ಮಾನ್ಯ ರಾಜ್ಯಸಭಾ ಸದಸ್ಯರು
ಅಧ್ಯಕ್ಷತೆ : ಶ್ರೀ ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಲೋಕಸಭಾ ಸದಸ್ಯರು
ಮುಖ್ಯ ಅತಿಥಿಗಳು : ಶ್ರೀ ತೇಜಸ್ವಿ ಸೂರ್ಯ
ಮಾನ್ಯ ಲೋಕಸಭಾ ಸದಸ್ಯರು
: ಶ್ರೀಮತಿ ಶೋಭಾ ಮಳವಳ್ಳಿ
ಸಂಪಾದಕರು, ರಿಪಬ್ಲಿಕ್ ಕನ್ನಡ ನ್ಯೂಸ್ ಚಾನೆಲ್
ಉಪಸ್ಥಿತಿ : ಶ್ರೀ ಎಸ್. ಷಡಕ್ಷರಿ
ಉದ್ಯಮಿ ಹಾಗೂ ಲೇಖಕರು
ಶ್ರೀ ಕಿರಣ್ ಉಪಾಧ್ಯಾಯ
ಉದ್ಯಮಿ ಹಾಗೂ ಅಂಕಣಕಾರರು
ಶ್ರೀ ರಾಜು ಅಡಕಳ್ಳಿ
ಪತ್ರಕರ್ತರು
ಶ್ರೀಮತಿ ರೂಪಾ ಗುರುರಾಜ್
ನಿರೂಪಕಿ ಹಾಗೂ ಲೇಖಕಿ
ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು, ವಿಶ್ವವಾಣಿ

ಜುಲೈ 26 ಶನಿವಾರ
ಸಂಜೆ 5 ಗಂಟೆಗೆ
ಎಫ್‌ಕೆಸಿಸಿಐ ಸಭಾಂಗಣ
ಬೆಂಗಳೂರು
ಲೊಕೇಶನ್ ಗಾಗಿ ಸ್ಕ್ಯಾನ್ ಮಾಡಿ
ಸರ್ವರಿಗೂ ಸುಸ್ವಾಗತ
ಶ್ರೀಮತಿ ಸುಷ್ಮಾ ಭಟ್
ಪ್ರಕಾಶಕರು, ವಿಶ್ವವಾಣಿ ಪುಸ್ತಕ
ಶ್ರೀ ಚಿದಾನಂದ ಕಡಲಾಸ್ಕರ
ಮುಖ್ಯ ಕಾರ್ಯನಿರ್ವಹಣಾಧಿಕಾರಿ, ವಿಶ್ವವಾಣಿ

ಸೊಂಪಾದ ಪುಟಗಳು

ಮರಗಳಿಗೇಕೆ ಹಾರ್ಟ್ ಅಟ್ಯಾಕ್ ಆಗುವುದಿಲ್ಲ?
ಶಿಶಿರಕಾಲ ಶಿಶಿರ್ ಹೆಗಡೆ 6

ವಿಶ್ವವಾಣಿ ಪುಸ್ತಕ
ಇಲ್ಲಿದೆ ನೋಡಿ, ಹಬ್ಬದೂಟದ ಮೆನುಕಾರ್ಡ್ 7

ದಾರಿದೀಪೋಕ್ತಿ

ಸಕಾರಾತ್ಮಕ ಮನಸ್ಸು ಎಲ್ಲ ಸನ್ನಿವೇಶಗಳಲ್ಲೂ ಅವಕಾಶವನ್ನೇ ನಿರೀಕ್ಷಿಸುತ್ತದೆ. ಅದೇ ನಕಾರಾತ್ಮಕ ಮನಸ್ಸು ಪ್ರತಿಯೊಂದರಲ್ಲೂ ತಪ್ಪನ್ನೇ ಕಾಣುತ್ತದೆ. ಯಾವತ್ತೂ ಸಕಾರಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

ವಕ್ರತುಂಡೋಕ್ತಿ

ಇಲ್ಲಿ ಈಜಬಾರದು ಮತ್ತು ಮೀನು ಹಿಡಿಯಬಾರದು ಎಂಬ ಫಲಕ ಕಂಡರೆ ಅಲ್ಲಿ ರಸ್ತೆ ಗುಂಡಿಗಳಿವೆ ಎಂದು ಭಾವಿಸಬಹುದು

ಸನ್ನಡತೆ ಆಧಾರ: 46 ಜೀವಾವಧಿ ಕೈದಿಗಳ ಬಿಡುಗಡೆ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 46 ಜೀವಾವಧಿ ಶಿಕ್ಷಾ ಬಂದಿಗಳನ್ನು ಹಾಗೂ ಮೂವರು ಶಿಕ್ಷಾ ಬಂದಿಗಳನ್ನು ಕೇಂದ್ರ ಗೃಹ ಮಂತ್ರಾಲಯದ ಸಹಮತಿ ದೊರಕಿದ ನಂತರ ಅವಧಿಪೂರ್ವ ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆಗೊಳಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಸಚಿವ ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಸಂವಿಧಾನದ ಅನುಚ್ಛೇದ–161ರ ಪ್ರಕಾರ ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವವಾಗಿ ಒಟ್ಟು 49 ಜೀವಶಿಕ್ಷಾ ಬಂಧಿಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಅಸೆಂಬ್ಲಿ ಚುನಾವಣೆಗೆ ಆರ್‌ಜೆಡಿ ಬಹಿಷ್ಕಾರ?

ಪಟನಾ: ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಖಂಡಿಸಿ ಮುಂಬರುವ ವಿಧಾನಸಭೆ ಚುನಾವಣೆಯನ್ನು ಬಹಿಷ್ಕರಿಸುವುದು ನಮ್ಮ ಮುಂದಿನ ಆಯ್ಕೆಯಾಗಿದೆ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಗುರುವಾರ ಹೇಳಿದ್ದಾರೆ. ಮಳೆಗಾಲದ ಅಧಿವೇಶನದ ಕೊನೆಯ ದಿನದಂದು ರಾಜ್ಯ ವಿಧಾನಸಭೆಯ ಹೊರಗೆ ವರದಿಗಾರರ ಪ್ರಶ್ನೆಗೆ ಉತ್ತರಿಸಿದ ಪ್ರತಿಪಕ್ಷ ನಾಯಕ ತೇಜಸ್ವಿ ಯಾದವ್ ಅವರು, ಚುನಾವಣಾ ಆಯೋಗವು ಸರ್ಕಾರದ ರಾಜಕೀಯ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು.

ಫನ್‌ತರಂಗ

- ರಘುಪತಿ ಶೃಂಗೇರಿ -

'ರಾಣೆ'– ಕನ್ನಡ ಚಲನಚಿತ್ರ ರಾಜ್ಯದಾದ್ಯಂತ

ಸಮಾಚಾರ ಸಣ್ಣದಲ್ಲ

ಇನ್‌ಸ್ಟಾದಲ್ಲಿ ಅಸಭ್ಯ ವಿಡಿಯೊ ಅಪ್ಲೋಡ್: ಸೆರೆ

ಬೆಂಗಳೂರು: ಯುವತಿಯರ ವಿಡಿಯೊ ತೆಗೆದು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡುತ್ತಿದ್ದ ಯುವಕನನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮಣಿಪುರದ ಇಂಪಾಲ್ ಮೂಲದ

ದಿಲವರ್ ಹುಸೇನ್(19) ಬಂಧಿತ ಯುವಕ. ಎಂ.ಜಿ.ರಸ್ತೆ, ಬ್ರಿಗೇಡ್ ರೋಡ್‌ನಲ್ಲಿ ಯುವತಿಯರ ಅಸಭ್ಯ ರೀತಿಯಲ್ಲಿ ವಿಡಿಯೊ ತೆಗೆದು ಬಳಿಕ ಅಪ್‌ಲೋಡ್ ಮಾಡುತ್ತಿದ್ದ. ಈ ಸಂಬಂಧ ಅಶೋಕನಗರ ಠಾಣೆ ಪೊಲೀಸರು ಸುಮೋಟೋ ಪ್ರಕರಣ ದಾಖಲಾಗಿದೆ. ಯುವಕ ಹುಸೇನ್, ನಗರದ ಕೊತ್ತನೂರಿನಲ್ಲಿ ವಾಸವಿದ್ದು, ಫುಡ್ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ಯುವತಿಯರ ಅಸಭ್ಯ ವಿಡಿಯೊಗಳಿಗೆ ಸಾಂಗ್ ಹಾಕಿ ಎಡಿಟ್ ಮಾಡುತ್ತಿದ್ದ. ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ಫೋಲೋವರ್ಸ್ ಹೆಚ್ಚಿಸಿಕೊಳ್ಳಲು ಈ ರೀತಿ ವಿಡಿಯೋ ಮಾಡುತ್ತಿದ್ದ ಎನ್ನಲಾಗಿದೆ.

ಯುವತಿಯ ತುಟಿ ಕಚ್ಚಿದ ಕೀಚಕನ ಬಂಧನ

ಬೆಂಗಳೂರು: ಮನೆಗೆ ದಿನಸಿ ತರಲು ಹೋಗಿದ್ದ ಯುವತಿಯ ತುಟಿ ಕಚ್ಚಿ ವಿಕೃತಿ ಮೆರೆದ ಆರೋಪಿಯನ್ನು ಗೋವಿಂದಪುರ ಠಾಣೆ ಪೊಲೀಸರು ಸೆರೆ ಹಿಡಿದಿದ್ದಾರೆ. ಮರೂಫ್ ಷರೀಫ್ (28) ಬಂಧಿತ. ಸಂತ್ರಸ್ತೆ ನೀಡಿದ ದೂರು ಆಧರಿಸಿ ಈತನನ್ನು

ಅಪರಾಧ ಸುದ್ದಿಗಳು

ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಗೋವಿಂದಪುರದಲ್ಲಿ ವಾಸವಾಗಿರುವ ಯುವತಿ ಮನೆಗೆ ದಿನಸಿ ತರಲು ಸ್ಕೂಟರ್‌ನಲ್ಲಿ ಬಂದಿದ್ದರು. ಈ ವೇಳೆ ಹಿಂಬಾಲಿಸಿದ ಆರೋಪಿ ನಡುರಸ್ತೆಯಲ್ಲೇ ಆಕೆಯ ತುಟಿ ಕಚ್ಚಿ ವಿಕೃತಿ ಮೆರೆದಿದ್ದ. ಈ ಕುರಿತು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿತ್ತು. ಗೋವಿಂದಪುರದಲ್ಲಿ ಆರೋಪಿಯು ಬರ್ಡ್ ಶಾಪ್ ಇಟ್ಟುಕೊಂಡಿದ್ದ. ಕಳೆದ ವಾರ ಸ್ಕೂಟರ್‌ನಲ್ಲಿ ಯುವತಿ ಹೋಗುವಾಗ ಹಿಂಬಾಲಿಸಿ ಕೃತ್ಯವೆಸಗಿದ್ದಾನೆ. ಈ ಸಂಬಂಧ ಯುವತಿ ದೂರು ನೀಡಿದ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿಚಾರಣೆ ವೇಳೆ ಆರೋಪಿ ಹೇಳಿದ್ದೇನು?:ಯುವತಿ ಸ್ಕೂಟರ್ ಚಲಾಯಿಸಿದ್ದರಿಂದ ರಸ್ತೆ ನೀರು ತನ್ನ ಮೇಲೆ ಬಿದ್ದಿತ್ತು. ಹೀಗಾಗಿ ಕೃತ್ಯವೆಸಗಿದೆ ಎಂದು ವಿಚಾರಣೆ ವೇಳೆ ಆರೋಪಿ ಹೇಳಿಕೆ ನೀಡಿದ್ದಾನೆ. ಈ ಕುರಿತು ತನಿಖೆ ನಡೆಸಿದ್ದು, ಆರೋಪಿಯ ಅಸಲಿತನ ಬಯಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಇಎಸ್‌ಐ ಆಸ್ಪತ್ರೆಯಲ್ಲಿ ಔಷಧಗಳ ಕೊರತೆ | ದುಬಾರಿ ಬೆಲೆ ಕೊಟ್ಟು ರೋಗಿಗಳು ಹೈರಾಣ | ವ್ಯವಸ್ಥಿತ ಸಂಚಿನ ಶಂಕೆ

ಜೀವ ರಕ್ಷಕ ಔಷಧಕ್ಕೆ ರೋಗಿಗಳ ಪರದಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐ) ಆಸ್ಪತ್ರೆಗಳಲ್ಲಿ ಔಷಧ ಸಿಗದೆ ರೋಗಿಗಳು ಪರದಾಡುವಂತಾಗಿದೆ.

ರಾಜ್ಯದಲ್ಲಿ 8 ಇಎಸ್‌ಐ, 200ಕ್ಕೂ ಅಧಿಕ ಡಿಸ್ಪೆನ್ಸರಿಗಳಿವೆ. ಕ್ಯಾನ್ಸರ್, ನವಜಾತ ಶಿಶುಗಳಿಗೆ ಬರುವ ಸೂಕ್ಷ್ಮ ಕಾಯಿಲೆಗಳಿಂದ ಹಿಡಿದು ಎಲ್ಲ ತರಹದ ಚಿಕಿತ್ಸೆಗಳು ಕಾರ್ಮಿಕರಿಗೆ, ಅವರ ಅವಲಂಬಿತರಿಗೆ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ. ಆದರೆ, ಕಾರ್ಮಿಕರ ವರ್ಗಕ್ಕೆ ವರದಾನವಾಗಬೇಕಿದ್ದ ಇಎಸ್‌ಐ ಆಸ್ಪತ್ರೆಗಳಲ್ಲಿ ಕ್ಯಾನ್ಸರ್, ಮಧುಮೇಹ, ರಕ್ತದೊತ್ತಡ, ಜ್ವರ, ಶೀತ, ರಕ್ತಹೀನತೆ, ಹೃದಯ ಸಮಸ್ಯೆ ಸೇರಿ ಪ್ರಮುಖ ಜೀವ ರಕ್ಷಕ ಔಷಧಗಳ ಕೊರತೆ ಕಾಡುತ್ತಿದೆ. ಇದರಿಂದಾಗಿ ರೋಗಿಗಳು ಹೆಚ್ಚಿನ ಹಣ ಕೊಟ್ಟು ಖಾಸಗಿ ಮೆಡಿಕಲ್‌ನಲ್ಲಿ ಔಷಧಗಳನ್ನು ಖರೀದಿಸುವಂತಾಗಿದೆ. ಇಎಸ್‌ಐನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ರೋಗಿಗಳ ತಪಾಸಣೆ ನಡೆಸಿ ಅಲ್ಲಿಯೇ ಔಷಧ ನೀಡಬೇಕು. ಆದರೆ, ಆಸ್ಪತ್ರೆಯ ಕೆಲ ವೈದ್ಯರು ಸೇರಿ ಇತರೆ ಸಿಬ್ಬಂದಿ ಕೃತಕವಾಗಿ ಔಷಧ ಸ್ಟಾಕ್ ಇಲ್ಲ ಎಂದು ಸೃಷ್ಟಿಸುತ್ತಿದ್ದಾರೆ. ಇದರಿಂದಾಗಿ ಪ್ರಮುಖ ಜೀವ ರಕ್ಷಕ ಔಷಧಗಳನ್ನು ಹೊರಗಡೆ ದುಬಾರಿ ಬೆಲೆಗೆ ರೋಗಿಗಳು ಖರೀದಿಸುವಂತಾಗಿದೆ.

ವೈದ್ಯರು, ಸಿಬ್ಬಂದಿ ಕೊರತೆ ಸೇರಿದಂತೆ ವಿವಿಧ ಸೌಲಭ್ಯಗಳ ಕೊರತೆಗಳಿಂದ ಇಎಸ್‌ಐ ಆಸ್ಪತ್ರೆಗಳು ಮತ್ತು ಡಿಸ್ಪೆನ್ಸರಿಗಳು ಬಳಲುತ್ತಿವೆ. ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ಅವುಗಳಿಗೆ ಚಿಕಿತ್ಸೆ ನೀಡಬೇಕಿದೆ. ಬಹುತೇಕ ಡಿಸ್ಪೆನ್ಸರಿಗಳಲ್ಲಿ ಒಬ್ಬರೇ ವೈದ್ಯರಿದ್ದಾರೆ. ಶುಶ್ರೂಷಕರ ಸಂಖ್ಯೆಯೂ ಕಡಿಮೆ ಇದೆ. ಡಿಸ್ಪೆನ್ಸರಿಗಳು ಬೆಳಗ್ಗೆ 9ಕ್ಕೆ ತೆರೆದು, ಸಂಜೆ 5.30 ಅಥವಾ 7 ಗಂಟೆಗೆ ಹೊತ್ತಿಗೆ ಬಂದ್ ಆಗುತ್ತವೆ. ಆ ವೇಳೆಗೆ ಕಾರ್ಮಿಕರು ಕೆಲಸಕ್ಕೆ ತೆರಳಿರುತ್ತಾರೆ. ಕೆಲಸದ ದಿನಗಳಲ್ಲಿ ಆಸ್ಪತ್ರೆಗೆ ತೆರಳುವುದು ಕಷ್ಟವಾಗುತ್ತಿದೆ. ಭಾನುವಾರ ತೆರಳಿದರೆ ಬಾಗಿಲು ತೆರೆಯುತ್ತಿಲ್ಲ. ಇದರಿಂದಾಗಿ ರೋಗಿಗಳಿಗೆ ಸರಿಯಾಗಿ ಸೇವೆ ಸಿಗದಂತಾಗಿದೆ.

ಶೀತ, ಕೆಮ್ಮು, ಜ್ವರ ಮುಂತಾದ ಸಣ್ಣಪುಟ್ಟ ಅನಾರೋಗ್ಯಗಳಿಗೆ ಇಎಸ್‌ಐ ಆಸ್ಪತ್ರೆಗಳಿಗೆ ಬರುವಂತಿಲ್ಲ. ಡಿಸ್ಪೆನ್ಸರಿಗಳಿಗೇ ಹೋಗಬೇಕು. ಅಲ್ಲಿ ಪರೀಕ್ಷೆ, ಆಸ್ಪತ್ರೆಗೆ ಶಿಫಾರಸು ಮಾಡಿದರಷ್ಟೆ ದೊಡ್ಡ ಆಸ್ಪತ್ರೆಗಳಿಗೆ ಹೋಗಬೇಕು. ಡಿಸ್ಪೆನ್ಸರಿಗಳಲ್ಲಿ ಕಾರ್ಡ್ ಹಿಡಿದು ಸರದಿಯಲ್ಲಿ ನಿಂತು ಕಾರ್ಮಿಕರು ಕಾಯುವಂತಾಗಿದೆ. ರಾಜಾಜಿನಗರ ಮಾದರಿ ಆಸ್ಪತ್ರೆ, ಪೀಣ್ಯ ಮಾದರಿ ಆಸ್ಪತ್ರೆಗಳು ಬಹಳ ಚೆನ್ನಾಗಿವೆ. ಸರಕಾರಿ ಆಸ್ಪತ್ರೆಗಳಿಗಿಂತಲೂ ಉತ್ತಮವಾಗಿವೆ. ಇಲ್ಲಿ ಪ್ರತಿ ಪರೀಕ್ಷೆಗೂ ಪ್ರತ್ಯೇಕವಾಗಿ ಸಾಲಿನಲ್ಲಿ ನಿಂತು ಚೀಟಿ ಬರೆಸಬೇಕಿದೆ. ಹಲವು ದಿನಗಳಿಂದ ಆಸ್ಪತ್ರೆಯಲ್ಲಿ ಕ್ಯಾನ್ಸರ್‌ಗೆ ಔಷಧ ಸಿಗುತ್ತಿಲ್ಲ. ನಾವು ಬಡ ಕಾರ್ಮಿಕರಾಗಿದ್ದು, ಖಾಸಗಿ ಆಸ್ಪತ್ರೆಗೆ ತೆರಳಲು ನಮ್ಮ ಬಳಿ ಹಣ ಇಲ್ಲ ಎಂದು ಆಸ್ಪತ್ರೆಯಲ್ಲಿದ್ದ ರೋಗಿಯ ಸಂಬಂಧಿಯೊಬ್ಬರು ಅಳಲು ತೋಡಿಕೊಂಡಿದ್ದಾರೆ.

- ರಾಜ್ಯದಲ್ಲಿ 8 ಇಎಸ್‌ಐ, 200ಕ್ಕೂ ಅಧಿಕ ಡಿಸ್ಪೆನ್ಸರಿಗಳು ಕಾರ್ಯ
- ಔಷಧ ಕೊರತೆ ನೆಪವೊಡ್ಡಿ ಹೊರಗಡೆ ಚೀಟಿ ಬರೆಯುತ್ತಿರುವ ವೈದ್ಯರು
- ವೈದ್ಯರು, ಸಿಬ್ಬಂದಿಯೇ ಔಷಧಗಳ ಕೃತಕ ಅಭಾವ ಸೃಷ್ಟಿಸಿರುವ ಶಂಕೆ
- ಬಹುತೇಕ ಡಿಸ್ಪೆನ್ಸರಿಗಳಲ್ಲಿ ಒಬ್ಬರೇ ವೈದ್ಯರೂ, ಶುಶ್ರೂಷಕರ ಅಭಾವ
- ಭಾನುವಾರ ಬಂದ್, ಸಕಾಲಕ್ಕೆ ಸೇವೆ ಸಿಗದೆ ಕಾರ್ಮಿಕರು ಕಂಗಾಲು

ಡಿಸ್ಪೆನ್ಸರಿಗಳು ಎಲ್ಲೆಲ್ಲಿವೆ?

ಮಾರತ್‌ಹಳ್ಳಿ, ಪೀಣ್ಯ 14ನೇ ಅಡ್ಡರಸ್ತೆ, ಆಟಿರ್ ನಗರ, ಮಾದನಾಯಕನಹಳ್ಳಿ, ಬೈಯಪ್ಪನಹಳ್ಳಿ, ಯಲಹಂಕ, ದೊಡ್ಡನೆಕುಂದಿ, ಕ್ವೀನ್ಸ್ ರಸ್ತೆ, ಯಶವಂತಪುರ, ಹಲಸೂರು, ಜಾಲಹಳ್ಳಿ, ಲಗ್ಗೆರೆ, ದಾಸರಹಳ್ಳಿ, ಸುಭಾಸ್ ನಗರ, ಫ್ರೇಜರ್ ಟೌನ್, ಬಸವನಗುಡಿ, ಬನಶಂಕರಿ, ಹನುಮಂತನಗರ, ಬಿನ್ನಿಪೇಟೆ, ಕಾಟನ್‌ಪೇಟೆ, ಕರಿತಿಮ್ಮನಹಳ್ಳಿ, ಕೋಣನಕುಂಟೆ, ಶೇಷಾದ್ರಿಪುರ, ಕೆಂಗೇರಿ, ಅತ್ತಿಬೆಲೆ, ಬೊಮ್ಮನಹಳ್ಳಿ, ಬೊಮ್ಮಸಂದ್ರ, ಚಾಮರಾಜಪೇಟೆ, ಚಿಕ್ಕಜಾಲ, ದ್ಯಾವಸಂದ್ರ, ಜಯನಗರ, ಕೆ.ಆರ್.ಪುರ, ಮಾಗಡಿ ರಸ್ತೆ, ಅರಮನೆ ಗುಟ್ಟಹಳ್ಳಿ, ರಾಜಾಜಿನಗರ, ರಸೆಲ್ ಮಾರ್ಕೆಟ್, ಆಸ್ಟಿನ್ ಟೌನ್, ಚಿಕ್ಕಬಾಣಾವರ, ಶ್ರೀರಾಂಪುರ, ಸುಬ್ರಹ್ಮಣ್ಯಪುರ, ಸಿಂಗಸಂದ್ರ, ವಿವೇಕನಗರ, ವಿಜಯನಗರ, ಕಾಮಾಕ್ಷಿಪಾಳ್ಯ, ವಿಲ್ಸನ್‌ಗಾರ್ಡನ್, ವಿಲಿಯಮ್ಸ್ ಟೌನ್.

ಕತ್ತು ಹಿಸುಕಿ ಮಗಳ ಕೊಂದು ಆತ್ಮಹತ್ಯೆಗೆ ಯತ್ನಿಸಿದ ತಾಯಿ

ಗಂಡ-ಹೆಂಡ್ತಿ ಜಗಳ ಮುದ್ದಾದ ಮಗಳ ಹತ್ಯೆ

ಬೆಂಗಳೂರು: ಭೀಮನ ಅಮಾವಾಸ್ಯೆ ಮುತ್ತೈದೆಯರಿಗೆ ಶ್ರೇಷ್ಠವಾದದ್ದು. ದೀರ್ಘಾಯಷ್ಯ ಕೋರಿ ಗಂಡನ ಪ ಜಿಸುತ್ತಾರೆ. ಇಂತಹ ದಿನದಂದೇ ಗಂಡ, ಹೆಂಡತಿ ಜಗಳವಾಡಿದ್ದು ಈ

ಗಲಾ ಟೆಯಲ್ಲಿ ತನ್ನ ಮಗಳ ಕತ್ತು ಹಿಸುಕಿ ತಾಯಿಯೇ ಜೀವ ತೆಗೆದಿರುವ ಘಟನೆ ಬೆಂಗಳೂರು ಉತ್ತರ ತಾಲೂಕಿನ ಕೆ.ಜಿ ಲಕ್ಕೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕೆ.ಜಿ ಲಕ್ಕೇನಹಳ್ಳಿ ಗ್ರಾಮದ ನಿವಾಸಿ ಜಯ ರಾಮ್ (34), ಮಹಾಲಕ್ಷ್ಮಿ (28) ದಂಪತಿ. ಇವರ ಮಗು ಸಿರಿ (5) ಜೀವ ಬಿಟ್ಟಿದೆ. ತಾಯಿ ಮಹಾಲಕ್ಷ್ಮಿ ಕತ್ತು ಹಿಸುಕಿ ಸಿರಿಯ ಜೀವ ತೆಗೆದಿದ್ದಾರೆ. ಇಷ್ಟೇ ಅಲ್ಲದೇ ತಾನು ಕೂಡ ಜೀವ ತೆಗೆದುಕೊಳ್ಳಲು ಪ್ರಯತ್ನಿಸಿದಾಗ ಮನೆಯವರು ಬಾಗಿಲು ಒಡೆದು ಒಳಗೆ ಹೋಗಿ ಆಕೆಯನ್ನ ರಕ್ಷಣೆ ಮಾಡಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿ ಮಹಿಳೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ನಗರದ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಎಎಸ್‌ಪಿ ಡಾ. ವೆಂಕಟೇಶ್ ಪ್ರಸನ್ನ, ಸಿಪಿಐ ಮುರಳಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಇನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಆಕೆ ಯ ಗಂಡನನ್ನ ವಶಕ್ಕೆ ಪಡೆದು ವಿಚಾರಣೆ ನಡೆಸು ತ್ತಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ಪ್ರೀತಿಸಿ ಮದುವೆ, ಪತಿಗೆ ಕುಡಿತದ ಚಟ

ಜಯರಾಮ್ ,ಮಹಾಲಕ್ಷ್ಮಿ ಇಬ್ಬರೂ ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ 5 ವರ್ಷದ ಒಂದು ಹೆಣ್ಣು ಮಗುವಿದೆ. 2 ವರ್ಷದಿಂದ ಕೆಲಸವಿಲ್ಲದೆ ಕುಡಿತಕ್ಕೆ ದಾಸನಾಗಿದ್ದ ಪತಿ, ಕೆಲಸಕ್ಕೆ ಹೋಗದೇ ಮನೆಯಲ್ಲಿ ಇರುತ್ತಿದ್ದನು. ಹೀಗಾಗಿ ಮನೆಯಲ್ಲಿ ಗಂಡ, ಹೆಂಡತಿ ನಡುವೆ ಜಗಳ ನಡೆಯುತ್ತಿತ್ತು. ಅದೇ ರೀತಿ ಬುಧವಾರ ಇಬ್ಬರ ನಡುವೆ ಜಗಳ ನಡೆದಿದ್ದು ಗಲಾಟೆ ತಾರಕಕ್ಕೇರಿದೆ. ಈ ವೇಳೆ ಕೋಣೆಗೆ ಹೋಗಿ ಮಹಾಲಕ್ಷ್ಮಿ ಬಾಗಿಲು ಹಾಕಿಕೊಂಡಿದ್ದಾರೆ. ಜತೆಗೆ ಮಗುವನ್ನು ಒಳಗೆ ಕರೆದುಕೊಂಡು ಹೋಗಿದ್ದು ಮಗುವಿನ ಕತ್ತು ಹಿಸುಕಿ ಜೀವ ತೆಗೆದಿದ್ದಾಳೆ. ಬಳಿಕ ತಾನೂ ನೇಣು ಬಿಗಿದುಕೊಳ್ಳಲು ಯತ್ನಿಸಿದ್ದಾಳೆ. ಕೂಡಲೇ ಗಂಡ ಬಾಗಿಲು ಒಡೆದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ತಕ್ಷಣ ಮಹಾಲಕ್ಷ್ಮಿಯನ್ನು ರಕ್ಷಣೆ ಮಾಡಿದ್ದಾರೆ.

ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಕೆ.ಜೆ.ಜಾರ್ಜ್ ವಿರುದ್ಧ ಭ್ರಷ್ಟಾಚಾರದ ಆರೋಪ

ಸಚಿವ ಜಾರ್ಜ್ ವಿರುದ್ಧ ಎಫ್‌ಐಆರ್‌ಗೆ ಆದೇಶ

ಬೆಂಗಳೂರು: ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಇಂಧನ ಸಚಿವ ಕೆ.ಜೆ.ಜಾರ್ಜ್ ಹಾಗೂ ಇತರೆ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ, ಶಾಸಕರಾದ ಎಸ್.ಆರ್. ವಿಶ್ವನಾಥ್ ಮತ್ತು ಧೀರಜ್ ಮುನಿರಾಜು ಅವರು ಸಲ್ಲಿಸಿದ್ದ ಖಾಸಗಿ ದೂರು ಅರ್ಜಿ ಸಂಬಂಧ ಬುಧವಾರ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಈ ಆದೇಶ ನೀಡಿದೆ. ಆರೋಪಿಗಳ ವಿರುದ್ಧ ದೂರು ಸ್ವೀಕರಿಸಿ ಎಫ್‌ಐಆರ್ ದಾಖಲಿಸಿದ ವಸ್ತುಸ್ಥಿತಿ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಲೋಕಾಯುಕ್ತ ಅಧಿಕಾರಿಗಳಿಗೆ ಕೋರ್ಟ್ ಸೂಚನೆ ನೀಡಿದ್ದು, ಆಗಸ್ಟ್ 11ಕ್ಕೆ ವಿಚಾರಣೆ ಮುಂದೂಡಲಾಗಿದೆ.

ಸ್ಮಾರ್ಟ್ ಮೀಟರ್ ಸೇವೆ ಒದಗಿಸುವ ನಿಟ್ಟಿನಲ್ಲಿ 2024ರ ಸೆಪ್ಟೆಂಬರ್ 26ರಂದು ದಾವಣಗೆರೆ ರಾಜೇಶ್ವರಿ ಎಲೆಕ್ಟ್ರಿಕಲ್ ಸೇಲ್ ಕಂಪನಿಗೆ ಟೆಂಡರ್ ನೀಡಲಾಗಿದೆ. ನೇರವಾಗಿ ಟೆಂಡರ್ ನೀಡಲಾಗಿದ್ದು, ಇದು ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ(ಕೆಟಿಪಿಪಿ) ಅಧಿನಿಯಮ 2000, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ನಿಯಮಗಳಿಗೆ ವಿರುದ್ಧವಾಗಿದೆ ಎಂದು ದೂರುದಾರರು ಆರೋಪಿಸಿದ್ದಾರೆ. ಈ ಬಗ್ಗೆ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಭ್ರಷ್ಟಾಚಾರ ಆರೋಪ ಸಂಬಂಧ ಎಫ್ ಐಆರ್ ದಾಖಲಿಸುವಂತೆ ಆದೇಶಿಸಿದೆ.

ಜಾರ್ಜ್‌ನ ವಜಾ ಮಾಡಿ: ಡಾ.ಅಶ್ವತ್ಥನಾರಾಯಣ್

ಸ್ಮಾರ್ಟ್ ಮೀಟರ್ ಹಗರಣದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂಧನ ಸಚಿವ ಕೆ. ಜೆ.ಜಾರ್ಜ್ ಅವರನ್ನು ವಜಾಗೊಳಿಸಿ, ರಾಜೀನಾಮೆ ಪಡೆಯಬೇಕು ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಆಗ್ರಹಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಸಿದ್ದರಾಮಯ್ಯ ಕಿರೀಟಕ್ಕೆ ಈ ಭ್ರಷ್ಟಾಚಾರ ಹಗರಣ ಮತ್ತೊಂದು ಹೊಸ ಗರಿ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳ ಉತ್ತರವೇನು ? 15 ಸಾವಿರ ಕೋಟಿ ಎಂದರೆ ಸಣ್ಣ ಮೊತ್ತವಲ್ಲ. ಹಾಗಾಗಿ ಅವರ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು. ಇದರ ಹಿಂದೆ ದ್ವೇಷ, ವೈಮನಸ್ಸು ಇಲ್ಲ. ಜನರ ಹಿತ ಕಾಪಾಡಲು ಮತ್ತು ಪಕ್ಷಕ್ಕೆ ಗೌರವ ತರುವ ರೀತಿಯಲ್ಲಿ ಈ ಕೆಲಸ ನಡೆದಿದೆ. ಸದನದಲ್ಲೂ ಇದನ್ನು ಗಮನ ಸೆಳೆಯುವ ಪ್ರಶ್ನೆ ಮೂಲಕ ಪ್ರಸ್ತಾಪಿಸಿದ್ದೇವೆ. ಆದರೆ, ಅವರು ಸಮರ್ಪಕ ಉತ್ತರ ನೀಡಿಲ್ಲ. ಅರ್ಹತೆ ಇಲ್ಲದ ಗುತ್ತಿಗೆದಾರನಿಗೆ ಗುತ್ತಿಗೆ, ಬ್ಲ್ಯಾಕ್ ಲಿಸ್ಟೆಡ್ ಕಂಪೆನಿ ಜೊತೆ ಒಡಂಬಡಿಕೆ, ನಿಯಮಾವಳಿ ಉಲ್ಲಂಘನೆ ಮಾಡಿದ್ದನ್ನು ಹಾಗೂ ರಾಷ್ಟ್ರದಲ್ಲೇ ಗರಿಷ್ಠ- ದುಬಾರಿ ದರ ವಿಧಿಸುತ್ತಿರುವುದು, ಕಡ್ಡಾಯ ಇಲ್ಲದಿದ್ದರೂ ಕಡ್ಡಾಯ ಮಾಡಿದ್ದನ್ನು ತಿಳಿಸಿದ್ದೇವೆ ಎಂದರು.

ಹಣ ಸುಲಿಗೆ ಮಾಡಲು ಪ್ರಯತ್ನ: ರಾಮೇಶ್ವರಂ ಕೆಫೆ ಸ್ಪಷ್ಟನೆ

ಹೋಟೆಲ್ ಆಹಾರದಲ್ಲಿ ಜಿರಳೆ: ಗ್ರಾಹಕರ ಆರೋಪ

ಬೆಂಗಳೂರು: ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ದಲ್ಲಿರುವ (ಕೆಐಎ) ರಾಮೇಶ್ವರಂ ಕೆಫೆ ಔಟ್ಲೆಟ್‌ನಲ್ಲಿ ಗ್ರಾಹಕರಿಗೆ ನೀಡಿದ ಉಪಾಹಾರ ಪೊಂಗಲ್‌ನಲ್ಲಿ ಜಿರಳೆ ಪತ್ತೆಯಾಗಿರುವ ಘಟನೆ ನಡೆದಿದೆ.

ಗುರುವಾರ ಬೆಳಗ್ಗೆ ಲೋಕನಾಥ್ ಎಂಬುವವರು ವಿಮಾನ ನಿಲ್ದಾಣದ ರಾಮೇಶ್ವರಂ ಕೆಫೆಯಿಂದ 300ರು. ಹಣ ನೀಡಿ ಪೊಂಗಲ್ ಮತ್ತು 180 ರೂಪಾಯಿಗೆ ಫಿಲ್ಟರ್ ಕಾಫಿ ಖರೀದಿ ಮಾಡಿದ್ದರು. ಒಟ್ಟು ಬಿಲ್ 504 ರು. ಆಗಿತ್ತು ಎಂದು ವರದಿಯಾಗಿದೆ. ಅವರು ಅದನ್ನು ತಿನ್ನುವ ವೇಳೆ ಅದರಲ್ಲಿ ಜಿರಳೆ ಪತ್ತೆಯಾಗಿದೆ.

ಗ್ರಾಹಕರು ಆರೋಪಿಸಿದಂತೆ, ಕೆಫೆ ಸಿಬ್ಬಂದಿ ಮೊದಲು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಲು ಪ್ರಯತ್ನಿಸಿದ್ದಾರೆ. ಹುಳು ಇರುವ ಪೊಂಗಲ್‌ನ ವಿಡಿಯೊವನ್ನು ರೆಕಾರ್ಡ್ ಮಾಡಲು ಪ್ರಾರಂಭಿಸಿದಾಗ ಮಾತ್ರ ಅವರು ಸಮಸ್ಯೆ ಒಪ್ಪಿಕೊಂಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಕೆಫೆ ಸಿಬ್ಬಂದಿ ಕ್ಷಮೆಯಾ ಚಿಸಿದರು ಮತ್ತು ಚಿತ್ರೀಕರಣ ಪ್ರಾರಂಭಿಸಿದ ನಂತರವೇ 300 ರು. ಮರುಪಾವತಿ ನೀಡಿದರು ಎಂದು ಆ ವ್ಯಕ್ತಿ ಹೇಳಿಕೊಂಡಿ ದ್ದಾನೆ. ಆಹಾರ ಪದಾರ್ಥದ ಸಂಪೂರ್ಣ ಮರುಪಾವತಿ ಅವರು ಪಡೆದಿದ್ದಾರೆ ಎಂದು ವರದಿಯಾಗಿದೆ. ಘಟನೆಯ ವೀಡಿಯೊದಲ್ಲಿ, ಗ್ರಾಹಕರು ಪೊಂಗಲ್‌ನ ಚಮಚದಲ್ಲಿರುವ ಹುಳು ಎತ್ತಿ ತೋರಿಸಿರುವ ವಿಡಿಯೊ ವೈರಲ್ ಆಗಿದೆ.

ಪೊಲೀಸ್ ಠಾಣೆಯಲ್ಲಿ ದೂರು ದಾಖಲು

ಬೆಂಗಳೂರು ವಿಮಾನ ನಿಲ್ದಾಣದ ಔಟ್‌ಲೆಟ್‌ನಲ್ಲಿ ಆಹಾರದಲ್ಲಿ ಜಿರಳೆ ಇದೆ ಎಂದು ಸುಳ್ಳು ಆರೋಪ ಹಾಕಿ, ಹಣ ಸುಲಿಗೆ ಮಾಡಲು ಪ್ರಯತ್ನಿಸಿದ್ದ ವ್ಯಕ್ತಿಗಳ ಗುಂಪಿನ ವಿರುದ್ಧ ಪೊಲೀಸ್ ದೂರು ದಾಖಲಾಗಿದೆ. ಬ್ರಾಂಡ್ ಕಾರ್ಯಾಚರಣೆ ಮುಖ್ಯಸ್ಥರು ಸಲ್ಲಿಸಿದ ಔಪಚಾರಿಕ ದೂರಿನ ಪ್ರಕಾರ, ಈ ಘಟನೆ ಜುಲೈ 24, 2025 ರಂದು ಬೆಳಗ್ಗೆ ಸಂಭವಿಸಿದೆ, 5-7 ವ್ಯಕ್ತಿಗಳ ಗುಂಪು ಸಾರ್ವಜನಿಕ ಗೊಂದಲ ಸೃಷ್ಟಿಸಿದ್ದರು. ಬಡಿಸಿದ ಆಹಾರದಲ್ಲಿ ಜಿರಳೆ ಇದೆ ಎಂದು ಸುಳ್ಳು ಆರೋಪ ಹೊರಿಸಿ. ನಂತರ ವ್ಯಕ್ತಿಗಳು ಪರಿಹಾರ ನೀಡದಿದ್ದರೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಸ್ವಲ್ಪ ಸಮಯದ ನಂತರ, ಅನಾಮಧೇಯ ನಂಬರ್‌ನಿಂದ ಬಂದ ಕರೆಯಿಂದ 5 ಲಕ್ಷ ರು. ನಗದು ನೀಡುವಂತೆ ಒತ್ತಾಯಿಸಿದ್ದರು. ಇದಕ್ಕೆ ಪ್ರತಿಕ್ರಿಯೆಯಾಗಿ, ರಾಮೇಶ್ವರಂ ಕೆಫೆ ಕರೆ ದಾಖಲೆಗಳು, ಸಂದೇಶ ಸ್ಕ್ರೀನ್‌ಶಾಟ್‌ಗಳು ಮತ್ತು ಇತರ ದಾಖಲೆಗಳನ್ನು ಪೊಲೀಸರಿಗೆ ಸಲ್ಲಿಸಿ, ಬ್ಲ್ಯಾಕ್‌ಮೇಲ್ ಪ್ರಯತ್ನದ ವಿರುದ್ಧ ತಕ್ಷಣ ಕಾನೂನು ಕ್ರಮ ಕೈಗೊಳ್ಳುವಂತೆ ದಿ ರಾಮೇಶ್ವರಂ ಕೆಫೆಯ ಸಂಸ್ಥಾಪಕಿ ದಿವ್ಯಾ ರಾಘವ್ ದೂರಿನಲ್ಲಿ ತಿಳಿಸಿದ್ದಾರೆ.

ಸ್ಪಂದನಾ ಸ್ಫೂರ್ತಿ ಫೈನಾನ್ಶಿಯಲ್ ಲಿಮಿಟೆಡ್
SPANDANA
(CIN: L65929TG2003PLC040648)
ಗ್ಯಾಲಕ್ಸಿ, ವಿಂಗ್ ಬಿ, 16ನೇ ಮಹಡಿ, ಪ್ಲಾಟ್ ನಂ.1, ಸೈಟ್ ನಂ. 83/1,ಹೈದರಾಬಾದ್ ನಾಲೆಡ್ಜ್ ಸಿಟಿ, ಟಿಎಸ್‌ಐಐಸಿ, ರಾಯದುರ್ಗ್ ಪನ್ಮಕ್ತ,ಹೈದರಾಬಾದ್ ರಂಗಾರೆಡ್ಡಿ, ತೆಲಂಗಾಣ- 500081

ಸಾರ್ವಜನಿಕ ಸೂಚನೆ

ನಮ್ಮ ಗ್ರಾಹಕರ ಅನುಕೂಲಕ್ಕಾಗಿ, ಸಾರ್ವಜನಿಕರಿಗೆ, ವಿಶೇಷವಾಗಿ ಗ್ರಾಹಕರಿಗೆ ತಿಳಿಸಲು ಇದು ಉದ್ದೇಶವಾಗಿದೆ, ಯಾವುದೇ ಸೇವೆಗಳನ್ನು ಪಡೆಯಲು ದಯವಿಟ್ಟು ನಮ್ಮ ಪರ್ಯಾಯ ಶಾಖೆಯನ್ನು ಸಂಪರ್ಕಿಸಿ.

1. ಹಳೆಯ ಶಾಖೆಯಾಗಲಿರುವ ಶಾಖೆಯ ಹೆಸರು ಮತ್ತು ವಿಳಾಸ	ನಿಟ್ಟೂರು (ಕೆಎ2796), ಮನೆ ಸಂಖ್ಯೆ: 81*/11, 1ನೇ ಮಹಡಿ, 3ನೇ ಕ್ರಾಸ್, ಬಾಗೂರು ಗೇಟ್, ಎಸ್.ಮಟ್ಟಿಘಟ್ಟ ಪೋಸ್ಟ್, ನಿಟ್ಟೂರು ಹೋಬಳಿ, ಗುಬ್ಬಿ ಟಿಕ್ಯೂ, ಗುಬ್ಬಿ(ಟಿಕ್ಯೂ), ತುಮಕೂರು-ಜಿಲ್ಲೆ, ಕರ್ನಾಟಕ-572223.
2. ಪರ್ಯಾಯ ಶಾಖೆಯ ಹೆಸರು ಮತ್ತು ವಿಳಾಸ (ಸೇವೆಗಳನ್ನು ಪಡೆಯಲು ಪರ್ಯಾಯ ಶಾಖೆ)	ತುಮಕೂರು-1 (ಕೆಎಜಿಎಲ್ 0183), ಮನೆ ಸಂಖ್ಯೆ: ಪ್ಲಾಟ್ ಸಂಖ್ಯೆ:15, ಮೈದಾನ, ವಾರ್ಡ್ ಸಂಖ್ಯೆ:27 (ಪಿಐಡಿ 4250), ಎಸ್ ಐ ಟಿ ಎಕ್ಸ್‌ಟೆನ್ಶನ್, ತುಮಕೂರು, ಕರ್ನಾಟಕ-572101.
ಮುಕ್ತಾಯ ದಿನಾಂಕ/ ವಿಲೀನ	25.07.2025

ಪರ್ಯಾಯ ಶಾಖೆಗೆ ಸ್ಥಳಾಂತರಗೊಳ್ಳುವ ಪ್ರಕ್ರಿಯೆಯಲ್ಲಿ ಗ್ರಾಹಕರಿಗೆ ಯಾವುದೇ ಅನಾನುಕೂಲತೆ ಉಂಟಾಗದಂತೆ ಕಂಪನಿಯು ಸೂಕ್ತ ಕಾಳಜಿ ವಹಿಸುತ್ತಿದೆ ಎಂದು ಸ್ಪಷ್ಟಪಡಿಸಲಾಗಿದೆ. ಪರ್ಯಾಯ ಶಾಖೆಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯಲ್ಲಿ ಗ್ರಾಹಕರಿಗೆ ಯಾವುದೇ ರೀತಿಯ ತೊಂದರೆಯಾದರೆ, ಸಂಬಂಧಪಟ್ಟ ಎಲ್ಲಾ ಗ್ರಾಹಕರ ಕಿರುಬಂಡವಾಳ ಸಾಲದ ಖಾತೆಗಳನ್ನು ಸರಾಗವಾಗಿ ಗೊತ್ತುಪಡಿಸಿದ ಶಾಖೆಗೆ (ಅಂದರೆ, ಸರಣಿ ಸಂಖ್ಯೆ 2 ರಲ್ಲಿ ಉಲ್ಲೇಖಿಸಲಾದ ಶಾಖೆಗೆ) ವರ್ಗಾಯಿಸಲಾಗುತ್ತದೆ. ಗ್ರಾಹಕರು 25-07-2025 ರಿಂದ ಜಾರಿಗೆ ಬರುವ ಮೇಲೆ ತಿಳಿಸಲಾದ ಬದಲಾವಣೆ(ಗಳನ್ನು) ದಯವಿಟ್ಟು ಗಮನಿಸಬೇಕೆಂದು ಇಲ್ಲಿ ವಿನಂತಿಸಲಾಗಿದೆ. ಯಾವುದೇ ಹೆಚ್ಚಿನ ಸ್ಪಷ್ಟೀಕರಣದ ಅಗತ್ಯವಿದ್ದರೆ ಮತ್ತು/ಅಥವಾ ಯಾವುದೇ ತೊಂದರೆ ಉಂಟಾದರೆ, ಗ್ರಾಹಕರು ಶಾಖಾ ವ್ಯವಸ್ಥಾಪಕರು ಅಥವಾ ಶಾಖೆಯ ಅಧಿಕಾರಿಗಳನ್ನು ಅಥವಾ ಮುಖ್ಯ ಕಚೇರಿಯನ್ನು ಟೋಲ್ ಫ್ರೀ ಸಂಖ್ಯೆ **1800-120-5519 / ಇಮೇಲ್ ಐಡಿ - css@spandansphoorty.com ನಲ್ಲಿ ಸಂಪರ್ಕಿಸಬಹುದು.**

ಎಸ್‌ಡಿ/-
ಸ್ಥಳ: ನಿಟ್ಟೂರು — ಅಧಿಕೃತ ಅಧಿಕಾರಿ
ದಿನಾಂಕ: 25/07/2025 — ಸ್ಪಂದನಾ ಸ್ಫೂರ್ತಿ ಫೈನಾನ್ಶಿಯಲ್ ಲಿಮಿಟೆಡ್

PUBLIC NOTICE

My client **Sri. K.N.Chakarapani,** S/o late P. Nanjundappa is the absolute owner of the property bearing old Sy No,68, New Sy No.68/1, to the extent of 24 guntas duly converted by the order of Deputy commissioner Bangalore District, Vide official memorandum No A.L.N. (NAY) SR/85/13/14, dated 07.01.2016, BBMP Katha No 686/68, situated at Thindlu Village, Yelahanka Hobli, Bangalore North Taluk, and bounded as East by:- Sy.No 69/2 Land and Sri. Muniyappa's land and Muniyappa's Land, West by:- Government water Chenal, North by:- Remaining Portion of land in same Sy.No. 68 and BBMP Road, South by:- Sri. Munibandhraiah's land and petrol Bunk. It is stated that, my client has executed GPA in favour of Sri, P. Ramkrishana, S/o late Padmanabhaiah, he is making hectic efforts to sell the aforesaid property by misusing the powers conferred in my client here by cancelled the GPA through notice dated 4/06/2025. same is stands cancelled.

General Public are hereby notified, not to enter into any sale transactions or anybody to transacts regarding said property, they will be doing so at their own cost and risk, and such transactions will not be binding on my client and same are illegal.

V. Gangadhara Gowda,
A.V. Manjula Gangadhar, Advocates,
No.13, 2nd Floor, Sri Maruthi House,
RMV II stage, Sanjaya Nagar Main Road,
Sanjaya agar, Bangalore 560 094.
Mob.9844204030, 9880514213, Mob.9845394166

ವಿರಾಮ
ಪ್ರತಿ ಭಾನುವಾರ

PUBLIC NOTICE

To whomsoever it may concern

I, Mr. Srinivas Doddi, S/o.Late D.Rajagopala Setty, Aged about 82 years, do hereby state and affirm that I am the true and absolute owner being in peaceful possession of residential property bearing # 401, RBI Layout, Kothnur, J.P. Nagar, Bengaluru. I state and affirm that the original copy of the sale deed is laminated and intended to be submitted to a bank as collateral against education loan being availed by my grandson, Master Aathreya S/o.Dr.Mahesh Doddi Srinivas.

PUBLIC NOTICE

My client **Sri. Nanjappa,** S/o late S.K.Ramaiah is the sole owner of the property bearing Sy No 4/2, measuring to the extent of the 2 acre 32 guntas including 1 Gunta Kharab Situated at Sampigehalli Village, Yelahankha Hobli, Bangalore North Taluk, It is stated that, my client has executed GPA in favour of Ramakrishana, S/o late Padmanabhaiah, he is making hectic efforts to sell the aforesaid property by misusing the powers conferred in and same my client hereby cancelled the GPA through Notice Dated 24/06/2025. Same is stands cancelled.

General Public are hereby notified, not to enter into any sale transactions or anybody to transacts regarding said property, they will be doing so at their own cost and risk, and such transactions will not be binding on my client and same are illegal.

V. Gangadhara Gowda,
A.V. Manjula Gangadhar, Advocates,
No.13, 2nd Floor, Sri Maruthi House,
RMV II stage, Sanjaya Nagar Main Road,
Sanjaya agar, Bangalore 560 094.
Mob.9844204030, 9880514213, Mob.9845394166

PUBLIC NOTICE

My client **Sri. Thimmarayappa,** S/o late P. Papanna is the absolute owner of the properties in respect of the land bearing Sy. No.4, measuring 1 acre 17 Guntas, Land bearing Sy. No.2/2, measuring 11 Guntas, land bearing Sy No.21, measuring 05 Guntas, land bearing Sy.No.21 and 24 measuring 24 Guntas the land bearing Sy. No. 15 measuring 34 Guntas, all are situated at Venkateshapura Village, Yelahanka Hobli, Bangalore North Taluk, It is stated that, my client has executed GPA in favour of Ramakrishana,S/o late Padmanabhaiah, he is making hectic efforts to sell the aforesaid properties by misusing the powers conferred in same my client hereby cancelled the GPA through Notice Dated 24/06/2025 same is stands cancelled.

General Public are hereby notified, not to enter into any sale transactions or anybody to transacts regarding said property, they will be doing so at their own cost and risk, and such transactions will not be binding on my client and same are illegal.

V. Gangadhara Gowda,
A.V. Manjula Gangadhar, Advocates,
No.13, 2nd Floor, Sri Maruthi House,
RMV II stage, Sanjaya Nagar Main Road,
Sanjaya agar, Bangalore 560 094.
Mob.9844204030, 9880514213, Mob.9845394166

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLABGM00553613 1. ವಿನಾಯಕ್ ಸಿಂಗ್ ಜಿ ಮಾಲೀಕ ಎಂ ವಿ ಜ್ಯುವೆಲ್ಸ್ ಬೂಟೀಕ್ 2. ರುಕ್ಮಿಣಿ ಬಾಯಿ ಜಿ	ಫ್ಲಾಟ್ ಸಂಖ್ಯೆ ಎ2, ನೆಲ ಮಹಡಿ, ಸಾಯಿ ಸುರಭಿ ಎನ್‌ಕ್ಲೇವ್, ಖಾತಾ ನಂ. 37, ಆಸ್ತಿ ಸಂಖ್ಯೆ 37, ಖಾನೆಶುಮಾರಿ ನಂ. 482, ಸಾರಕ್ಕಿಲೇಕ್ನಿಂದ ಸಾರಕ್ಕಿ ಗ್ರಾಮ ಮುಖ್ಯ ರಸ್ತೆಗೆ ಹೋಗುವ ದಾರಿ, ವಾರ್ಡ್ ನಂ. 187, ಜೆಪಿ ನಗರ 5ನೇ ಹಂತ, ಸರಕ್ಕಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು - 560078, ಕರ್ನಾಟಕ.	04.07.2025	ದಿನಾಂಕ 08.07.2025 ರಂತೆ ರೂ. 39,82,738.05/- (ರೂಪಾಯಿ ಮೂವತ್ತ ಒಂಬತ್ತು ಲಕ್ಷ ಎಂಬತ್ತ ಎರಡು ಸಾವಿರದ ಏಳು ನೂರ ಮೂವತ್ತ ಎಂಟು ಮತ್ತು ಪೈಸೆ ಐದು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಏಆರ್‌ಎಫ್‌ಏಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು — **ಅಧಿಕೃತ ಅಧಿಕಾರಿ**

ಆರ್‌ಸಿಬಿ ಕಾಲ್ತುಳಿತ ಪ್ರಕರಣ | ಆಕ್ಷೇಪಾರ್ಹ ವರದಿ ವಜಾಗೊಳಿಸಿ ಎಂದು ಮನವಿ

ಕುನ್ಹಾ ವರದಿ ರದ್ದು ಕೋರಿ ಡಿಎನ್‌ಎ ಹೈ ಕೋರ್ಟ್‌ಗೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗದಲ್ಲಾದ ಕಾಲ್ತುಳಿತದಿಂದ 11 ಮಂದಿ ಮೃತಪಟ್ಟ ಪ್ರಕರಣದ ಸಂಬಂಧ ತನಿಖೆಗಾಗಿ ರಾಜ್ಯ ಸರಕಾರ ನೇಮಿಸಿದ್ದ ನಿವೃತ್ತ ನ್ಯಾಯಮೂರ್ತಿ ಮೈಕಲ್ ಕುನ್ಹಾ ನೇತೃತ್ವದ ಏಕಸದಸ್ಯ ವಿಚಾರಣಾ ಆಯೋಗವು ಜುಲೈ 11ರಂದು ನೀಡಿರುವ ವರದಿ ರದ್ದುಗೊಳಿಸಲು ಕೋರಿ ಆರ್‌ಸಿಬಿ ವಿಜಯೋತ್ಸವದ ಆಯೋಜನೆಯ ಹೊಣೆ ಹೊತ್ತಿದ್ದ ಡಿಎನ್‌ಎ ಎಂಟರ್ಟೈನ್ಮೆಂಟ್ ನೆಟ್ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಹೈಕೋರ್ಟ್ ಮೆಟ್ಟಿಲೇರಿದೆ.

ಮೆಸರ್ಸ್ ಬಿ.ಕೆ.ಸಂಪತ್ ಕುಮಾರ್ ಅಂಡ್ ಅಸೋ ಸಿಯೇಟ್ಸ್ ಮೂಲಕ ಡಿಎನ್‌ಎ ಎಂಟರ್ಟೈನ್ಮೆಂಟ್‌ನ ನಿರ್ದೇಶಕ ಸುನಿಲ್ ಮ್ಯಾಥ್ಯೂ ಅವರು ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಅರ್ಜಿಯನ್ನು ನ್ಯಾಯಮೂರ್ತಿಗಳಾದ ಜಯಂತ್ ಬ್ಯಾನರ್ಜಿ ಮತ್ತು ಎಸ್ ಜಿ ಪಂಡಿತ್ ಅವರ ಪೀಠದ ಮುಂದೆ ಗುರುವಾರ ಉಲ್ಲೇಖಿಸಿದ್ದು, ಪೀಠವು ಶುಕ್ರವಾರ ಅರ್ಜಿ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ವಿಚಾರಣಾ ಆಯೋಗವು ದಾಖಲಿಸಿರುವ ಸಾಕ್ಷಿಗಳ ಪಾಟೀ ಸವಾಲಿಗೆ ವಿಚಾರಣಾ ಆಯೋಗ ಕಾಯಿದೆ 1952ರಲ್ಲಿ ಅವಕಾಶವಿದೆ. ಅರ್ಜಿದಾರರ ಹಿತಾಸಕ್ತಿಗೆ ವಿರುದ್ಧವಾಗಿ ಸಾಕ್ಷಿ ನೀಡಿರುವವರ ಪಾಟೀ ಸವಾಲಿಗೆ ಅರ್ಜಿದಾರರು ಕೋರಿದ್ದು, ಇದಕ್ಕೆ ನ್ಯಾ. ಕುನ್ಹಾ ಆಯೋಗ ನಿರಾಕರಿಸಿದೆ. ಹೀಗಾಗಿ, ಇಡೀ ವಿಚಾರಣಾ ವರದಿಯು ಸಹಜ ನ್ಯಾಯತತ್ವಕ್ಕೆ ವಿರುದ್ಧವಾಗಿರುವುದರಿಂದ ಅದನ್ನು ವಜಾಗೊಳಿಸಬೇಕು. ತನ್ನ ಸಾಕ್ಷಿಗಳು ಮತ್ತು ಇತರೆ ಸಾಕ್ಷಿಗಳು ದಾಖಲಿಸಿರುವ ಪ್ರತಿಯನ್ನು ಕೋರಲಾಗಿದ್ದು, ಅದನ್ನು ಆಯೋಗವು ನಿರಾಕರಿಸಿದೆ. ತಪ್ಪಾಗಿ ದಾಖಲಿಸಿರುವ ಉತ್ತರದತ್ತ ಬೆರಳು ಮಾಡಲು ಪ್ರತಿ ಕೇಳಿರುವುದಕ್ಕೆ ನಿರಾಕರಿಸಿರುವುದರಿಂದ ಆಕ್ಷೇಪಾರ್ಹ ವರದಿ ವಜಾಗೊಳಿಸಬೇಕು ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಮೃತ ದಿವ್ಯಾಂಶಿ ಕಿವಿಯೋಲೆ ಕೊಡಿ

ಆರ್‌ಸಿಬಿ ವಿಜಯೋತ್ಸವ ವೇಳೆ ಉಂಟಾದ ಕಾಲ್ತುಳಿತದಲ್ಲಿ ಸಾವನ್ನಪ್ಪಿದ ದಿವ್ಯಾಂಶಿ ಧರಿಸಿದ್ದ ಕಿವಿಯೋಲೆ ಹಾಗೂ ಚಿನ್ನದ ಸರ ಕಳ್ಳತನವಾಗಿದೆ ಎಂದು ಆರೋಪಿಸಿ ಆಕೆಯ ತಾಯಿ ಅಶ್ವಿನಿ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ವೇಳೆ ಶವಾಗಾರದಲ್ಲಿ ನನ್ನ ಮಗಳ ಕಿವಿಯೋಲೆ ಹಾಗೂ ಚಿನ್ನದ ಸರ ಕಾಣೆಯಾಗಿದೆ. ಮಗಳ ಹುಟ್ಟುಹಬ್ಬ ದಿನದಂದು ಆಕೆಯ ಮಾವ ಉಡುಗೊರೆ ನೀಡಿದ್ದರು. ಕಿವಿಯೋಲೆಯೊಂದಿಗೆ ನನ್ನ ಮಗಳು ಹೆಚ್ಚಿನ ಭಾವನಾತ್ಮಕ ಸಂಬಂಧ ಹೊಂದಿದ್ದಳು. ಒಂದೂವರೆ ವರ್ಷದಿಂದ ಕಿವಿಯೋಲೆ ಬಿಚ್ಚಿರಲಿಲ್ಲ. ಹೀಗಾಗಿ ನನಗೆ ಆಭರಣ ಬೇಕೆಂದು ಬೌರಿಂಗ್ ಆಸ್ಪತ್ರೆಗೆ ತೆರಳಿ ಕೇಳಿದಾಗ, ಈ ಬಗ್ಗೆ ಯಾರೂ ಸರಿಯಾಗಿ ಸ್ಪಂದಿಸಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರಿಗೆ ದೂರು ನೀಡಿದ್ದೇನೆ. ದಿವ್ಯಾಂಶಿಯನ್ನು ಶವಾಗಾರಕ್ಕೆ ಕರೆದೊಯ್ಯುವಾಗ ಕಿವಿಯೋಲೆ ಇತ್ತು. ಪರೀಕ್ಷೆ ಮುಗಿಸಿ ಶವ ಹೊರತಂದಾಗ ಆಭರಣ ಇರಲಿಲ್ಲ. ಆಭರಣ ಜತೆ ನನ್ನ ಮಗಳು ಭಾವನಾತ್ಮಕ ಸಂಬಂಧ ಹೊಂದಿದ್ದಳು. ಹೀಗಾಗಿ ಅದನ್ನು ಕೇಳುತ್ತಿದ್ದೇನೆ. ಸದ್ಯ ಶವಾಗಾರದ ಇನ್‌ಚಾರ್ಜ್ ವಿರುದ್ಧ ದೂರು ನೀಡಿದ್ದೇನೆ ಎಂದು ಅಶ್ವಿನಿ ತಿಳಿಸಿದರು.

ಬಿಕ್ಲು ಶಿವ ಹತ್ಯೆ ಪ್ರಕರಣ: ತನಿಖೆ ಸಿಐಡಿ ಹೆಗಲಿಗೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ತನಿಖೆಯನ್ನು ಭಾರತಿನಗರ ಪೊಲೀಸ್ ಠಾಣೆಯಿಂದ ಸಿಐಡಿಗೆ ವರ್ಗಾಯಿಸಲಾಗಿದೆ.

ಕೊಲೆ ಪ್ರಕರಣದಲ್ಲಿ ಆರೋಪಿ ಎ1 ಆರೋಪಿ ಜಗದೀಶ್ ಅಲಿಯಾಸ್ ಜಗ್ಗ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ ಮನವಿ ತಿರಸ್ಕೃತಗೊಂಡಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಗದೀಶ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ ಮಾಡಿ ಅವರ ಮನವಿಯು ಈ ಕೊಲೆ ಪ್ರಕರಣದಲ್ಲಿ ಪರಿಗಣನೆಗೆ ಅರ್ಹವಲ್ಲ ಎಂದು ಹೇಳಿದೆ. ರಾಜ್ಯ ಸರಕಾವು ಬಿಕ್ಲು ಶಿವ ಕೊಲೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು ತನಿಖೆಯನ್ನು ಸಿಐಡಿಗೆ ವರ್ಗಾಯಿಸಿದೆ. ಈ ಪ್ರಕರಣದ ಎಲ್ಲಾ ಕಡತಗಳನ್ನು ಸಿಐಡಿಗೆ ಒಪ್ಪಿಸಲು ತಯಾರಿ ನಡೆಯುತ್ತಿದ್ದು, ಮುಂದಿನ ತನಿಖೆಯನ್ನು ಸಿಐಡಿ ತಂಡವೇ ನಡೆಸಲಿದೆ.

ಪ್ರಕರಣದ ಹಿನ್ನೆಲೆ: ಜುಲೈ 15, 2025 ರಂದು ಬೆಂಗಳೂರಿನ ಹಲಸೂರು ಕೆರೆಯ ಸಮೀಪ ರೌಡಿಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವನನ್ನು ಕಾರಿನಲ್ಲಿ ಬಂದ ದುಷ್ಕರ್ಮಿಗಳ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಗೈದಿತ್ತು. ಈ ಘಟನೆಗೆ ಸಂಬಂಧಿಸಿದಂತೆ, ಬಿಕ್ಲು ಶಿವನ ತಾಯಿ ವಿಜಯಲಕ್ಷ್ಮಿ ಅವರು ದಾಖಲಿಸಿದ ದೂರಿನ ಆಧಾರದ ಮೇಲೆ ಭಾರತಿನಗರ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಕೆ.ಆರ್.ಪುರಂ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ್ ಅವರನ್ನು ಐದನೇ ಆರೋಪಿಯಾಗಿ (ಎ5) ಹೆಸರಿಸಲಾಗಿದ್ದು, ಜಗದೀಶ್ ಅಲಿಯಾಸ್ ಜಗ್ಗ (ಎ1), ಕಿರಣ್ (ಎ2), ವಿಮಲ್ (ಎ3), ಮತ್ತು ಅನಿಲ್ (ಎ4) ಸೇರಿದಂತೆ ಒಟ್ಟು 15 ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಶವದ ಮುಂದೆ ಮದ್ಯಪಾನ | ಎಗ್‌ಬುರ್ಜಿ ತಯಾರಿಸಿಕೊಂಡು ಊಟ ಮಾಡಿದ ಪತಿ

ಗರ್ಭಿಣಿ ಅನುಮಾನಾಸ್ಪದ ಸಾವು

ಬೆಂಗಳೂರು: ಥಣಿಸಂದ್ರದಲ್ಲಿ ಗರ್ಭಿಣಿ ಮಹಿಳೆಯೊಬ್ಬರು ಅನುಮಾನಾಸ್ಪ ದವಾಗಿ ಸಾವನ್ನಪ್ಪಿರುವ ಘಟನೆ ಹೆಣ್ಣೂರು ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಮೃತ ಮಹಿಳೆ ಸುಮನಾ (22), ಉತ್ತರ ಪ್ರದೇಶ ಮೂಲದವರಾಗಿದ್ದು, ಪತಿ ಶಿವಂ ಜತೆ ಥಣಿಸಂದ್ರದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ಸುಮನಾ 3 ದಿನಗಳ ಹಿಂದೆ ಮನೆಯಲ್ಲಿ ಸಾವನ್ನಪ್ಪಿದ್ದಾರೆ. ದುರ್ವಾಸನೆ ಬಂದಾಗ ಸ್ಥಳೀಯರು ಗಮನಿಸಿದ್ದು, ಈ ಪ್ರಕರಣ ಬೆಳಕಿಗೆ ಬಂದಿದೆ. ಮೃತದೇಹದ ಮೇಲೆ ಯಾವುದೇ ಗಾಯದ ಗುರುತುಗಳು ಕಂಡುಬಂದಿಲ್ಲ, ಆದರೆ ಮೂಗಿನಿಂದ ರಕ್ತ ಸ್ರಾವವಾಗಿರುವುದು ಗಮನಕ್ಕೆ ಬಂದಿದೆ.

ಸುಮನಾ ಅವರ ಸಾವಿನ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ. ಹೆಣ್ಣೂರು ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಶಿವಂಗಾಗಿ ಹುಡುಕಾಟ ಆರಂಭಿಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದ್ದು, ವರದಿಯನ್ನು ಆಧರಿಸಿ ತನಿಖೆ ಮುಂದುವರಿಯಲಿದೆ. ಈ ಘಟನೆಯು ಗರ್ಭಿಣಿಯ ಸಾವಿನ ಸುತ್ತಲಿನ ಅನುಮಾನಗಳನ್ನು ಸೃಷ್ಟಿಯಾಗಿದೆ. ಗರ್ಭಿಣಿಯ ಅನುಮಾನಾಸ್ಪದ ಸಾವು ಮತ್ತು ಪತಿಯ ವಿಚಿತ್ರ ವರ್ತನೆಯಿಂದ ಥಣಿಸಂದ್ರದ ಸ್ಥಳೀಯರಲ್ಲಿ ಆತಂಕ ಮೂಡಿದೆ.

ಸ್ಥಳೀಯರಿಗೆ ಶಂಕೆ, ಪತಿ ಶಿವಂ ಪರಾರಿ

ಸುಮನಾ ಸಾವಿನ ನಂತರ ಅವರ ಪತಿ ಶಿವಂ ಎರಡು ದಿನಗಳ ಕಾಲ ಮೃತದೇಹದ ಜತೆಯೇ ಮನೆಯಲ್ಲಿದ್ದ. ಮೊದಲ ದಿನ ಶಿವಂ ಕೆಲಸಕ್ಕೆ ಹೋಗಿ ಬಂದಿದ್ದ. ಎರಡನೇ ದಿನ ರಾತ್ರಿ, ಶವದ ಮುಂದೆಯೇ ಮದ್ಯಪಾನ ಮಾಡಿದ್ದು, ಎಗ್ ಬುರ್ಜಿ ತಯಾರಿಸಿಕೊಂಡು ಊಟ ಮಾಡಿದ್ದಾನೆ. ಬುಧವಾರ ಮಧ್ಯಾಹ್ನದ ವೇಳೆಗೆ ಮೃತದೇಹ ಕೊಳೆತು ದುರ್ವಾಸನೆ ಬರಲಾರಂಭಿಸಿತು. ಇದನ್ನು ಗಮನಿಸಿ, ಅಕ್ಕಪಕ್ಕದವರು ಮನೆಗೆ ಬಂದು ನೋಡುವ ವೇಳೆಗೆ ಶಿವಂ ಸ್ಥಳದಿಂದ ಪರಾರಿಯಾಗಿದ್ದಾನೆ.

ಸಮಾಚಾರ ಸಣ್ಣದಲ್ಲ

ನೇರ ಫೋನ್ ಇನ್ ಕಾರ್ಯಕ್ರಮ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ಜು.25ರಂದು ಬೆಳಗ್ಗೆ 9.30ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಭಾಗವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು.ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡ ಬಹುದು. ಸಂಪರ್ಕ ಸಂಖ್ಯೆ 080-22945119 ಮತ್ತು 080-22229639.

ನಾಟ್ಯ ಕುಸುಮಾಂಜಲಿ ನೃತ್ಯ ರೂಪಕ

ಬೆಂಗಳೂರು: ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಜು.25ರಂದು ಸಂಜೆ 4.00 ಗಂಟೆಗೆನವ ನಾಟ್ಯಸಂಗಮದ ವತಿಯಿಂದ ನೃತ್ಯ ರೂಪಕಗಳ ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ

ಕಾರ್ಯಕ್ರಮ ವನ್ನು ಆಯೋಜಿಸ ಲಾಗಿದೆ. ಹಿರಿಯ ನೃತ್ಯಗುರು ವಿದುಷಿ ಗೀತಾ ಶ್ರೀನಾಥ್ ನೇತೃತ್ವದಲ್ಲಿ ಐದು ನೃತ್ಯ ತಂಡಗಳಿಂದ ವೈವಿಧ್ಯ ಪೂರ್ಣವಾದ ಐದು ನೃತ್ಯ ನಾಟಕಗಳನ್ನು ಪ್ರದರ್ಶಿಸ ಲಾಗುತ್ತಿದ್ದು, ನೃತ್ಯಗುರು ಎಲ್ ಮಂಜು ಭೈರವಿ, ವಿ. ಸುನಿತಾ ಸುಕುಮಾರನ್, ಶ್ರುತಿ ನಾಯಕ್,ಅಪರ್ಣ ದೀಕ್ಷಿತ್ , ಡಾ. ಶ್ಲೀನಿ ಮತ್ತು ನೃತ್ಯಶಾಲಾ ವಿದ್ಯಾರ್ಥಿಗಳು ವಿವಿಧ ನೃತ್ಯರೂಪಕಗಳನ್ನು ಪ್ರದರ್ಶಿಸುತ್ತಾರೆ. ಈ ವೇಳೆ ಬಹುಮುಖ ನೃತ್ಯ ಪ್ರತಿಭೆಗಳಾದ ಕು. ಪ್ರಣಿಕ ರಜಿನಿ, ಕು. ನಿಧಿಶ್ರೀ. ಡಿ., ವಿ. ಐಶ್ವರ್ಯ ಮುಂತಾ ದವರಿಗೆ ನಾಟ್ಯ ಕುಸುಮಾಂಜಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆರ್‌ಆರ್ ನಗರದಲ್ಲಿ ಒತ್ತುವರಿ ತೆರವು ಇಂದು

ಬೆಂಗಳೂರು: ಆರ್‌ಆರ್ ನಗರ ವಲಯದಲ್ಲಿ ಜುಲೈ 25ರಂದು ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ, ಅನಧಿಕೃತ ಜಾಹೀರಾತು ತೆರವು ಕಾರ್ಯಾಚರಣೆ ಹಾಗೂ ಸ್ವಚ್ಛತಾ ಅಭಿಯಾನವನ್ನು ನಡೆಸಲಾಗುವುದು ಎಂದು ವಲಯ ಆಯುಕ್ತ ಡಾ. ಸತೀಶ್ ಬಿ.ಸಿ. ತಿಳಿಸಿದರು. ಮುಖ್ಯ ಆಯುಕ್ತರ ನಿರ್ದೇಶನದಂತೆ ವಲಯ ವ್ಯಾಪ್ತಿಯ ಪಾದಚಾರಿ ಗಳಿಗೆ ಅಡೆತಡೆಗಳಿಲ್ಲದ ಪಾದಚಾರಿ ಮಾರ್ಗವನ್ನು ಕಲ್ಪಿಸುವ ಸಲುವಾಗಿ ಪ್ರತಿ ತಿಂಗಳ 1ನೇ ಮತ್ತು 3ನೇ ಶನಿವಾರ ಹಾಗೂ 2ನೇ ಮತ್ತು 4ನೇ ಶುಕ್ರವಾರ ದಂದು ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆಯೊಂದಿಗೆ, ಅನಧಿಕೃತ ಜಾಹೀ ರಾತು ತೆರವು ಕಾರ್ಯಾಚರಣೆ ಹಾಗೂ ಸ್ವಚ್ಛತಾ ಅಭಿಯಾನವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿ ದರು. ವಲಯ ವ್ಯಾಪ್ತಿಗೆ ಒಳಪಡುವ ಪ್ರದೇಶಗಳ ಲ್ಲಿರುವ ಅನಧಿಕೃತ ಪಾದಚಾರಿ ಮಾರ್ಗ ಒತ್ತುವರಿ ದಾರರು ಸ್ವಯಂ ಪ್ರೇರಿತರಾಗಿ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸಲು ಈ ಮೂಲಕ ತಿಳಿಯ ಪಡಿಸಿದೆ. ಒಂದು ವೇಳೆ ಸ್ವಯಂ ಪ್ರೇರಿತ ರಾಗಿ ತೆರವುಗೊಳಿಸದಿದ್ದಲ್ಲಿ ಬಿಬಿಎಂಪಿ ವತಿಯಿಂದ ತೆರವುಗೊಳಿಸಿ ಸಂಬಂಧಪಟ್ಟವರ ಮೇಲೆ ನಿಯಮಾ ನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ವಿರಾಮ
ಪ್ರತಿ ಭಾನುವಾರ

ಮಹದಾಯಿ: ಗೋವಾ ವಿರುದ್ಧ ತಿರುಗಿ ಬಿದ್ದ ಕೈಪಡೆ

ಗೋವಾ ಸಿಎಂಗೆ ಮಾನಸಿಕ ಸ್ಥಿಮಿತವಿಲ್ಲವೆಂದ ಡಿಕೆಶಿ | ಕಳಸಾ ಬಂಡೂರಿ ಅಣೆಕಟ್ಟು ಕಾಮಗಾರಿಯನ್ನು ರಾಜ್ಯ ಸರಕಾರ ಆರಂಭಿಸಲಿದೆ | ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಹಿಂಪಡೆದು, ಮಹದಾಯಿ ಯೋಜನೆ ಕಾಮಗಾರಿ ಶೀಘ್ರ: ಡಿಸಿಎಂ

ಬೆಂಗಳೂರು: ಮಹದಾಯಿ ಯೋಜನೆಗೆ ಸಂಬಂಧಿಸಿದಂತೆ ಗೋವಾ ಸರಕಾರದ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕರು, ಮಹದಾಯಿ ವಿಷಯದಲ್ಲಿ ರಾಜ್ಯದ ನಿಲುವಿನಲ್ಲಿ ಯಾವುದೇ ಕಾರಣಕ್ಕೂ ಬದಲಾವಣೆಯಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಹದಾಯಿ ಯೋಜನೆಗೆ ಕೇಂದ್ರ ಅರಣ್ಯ ಇಲಾಖೆ ಅನುಮತಿ ನೀಡುವುದಿಲ್ಲ ಎಂಬ ಗೋವಾ ಸಿಎಂ ಪ್ರಮೋದ್ ಸಾವಂತ್ ಅವರ ಹೇಳಿಕೆ ಖಂಡನೀಯ. ಸುಪ್ರೀಂ ಕೋರ್ಟ್‌ನಲ್ಲಿ ನಾವು ಸಲ್ಲಿಸಿರುವ ಅರ್ಜಿ ಹಿಂಪಡೆದು, ಶೀಘ್ರವೇ ಕಾಮಗಾರಿ ಆರಂಭಿಸುತ್ತೇವೆ. ಅವರು ಅದನ್ನು ತಡೆಯಲಿ, ನಾನೂ ನೋಡುತ್ತೇನೆ ಎಂದು ಗುಡುಗಿದ್ದಾರೆ.

ಗೋವಾ ಸಿಎಂ ಮಾನಸಿಕ ಸ್ಥಿಮಿತ ಕಳೆದುಕೊಂಡು ಈ ರೀತಿ ಮಾತನಾಡಿದ್ದಾರೆ. ನಮ್ಮದು ಒಕ್ಕೂಟ ವ್ಯವಸ್ಥೆ ರಾಷ್ಟ್ರ. ಇಲ್ಲಿ ಅಂತರ ರಾಜ್ಯಗಳ ನಡುವಣ ಸಂಬಂಧ ಹೇಗಿರಬೇಕು ಎಂಬುದು ಅವರಿಗೆ ತಿಳಿದಿಲ್ಲ. ಇದು ನಮ್ಮ ನೆಲ, ನಮ್ಮ ಯೋಜನೆ ನಾವು ಮಾಡುತ್ತೇವೆ. ಇದನ್ನು ಪ್ರಶ್ನಿಸುವುದು ಅವರ ಹಕ್ಕಲ್ಲ. ಮಹದಾಯಿ ವಿಚಾರದಲ್ಲಿ ನ್ಯಾಯಾಧಿಕರಣದ ತೀರ್ಪು ಹೊರಬಿದ್ದಿದೆ. ಯೋಜನೆ ಜಾರಿಗೆ ಸಂಬಂಧಿಸಿದಂತೆ ಟೆಂಡರ್ ಕರೆಯಲಾಗಿದೆ. ಬಿಜೆಪಿ ಸರಕಾರದ ಅವಧಿಯಲ್ಲಿ ಬಸವರಾಜ ಬೊಮ್ಮಾಯಿ ಅವರು, ಸ್ಥಳೀಯ ಸಂಸದರು ಹಾಗೂ ಕೇಂದ್ರದ ಹಾಲಿ ಸಚಿವರಾದ ಪ್ರಲ್ಹಾದ್ ಜೋಶಿ ಅವರು ಈ ಯೋಜನೆ ಜಾರಿಯಾಗಲಿದೆ ಎಂದು ಸಂಭ್ರಮಾಚರಣೆ ಮಾಡಿದ್ದರು. ಗೋವಾದವರಿಗೆ ಕರ್ನಾಟಕಕ್ಕೆ ನೋಟೀಸ್ ನೀಡಲು ಹಕ್ಕಿಲ್ಲ, ಏನೇ ನೋಟಿಸ್ ನೀಡಿದರೂ ನಾವು ಯೋಜನೆ ಕಾಮಗಾರಿ ಆರಂಭಿಸುತ್ತೇವೆ ಎಂದರು.

ಕನ್ನಡಪರ ಸಂಘಟನೆಗಳ ವಿರೋಧ

ಮಹದಾಯಿ ನದಿಗೆ ಅಡ್ಡಲಾಗಿ ಕಳಸಾ ಬಂಡೂರಿ ಅಣೆಕಟ್ಟು ನಿರ್ಮಾಣ ಮಾಡಲು ಅವಕಾಶ ನೀಡುವುದಿಲ್ಲ ಎಂಬ ಕೇಂದ್ರ ಸರಕಾರದ ಧೋರಣೆಗೆ ರಾಜ್ಯಾದ್ಯಂತ ವಿರೋಧ ವ್ಯಕ್ತವಾಗಿದ್ದು, ಕನ್ನಡಪರ ಸಂಘಟನೆಗಳು ಪ್ರತಿಭಟನೆಗೆ ಮುಂದಾಗಿವೆ. ವಿವಿಧ ಪಕ್ಷಗಳ ರಾಜಕೀಯದ ಹಪಾಹಪಿಯಿಂದಾಗಿ ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳು ನನೆಗುದಿಗೆ ಬೀಳುತ್ತಿವೆ ಎಂದು ಆರೋಪಿಸಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯಾಗಿ ಬಹಳಷ್ಟು ಸಚಿವರು ಕೇಂದ್ರ ಸಚಿವರನ್ನು ಹಲವಾರು ಬಾರಿ ಭೇಟಿ ಮಾಡಿ ಮೇಕೆದಾಟು, ಕಳಸಾ ಬಂಡೂರಿಗೆ ಅನುಮತಿ ನೀಡುವಂತೆ ಮನವಿ ಮಾಡುತ್ತಲೇ ಬಂದಿದ್ದಾರೆ. ಆದರೆ ಕೇಂದ್ರ ಸಚಿವರು ಯೋಜನೆಗೆ ಅನುಮತಿ ನೀಡುವುದಿಲ್ಲ ಎಂದು ಬಿಜೆಪಿ ಆಡಳಿತದಲ್ಲಿರುವ ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಬಳಿ ಹೇಳಿಕೊಂಡಿರುವುದು ವ್ಯಾಪಕ ಟೀಕೆಗೆ ಗುರಿಯಾಗಿದೆ.

ಎಲ್ಲಾ ಸಂಸದರು ಒಟ್ಟಾಗಿ ಹೋರಾಡಬೇಕು: ಈ ವಿಚಾರವಾಗಿ ರಾಜ್ಯದ ಎಲ್ಲಾ ಸಂಸದರನ್ನು ಭೇಟಿ ಮಾಡುತ್ತೇನೆ. ಇದು ನಮ್ಮ ರಾಜ್ಯದ ಸ್ವಾಭಿಮಾನದ ಪ್ರಶ್ನೆ. ಈ ವಿಚಾರದಲ್ಲಿ ನಮ್ಮ ಸಂಸದರು ಬಾಯಿ ಮುಚ್ಚಿಕೊಂಡಿರುವುದೇ ದೊಡ್ಡ ತಪ್ಪು. ನಮ್ಮ ರಾಜ್ಯದ 28 ಲೋಕಸಭೆ ಸದಸ್ಯರು, 12 ರಾಜ್ಯಸಭೆ ಸದಸ್ಯರು ಒಗ್ಗಟ್ಟಿನಿಂದ ಹೋರಾಡಿ ರಾಜ್ಯದ ಗೌರವ ಕಾಪಾಡಬೇಕಾಗಿದೆ.

ಗೋವಾದ ಕೇವಲ ಒಂದು ಸಂಸದರಿಗಾಗಿ ನಮ್ಮ ಕರ್ನಾಟಕವನ್ನು ಮಾರಿಕೊಳ್ಳಲು ಸಾಧ್ಯವಿಲ್ಲ. ಈ ವಿಚಾರವಾಗಿ ಬಿಜೆಪಿ ಸಂಸದರು, ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸರಕಾರದ ಸಚಿವರು ಹಾಗೂ ಪ್ರಧಾನಮಂತ್ರಿಗಳ ಮೇಲೆ ಒತ್ತಡ ಹಾಕಬೇಕು. ನಾನು ಕೂಡ ಕೇಂದ್ರ ಜಲಶಕ್ತಿ ಸಚಿವರು ಹಾಗೂ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಲು ಸಮಯಾವಕಾಶ ಕೇಳುತ್ತೇನೆ. ಎಲ್ಲಾ ಸಂಸದರ ನಿಯೋಗವನ್ನು ಕರೆದೊಯ್ಯುವ ಪ್ರಯತ್ನ ಮಾಡುತ್ತೇನೆ. ನಮ್ಮ ಜತೆ ಎಲ್ಲರೂ ಬರುವ ನಂಬಿಕೆ ಇದೆ. ಯಾರು ಬರುತ್ತಾರೋ ಬಿಡುತ್ತಾರೋ ನಮ್ಮ ಕೆಲಸ ನಾವು ಮಾಡುತ್ತೇವೆ ಎಂದು ತಿಳಿಸಿದರು.

ಮಹದಾಯಿ ಯೋಜನೆ ವಿಚಾರದಲ್ಲಿ ಕೇಂದ್ರ ಸಚಿವರು ದಾರಿ ತಪ್ಪಿಸುತ್ತಿದ್ದಾರಾ ಎಂದು ಕೇಳಿದಾಗ, ಕೇಂದ್ರ ಜಲಶಕ್ತಿ ಸಚಿವರು ಈ ವಿಚಾರದಲ್ಲಿ ನಿಷ್ಪಕ್ಷಪಾತವಾಗಿದ್ದಾರೆ. ಅವರು ಈ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ನಾನು ಅವರನ್ನು ಐದಾರು ಬಾರಿ ಈ ವಿಚಾರಕ್ಕಾಗಿ ಭೇಟಿ ಮಾಡಿದ್ದೇನೆ. ಕೇಂದ್ರ ಅರಣ್ಯ ಸಚಿವರು ಕೂಡ ಈ ವಿಚಾರದಲ್ಲಿ ರಾಜಕೀಯ ಮಾಡುವುದಿಲ್ಲ. ಅಭಿವೃದ್ಧಿ ಕೆಲಸಕ್ಕೆ ಬೆಂಬಲವಾಗಿದ್ದಾರೆ. ಎಲ್ಲಾ ಸಮಸ್ಯೆ ಇರುವುದು ಗೋವಾದಲ್ಲಿ ಎಂದು ಕಿಡಿಕಾರಿದರು.

ನ್ಯಾಯಾಧಿಕರಣದಿಂದ ನಮಗೆ ಹಂಚಿಕೆಯಾಗಿರುವ ನೀರನ್ನು ಬಳಕೆ ಮಾಡಿಕೊಳ್ಳಲು ಕೇಂದ್ರ ಸರಕಾರ ಅವಕಾಶ ನೀಡುತ್ತಿಲ್ಲ. ಗೋವಾ ಸರಕಾರ ಮೊದಲಿನಿಂದಲೂ ವಿರೋಧಿಸುತ್ತಲೇ ಬಂದಿದೆ. ನಮ ರಾಜ್ಯದ ಸಂಸದರು ಬಾಯಿ ಬಿಡುತ್ತಿಲ್ಲ. ಇವರನ್ನು ಆಯ್ಕೆ ಮಾಡಿ ಕಳುಹಿಸಿದ್ದು ಏಕೆ? ಕೆಲಸಕ್ಕೆ ಬಾರದ ವಿಚಾರಗಳನ್ನೆಲ್ಲಾ ಮಾತನಾಡುವ ಸಂಸದರು ರಾಜ್ಯದ ನೆಲ-ಜಲ, ಭಾಷೆ, ಹಿತಾಸಕ್ತಿ ವಿಚಾರ ಬಂದಾಗ ಮಾತನಾಡುವುದಿಲ್ಲ.

- ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ಸುಪ್ರೀಂಕೋರ್ಟ್‌ನಲ್ಲಿ ಕರ್ನಾಟಕದ ಪರವಾಗಿ ತೀರ್ಪು ಬಂದಿದೆ. ಈಗಾಗಲೇ ಟೆಂಡರ್ ಕರೆದು ಯೋಜನೆಯ ಗುತ್ತಿಗೆ ನೀಡಲಾಗಿದೆ. ಈ ಹಂತದಲ್ಲಿ ಅನುಮತಿ ನೀಡುವುದಿಲ್ಲ ಎಂದು ಹೇಳಿರುವುದು ಸರಿಯಲ್ಲ. ಗೋವಾದಿಂದ ಕೇವಲ ಇಬ್ಬರು ಸಂಸದರಿದ್ದಾರೆ. ಕರ್ನಾಟಕ 28 ಸದಸ್ಯರನ್ನು ಹೊಂದಿದೆ. ಲೋಕಸಭೆಯಲ್ಲಿ ಈ ಬಗ್ಗೆ ಬಲವಾದ ಪ್ರತಿಪಾದನೆ ಮಾಡಬೇಕು. ಕರ್ನಾಟಕದಿಂದ ಹಾಲು, ಹಣ್ಣು, ತರಕಾರಿ ನಿಲ್ಲಿಸಿದರೆ ಗೋವಾಕ್ಕೆ ತೊಂದರೆಯಾಗಲಿದೆ.

- ಕೋನರೆಡ್ಡಿ, ಶಾಸಕ

ಇನ್ನೋನೆಕ್ಸ್ಟ ಮೈಂಡ್‌ನಿಂದ ಆಸ್ಟ್ರಾನೋಮಿ ಎಕ್ಸ್‌ಪೋಗೆ ಚಾಲನೆ

ಬೆಂಗಳೂರು: ನಗರದ ಮಂತ್ರಿ ಮಾಲ್‌ನ ಐನಾಕ್ಸ್ ಚಿತ್ರಮಂದಿರದಲ್ಲಿ ಇನ್ನೋನೆಕ್ಸ್ಟ ಮೈಂಡ್ ಪ್ರೈವೇಟ್ ಲಿಮಿಟೆಡ್‌ನಿಂದ ಆಸ್ಟ್ರಾನೊಮಿ ಎಕ್ಸ್ಪೊ 1.0 ಆವೃತಿಯನ್ನು ಡಿಒಪಿಟಿ ಸಚಿವಾಲಯದ ಹಿಂದಿ ಸಲಹಾ ಸಮಿತಿಯ ಸದಸ್ಯ ರಾಘವೇಂಧೀರಾ ಗುರುವಾರ ಉದ್ಘಾಟಿಸಿದರು.

ಈ ಕಾರ್ಯಕ್ರಮದಲ್ಲಿ ವಿಜ್ಞಾನಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ವಿಜ್ಞಾನ ಮತ್ತು ಖಗೋಳ ಶಾಸ್ತ್ರದಲ್ಲಿನ ಬೆಳವಣಿಗೆಗಳನ್ನು ಅನ್ವೇಶಿಸಲು ಹಾಗೂ ಅದರ ಹೊಸ ಸಾಧ್ಯತೆಗಳನ್ನು ಪರಿಚಯಿಸಿದರು. ಅಸ್ಟ್ರಾನೋಮಿ ಎಕ್ಸ್‌ಪೋ ಲಾಂಛನ ಮತ್ತು ಅಧಿಕೃತ ಕರಪತ್ರವನ್ನು ಬಿಡುಗಡೆ ಮಾಡಲಾಯಿತು. ಬಾಹ್ಯಾಕಾಶ ಪರಿಶೋಧನೆ ಮತ್ತು ರಾಕೆಟ್ ತಂತ್ರಜ್ಞಾನದ ಪ್ರಮುಖ ಅಂಶಗಳ ವಿಶೇಷ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ರಾಘವೇಂಧೀರಾ, ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳ ಪರಿಣಾಮ ಬಾಹ್ಯಾಕಾಶ ವಿಜ್ಞಾನವನ್ನು ಹೆಚ್ಚು ಪರಿಣಾಮಕಾರಿಯಾಗಿ ಅಭ್ಯಾಸ ಮಾಡಲು ಸಾಧ್ಯವಾಗಿದೆ. ಪ್ರತಿಯೊಂದು ಗ್ರಹಗಳು ಮತ್ತು ಸೌರಮಂಡಲದ ಅಧ್ಯಯನಕ್ಕೆ ಇದು ನೆರವಾಗಿದೆ. ಆಸ್ಟ್ರಾನೋಮಿ ಎಕ್ಸ್‌ಪೋ ಮೂಲಕ ಮಕ್ಕಳಿಗೆ ಬಾಹ್ಯಾಕಾಶದ ಕುರಿತು ಹೆಚ್ಚಿನ ಅರಿವು ಮೂಡಿಸಲು ಸಾಧ್ಯವಾಗುತ್ತಿದೆ. ಜತೆಗೆ, ಭಾರತ ಪ್ರಸ್ತುತ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಜಗತ್ತಿನಲ್ಲಿಯೇ ನಾಲ್ಕನೇ ಸ್ಥಾನದಲ್ಲಿದ್ದು, ಮುಂದಿನ ದಿನಗಳಲ್ಲಿ ಮೊದಲ ಸ್ಥಾನಕ್ಕೆ ಏರುವಂತಾಗಲಿ ಎಂದು ಹಾರೈಸಿದರು.

ಇಸ್ರೋ ವಿಜ್ಞಾನಿ ವರ್ಚುವಲ್ ಸಂವಾದ: ಇಸ್ರೋ ವಿಜ್ಞಾನಿ ಇಳಂಗೋವನ್ ಅವರೊಂದಿಗಿನ ನೇರ ವರ್ಚುವಲ್ ಸಂವಾದವು ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ತಜ್ಞರೊಂದಿಗೆ ನೇರವಾಗಿ ತೊಡಗಿಸಿಕೊಳ್ಳಲು ಅವಕಾಶವನ್ನು ಒದಗಿಸಿತು. ಇದೇ ಸಂದರ್ಭದಲ್ಲಿ ಖಗೋಳ ಭೌತಶಾಸ್ತ್ರ, ಇಸ್ರೋ ಇತಿಹಾಸ ಮತ್ತು

ನಗರದ ಮಂತ್ರಿ ಮಾಲ್‌ನ ಐನಾಕ್ಸ್ ಚಿತ್ರಮಂದಿರದಲ್ಲಿ ನಡೆದ ಆಸ್ಟ್ರಾನೊಮಿ ಎಕ್ಸ್‌ಪೋ 1.0 ಆವೃತಿಯಲ್ಲಿ ಅಸ್ಟ್ರಾನೋಮಿ ಎಕ್ಸ್‌ಪೋ ಲಾಂಛನ ಮತ್ತು ಅಧಿಕೃತ ಕರಪತ್ರವನ್ನು ಹಿಂದಿ ಸಲಹಾ ಸಮಿತಿಯ ಸದಸ್ಯ ರಾಘವೇಂಧೀರಾ ಬಿಡುಗಡೆ ಮಾಡಿದರು.

ಡಾಲ್ಬಿ ಅಟ್ಮಾಸ್ ಸ್ವರೂಪದಲ್ಲಿ ಪ್ರಸ್ತುತಪಡಿಸಲಾದ 3ಈ ವಿಶೇಷ ಚಿತ್ರ ಪ್ರದರ್ಶಿಸಲಾಯಿತು. ಇದು ಕಾಸ್ಮಿಕ್ ವಿದ್ಯಮಾನಗಳು ಮತ್ತು ಬಾಹ್ಯಾಕಾಶ ವಾಸಸ್ಥಳದ ಭವಿಷ್ಯದ ಸಾಧ್ಯತೆಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿತು. 150ಕ್ಕೂ ಹೆಚ್ಚು ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು, ಪ್ರಾಂಶುಪಾಲರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಾನುಲಿ ಕೇಂದ್ರಗಳಿಗೆ ಆರ್ಥಿಕ ಸಹಕಾರ ನೀಡುವಂತೆ ಮನವಿ

ಬೆಂಗಳೂರು: ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 24 ಬಾನುಲಿ ಕೇಂದ್ರಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಆರ್ಥಿಕ ಸಬಲೀಕರಣಕ್ಕೆ ರಾಜ್ಯ ಸರಕಾರ ನೆರವು ನೀಡಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮನವಿ ಮಾಡಿದೆ.



ಈ ಕುರಿತು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಸಿಎಂ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರದಲ್ಲಿ, ಸುದ್ದಿಮನೆಯಲ್ಲಿ ಸಮುದಾಯ ಬಾನುಲಿ ಕೇಂದ್ರಗಳು, ಶಿಕ್ಷಣ, ಕೃಷಿ, ಆರೋಗ್ಯ, ಕಲೆ, ಸಂಸ್ಕೃತಿ ಭಾಷೆಯ ವಿಷಯ ಸೇರಿದಂತೆ ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಜನರಲ್ಲಿ ಅರಿವು ಮೂಡಿಸುತ್ತಾ ಬರುತ್ತಿದೆ. ರಾಜ್ಯದಲ್ಲಿ 24 ಸಮುದಾಯ ಬಾನುಲಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು, ಆರ್ಥಿಕ ಸಂಪನ್ಮೂಲ ಕೊರತೆಯಿಂದ ಬಳಲುತ್ತಿದೆ. ಆದ್ದರಿಂದ ಈ ಬಗ್ಗೆ ಸರಕಾರದ ಇಲಾಖೆಗಳ ಮೂಲಕ ಜಾಹಿರಾತು ನೆರವು ಕೊಡಿಸಬೇಕು ಎಂದು ಕರ್ನಾಟಕ ಸಮುದಾಯ ಬಾನುಲಿ ಕೇಂದ್ರಗಳ ಸಂಘ ಕೆಯುಡಬ್ಲ್ಯುಜೆಗೆ ಮನವಿ ಮಾಡಿದೆ. ಸಂಘದ ಮನವಿಯನ್ನು ತಾವುಗಳು ಪರಿಗಣಿಸಿ ಸಮುದಾಯದ ಬಾನುಲಿ ಕೇಂದ್ರಗಳನ್ನು ಆರ್ಥಿಕವಾಗಿ ಸಬಲೀಕರಣ ಮಾಡುವ ನಿಟ್ಟಿನಲ್ಲಿ ವಾರ್ತಾ ಇಲಾಖೆ ಮೂಲಕ ಜರೂರು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಗ್ರಹಿಸಿದೆ.

ತಿಂಗಳಾಂತ್ಯಕ್ಕೆ ನಮ್ಮ ಮೆಟ್ರೋ ನಿಲ್ದಾಣದಲ್ಲಿ ನಂದಿನಿ ಮಳಿಗೆ ಆರಂಭ

ಬೆಂಗಳೂರು: ನಮ್ಮ ಮೆಟ್ರೋದ ನಿಲ್ದಾಣಗಳಲ್ಲಿ ನಂದಿನಿ ಮಳಿಗೆಗಳನ್ನು ಆರಂಭಿಸಲು ದಿನಾಂಕವನ್ನು ನಿಗದಿಪಡಿಸಿದ್ದು, ತಿಂಗಳಾಂತ್ಯಕ್ಕೆ ಮಳಿಗೆಗಳು ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿದೆ.

ಪ್ರಾರಂಭಿಕವಾಗಿ ಮೂರು ಮೆಟ್ರೋ ನಿಲ್ದಾಣದಲ್ಲಿ ನಂದಿನಿ ಮಳಿಗೆಯನ್ನು ನಿರ್ಮಾಣ ಮಾಡಲಾಗುತ್ತಿದ್ದು, ಈ ತಿಂಗಳಾಂತ್ಯಕ್ಕೆ ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿ ಮಳಿಗೆ ಆರಂಭಿಸಲು ಕೆಎಂಎಫ್ ಮುಂದಾಗಿದ್ದು ನಮ್ಮ ಮೆಟ್ರೋವು ಅಗತ್ಯ ಸಿದ್ದತೆಯನ್ನು ನಡೆಸಿದೆ. ನಮ್ಮ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿ ಮಳಿಗೆಗಳ ಆರಂಭಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಅವಕಾಶ ನೀಡಿದ್ದು, 10 ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆ ತೆರಯುತ್ತೇವೆ ಎಂದು ಹೇಳಿದ್ದರು. ಈಗ ಪ್ರಾರಂಭಿಕವಾಗಿ 3 ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆಗಳ ನಿರ್ಮಾಣ ಸಿದ್ಧವಾಗಿದ್ದು, ಮೆಜೆಸ್ಟಿಕ್ ಮೆಟ್ರೋ ನಿಲ್ದಾಣ, ಸೆಂಟ್ರಲ್ ಕಾಲೇಜ್ ಮೆಟ್ರೋ ನಿಲ್ದಾಣ ಮತ್ತು ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣಗಳಲ್ಲಿ ನಂದಿನಿ ಮಳಿಗೆ



ನಿರ್ಮಾಣ ಆಗಿದೆ.

ಈ ತಿಂಗಳ ಅಂತ್ಯ ಅಥವಾ ಆಗಸ್ಟ್ ಮೊದಲ ವಾರದಲ್ಲಿ ನಂದಿನಿ ಮಳಿಗೆಯು ಸಾರ್ವಜನಿಕರ ಸೇವೆಗೆ ದೊರೆಯಲಿದ್ದು, ಈ ಬಗ್ಗೆ ಕೆಎಂಎಫ್ ಎಂಡಿ ಶಿವಸ್ವಾಮಿ ಈಗಾಗಲೇ 3 ಮೆಟ್ರೋ ನಿಲ್ದಾಣಗಳಲ್ಲಿ ಸೇವೆಗೆ ಸಿದ್ಧವಾಗುತ್ತಿದೆ. ಮುಂದಿನ ವಾರದಲ್ಲಿ ಉದ್ಘಾಟನೆ ಮಾಡಲು ಸಿದ್ಧತೆ ನಡೆಸಿದೆ. ಎಲ್ಲಾ ರೀತಿಯ ನಂದಿನಿ ಉತ್ಪನ್ನಗಳು ಇಲ್ಲಿ ಸಿಗಲಿವೆ. ಮೂರು ಮೆಟ್ರೋ ನಿಲ್ದಾಣಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲೂ ಮಳಿಗೆ ತೆರೆಯಲು ಯೋಜನೆ ಸಿದ್ಧವಾಗಿದೆ ಎಂದು ಹೇಳಿದ್ದಾರೆ.

ಇತಿಹಾಸದಲ್ಲಿ ಕಾಳುಮೆಣಸಿನ ರಾಣಿ ಎಂದೇ ಪ್ರಸಿದ್ಧವಾಗಿರುವ ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ ಸ್ಮರಣಾರ್ಥ ಗುರುವಾರ ರಾಷ್ಟ್ರಪತಿ ದ್ರೌಪದಿ ಮುರ್ಮು ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಿದರು. ಈ ವೇಳೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಧರ್ಮಸ್ಥಳ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ , ರಾಣಿ ಚೆನ್ನಭೈರಾದೇವಿ ಕುರಿತ ಕೃತಿಯ ಕರ್ತೃ ಗಜಾನನ ಶರ್ಮ ಸೇರಿ ನಾನಾ ಕ್ಷೇತ್ರದ ಗಣ್ಯರು ಇದ್ದರು.

ಅರುಣಾಚಲ ಪ್ರದೇಶ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು

ಪ್ರವಾಸೋದ್ಯಮದಿಂದ ಸಂಸ್ಕೃತಿಗೆ ಉತ್ತೇಜನ: ಪ್ರವಾಸೋದ್ಯಮ ಸಚಿವ ಪಸಂಗ್ ದೋರ್ಜಿ ಸೋನಾ

ಬೆಂಗಳೂರು: ಶಾಂತಿ ಮತ್ತು ಪ್ರವಾಸೋದ್ಯಮದ ನಡುವೆ ಅವಿನಾಭಾವ ಸಂಬಂಧವಿದ್ದು, ಪ್ರವಾಸೋದ್ಯಮಕ್ಕೆ ಅರುಣಾಚಲ ಪ್ರದೇಶ ಈಗ ಹೆಚ್ಚು ಒತ್ತು ನೀಡುತ್ತಿದೆ ಎಂದು ಅಲ್ಲಿನ ಪ್ರವಾಸೋದ್ಯಮ ಸಚಿವ ಪಸಂಗ್ ದೋರ್ಜಿ ಸೋನಾ ಹೇಳಿದರು.

ಬೆಂಗಳೂರಿನಲ್ಲಿ ಗುರುವಾರ ಆರಂಭವಾದ ಮೂರು ದಿನಗಳ ಇಂಡಿಯಾ ಇಂಟರ್‌ನ್ಯಾಷನಲ್ ಟ್ರಾವೆಲ್ ಮಾರ್ಟ್ ಪ್ರವಾಸೋದ್ಯಮ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಪ್ರವಾಸೋದ್ಯಮದಿಂದ ಸಂಸ್ಕೃತಿಗೆ ಉತ್ತೇಜನ ದೊರೆಯುತ್ತದೆ. ಪರಸ್ಪರ ಕಲಿಕೆಗೆ ಅವಕಾಶ ಸಿಗುತ್ತದೆ. ದೇಶದ ವಿವಿಧ ರಾಜ್ಯಗಳು ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುತ್ತ ಕಲೆ ಮತ್ತು ಸಂಸ್ಕೃತಿ ಉಳಿಸಿ ಪೋಷಿಸುತ್ತಿದೆ. ಅರುಣಾಚಲ ಪ್ರದೇಶವೂ ಇದರಲ್ಲಿ ಹಿಂದೆ ಬೀಳಬಾರದು ಎನ್ನುವುದು ಸರಕಾರದ ಉದ್ದೇಶ. ನಾವೀಗ ರೇಷ್ಮೆ ಮೊಟ್ಟೆಯೊಳಗೇ ಹುಳುವಿನಂತೆ ಉಳಿದುಕೊಳ್ಳದೇ ಹೊರಜಗತ್ತಿಗೆ ತೆರೆದುಕೊಳ್ಳಬೇಕಾಗಿದೆ. ಅರುಣಾಚಲ ಪ್ರದೇಶದ ಸರಕಾರವೂ ಅದನ್ನೇ ಉತ್ತೇಜಿಸುತ್ತಿದೆ ಎಂದರು.

ಈ ಬಾರಿಯ ಮೇಳದಲ್ಲಿ 25 ರಾಜ್ಯಗಳು ಮತ್ತು 20 ಅಂತಾರಾಷ್ಟ್ರೀಯ ತಾಣಗಳ 800ಕ್ಕೂ ಹೆಚ್ಚು ಪ್ರದರ್ಶಕರು, ಧಾರ್ಮಿಕ ಯಾತ್ರೆಗಳು, ಸಾಹಸ, ಸಂಸ್ಕೃತಿ, ವನ್ಯಜೀವಿ ಪ್ರವಾಸೋದ್ಯಮ ಇತ್ಯಾದಿ ವೈವಿಧ್ಯಮಯ ಕ್ಷೇತ್ರಗಳ ಪ್ರದರ್ಶಕರು ಸೇರಿದ್ದಾರೆ. ಈಶಾನ್ಯ ರಾಜ್ಯಗಳ ಭಾರತೀಯ ಫೇಂಡಾಮ್ಯಗಳಿಂದ, ರಾಜಸ್ತಾನದ ಉತ್ಸವಗಳು ಮತ್ತು ಕರ್ನಾಟಕದ ಪಾರಂಪರಿಕ ತಾಣಗಳವರೆಗೆ ವೈವಿಧ್ಯಮಯ ವರ್ಣಮಯ ಮಾರ್ಗದರ್ಶಿ ಮಳಿಗೆಗಳು ಇಲ್ಲಿವೆ. ಕರ್ನಾಟಕ ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಆರ್.ರಾಜೇಂದ್ರ,

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುತ್ತಿರುವ ಮೂರು ದಿನಗಳ ಇಂಡಿಯಾ ಇಂಟರ್‌ನ್ಯಾಷನಲ್ ಟ್ರಾವೆಲ್ ಮಾರ್ಟ್ ಪ್ರವಾಸೋದ್ಯಮ ಮೇಳವನ್ನು ಅರುಣಾಚಲ ಪ್ರದೇಶದ ಪ್ರವಾಸೋದ್ಯಮ ಸಚಿವ ಪಸಂಗ್ ದೋರ್ಜಿ ಸೋನಾ ಉದ್ಘಾಟಿಸಿದರು.

ಜಂಗಲ್ ಲಾಡ್ಜಸ್ ಆಂಡ್ ರೆಸಾರ್ಟ್ ವ್ಯವಸ್ಥಾಪಕ ನಿರ್ದೇಶಕ ಪ್ರಸಾಂತ್ ಶಂಕಿನಮಠ, ಕರ್ನಾಟಕ ಟೂರಿಸಂ ಸೊಸೈಟಿ ಹಾಗೂ ಹೋಟೆಲ್ ಮತ್ತು ರೆಸ್ಟೋರೆಂಟ್ ಒಕ್ಕೂಟದ ಅಧ್ಯಕ್ಷ ಶ್ಯಾಮರಾಜು ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ಮೇಳಕ್ಕೆ ಉತ್ತಮ ಸ್ಪಂದನೆ: ಸ್ಪಿಯರ್ ಟ್ರಾವೆಲ್ ಮೀಡಿಯಾ ನಿರ್ದೇಶಕ ಸಂಜಯ್ ಮಾತನಾಡಿ, ಇಂಡಿಯಾ ಇಂಟರ್‌ನ್ಯಾಷನಲ್ ಟ್ರಾವೆಲ್ ಮಾರ್ಟ್ 2025 ಪ್ರವಾಸೋದ್ಯಮದಲ್ಲಿ ಎಲ್ಲರೂ ಎದುರು ನೋಡುವ ಅತ್ಯಂತ ಪ್ರಮುಖ ಮೇಳವಾಗಿದ್ದು, ಇದರ ಬೆಂಗಳೂರು ಆವೃತ್ತಿಗೆ ಪ್ರದರ್ಶಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಪ್ರತೀ ಐಐಟಿಎಂ ಮೇಳವನ್ನು ವಿರಾಮ ರಜೆಗಳಿಂದ ಹೊಣೆಗಾರಿಕೆಯ ಪ್ರವಾಸೋದ್ಯಮದ ವರೆಗೆ ವಿವಿಧ ವಿಭಾಗಗಳ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾಗುತ್ತಿದೆ. ಈ ವರ್ಷ ಕೇವಲ ವೃತ್ತಿಪರ ಪ್ರವಾಸಿ ಏಜೆಂಟರು ಮಾತ್ರವಲ್ಲದೇ ವಿವಿಧ ರಾಜ್ಯಗಳ ಪ್ರವಾಸೋದ್ಯಮ ಇಲಾಖೆಗಳು, ಅಂತಾರಾಷ್ಟ್ರೀಯ ತಾಣಗಳು, ಆತಿಥ್ಯ ಕ್ಷೇತ್ರಗಳಿಂದಲೂ ಉತ್ತಮ ಸ್ಪಂದನೆ ದೊರಕಿದೆ ಎಂದರು.

ಶಾಲಾ ಮಕ್ಕಳಿಗೆ ಫ್ಲೇವರ್ಡ್ ಹಾಲು ನೀಡಲು ಪ್ರಸ್ತಾಪ: ಡಿ.ಕೆ. ಸುರೇಶ್

ಬೆಂಗಳೂರು: ಶಾಲಾ ಮಕ್ಕಳಿಗೆ ಫ್ಲೇವರ್ಡ್ ಹಾಲು ನೀಡುವ ಕುರಿತಂತೆ ಬಮೂಲ್‌ನ ನೂತನ ನಿರ್ದೇಶಕ ಡಿಕೆ ಸುರೇಶ್ ಶಾಲಾ ಶಿಕ್ಷಣ ಇಲಾಖೆಗೆ ಪ್ರಸ್ತಾವನೆಯನ್ನು ಇಟ್ಟಿದ್ದಾರೆ.

ಬಮೂಲ್ ನಿರ್ದೇಶಕರಾಗಿ ಅಧಿಕಾರ ಸ್ವೀಕರಿಸದ ಬೆನ್ನಲ್ಲೇ ಹೊಸ ಪ್ರಯೋಗಗಳಿಗೆ ಡಿಕೆ ಸುರೇಶ್ ಮುಂದಾಗುತ್ತಿದ್ದು, ನಂದಿನಿ ಹಾಲಿನ ಪ್ಯಾಕೆಟ್‌ಗಳಿಗೆ ಹೊಸ ಪರಿಸರ ಸ್ನೇಹಿ ರೂಪ ನೀಡುವ ಬಗ್ಗೆ ಪ್ರಸ್ತಾಪವನ್ನಿಟ್ಟಿದ್ದರು. ಇದರ ಬೆನ್ನಲ್ಲೇ ಶಾಲಾ ಮಕ್ಕಳಿಗೆ ಚಾಕೊಲೇಟ್, ಬಾದಾಮಿ, ಸ್ಟ್ರಾಬೆರಿ ಸೇರಿ ವಿವಿಧ ಫ್ಲೇವರ್‌ಗಳ ಹಾಲು ನೀಡಲು ಶಿಕ್ಷಣ ಇಲಾಖೆಯೊಂದಿಗೆ ಪ್ರಾಯೋಗಿಕ ಯೋಜನೆಯ ಪ್ರಸ್ತಾಪವನ್ನು ಡಿ.ಕೆ.ಸುರೇಶ್ ಮುಂದಿಟ್ಟಿದ್ದಾರೆ. ಮಕ್ಕಳಿಗೆ ಕೊಡುತ್ತಿರುವ ಪೌಡರ್ ರೂಪದ ಹಾಲು ಕಾಳಸಂತೆಯಲ್ಲಿ ಮಾರಾಟವಾಗುತ್ತಿದ್ದು, ಇದರಿಂದಾಗಿ ಮಕ್ಕಳಿಗೆ ಸರಿಯಾಗಿ ಹಾಲು ಸಿಗುತ್ತಿಲ್ಲ. ಇದನ್ನು ತಪ್ಪಿಸಲು ನೇರ ಹಾಲು ಪೂರೈಕೆ ಮಾಡುವುದು ಬಮೂಲ್ ನಿರ್ದೇಶಕರ ಯೋಜನೆಯಾಗಿದೆ. ಸಾಮಾನ್ಯ ಹಾಲಿನ ದರ ಕೊಟ್ಟರೆ, ಟೆಟ್ರಾ ಪ್ಯಾಕೆಟ್‌ನಲ್ಲಿ ಮಕ್ಕಳಿಗೆ ಪೂರೈಕೆ ಮಾಡುತ್ತೇವೆ. ಟೆಟ್ರಾ ಪ್ಯಾಕೆಟ್‌ನಲ್ಲಿ ಶಾಲಾ ಮಕ್ಕಳಿಗೆ ವಿವಿಧ ಫ್ಲೇವರ್ಡ್ ಹಾಲು ಪೂರೈಕೆ ಮಾಡುತ್ತೇವೆ ಎಂದು ಹೇಳಿದರು.

ಶಾಲಾ ಮಕ್ಕಳಿಗೆ ಫ್ಲೇವರ್ಡ್ ಹಾಲು ಪೂರೈಸುವ ಬಗ್ಗೆ ಡಿಕೆ ಸುರೇಶ್ ಅವರು ಈಗಾಗಲೇ ಶಿಕ್ಷಣ ಸಚಿವ ಮಧು ಬಂಗಾರಪ್ಪ ಜತೆ ಒಂದು ಸುತ್ತಿನ ಮಾತುಕತೆ ನಡೆಸಿದ್ದು, ಮುಂದಿನ ವಾರ ಈ ಕುರಿತು ಸಿಎಂ ಸಿದ್ದರಾಮಯ್ಯ ಜತೆ ಚರ್ಚಿಸಲಿದ್ದಾರೆ. ಒಂದು ವೇಳೆ ಸಿಎಂ ಅನುಮತಿ ನೀಡಿದರೆ. ಶಾಲಾ ಮಕ್ಕಳಿಗೆ ಫ್ಲೇವರ್ಡ್ ನಂದಿನಿ ಹಾಲು ಪೂರೈಕೆಯಾಗಲಿದೆ.

ಬಮೂಲ್ ನಿರ್ದೇಶಕರಾಗಿ ಆಯ್ಕೆಯಾದ ಬೆನ್ನಲ್ಲೇ ಡಿಕೆ ಸುರೇಶ್, ನಂದಿನಿ ಹಾಲಿನ ಪ್ಯಾಕೆಟ್‌ಗೆ ಹೊಸರೂಪ ಕೊಡಲು ಚಿಂತನೆ ನಡೆಸಿದ್ದರು. ಸದ್ಯ ಪಾಲಿಥಿನ್ ಪ್ಯಾಕೆಟ್‌ಗಗಳಲ್ಲಿ ನಂದಿನಿ ಹಾಲು ಮಾರಾಟವಾಗುತ್ತಿದ್ದು, ವಿದೇಶದಲ್ಲಿ ಬಳಕೆಯಲ್ಲಿರುವ ಬಯೋಡಿಗ್ರೇಡೇಬಲ್ ಪ್ಯಾಕೇಜಿಂಗ್ ಕವರ್ ತಯಾರಿಕೆಗೆ ಚಿಂತನೆ ನಡೆಸಿದೆ ಎಂದು ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಡಿಕೆ ಸುರೇಶ್ ಹೇಳಿದ್ದರು.

ನೂತನ ತಂತ್ರಜ್ಞಾನದಡಿ ತಯಾರಿಸಲಾಗುವ ಬಯೋಡಿಗ್ರೇಡೇಬಲ್ ಪ್ಯಾಕೆಟ್‌ಗಳು ಕೇವಲ 6 ತಿಂಗಳಲ್ಲಿ ಮಣ್ಣಿನಲ್ಲಿ ಕರಗುವ ಸಾಮರ್ಥ್ಯ ಹೊಂದಿವೆ ಎನ್ನಲಾಗಿದ್ದು, ಕನಕಪುರದ ಶಿವನಹಳ್ಳಿಯಲ್ಲಿ ಬಯೋಡಿಗ್ರೇಡೇಬಲ್ ಪ್ಯಾಕೇಜಿಂಗ್ ಕವರ್ ತಯಾರಿಕೆ ಪ್ರಯೋಗ ಈ ತಿಂಗಳಿನಿಂದಲೇ ಆರಂಭವಾಗಲಿದೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಕನ್ನಡ ಮಾತಾಡಿ ಎಂದಿದ್ದಕ್ಕೆ ದರ್ಪ

ಬೀದರ್: ಕನ್ನಡ ಮಾತನಾಡಿ ಎಂದಿದಕ್ಕೆ ರೂಲ್ಸ್ ಇದೆಯಾ ಎಂದು ಡಿಸಿಸಿ ಬ್ಯಾಂಕ್ ಸಿಬ್ಬಂದಿ ವ್ಯಕ್ತಿ ಮೇಲೆಯೇ ದರ್ಪ ಮೆರೆದ ಘಟನೆ ಬೀದರ್ ಜಿಲ್ಲೆಯ ಹುಲಸೂರು ಪಟ್ಟಣದ ಡಿಸಿಸಿ ಬ್ಯಾಂಕ್‌ನಲ್ಲಿ ನಡೆದಿದೆ. ಕರ್ನಾಟಕದಲ್ಲಿ ಕನ್ನಡ ಮಾತನಾಡಬೇಕಲ್ವಾ ಎಂದು ಸ್ಥಳೀಯ ವ್ಯಕ್ತಿ ಪ್ರಶ್ನೆ ಮಾಡಿದ್ದಕ್ಕೆ, ನಾನು ಕನ್ನಡ ಮಾತನಾಡಲ್ಲಾ ಎಂದು ಡಿಸಿಸಿ ಬ್ಯಾಂಕ್ ಸಿಬ್ಬಂದಿ ಕಿರಿಕ್ ಮಾಡಿದ್ದಾರೆ. ಅಲ್ಲದೇ ಈ ರೀತಿ ಮಾತನಾಡಿ ಎಂದು ಹೇಳೋ ಕೆಲಸ ಮಾಡಬೇಡಿ ಎಂದು ದರ್ಪ ಮೆರೆದಿದ್ದಾರೆ. ಇದು ಕರ್ನಾಟಕ, ಮಹಾರಾಷ್ಟ್ರ ಅಲ್ಲ ಎಂದು ವ್ಯಕ್ತಿ ಹೇಳಿದ್ದಾರೆ. ಈ ವೇಳೆ ಬ್ಯಾಂಕ್‌ನಲ್ಲಿ ನಿಮ್ಮ ಅಕೌಂಟ್ ಇದೆಯಾ, ಇಲ್ಲವಾದ್ರೆ ಇಲ್ಲಿಂದ ಹೋಗಿ ಎಂದು ಸಿಬ್ಬಂದಿ ಕಿರಿಕ್ ಮಾಡಿದ್ದಾರೆ. ಅಜ್ಜನ ಬ್ಯಾಂಕ್ ಅಕೌಂಟ್ ಬಗ್ಗೆ ಮಾಹಿತಿ ಪಡೆಯಲು ಬಂದಿದ್ದ ವ್ಯಕ್ತಿ ಮೇಲೆಯ ಡಿಸಿಸಿ ಬ್ಯಾಂಕ್ ಸಿಬ್ಬಂದಿ ದರ್ಪ ತೋರಿದ್ದಾರೆ.

ಕುರ್ಚಿ ಕಿತ್ತಾಟದಲ್ಲಿ ಜನ ಬೇಸತ್ತಿದ್ದಾರೆ

ಚಿಕ್ಕಮಗಳೂರು: ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆ ಮಾಡಿ ಎಂದು ಕೋರ್ಟ್ ಸೂಚನೆ ನೀಡಿದೆ. ಆದರೆ ಚುನಾವಣೆ ಮಾಡಲು ಸರಕಾರಕ್ಕೆ ಆತ್ಮವಿಶ್ವಾಸವೇ ಇಲ್ಲ. ಮೂರು ವರ್ಷ ಎಷ್ಟು ಆಗುತ್ತದೋ ಅಷ್ಟು ದುಡ್ಡು ಮಾಡಿಕೊಳ್ಳಲು ಮಾನಸಿಕವಾಗಿ ಸಿದ್ಧರಾಗಿದ್ದಾರೆ. ಮುಂದೆ ಅದೇ ದುಡ್ಡಲ್ಲಿ ಮತ್ತೆ ಚುನಾವಣೆ ಮಾಡಲು ಸಿದ್ಧರಾಗಿದ್ದಾರೆ ಎಂದು ಕಾಂಗ್ರೆಸ್ ಸರಕಾರದ ವಿರುದ್ಧ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರಲ್ಲಿ ಅದೆಂತದೋ ಸಾಧನಾ ಸಮಾವೇಶ ಮಾಡಿದ್ದರು. ರಾಜ್ಯದಲ್ಲಿ ಏನು ಸಾಧನೆ ಆಗಿದೆ ಎಂದು ಕಾಂಗ್ರೆಸ್ಸಿಗರೇ ಉತ್ತರ ಕೊಡಬೇಕಿದೆ. ಸಿಎಂ ಕುರ್ಚಿ ಬಗ್ಗೆ ಯಾವುದೇ ಒಳ ಒಪ್ಪಂದ ಇಲ್ಲ, ನಾನೇ ಐದು ವರ್ಷ ಸಿಎಂ ಎನ್ನುತ್ತಾರೆ. ರಾಜ್ಯದ ಅಭಿವೃದ್ಧಿ, ಜನರ ಕಷ್ಟಕ್ಕಿಂತ ಇವರಿಗೆ ಸಿಎಂ ಕುರ್ಚಿ ಕಿತ್ತಾಟವೇ ಮುಖ್ಯವಾಗಿದೆ ಎಂದರು. ಸಿಎಂ ಕುರ್ಚಿ ಉಳಿಸಿಕೊಳ್ಳಬೇಕು, ಡಿಸಿಎಂಗೆ ಸಿಎಂ ಕುರ್ಚಿ ಬೇಕು, ಮತ್ತೊಬ್ಬರಿಗೆ ಅಧ್ಯಕ್ಷರ ಕುರ್ಚಿ ಮೇಲೆ ಕಣ್ಣು. ಈ ಕುರ್ಚಿ ಕಿತ್ತಾಟದಲ್ಲಿ ರಾಜ್ಯದ ಜನ ಬೇಸತ್ತು ಹೋಗಿದ್ದಾರೆ. ಎರಡು ವರ್ಷಗಳ ಇವರ ಆಡಳಿತದ ವೈಖರಿ ನೋಡಿ ಜನ ಚರ್ಚೆ ಮಾಡಲು ಶುರು ಮಾಡಿದ್ದಾರೆ ಎಂದು ನಿಖಿಲ್ ಹೇಳಿದರು.

ನಂಬಿಕೆಗಳಿಗೆ ವಿರುದ್ಧ ಶಾಲೆ ಬಿಡಿಸಲು ಸಿದ್ಧ

ಮೊಟ್ಟೆ ಕೊಟ್ಟರೆ ಮಕ್ಕಳನ್ನು ಶಾಲೆ ಬಿಡಿಸ್ತೇವೆ | ಮಂಡ್ಯದಲ್ಲಿ ಪೋಷಕರಿಂದ ಸರಕಾರಿ ಅಧಿಕಾರಿಗಳಿಗೆ ಎಚ್ಚರಿಕೆ

ಮಂಡ್ಯ: ಮಕ್ಕಳಲ್ಲಿ ಪೌಷ್ಠಿಕಾಂಶ ಹೆಚ್ಚಿಸಲು ರಾಜ್ಯ ಸರಕಾರ ಸರಕಾರಿ ಶಾಲೆಗಳ ಬಿಸಿಯೂಟದ ಜತೆ ಮೊಟ್ಟೆಗಳನ್ನು ವಿತರಿಸುತ್ತಿದೆ. ಆದರೆ ಮೊಟ್ಟೆಗಳನ್ನು ನಿರಾಕರಣೆ ಮಾಡಿರುವ ಸುಮಾರು 80ಕ್ಕೂ ಹೆಚ್ಚು ಮಕ್ಕಳು ತಿನ್ನಲು ಒತ್ತಾಯ ಮಾಡಿದರೆ ಶಾಲೆ ತೊರೆಯುವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ.

ಮಂಡ್ಯ ಜಿಲ್ಲೆಯ ಆಲಕೆರೆ ಗ್ರಾಮದಲ್ಲಿ ನಡೆದಿದ್ದು, ದೇಗುಲದ ಪಕ್ಕದಲ್ಲಿ ಶಾಲೆ ಇರುವುದರಿಂದ ಮೊಟ್ಟೆಗಳನ್ನು ಬೇಯಿಸಲು ವಿರೋಧಿಸಲಾಗಿದೆ. ಅಲ್ಲದೇ ತಮ್ಮ ಮಕ್ಕಳ ಮೇಲೂ ಪೋಷಕರು ಮೊಟ್ಟೆ ತಿನ್ನದಂತೆ ಒತ್ತಡ ಹೇರಿದ್ದಾರೆ ಎನ್ನಲಾಗಿದೆ. ಮೊಟ್ಟೆ ನೀಡುವ ಶಿಕ್ಷಣ ಇಲಾಖೆಯ ನಿರ್ಧಾರಕ್ಕೆ ಗ್ರಾಮಸ್ಥರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ಇದು ದೀರ್ಘಕಾಲದಿಂದ ಅನುಸರಿಸಿಕೊಂಡು ಬಂದಿರುವ ಧಾರ್ಮಿಕ ನಿಯಮಗಳ ಉಲ್ಲಂಘನೆ ಎಂದು ಹೇಳಿದ್ದಾರೆ.

ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಶಾಲೆ ಇದ್ದು, ಶಾಲಾ ಆವರಣದಲ್ಲಿ ಮೊಟ್ಟೆಗಳನ್ನು ಬೇಯಿಸುವುದು ಅವರ ಸಂಪ್ರದಾಯಗಳಿಗೆ ವಿರುದ್ಧವಾಗಿದೆ ಎಂದು ಗ್ರಾಮಸ್ಥರು ವಾದಿಸಿದ್ದಾರೆ.

ದೇವಾಲಯದ ಆವರಣದ ಬಳಿ ಮಾಂಸ ಅಥವಾ ಮೊಟ್ಟೆಗಳನ್ನು ನಿಷೇಧಿಸಲಾಗಿದೆ. ಶಾಲೆಯ 120 ವಿದ್ಯಾರ್ಥಿಗಳ ಪೈಕಿ 80 ವಿದ್ಯಾರ್ಥಿಗಳು ಈಗ ಮೊಟ್ಟೆಗಳನ್ನು ಪಡೆಯುತ್ತಿಲ್ಲ. ಶಾಲೆ ಆವರಣದಲ್ಲಿ ಮೊಟ್ಟೆಗಳನ್ನು ಬೇಯಿಸುವುದನ್ನು ಮುಂದುವರಿಸಿದರೆ, ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸುವುದಾಗಿ ಪೋಷಕರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಈಗಾಗಲೇ ಹಲವು ಮಂದಿ ವರ್ಗಾವಣೆ ಪ್ರಮಾಣಪತ್ರಗಳನ್ನು ಕೋರಿದ್ದಾರೆ.

ನಮ್ಮ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾಗಿ ಶಾಲೆ ಆವರಣದಲ್ಲಿ ಮೊಟ್ಟೆಗಳನ್ನು ಬೇಯಿಸುತ್ತಿರುವ ಕಾರಣ ನಾವು ನಮ್ಮ ಮಕ್ಕಳಿಗೆ ಟಿಸಿ ನೀಡುವಂತೆ ಮನವಿ ಮಾಡುತ್ತಿದ್ದೇವೆ ಎಂದು ಪೋಷಕರೊಬ್ಬರು ಹೇಳಿದರು.

ವಿರೋಧ ಯಾಕೆ?

- ದೇಗುಲ ಪಕ್ಕದಲ್ಲಿರುವ ಆಲಕೆರೆ ಗ್ರಾಮದ ಸರಕಾರಿ ಶಾಲೆ
- ಶಾಲಾ ಮಕ್ಕಳ ಮೊಟ್ಟೆ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ
- ಮೊಟ್ಟೆ ತಿನ್ನದಂತೆ ಮಕ್ಕಳಿಗೆ ಒತ್ತಡ ಹಾಕುತ್ತಿರುವ ಪೋಷಕರು
- ಮೊಟ್ಟೆ ತಿನ್ನಲು ಒತ್ತಾಯಿಸಿದರೆ ಶಾಲೆ ಬಿಡಿಸುವ ಎಚ್ಚರಿಕೆ
- 120 ವಿದ್ಯಾರ್ಥಿಗಳ ಪೈಕಿ ಮೊಟ್ಟೆಗಳನ್ನು ತಿನ್ನದ 80 ವಿದ್ಯಾರ್ಥಿಗಳು

ಸರಕಾರದ ನೀತಿಯನ್ನು ಸರಕಾರಿ ಶಾಲೆ ಅನುಸರಿಸುತ್ತಿದ್ದು, ಪೋಷಕರು ತಮ್ಮ ನಿರ್ಧಾರವನ್ನು ಪುನರ್ ಪರಿಶೀಲಿಸಬೇಕು. ಈ ಬಗ್ಗೆ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದೇವೆ.

-ಆಲಕೆರೆ ಶಾಲಾ ಪ್ರಾಂಶುಪಾಲರು

ಆಲಕೆರೆ ಗ್ರಾಮಸ್ಥರು ಶಾಲೆಯಲ್ಲಿ ಮೊಟ್ಟೆ ನೀಡುತ್ತಿರುವುದನ್ನು ವಿರೋಧಿಸಿತ್ತಿದ್ದು, ಸಮಸ್ಯೆಯನ್ನು ನನ್ನ ಗಮನಕ್ಕೆ ತರಲಾಗಿದೆ. ಶಿಕ್ಷಣ ಇಲಾಖೆ ಅಧಿಕಾರಿಗಳು, ಎಸ್‌ಡಿಎಂಸಿ, ಶಾಲಾ ಮುಖ್ಯಗುರುಗಳು ಸೇರಿ ಮಕ್ಕಳ ಪಾಲಕರ ಸಭೆ ಕರೆಯಲಾಗಿದೆ. ಈ ಬಗ್ಗೆ ಚರ್ಚಿಸಿ ಬಗೆಹರಿಸಿಕೊಳ್ಳುತ್ತೇವೆ.

-ಚಲುವರಾಯಸ್ವಾಮಿ ಸಚಿವ

ಖೋಟಾ ನೋಟು ಜಾಲ: ನಾಲ್ವರ ಬಂಧನ

ದಾವಣಗೆರೆ: ಜಿಲ್ಲೆಯಲ್ಲಿ ಖೋಟಾ ನೋಟು ಜಾಲ ಪತ್ತೆಯಾಗಿದ್ದು, ಖೋಟಾ ನೋಟು ಚಲಾವಣೆ ಮಾಡ್ತಿದ್ದ ನಾಲ್ವರು ಆರೋಪಿಗಳನ್ನು ಬಸವಾಪಟ್ಟಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಅಲ್ಲದೆ, ಒಟ್ಟು 3,75,400 ರುಪಾಯಿ ಖೋಟಾ ನೋಟುಗಳನ್ನು ವಶಕ್ಕೆ ಪಡೆದಿದ್ದಾರೆ. ಸಂತೋಷಕುಮಾರ (32), ವಿರೇಶ ಬಿ. ಪಿ (37), ಕುಬೇರಪ್ಪ (62), ಹನುಮಂತಪ್ಪ (75) ಬಂಧಿತರು.

ಜಿಲ್ಲೆಯ ಚನ್ನಗಿರಿ ತಾಲೂಕಿನ ಚಿರಡೋಣಿ ಗ್ರಾಮದ ಬಾರ್ ಅಂಡ್ ರೆಸ್ಟೋರೆಂಟ್‌ವೊಂದರ ಎದುರು ಇಬ್ಬರು ಖೋಟಾ ನೋಟುಗಳನ್ನು ಚಲಾವಣೆ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಪಡೆದು ಬಸವಾಪಟ್ಟಣ ಠಾಣೆಯ ಪೊಲೀಸರು ದಾಳಿ ಮಾಡಿ, ಆರೋಪಿಗಳನ್ನು ಬಂಧಿಸಿ, ಪ್ರಕರಣ ದಾಖಲಿಸಿದ್ದೇವೆ ಎಂದು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಾಲ್ವರು ತನಿಖಾಧಿಕಾರಿಗಳಲ್ಲಿ ಇಬ್ಬರು ಹಿಂದೇಟು | ಸಭೆಗೂ ಸೌಮ್ಯಲತಾ ಗೈರು

ಧರ್ಮಸ್ಥಳ ಸರಣಿ ಹತ್ಯೆ: ಎಸ್‌ಐಟಿಗೆ ಹಿಂದೇಟು

ಬೆಂಗಳೂರು: ಧರ್ಮಸ್ಥಳಲ್ಲಿ ನಡೆದಿದೆ ಎನ್ನಲಾದ ಸರಣಿ ಹತ್ಯೆ ಪ್ರಕರಣಕ್ಕೆ ಸಂಬಂಧ ಸರಕಾರ ನಿಯೋಜಿಸಿದ್ದ ಅಧಿಕಾರಿಗಳ ಪೈಕಿ ಇಬ್ಬರು ಹಿಂದೆ ಸರಿದಿದ್ದಾರೆ ಎನ್ನಲಾಗಿದೆ. ಈ ಪೈಕಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಐಪಿಎಸ್ ಅಧಿಕಾರಿ ಇದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

ಧರ್ಮಸ್ಥಳ ಪ್ರಕರಣ ತನಿಖೆ ನಡೆಸಲು ಸರಕಾರ 4 ಅಧಿಕಾರಿಗಳ ಎಸ್‌ಐಟಿ ರಚನೆ ಮಾಡಿತ್ತು. ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾ ನಿರ್ದೇಶಕ ಪ್ರಣವ ಮೊಹಂತಿಗೆ ಮುಂದಾಳತ್ವ ನೀಡಿತ್ತು. ಉಳಿದಂತೆ ತಂಡದಲ್ಲಿ ಹಿರಿಯ ಐಪಿಎಸ್ ಅಧಿಕಾರಿಗಳಾದ ಎಂ.ಎನ್.ಅನುಚೇತ್, ಸೌಮ್ಯಲತಾ ಮತ್ತು ಜಿತೇಂದ್ರ ಕುಮಾರ್ ದಯಾಮ ಇದ್ದರು. ಸದ್ಯ ಸಿಎಆರ್ ಕೇಂದ್ರಸ್ಥಾನದ ಉಪ ಪೊಲೀಸ್ ಆಯುಕ್ತರಾದ ಸೌಮ್ಯಲತಾ ಅವರು ವೈಯಕ್ತಿಕ ಕಾರಣಗಳಿಂದ ಹಿಂದೆ ಸರಿಯಲು ನಿರ್ಧರಿಸಿ ಪತ್ರ ಬರೆದಿದ್ದಾರೆ ಎನ್ನಲಾಗುತ್ತಿದೆ. ತನಿಖೆಯ ಕುರಿತು ಬೆಂಗಳೂರಿನ ಸಿಐಡಿ ಕಚೇರಿಯಲ್ಲಿ ನಡೆದ ಸಭೆಗೂ ಗೈರಾಗಿದ್ದರು.

ಧರ್ಮಸ್ಥಳ ಪ್ರಕರಣದಲ್ಲಿ ಎಸ್‌ಐಟಿ ತಂಡದಿಂದ ಐಪಿಎಸ್ ಅಧಿಕಾರಿ ಹೊರಗುಳಿಯುವ ವಿಚಾರದ ಕುರಿತು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಾತನಾಡಿದ್ದು, ಅಧಿಕೃತವಾಗಿ ನನಗೆ ಅವರು ಮಾಹಿತಿ ತಿಳಿಸಿಲ್ಲ. ಆದರೆ, ಅನ್ ಅಫಿಷಿಯಲ್ ಆಗಿ ಅವರು ತಂಡದಿಂದ ಹೊರಗುಳಿಯುವ ವಿಚಾರಕ್ಕೆ ಪತ್ರ ಬರೆದಿರುವುದು ಗೊತ್ತಾಗಿದೆ. ವೈಯಕ್ತಿಕ ಕಾರಣ ಇದೆ ಹಾಗಾಗಿ ತಂಡದಿಂದ ಹೊರಗುಳಿಯುವ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಒಂದು ವೇಳೆ ಆ ರೀತಿ ಇದ್ದರೆ, ಅವರನ್ನು ಬದಲಾಯಿಸಲಾಗುವುದು ಎಂದು ಹೇಳಿದರು.

ಕಾರಣವೇನು?

ಎಂ.ಎನ್.ಅನುಚೇತ್ ಅವರು ಯಾವುದೇ ಭಯದಿಂದ ಧರ್ಮಸ್ಥಳ ಪ್ರಕರಣದ ತನಿಖೆಯಿಂದ ದೂರು ಉಳಿಯುತ್ತಿಲ್ಲ ಎಂಬುದು ಮೂಲಗಳಿಂದ ತಿಳಿದುಬಂದಿದೆ. 2009ರ ಬ್ಯಾಚ್ ಐಪಿಎಸ್ ಅಧಿಕಾರಿಯಾಗಿರುವ ಅನುಚೇತ್ ಅವರು, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಉಪವಿಭಾಗದ ಸಹಾಯಕ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಎಸ್‌ಪಿ) ಮೊದಲ ಬಾರಿಗೆ ಅಧಿಕಾರ ವಹಿಸಿಕೊಂಡಿದ್ದರು. ಅನುಚೇತ್ ಅವರು ಪುತ್ತೂರಿನ ಎಎಸ್‌ಪಿಯಾಗಿದ್ದಾಗಲೇ ಸೌಜನ್ಯ ಪ್ರಕರಣ ನಡೆದಿತ್ತು. ಸೌಜನ್ಯ ಪ್ರಕರಣದಲ್ಲಿ ತನಿಖಾಧಿಕಾರಿಗಳಾಗಿದ್ದ ಬೆಳ್ತಂಗಡಿ ಸರ್ಕಲ್ ಇನ್ಸ್‌ಪೆಕ್ಟರ್ ಭಾಸ್ಕರ್ ರೈ ಮತ್ತು ಸಬ್-ಇನ್ಸ್‌ಪೆಕ್ಟರ್ ಯೋಗೇಶ್ ಕುಮಾರ್ ನಾಯಕ್ ಅವರ ಮೇಲೆ ಈಗಾಗಲೇ ಸಾಕ್ಷ ನಾಶದ ಗಂಭೀರ ಆರೋಪಗಳಿವೆ. ಇವರೊಂದಿಗೆ ಆ ವೇಳೆ ತಮ್ಮ ಮೇಲೂ ಆಗಾಗ ಇಂತಹ ಆರೋಪಗಳು ಸ್ಥಳೀಯರಿಂದ ಕೇಳಿ ಬಂದಿವೆ ಎನ್ನುವ ಕಾರಣ ಮುಂದಿಟ್ಟುಕೊಂಡು ಎಸ್‌ಐಟಿ ತಂಡದಿಂದ ತಮ್ಮನ್ನು ಕೈಬಿಡುವಂತೆ ಸರಕಾರಕ್ಕೆ ಪತ್ರ ಬರೆಯಲು ಅನುಚೇತ್ ಸಿದ್ಧತೆ ನಡೆಸಿದ್ದಾರೆ ಎಂದು ಉನ್ನತ ಮೂಲಗಳು ಖಚಿತ ಪಡಿಸಿವೆ.

ಮತ್ತೊಬ್ಬ ನಾನ್ ಐಪಿಎಸ್ ಅಧಿಕಾರಿ ದೂರ

4 ಜನರ ಎಸ್‌ಐಟಿ ತಂಡದ ಜತೆಗೆ 20 ನಾನ್ ಐಪಿಎಸ್ ಅಧಿಕಾರಿಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ಮಹಾನಿರ್ದೇಶಕರು ನೇಮಕ ಮಾಡಿದ್ದರು. ಈ ಪೈಕಿ ಒಬ್ಬ ಅಧಿಕಾರಿಯು ಧರ್ಮಸ್ಥಳ ಕ್ಷೇತ್ರದ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ ಎಂದು ತನಿಖಾ ಕಾರ್ಯದಿಂದ ದೂರ ಉಳಿಯಲು ನಿರ್ಧರಿಸಿದ್ದಾರೆ. ಇವರೂ ಕೂಡ ಸಿಐಡಿ ಕಚೇರಿಯಲ್ಲಿ ನಡೆದ ತನಿಖಾ ತಂಡ ಸಭೆಯಲ್ಲಿ ಭಾಗಿಯಾಗಿರಲಿಲ್ಲ.

ಹೊಸಬರ ನೇಮಕಕ್ಕೆ ಸರಕಾರಕ್ಕೆ ಶೀಘ್ರ ಪತ್ರ

ಎಸ್‌ಐಟಿ ತಂಡದ ಮುಖ್ಯಸ್ಥರಾಗಿರುವ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾ ನಿರ್ದೇಶಕ ಪ್ರಣವ ಮೊಹಂತಿ ಅವರು ತನಿಖೆಯಿಂದ ದೂರ ಸರಿದ ಅಧಿಕಾರಿಗಳ ಬಗ್ಗೆ ಸರಕಾರಕ್ಕೆ ಮಾಹಿತಿ ನೀಡಿ ಹೊಸಬರ ನೇಮಕಕ್ಕೆ ಮನವಿ ಮಾಡುವ ಸಾಧ್ಯತೆ ಇದೆ.

ಗೋವಾದಲ್ಲಿ ಕನ್ನಡಿಗನ ಮೇಲೆ ಹಲ್ಲೆ

ಬೆಳಗಾವಿ: ನೆರೆಯ ಗೋವಾದಲ್ಲಿ ಕನ್ನಡ ಭಾಷಿಕ ಕಾರ್ಮಿಕನ ಮೇಲೆ ದುಷ್ಕರ್ಮಿಗಳ ಗ್ಯಾಂಗ್ ಹಲ್ಲೆ ನಡೆಸಿದ್ದು, ಬದುಕು ಕಟ್ಟಿಕೊಳ್ಳಲು ವಲಸೆ ಹೋದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿರುವ ಪ್ರಕರಣ ಹೆಚ್ಚುತ್ತಿವೆ.

ಬುಧವಾರ ಸಂಜೆ ರಾಜ್ಯದ ವಿಜಯಪುರ ಜಿಲ್ಲೆಯ ಕಲಕೇರಿ ಗ್ರಾಮದ ಅನಿಲ್ ರಾಥೋಡ್ ಎಂಬುವವರು ಮಹಾರಾಷ್ಟ್ರದಿಂದ ಗೋವಾಗೆ ಕಲ್ಲು ತೆಗೆದುಕೊಂಡು ಹೋಗುವ ವೇಳೆ ಲಾರಿ ಅಡ್ಡಗಟ್ಟಿ ಪ್ರೆಡ್ನೆ ಪ್ರದೇಶದಲ್ಲಿ ದುಷ್ಕರ್ಮಿಗಳ ಗ್ಯಾಂಗ್ ಹಲ್ಲೆ ನಡೆಸಿದೆ. ಹಲ್ಲೆ ವಿಡಿಯೊ ಸೆರೆಯಾಗಿದ್ದು ಸಹಾಯಕ್ಕೆ ಅಂಗಲಾಚಿದ್ದಾನೆ. ಘಟನೆ ಕುರಿತು ಹಲ್ಲೆಗೊಳಗಾದ ಅನಿಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರೂ ಈವರೆಗೆ ಆರೋಪಿಗಳ ವಿರುದ್ಧ ಕ್ರಮ ಜರುಗಿಸದ ಗೋವಾ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತವಾಗುತ್ತಿದೆ. ಈ ಘಟನೆಯನ್ನು ಗೋವಾ ಟ್ರಕ್ ಮಾಲೀಕರ ಸಂಘ ಖಂಡಿಸಿದೆ.

ಗೋವಾದಲ್ಲಿ ಕನ್ನಡಿಗರ ಮೇಲೆ ನಿರಂತರ ದಾಳಿ ನಡೆಸಲಾಗುತ್ತಿದ್ದು, ಕೂಡಲೇ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವಿಗೆ ಬರುವಂತೆ ಗೋವಾ ಕನ್ನಡಿಗರು ಆಗ್ರಹಿಸಿದ್ದಾರೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ
ಕೊರಟಗೆರೆ, ತುಮಕೂರು ಜಿಲ್ಲೆ.
ಕಛೇರಿ ದೂರವಾಣಿ ಸಂಖ್ಯೆ: 08138-232129, 233329
ಇ-ಮೇಲ್: itstaff_ulb_koratagere@yahoo.co.in

ಪ.ಪಂ.ಕೊ/ಸಿಆರ್/01/2025-26 ದಿನಾಂಕ: 23.07.2025

ಪ್ರಕಟಣೆ

ಕೊರಟಗೆರೆ ಪಟ್ಟಣ ಪಂಚಾಯಿತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯಲ್ಲಿ ಆದ್ಯಾದೇಶ 2000ರ ನಿಯಮದಂತೆ ಎಸ್.ಬಿ.ಎಂ.-2.0 ಅನುದಾನದಡಿಯಲ್ಲಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟಿನಂತೆ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿ ವಿವರ	ಮೊತ್ತ	ಇ.ಎಂ.ಡಿ ಮೊತ್ತ
1	DMA/2025-26/0W/WORK_ INDENT 45921	ರೂ. 67.22 ಲಕ್ಷಗಳು	ರೂ. 1.34 ಲಕ್ಷಗಳು

ನೊಂದಾಯಿತ ಅರ್ಹ ಬಿಡ್‌ದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 06.08.2025**. ಟೆಂಡರ್ ತೆರೆಯುವ **ದಿನಾಂಕ: 08.08.2025**. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ಸಮಯದಲ್ಲಿ ಹಾಗು ಕಚೇರಿಯ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/-ಅಧ್ಯಕ್ಷರು ಪ.ಪಂ. ಕೊರಟಗೆರೆ
ಸಹಿ/-ಮುಖ್ಯಾಧಿಕಾರಿ ಪ.ಪಂ. ಕೊರಟಗೆರೆ

DIPR/TUM/RO-80/25-26/Oysters

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054/2025-26/1470 ದಿನಾಂಕ: 24.07.2025

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೋಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-4ರಲ್ಲಿ ಲೆಕ್ಕ ಶೀರ್ಷಿಕೆ **5054-04-337-0-01-154 (ಯೋಜನೆ) ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ** ಅಡಿಯಲ್ಲಿ ಒಟ್ಟು 1 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 500.00 ಲಕ್ಷಗಳು ಮುಂಗಡ ಠೇವಣಿ ಗರಿಷ್ಠ ಮತ್ತು ಕನಿಷ್ಠ ಮೊತ್ತ 7,50,000/- ಸದರ ಕಾಮಾಗಾರಿಗಳ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:- 28.07.2025ರ ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:-08.08.2025 ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 11.08.2025 ರ ಸಂಜೆ 4.31 ಗಂಟೆಗೆ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 12.08.2025 ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp. karnataka.gov.in (ಪೋನ್ ನಂ. 91 8046010000, +91 8068948777) ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/212/ಕೆಎಸ್‌ಎಂಸಿಎ/2025-26

ಕೌಶಲಪೂರ್ಣ ಡ್ರೋನ್ ಕಾರ್ಯಪಡೆಗೆ ಅಡಿಪಾಯ

ರಾಜ್ಯದ ಪ್ರತಿ ಠಾಣೆಗೆ ಡ್ರೋನ್ ಕ್ಯಾಮೆರಾ ಕೊಡಲು ಚಿಂತನೆ: ಪರಮೇಶ್ವರ

ಬೆಂಗಳೂರು: ಕಾನೂನು ಜಾರಿಯನ್ನು ಬಲಪಡಿಸುವ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಕೌಶಲಗಳೊಂದಿಗೆ ಯುವಕರನ್ನು ಸಜ್ಜುಗೊಳಿಸುವ ತನ್ನ ನಿರಂತರ ಬದ್ಧತೆಯ ಭಾಗವಾಗಿ, ಸರಕಾರ ಕಲಬುರಗಿಯಲ್ಲಿ ಡ್ರೋನ್ ತಂತ್ರಜ್ಞಾನದೊಂದಿಗೆ ಸಾರ್ವಜನಿಕ ಸುರಕ್ಷತಾ ಮೂಲಸೌಕರ್ಯ ಹೆಚ್ಚಿಸುವುದರ ಜತೆಗೆ ರಾಜ್ಯಾದ್ಯಂತ ಕೌಶಲಪೂರ್ಣ ಡ್ರೋನ್ ಕಾರ್ಯಪಡೆಗೆ ಅಡಿಪಾಯ ಹಾಕಿದೆ.

ಬೆಂಗಳೂರಿನಲ್ಲಿ ನಡೆದ ಔಪಚಾರಿಕ ಕಾರ್ಯಕ್ರಮದಲ್ಲಿ, ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಕಲಬುರಗಿ ಜಿಲ್ಲೆಯ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಅವರಿಗೆ ಸುಧಾರಿತ ಕಣ್ಗಾವಲು ಡ್ರೋನ್‌ಗಳನ್ನು-ನಿಂಬಲ್-ಐ ಮತ್ತು ಎನ್‌ಎಸ್ 1 ಹಸ್ತಾಂತರಿಸಿದರು. ಕರ್ನಾಟಕದಲ್ಲಿ ವಿನ್ಯಾಸಗೊಳಿಸಲಾದ ಮತ್ತು ತಯಾರಿಸಲಾದ ಡ್ರೋನ್‌ಗಳು ಎಐ-ಚಾಲಿತ ಕಣ್ಗಾವಲು ವೈಶಿಷ್ಟ್ಯಗಳೊಂದಿಗೆ ಸಜ್ಜುಗೊಂಡಿವೆ ಮತ್ತು ಖಾಸಗಿ ವಲಯದ ಸಿಎಸ್‌ಆರ್ ಬೆಂಬಲದ ಮೂಲಕ ನಿಯೋಜಿಸಲಾಗುತ್ತಿದೆ.

ಕರ್ನಾಟಕದ ಪ್ರತಿಯೊಂದು ಪೊಲೀಸ್ ಠಾಣೆಯನ್ನು ಡ್ರೋನ್‌ಗಳಿಂದ ಸಜ್ಜುಗೊಳಿಸುವುದು ನಮ್ಮ ದೃಷ್ಟಿಯಾಗಿದೆ, ಇದು ನಮ್ಮ ಪಡೆಗಳನ್ನು ಚುರುಕುಗೊಳಿಸುತ್ತದೆ, ವೇಗಗೊಳಿಸುತ್ತದೆ ಮತ್ತು ಹೆಚ್ಚು ಸ್ಪಂದಿಸುತ್ತದೆ. ಕರ್ನಾಟಕ ನಿರ್ಮಿತ ಡ್ರೋನ್‌ಗಳ ತಂತ್ರಜ್ಞಾನವು ಸಾರ್ವಜನಿಕ ಹಿತಾಸಕ್ತಿಯನ್ನು ಹೇಗೆ ಪೂರೈಸುತ್ತದೆ ಎಂಬುದರ ಸಂಕೇತವಾಗಿದೆ ಎಂದು ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದರು.

ಡ್ರೋನ್ ತಂತ್ರಜ್ಞಾನವನ್ನು ಗೃಹ ಸಚಿವ ಪರಮೇಶ್ವರ ಅವರು ಪರಿಶೀಲಿಸಿದರು. ಸಚಿವ ಪ್ರಿಯಾಂಕ್ ಖರ್ಗೆ, ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಇದ್ದರು.

500 ಯುವಕರಿಗೆ ಡ್ರೋನ್ ಕಾರ್ಯಾಚರಣೆಗಳಲ್ಲಿ ತರಬೇತಿ: ಈ ಉಡಾವಣೆಯಲ್ಲಿ ಭಾಗವಹಿಸಿದ ಐಟಿ ಮತ್ತು ಬಿಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ, ಸಮಗ್ರ ನಾವೀನ್ಯತೆ ಮತ್ತು ಯುವ ಸಬಲೀಕರಣಕ್ಕೆ ಸರಕಾರ ಹೆಚ್ಚಿನ ಬದ್ಧತೆ ಹೊಂದಿದೆ ಎಂದು ಹೇಳಿದರಲ್ಲದೆ, ಕಲಬುರಗಿ ಜಿಲ್ಲೆಯಲ್ಲಿ 500 ಯುವಕರಿಗೆ ಡಿಜಿಸಿಎ ಪ್ರಮಾಣೀಕೃತ ಡ್ರೋನ್ ಕಾರ್ಯಾಚರಣೆಗಳಲ್ಲಿ ತರಬೇತಿ ನೀಡಲಾಗುವುದು, ಈ ತರಬೇತಿಯು ಕೃಷಿ, ಲಾಜಿಸ್ಟಿಕ್ಸ್, ವಿಪತ್ತು ನಿರ್ವಹಣೆ ಮತ್ತು ಮೂಲಸೌಕರ್ಯ ಮೇಲ್ವಿಚಾರಣೆಯಂತಹ ಡ್ರೋನ್ ಆಧಾರಿತ ಸೇವೆಗಳಲ್ಲಿ ಮಾರ್ಗಗಳನ್ನು ತೆರೆಯುತ್ತದೆ ಎಂದು ಮಾಹಿತಿ ನೀಡಿದರು.

ಕಾಲ್ತುಳಿತ ಕೇಸ್ ಮುಚ್ಚಲು ಸಿಎಂ ಯತ್ನ

← ಮೊದಲಪುಟದಿಂದ

ಕಾಲ್ತುಳಿತ ಪ್ರಕರಣ ಮುಚ್ಚಿಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ನಿರಂತರ ಪ್ರಯತ್ನ ಮಾಡುತ್ತಲೇ ಬಂದಿದೆ ಎಂದು ಬಿಜೆಪಿ ಕುಟುಕಿದೆ.

ಈ ಸಂಬಂಧ ಪ್ರತಿಪಕ್ಷ ನಾಯಕ ಆರ್. ಅಶೋಕ, ಎಕ್ಸ್ ಮೂಲಕ ಪ್ರತಿಕ್ರಿಯಿಸಿದ್ದು, ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿ.ಕುನ್ಹಾ ನೇತೃತ್ವದ ವಿಚಾರಣಾ ಆಯೋಗ ಸಲ್ಲಿಸಿರುವ ವರದಿಯ ಮೂಲಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸರಕಾರ ಮತ್ತೊಂದು ವಾಮಮಾರ್ಗ ಹುಡುಕಿಕೊಂಡಿದೆ. ಈ ಮೊದಲು ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಿದ ಕಾಂಗ್ರೆಸ್, ನ್ಯಾಯಾಂಗ ತನಿಖೆಗೆ ಅರ್ಹವಾಗಿರುವ ಈ ಪ್ರಕರಣದ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿತ್ತು. ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಪೊಲೀಸರನ್ನು ಅಮಾನತು ಮಾಡಿ, ಕ್ರಿಕೆಟ್ ಸಂಸ್ಥೆಯ ಮೇಲೆ ಎಫ್‌ಐಆರ್ ದಾಖಲಿಸಿತ್ತು. ಬಳಿಕ ಜಿಲ್ಲಾಧಿಕಾರಿಗಳ ಹಂತದ ತನಿಖೆ ನಡೆಸಿ ಪ್ರಕರಣದ ಗಂಭೀರತೆ ಮರೆ ಮಾಚುವ ಷಡ್ಯಂತ್ರ ನಡೆಸಿತ್ತು. ಇಡೀ ಸರಕಾರವೇ ಈ ಪ್ರಕರಣದ ಹೊಣೆ ಹೊರಬೇಕು. ಮುಖ್ಯಮಂತ್ರಿಯಾದಿಯಾಗಿ ಸಚಿವ ಸಂಪುಟವೇ ಇದರ ಹೊಣೆ ಹೊತ್ತು ನ್ಯಾಯಾಂಗ ತನಿಖೆ ಎದುರಿಸಬೇಕು. ಕಾಂಗ್ರೆಸ್ ನಾಯಕರ ಫೋಟೋ ಗೀಳಿಗಾಗಿ, ಆಟಗಾರರ ಶ್ರಮವನ್ನು ಹೈಜಾಕ್ ಮಾಡಿ ಪಕ್ಷಕ್ಕೆ ಮೈಲೇಜ್ ತಂದುಕೊಳ್ಳುವ ಹಪಾಹಪಿಯಿಂದ 11 ಜನ ಅಮಾಯಕರನ್ನು ಬಲಿ ಪಡೆದಿದೆ ಎಂದು ಒತ್ತಾಯ ಮಾಡಿದರೂ ಈಗ ಕುನ್ಹಾ ವರದಿ ಆಧಾರದ ಮೇಲೆ ಮತ್ತೊಮ್ಮೆ ಅಧಿಕಾರಿಗಳು, ಖಾಸಗಿ ಸಂಸ್ಥೆಗಳ ಮೇಲೆ ಗೂಬೆ ಕೂರಿಸಿ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಯತ್ನಿಸುತ್ತಿದೆ. ಅಲ್ಲದೆ, ಪ್ರಕರಣವನ್ನು ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ವಹಿಸಿ, ಪ್ರಾಣ ಕಳೆದುಕೊಂಡವರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಭಾರತ-ಬ್ರಿಟನ್ ಮುಕ್ತ ಒಪ್ಪಂದ

← ಮೊದಲಪುಟದಿಂದ

ವಿಶೇಷವಾಗಿ ಜವಳಿ, ಔಷಧ, ಆಟೋ ಬಿಡಿಭಾಗಗಳು ಮತ್ತು ಐಟಿ ವಲಯಗಳು ಈ ಒಪ್ಪಂದದಿಂದ ನೇರ ಲಾಭ ಪಡೆಯಲಿದ್ದು, ಭಾರತದಲ್ಲಿ ಉದ್ಯೋಗ ಸೃಷ್ಟಿಗೆ ಅನುಕೂಲವಾ ಗುವ ನಿರೀಕ್ಷೆ ಇದೆ. ಸುಮಾರು 75,000ಕ್ಕೂ ಹೆಚ್ಚು ಭಾರತೀಯ ಉದ್ಯೋಗಿಗಳು ಮತ್ತು 900ಕ್ಕೂ ಹೆಚ್ಚು ಉದ್ಯೋಗದಾತರಿಗೆ ಮುಕ್ತ ವ್ಯಾಪಾರದಿಂದ ಪ್ರಯೋಜನವಾಗಲಿದೆ ಎಂದು ಅಂದಾಜಿಸಲಾಗಿದೆ. 283 ಬಿಲಿಯನ್ ಡಾಲರ್ ಮೊತ್ತದ ಭಾರತದ ಐಟಿ ಉದ್ಯಮಕ್ಕೆ ಬ್ರಿಟನ್, ಎರಡನೇ ಅತಿದೊಡ್ಡ ರಫ್ತು ಮಾರುಕಟ್ಟೆಯಾಗಿದ್ದು ರಫ್ತು ವಲಯಕ್ಕೆ ಶೇಕಡಾ 17 ರಷ್ಟು ಕೊಡುಗೆ ನೀಡುತ್ತದೆ.

ಇದೇ ವೇಳೆ ಬ್ರಿಟಿಷ್ ಕಂಪನಿಗಳು ಭಾರತದಲ್ಲಿ ಕಡಿಮೆ ವೆಚ್ಚದ ಉತ್ಪಾದನೆ ಮತ್ತು ಸೇವೆಗಳ ಲಾಭವನ್ನು ಪಡೆಯಲಿವೆ. ಅಲ್ಲದೆ, ಭಾರತದಲ್ಲಿ ವೇಗವಾಗಿ ಬೆಳೆಯುತ್ತಿರುವ ಗ್ರಾಹಕ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಬ್ರಿಟಿಷ್ ಕಂಪನಿಗಳು ಹೊಸ ಮಾರು ಕಟ್ಟೆಗಳನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.

ಕರ್ನಾಟಕ ಸರ್ಕಾರ
ದ್ವಿಲಕೋಟೆ ಟೆಂಡರ್ ಪ್ರಕಟಣೆ ಸಂಖ್ಯೆ: 3/2025-26 ದಿನಾಂಕ: 22.07.2025

ಟೆಂಡರ್ ಅಹ್ವಾನ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಕಡೂರು, ತರೀಕೆರೆ ತಾಲ್ಲೂಕಿನ ಮಲ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕನಿಷ್ಠ ರೂ. 67.23 ಗರಿಷ್ಠ ರೂ.79.49 ಲಕ್ಷದ ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW 3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:22.07.2025 ರಿಂದ 07.08.2025 ರವರೆಗೆ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬೇಕು, ಟೆಂಡರನ್ನು ದಿನಾಂಕ: 8.8.2025 ರಂದು ಸಂಜೆ 5.00 ಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು ಪ್ರಕಟಣೆಯನ್ನು https://kppp. karnataka.gov.in/ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/25-26/43/655

ಡಿ ಗ್ಯಾಂಗ್ ಜಾಮೀನಿಗೆ ಸುಪ್ರೀಂ ಗರಂ

← ಮೊದಲಪುಟದಿಂದ

ದರ್ಶನ್ ಪರ ಹಾಜರಿದ್ದ ಹಿರಿಯ ವಕೀಲ ಸಿದ್ಧಾರ್ಥ್ ದವೆ ಅವರನ್ನು ಉದ್ದೇಶಿಸಿದ ಪೀಠ, ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವ ಆದೇಶದಲ್ಲಿ ಯಾವ ಕಾರಣಕ್ಕೆ ಮಧ್ಯಪ್ರವೇಶ ಮಾಡಬಾರದು ಎಂಬುದಕ್ಕೆ ಒಂದು ಒಳ್ಳೆಯ ಕಾರಣಗಳನ್ನು ನೀಡಿ ಎಂದು ತಿಳಿಸಿತು. ಅಲ್ಲದೆ, ರಾಜ್ಯ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲರನ್ನು ಉದ್ದೇಶಿಸಿದ ಪೀಠ, ದರ್ಶನ್ ಪರವಾದ ಇದೇ ರೀತಿಯ ಪೂರ್ವಾಪರವಾದ ಪ್ರಕರಣಗಳಿದ್ದಲ್ಲಿ ತಿಳಿಸಬಹುದು ಎಂದು ಹೇಳಿದೆ.

ರಾದ್ಧಾಂತಕ್ಕೆ ಪವಿತ್ರಾಗೌಡ ಕಾರಣ: ಸುದೀರ್ಘ ವಿಚಾರಣೆಯಲ್ಲಿ ಪ್ರತಿಯೊಬ್ಬ ಆರೋಪಿಗಳ ಪಾತ್ರದ ಬಗ್ಗೆಯೂ ವಿಶ್ಲೇಷಣೆ ನಡೆಸಿದ ಕೋರ್ಟ್ ಎ 1 ಆರೋಪಿ ಪವಿತ್ರಾಗೌಡ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ ಎಂದು ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ. ''ಇಡೀ ರಾದ್ಧಾಂತಕ್ಕೆ ಪವಿತ್ರಾಗೌಡ ಕಾರಣ. ಸಮಸ್ಯೆ ಮೂಲವೇ ನೀವು, ನಿಮ್ಮಿಂದಲೇ ಆಗಿದ್ದು. ಇಷ್ಟೆಲ್ಲಾ ಸಾಕ್ಷ್ಯ ಇದ್ದರೂ, ಬೇಲ್ ಯಾಕೆ ಕೊಡಬೇಕು?, ಇದು ಬರೀ ಕೊಲೆ ಅಲ್ಲ, ವ್ಯವಸ್ಥಿತ ಪಿತೂರಿ, ಷಡ್ಯಂತ್ರ. ಸಾಕ್ಷ್ಯ ಇದ್ದರೂ ಯಾಕೆ ಜಾಮೀನು ಮುಂದುವರಿಸಬೇಕು? ದರ್ಶನ್-ಪವಿತ್ರಾಗೌಡಗೆ ಏನು ಸಂಬಂಧ? ಎ1 ಪವಿತ್ರಾಗೌಡ ಪವನ್‌ಗೆ 55 ಬಾರಿ ಕರೆ ಮಾಡಿದ್ಯಾಕೆ? ಎಂದು ನ್ಯಾಯಮೂರ್ತಿ ಪರ್ದಿವಾಲ ಅವರು ಪವಿತ್ರಾ ಗೌಡ ಪರ ವಕೀಲರನ್ನು ಪ್ರಶ್ನಿಸಿದರು.

ಪವಿತ್ರಾಗೌಡ ಪರ ವಕೀಲರ ವಾದ: ನ್ಯಾಯಮೂರ್ತಿಗಳ ಪ್ರಶ್ನೆಗೆ ಉತ್ತರಿಸಿದ ಪವಿತ್ರಾಗೌಡ ಪರ ವಕೀಲರು, ಕೊಲೆಗೂ ಪವಿತ್ರಾಗೌಡಗೂ ಸಂಬಂಧ ಇಲ್ಲ. ರೇಣುಕಾಸ್ವಾಮಿ ಅಪಹರಣ ಪವಿತ್ರಾಗೆ ಗೊತ್ತಿರಲಿಲ್ಲ. ಪವಿತ್ರಾಗೆ ಅಪಹರಣಕಾರರ ಪರಿಚಯವೂ ಇರಲಿಲ್ಲ. ರೇಣುಕಾಸ್ವಾಮಿಗೆ ಚಪ್ಪಲಿಯಲ್ಲಿ ಹೊಡೆದು ಪವಿತ್ರಾ ವಾಪಸ್ ಆಗಿದ್ದಾರೆ ಎಂದು ವಾದಿಸಿದರು.

ಸರಕಾರದ ಪರ ವಕೀಲರ ವಾದ: ಕೊಲೆಯಾದ ರೇಣುಕಾಸ್ವಾಮಿ ನಟ ದರ್ಶನ್ ಅಭಿಮಾನಿ ಆಗಿದ್ದ. ಪ್ರಕರಣದ ಎ1 ಆರೋಪಿ ಪವಿತ್ರಾಗೌಡ ದರ್ಶನ್ ಜತೆಗೆ ವಿವಾಹೇತರ ಸಂಬಂಧ ಹೊಂದಿದ್ದರು. ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿದ್ದರು. ಹೀಗಾಗಿ ರೇಣುಕಾಸ್ವಾಮಿ ಅಸಭ್ಯವಾಗಿ ಸಂದೇಶ ಮಾಡಿದ್ದ. ಇದರಿಂದ ಆಕ್ರೋಶಗೊಂಡು ಎ2 ಆರೋಪಿ ದರ್ಶನ್ ತನ್ನ ಸ್ನೇಹಿತರು, ಅಭಿಮಾನಿ ಸಂಘದ ಸದಸ್ಯರನ್ನ ಬಳಸಿಕೊಂಡು ಹತ್ಯೆ ಮಾಡಿದ್ದಾರೆ ಎಂದು ಸರಕಾರದ ಪರ ವಕೀಲ ಸಿದ್ಧಾರ್ಥ್ ಲೂಥ್ರಾ ವಾದ ಮಂಡಿಸಿದರು.

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿಗೆ ಯುವತಿ ಬಲಿ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಬಲಿಯಾಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಲೇ ಇದೆ. ಇದೀಗ ಜಿಲ್ಲೆಯ ಎನ್.ಆರ್. ಪುರ ಸಮೀಪದ ಬನ್ನೂರು ಗ್ರಾಮದ ಬಳಿ ಆನೆ ದಾಳಿಯಿಂದ ಯುವತಿಯೊಬ್ಬರು ಸಾವನ್ನಪ್ಪಿದ ಘಟನೆ ನಡೆದಿದೆ. ಹೊನ್ನಳ್ಳಿ ಮೂಲದ ಅನಿತಾ (25) ಮೃತ ದುರ್ದೈವಿ. ಇವರು ಕಾಫಿ ತೋಟದಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅಲ್ಲಿನ ತೋಟದ ಸಾಲು ಮನೆಗಳಲ್ಲಿ ಈಕೆ ವಾಸವಾಗಿದ್ದರು. ಬುಧವಾರ 9 ಗಂಟೆಗೆ ಮನೆಗೆ ಹೋಗುವಾಗ ಆನೆ ದಾಳಿ ಮಾಡಿದೆ. ನಂತರ ಅವರಿಗೆ ಬಾಳೆಹೊನ್ನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಶಿವಮೊಗ್ಗಕ್ಕೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಈ ಕುರಿತು ಬಾಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಸ್ಪೀಟ್ ಅಡ್ಡೆ ಮೇಲೆ ದಾಳಿ: 19 ಮಂದಿ ಸೆರೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಅಂದರ್-ಬಾಹರ್ ಇಸ್ಪೀಟ್ ಜೂಜಾಟದ ಅಡ್ಡೆ ಮೇಲೆ ಗ್ರಾಮೀಣ ಠಾಣೆಯ ಪೊಲೀಸರು ದಾಳಿ ನಡೆಸಿ 49 ಲಕ್ಷ ನಗದು, ನಾಲ್ಕು ಕಾರುಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಎಸ್ಪಿ ದೀಪನ್ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಗೀತಾ ಪಾಟೀಲ್ ನೇತೃತ್ವದ ತಂಡ ಖಚಿತ ಮಾಹಿತಿ ಆಧರಿಸಿ ಯಲ್ಲಾಪುರ ಹೆದ್ದಾರಿಯ ಬೈರುಂಬೆಯ ಗ್ರಾಪಂ ವ್ಯಾಪ್ತಿಯ ಅಗಸಾಲ ಗ್ರಾಮದ ಹಾವೇರಿ ಮೂಲದ ವೈದ್ಯರೋರ್ವರ ಮಾಲೀಕತ್ವದ ವಿಆರ್ ಆರ್ ಹೋಮ್ ಸ್ಟೇ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಅಕ್ರಮವಾಗಿ ಅಂದರ್ ಬಾಹರ್ ಆಡುತಿದ್ದ 19 ಜನರನ್ನ ವಶಕ್ಕೆ ಪಡೆದು 49,50,436 ಲಕ್ಷ ನಗದು, ನಾಲ್ಕು ಕಾರುಗಳು ಹಾಗೂ 15 ಮೊಬೈಲ್, ಇಸ್ಪೀಟ್ ಕಾರ್ಡ್‌ಗಳನ್ನ ವಶಕ್ಕೆ ಪಡೆದಿದ್ದಾರೆ. ಬಂಧಿತರು ಹಾವೇರಿ, ದಾವಣಗೆರೆ ಮೂಲದವರಾಗಿದ್ದು ಘಟನೆ ಸಂಬಂಧ ಶಿರಸಿ ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಬಿಗಿದ ಸ್ಥಿತಿಯಲ್ಲಿ ಶಿಕ್ಷಕಿಯ ಶವ ಪತ್ತೆ

ಮಡಿಕೇರಿ: ಸರಕಾರಿ ಶಾಲೆಯ ಶಿಕ್ಷಕಿಯೊಬ್ಬರು ತಮ್ಮ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಶಿಕ್ಷಕಿಯ ಕುಟುಂಬಸ್ಥರು ಆಕೆಯನ್ನು ಕೊಲೆ ಮಾಡಿದ್ದಾರೆ ಎಂದು ಆರೋಪ ಮಾಡಿರುವ ಘಟನೆ ಮಡಿಕೇರಿಯಲ್ಲಿ ನಡೆದಿದೆ. ಮಡಿಕೇರಿ ತಾಲೂಕಿನ ನಾಪೋಕ್ಲು ಠಾಣಾ ವ್ಯಾಪ್ತಿಯ ಎಮ್ಮೆಮಾಡುವಿನಲ್ಲಿ ಶಿಕ್ಷಕಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಗ್ರಾಮದ ನಿವಾಸಿ ನಜೀರ್ ಎಂಬವರ ಪತ್ನಿ ಸಫ್ರೀನಾ ಶೇಕ್ (32) ಮೃತ ಶಿಕ್ಷಕಿ. ಮೃತ ಸಫ್ರೀನಾ ನಾಪೋಕ್ಲುವಿನ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಬುಧವಾರ ರಾತ್ರಿ ಎಮ್ಮೆಮಾಡುವಿನ ಮನೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ನೇಣಿನ ಕುಣಿಕೆಯಿಂದ ಬಿಡಿಸಿ ಪತಿ ನಜೀರ್ ಸಫ್ರೀನಾಳನ್ನು ನಾಪೋಕ್ಲುವಿನ ಆಸ್ಪತ್ರೆಗೆ ಕರೆತರುವಷ್ಟರಲ್ಲಿ ಮೃತಪಟ್ಟಿರುವ ಬಗ್ಗೆ ವೈದ್ಯರು ಪರೀಕ್ಷಿಸಿ ದೃಢಪಡಿಸಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

ಸ್ಥಳ: ಹಾವೇರಿ

ಸಮಸ್ಯೆಯೇನು? : ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಆಧಾರ್ ಪರಿಷ್ಕಾರಣೆ ಕೇಂದ್ರ ಇಲ್ಲದ ಬಗ್ಗೆ ದೂರು.

ಪರಿಹಾರ: ಎಕ್ಸ್ ಖಾತೆಯ ಮೂಲಕ ಸಲ್ಲಿಕೆಯಾದ ದೂರಿಗೆ ರಾಜ್ಯ ಕಂದಾಯ ಇಲಾಖೆ ಹಿಂಬರಹ ಕೊಟ್ಟಿದ್ದು, ಸವಣೂರಿನ ತಹಸೀಲ್ದಾರ್ ಕಾರ್ಯಾಲಯದ ಎ.ಜೆ.ಎಸ್.ಕೇಂದ್ರದಲ್ಲಿ ಮತ್ತು ಬಿ.ಎಸ್.ಎನ್.ಎಲ್ ಕಚೇರಿಯಲ್ಲಿ ಆಧಾರ್ ಪರಿಷ್ಕಣೆ ಕಾರ್ಯ ನಿತ್ಯ ನಡೆಯುತ್ತಿದೆ. ಜಿಪಿಎಸ್ ಛಾಯಚಿತ್ರದ ಮೂಲಕ ದೃಢಪಡಿಸಲಾಗಿದೆ.

10 ಕೆರೆಗೆ ನೀರು ತುಂಬಿಸಲು ಅನುಮೋದನೆ

ಸಚಿವ ಸಂಪುಟದಲ್ಲಿ ಸನ್ನಡತೆಯ ಜೀವಾವಧಿ ಶಿಕ್ಷಾ ಬಂಧಿಗಳ ಬಿಡುಗಡೆಗೆ ನಿರ್ಧಾರ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 46 ಜೀವಾವಧಿ ಶಿಕ್ಷಾ ಬಂದಿಗಳನ್ನು ಹಾಗೂ ಮೂವರು ಶಿಕ್ಷಾ ಬಂದಿಗಳನ್ನು ಕೇಂದ್ರ ಗೃಹ ಮಂತ್ರಾಲಯದ ಸಹಮತಿ ದೊರಕಿದ ನಂತರ ಅವಧಿಪೂರ್ವ ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆಗೊಳಿಸಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ.

ಸಚಿವ ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಸಂವಿಧಾನದ ಅನುಚ್ಛೇದ-161ರ ಪ್ರಕಾರ ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವವಾಗಿ ಒಟ್ಟು 49 ಜೀವಶಿಕ್ಷಾ ಬಂಧಿಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ ಎಂದರು.

ಇದಲ್ಲದೆ ಹಾಸನ ಜಿಲ್ಲೆ, ಅರಸೀಕೆರೆ ತಾಲೂಕಿನಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರಿಗಾಗಿ ಹಂಚಿಕೆಯಡಿ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ 148.80 ಕೋಟಿ ರು. ಅನುಮೋದನೆ, ರಾಯಚೂರಿನ ರಾಜೀವ್‌ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆವರಣದಲ್ಲಿ ಕಿದ್ವಾಯಿ ಪೆರಿಫೆರಲ್ ಕ್ಯಾನ್ಸರ್ ಚಿಕಿತ್ಸಾ ಘಟಕಕ್ಕೆ 50 ಕೋಟಿ ರು. ಅನುಮೋದನೆ ನೀಡಲಾಗಿದೆ ಎಂದರು.

ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಗೆ ಅಗತ್ಯ ಇರುವ ಹೆಚ್ಚುವರಿ ವೈದ್ಯಕೀಯ ಉಪಕರಣ, ಪೀಠೋಪಕರಣಗಳ ಖರೀದಿಗೆ 62 ಕೋಟಿ ರು., ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯರಗಟ್ಟಿ ಏತನೀರಾವರಿ ಯೋಜನೆಗೆ 25 ಕೋಟಿ ರು., ರೇಣುಕಾ ಏತನೀರಾವರಿ ಯೋಜನೆಗೆ 20 ಕೋಟಿ ರು., ರಾಯಚೂರು ಜಿಲ್ಲೆ ಸಿಂಧನೂರು ತಾಲೂಕಿನ ಸಾಲಗುಂಧ ಗ್ರಾಮದಲ್ಲಿ ತುಂಗಭದ್ರಾ ನದಿಯಿಂದ ಏತನೀರಾವರಿಗೆ 178 ಕೋಟಿ ರು. ಹಾಗೂ ಸಿಂಧನೂರು ಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ಮತ್ತು ಬ್ಯಾರೇಜ್ ನಿರ್ಮಿಸಲು 28 ಕೋಟಿ ರು. ಅನುಮೋದನೆ ನಿಡಲಾಗಿದೆ ಎಂದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಅಲ್ಲೀಪುರ ಗ್ರಾಮಪಂಚಾಯಿತಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ, ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೂಳೆಕೆರೆ ಜೀರ್ಣೋದ್ಧಾರ ಕಾಮಗಾರಿಗೆ 34 ಕೋಟಿ ರು., ಸೂಳೆಕೆರೆಯ ಉತ್ತರ ನಾಲೆಗಳ ಅಭಿವೃದ್ಧಿಗೆ 47.75 ಕೋಟಿ ರು. ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲೂಕು ಮದಗ-ಮಸೂರು ಕೆರೆಯ ಎಡದಂಡೆ-ಬಲದಂಡೆ ಮುಖ್ಯ ನಾಲೆಗಳ ಆಧುನೀಕರಣಕ್ಕೆ 52 ಕೋಟಿ ರು., ಹಾಸನ ಜಿಲ್ಲೆಯ ಮದ್ದನಹಳ್ಳಿ ಬಳಿಯ ಹಾರಂಗಿ ಎಡದಂಡೆ ಕಾಲುವೆಯ ನಾಗಮಂಗಲ ಶಾಖಾ ಕಾಲುವೆಯಿಂದ ನೀರನ್ನೆತ್ತಿ ತುಮಕೂರು ಮತ್ತು ಚನ್ನರಾಯಪಟ್ಟಣ ತಾಲೂಕಿನ ಹಿರಿಸಾವೆ ಹೋಬಳಿಯ 18 ಕೆರೆಗಳನ್ನು ತುಂಬಿಸುವ 74 ಕೋಟಿ ರು. ಕಾಮಗಾರಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ಆಂಬ್ಯುಲೆನ್ಸ್ ನಿರ್ವಹಣೆಗೆ ತಿದ್ದುಪಡಿ ವಿಧೇಯಕ

ಕರ್ನಾಟಕ ರಾಜ್ಯ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2025ಕ್ಕೆ ಅನುಮೋದನೆ ನೀಡಲಾಗಿದೆ. ಕಂದಾಯ ಇಲಾಖೆ ವ್ಯಾಪ್ತಿಯಲ್ಲಿನ 7 ವಿವಿಧ ಮಂಡಳಿ ಹಾಗೂ ಪ್ರಾಧಿಕಾರಗಳಿಗೆ ಸಂಬಂಧಿಸಿದ ತಿದ್ದುಪಡಿ ಅಧಿನಿಯಮ ಬರುವ ಅಧಿವೇಶನದಲ್ಲಿ ಮಂಡಿಸಲಾಗುವುದು. ಇದರಿಂದಾಗಿ ಕಿತ್ತೂರು ಅಭಿವೃದ್ಧಿ ಪ್ರಾಧಿಕಾರ, ಬಸವಕಲ್ಯಾಣ, ಕಾಗಿನೆಲೆ, ಕೂಡಲಸಂಗಮ, ಬನವಾಸಿ, ಸರ್ವಜ್ಞ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರ ಸೇರಿದಂತೆ 7 ಪ್ರಾಧಿಕಾರಗಳ ಕಾರ್ಯಭಾರ ನಿರ್ವಹಣೆಗೆ ಕಂದಾಯ ಸಚಿವರಿಗೆ ಅಧಿಕಾರ ನೀಡಲಾಗುತ್ತಿದೆ ಎಂದರು. ಕರ್ನಾಟಕ ರಾಜ್ಯ ಖಾಸಗಿ ವೈದ್ಯಕೀಯ ಸಂಸ್ಥೆಗಳ ತಿದ್ದುಪಡಿ ವಿಧೇಯಕ-2025 ಹಾಗೂ ಕರ್ನಾಟಕ ವೈದ್ಯಕೀಯ ನೋಂದಣಿ ವಿಧೇಯಕ-2025 ಅನ್ನು ಮುಂದಿನ ಅಧಿವೇಶನದಲ್ಲಿ ಮಂಡಿನೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಗಳು, ಉಪಭೋಗ್ಯ ವಸ್ತುಗಳು ಮತ್ತು ರಾಸಾಯನಿಕಗಳನ್ನು 880 ಕೋಟಿ ರು. ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಗೆ ಅನುಮೋದನೆ ದೊರೆತಿದೆ ಎಂದರು.

ಬಾಲ್ಯವಿವಾಹ ಅಷ್ಟೇ ಅಲ್ಲ ನಿಶ್ಚಿತಾರ್ಥವು ಇನ್ನು ಮುಂದೆ ಶಿಕ್ಷಾರ್ಹವಾಗಲಿದೆ. ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025ಕ್ಕೆ ಅನುಮೋದನೆ ನೀಡಲಾಗಿದ್ದು, ಸದರಿ ವಿಧೇಯಕ ವಿಧಾನ ಮಂಡಲದಲ್ಲಿ ಮಂಡಿಸಲು ನಿರ್ಧರಿಸಲಾಗಿದೆ.

- ಎಚ್.ಕೆ.ಪಾಟೀಲ್ ಕಾನೂನು ಸಚಿವ

ಡಿಸಿಎಂ ಡಿಕೆ ಶಿವಕುಮಾರ್ ನವಿಲೆ ನಾಗೇಶ್ವರಕ್ಕೆ ಭೇಟಿ

ನಾಗದೇವರಿಗೆ ಒಂದೂವರೆ ಗಂಟೆ ಪೂಜೆ ಸಲ್ಲಿಕೆ | ಉಪಮುಖ್ಯಮಂತ್ರಿ ಡಿಕೆಶಿ ನಿಗೂಢ ನಡೆ ಬಗ್ಗೆ ಭಾರೀ ಚರ್ಚೆ

ಚನ್ನರಾಯಪಟ್ಟಣ: ಬೃಹತ್ ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಯಾವುದೇ ಶಿಷ್ಟಾಚಾರ ಹಾಗೂ ಯಾರಿಗೂ ಮಾಹಿತಿ ನೀಡದೆ ಗುಟ್ಟಾಗಿ ಬಂದು ಚನ್ನರಾಯಪಟ್ಟಣ ತಾಲೂಕಿನ ಐತಿಹಾಸಿಕ ನವಿಲೆ ನಾಗೇಶ್ವರ ದೇವರ ಆಶೀರ್ವಾದ ಪಡೆದು ಮರಳಿದ್ದಾರೆ.

ಭದ್ರತೆ ಇಲ್ಲದೆ ಖಾಸಗಿ ಕಾರಿನಲ್ಲಿ ಬಂದ ಸಚಿವರು, ನಾಗದೇವರಿಗೆ ಒಂದೂವರೆ ಗಂಟೆಗಳ ಕಾಲ ವಿಶೇಷ ಪೂಜೆ ಸಲ್ಲಿಸಿ ವಾಪಸ್ ಆಗಿದ್ದಾರೆ ಎನ್ನಲಾಗಿದೆ. ನವಿಲೆ ಗ್ರಾಮದಲ್ಲಿರುವ ನಾಗೇಶ್ವರ ದೇವಾಲಯ ತನ್ನದೇ ಆದ ಇತಿಹಾಸ, ಮಹತ್ವ ಹೊಂದಿದೆ. ಈ ದೇವಾಲಯಕ್ಕೆ ಬರುವಂತೆ ವಾರದ ಹಿಂದೆ ದೇವಾಲಯದ ಆಡಳಿತ ಮಂಡಳಿ ಡಿಕೆಶಿಗೆ ಆಹ್ವಾನ ನೀಡಿತ್ತು. ಅಂದು ಬಾರದೇ ಇದ್ದ ಡಿಕೆಶಿ, ಬುಧವಾರ ಸಂಜೆ ಖಾಸಗಿಯಾಗಿ ದಿಢೀರ್ ಬಂದು ಪೂಜೆ ಸಲ್ಲಿಸಿ ಹೋಗಿದ್ದಾರೆ.

ಬಿಎಸ್‌ವೈ ಹಾದಿಯಲ್ಲೇ ನಡೀತಿದ್ದಾರಾ ಡಿಕೆಶಿ?: ಡಿಸಿಎಂ ಡಿಕೆಶಿ ಅವರು, ಏಕಾಏಕಿ ನವಿಲೆ ನಾಗೇಶ್ವರ ದೇವಾಲಯ ಭೇಟಿ ನೀಡಿ ವಿಶೇಷ ಪೂಜೆ ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಏಕೆಂದರೆ ಈ ಹಿಂದೆ ಸಿಎಂ ಆಗುವ ಮೊದಲು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಇದೇ ನವಿಲೆ ನಾಗೇಶ್ವರನ ಆಶೀರ್ವಾದ ಪಡೆದಿದ್ದರು. ನಂತರ ಸಿಎಂ ಆಗಿದ್ದರು. ಸಿಎಂ ಖುರ್ಚಿ ಮೇಲೆ ಕಣ್ಣಿಟ್ಟಿರುವ ಡಿಕೆಶಿ ಈ ಹಿಂದೆ ಬಿಎಸ್‌ವೈ ಅನುಸರಿಸಿದ್ದ ಕ್ರಮವನ್ನೇ ಅನುಸರಿಸುತ್ತಿದ್ದಾರೆ. ಇಷ್ಟಾರ್ಥ ಸಿದ್ಧಿಗಾಗಿ ಪೂಜೆ ಸಲ್ಲಿಕೆ ಮಾಡಿದ್ದಾರೆ. ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಂದಿರುವ ಸಂದರ್ಭದಲ್ಲಿ ಡಿಕೆಶಿ ನವಿಲೆ ನಾಗೇಶ್ವರ ಭೇಟಿ ತೀವ್ರ ಕುತೂಹಲ ಮೂಡಿಸಿದೆ.

ಮೂರೂವರೆ ಕೋಟಿ ವೆಚ್ಚದ ಚಿನ್ನದ ಮಂಟಪ ಕೊಡುಗೆ: ಡಿಸಿಎಂ ಡಿಕೆ ಶಿವಕುಮಾರ್ ಅವರು ಬಾಳೆಹೊನ್ನೂರು ರಂಭಾಪುರಿ ಶ್ರೀಗಳಿಗೆ ಅಂದಾಜು ಮೂರೂವರೆ ಕೋಟಿ ವೆಚ್ಚದ ಚಿನ್ನದ ಲೇಪನವುಳ್ಳ ಪೂಜಾ ಮಂಟಪವನ್ನು ನೀಡಿದ್ದಾರೆ ಎನ್ನಲಾಗಿದೆ. ಕಳೆದ ವಾರ ಸ್ವತಃ ರಂಭಾಪುರಿ ಶ್ರೀಗಳು ಹಾಗೂ ಕಾಡುಸಿದ್ದೇಶ್ವರ ಶ್ರೀಗಳು ಆಗಮಿಸಿ ಪೂಜೆ ಸಲ್ಲಿಸಿದ್ದರು. ಅದಾದ ಬಳಿಕ ಡಿಸಿಎಂ ಬಂದು ಪೂಜೆ ಸಲ್ಲಿಸಿ ಹೋಗಿದ್ದಾರೆ ಎನ್ನಲಾಗಿದೆ. ಸದರೀ ಪೂಜಾ ಮಂಟಪವು ನವಿಲೆ ನಾಗರ ದೇವಾಲಯದಲ್ಲಿ ಇರಲಿದೆ ಎನ್ನಲಾಗಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ನವಿಲೆ ನಾಗೇಶ್ವರ ದೇಗುಲಕ್ಕೆ ಭೇಟಿ ನೀಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಮರಾಠಿ ಭಾಷೆಯಲ್ಲೇ ದಾಖಲೆ ಕೊಡಿ

ಬೆಳಗಾವಿ ಪರಿಷತ್ ಸಭೆಯಲ್ಲಿ ಎಂಇಎಸ್ ಸದಸ್ಯರ ಮೊಂಡಾಟ

ಎಂಇಎಸ್ ಸದಸ್ಯರನ್ನು ಅಮಾನತು ಮಾಡುವಂತೆ ಆಗ್ರಹಿಸಿ ಪ್ರತಿಭಟಿಸುತ್ತಿರುವ ಕರವೇ.

ಬೆಳಗಾವಿ: ಮಹಾನಗರ ಪಾಲಿಕೆಯಲ್ಲಿ ದಾಖಲೆಗಳನ್ನು ಮರಾಠಿ ಭಾಷೆಯಲ್ಲಿ ನೀಡುವಂತೆ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಬೆಂಬಲಿತ ಅಭ್ಯರ್ಥಿಗಳು ಮೊಂಡಾಟ ಮಾಡಿರುವ ಘಟನೆ ಪರಿಷತ್ ಸಭೆಯಲ್ಲಿ ನಡೆಯಿತು.

ಗುರುವಾರ ಬೆಳಗಾವಿ ಮಹಾನಗರ ಪಾಲಿಕೆಯ ಪರಿಷತ್ ಸಭೆಯಲ್ಲಿ ಎಂಇಎಸ್ ಸದಸ್ಯರು ಮತ್ತೊಮ್ಮೆ ತಮ್ಮ ಕನ್ನಡ ವಿರೋಧಿ ಧೋರಣೆ ತೋರ್ಪಡಿಸಿದರು. ಪರಿಷತ್ ಸಭೆಯ ನಡಾವಳಿ ಸೇರಿದಂತೆ ದಾಖಲೆಗಳನ್ನು ಮರಾಠಿ ಭಾಷೆಯಲ್ಲಿ ನೀಡುವಂತೆ ತಕರಾರು ತೆಗೆದರು. ಈ ವೇಳೆ ಆಡಳಿತ ಪಕ್ಷದ ಸದಸ್ಯರು ವಾಗ್ವಾದಕ್ಕೆ ಇಳಿದ ಘಟನೆಯೂ ನಡೆಯಿತು.

ಎಂಇಎಸ್ ಬೆಂಬಲಿತ ಸದಸ್ಯ ರವಿ ಸಾಳುಂಕೆ ಭಾಷಾ ಅಲ್ಪಸಂಖ್ಯಾತ ಕಾಯ್ದೆ ಅನ್ವಯ ಮರಾಠಿ ಭಾಷೆಯಲ್ಲಿ ದಾಖಲೆ ನೀಡುವಂತೆ ಖ್ಯಾತೆ ತೆಗೆದರು. ಈ ವೇಳೆ ವೈಶಾಲಿ ಭಾತಕಾಂಡೆ ಹಾಗೂ ಶಿವಾಜಿ ಮಂಡೋಳ್ಕರ್ ಕೈ ಜೋಡಿಸಿ ಸಭೆಯಿಂದ ಹೊರನಡೆದರು.

ಬೆಳಗಾವಿ ಮಹಾನಗರ ಪಾಲಿಕೆಯ ಕನ್ನಡ ಕಡ್ಡಾಯಗೊಳಿಸುವ ನಿರ್ಧಾರಕ್ಕೆ ಬರಲಾಗಿದ್ದು ಇದಕ್ಕೆ ಎಂಇಎಸ್ ಸದಸ್ಯರಿಂದ ತೀವ್ರ ವ್ಯಕ್ತವಾಗುತ್ತಿದೆ. ಯಾವುದೇ ಕಾರಣಕ್ಕೂ ಬೆಳಗಾವಿ ನಗರ ಸೇರಿದಂತೆ ಗಡಿ ಭಾಗದಲ್ಲಿ ಕನ್ನಡ ಕಡ್ಡಾಯಗೊಳಿಸುವುದಕ್ಕೆ ಎಂಇಎಸ್ ವಿರೋಧ ವ್ಯಕ್ತಪಡಿಸುವ ಮೂಲಕ ನಾಡವಿರೋಧಿ ನಡೆ ಮುಂದುವರಿಸಿದೆ.

ಪಾಲಿಕೆ ಮುತ್ತಿಗೆಗೆ ಕರವೇ ಯತ್ನ

ಬೆಳಗಾವಿ ಮಹಾನಗರ ಪಾಲಿಕೆ ಪರಿಷತ್ ಸಭೆಯಲ್ಲಿ ಪುಂಡಾಟ ಮೆರೆದ ಎಂಇಎಸ್ ಸದಸ್ಯರನ್ನು ಅಮಾನತು ಮಡುವಂತೆ ಆಗ್ರಹಿಸಿ ಕರವೇ ಜಿಲ್ಲಾಧ್ಯಕ್ಷ ದೀಪಕ್ ಗುಡಗನಟ್ಟಿ ನೇತೃತ್ವದಲ್ಲಿ ಪಾಲಿಕೆ ಮುತ್ತಿಗೆಗೆ ಯತ್ನ ನಡೆಯಿತು. ಈ ವೇಳೆ ಮಧ್ಯಪ್ರದೇಶ ಮಾಡಿದ ಪೊಲೀಸರು ಹೋರಾಟಗಾರರನ್ನು ವಶಕ್ಕೆ ಪಡೆದುಕೊಂಡರು. ಈ ವೇಳೆ ಪ್ರತಿಕ್ರಿಯೆ ನೀಡಿದ ದೀಪಕ್ ಗುಡಗನಟ್ಟಿ, ಮಹಾನಗರ ಪಾಲಿಕೆಯಲ್ಲಿ ಪುಂಡಾಟ ಮೆರೆಯುತ್ತಿರುವ ಎಂಇಎಸ್ ಸದಸ್ಯ ರವಿ ಸಾಳುಂಕೆ ಸೇರಿ ಮೂವರನ್ನು ಅಮಾನತುಗೊಳಿಸಿ ಗಡಿಪಾರು ಮಾಡಬೇಕು. ಪಾಲಿಕೆಯ ಆಡಳಿತ ಸೇವೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕೆಂದು ಆಗ್ರಹಿಸಿದರು.

ಧಾರವಾಡ: ಕಳ್ಳತನಕ್ಕೆ ಯತ್ನಿಸಿದ ಇಬ್ಬರ ಕಾಲಿಗೆ ಗುಂಡೇಟು

ಧಾರವಾಡ: ಕಳವು ಪ್ರಕರಣದ ಇಬ್ಬರು ಆರೋಪಿಗಳು ತಪ್ಪಿಸಿಕೊಳ್ಳಲು ಓಡುವಾಗ ಪೊಲೀಸರು ಕಾಲಿಗೆ ಗುಂಡು ಹೊಡೆದಿರುವ ಘಟನೆ ಉದಯಗಿರಿಯಲ್ಲಿ ನಸುಕಿನಲ್ಲಿ ನಡೆದಿದೆ. ಮತ್ತೊಬ್ಬ ಆರೋಪಿ ಪರಾರಿಯಾಗಿದ್ದಾರೆ. ರಾಜೀವ್‌ಗಾಂಧಿ ನಗರದ ವಿಜಯ ಅಣ್ಣಿಗೇರಿ (35) ಹಾಗೂ ಮುಜಾಮಿಲ್ ಸೌದಾಗರ್ (21) ಕಾಲಿಗೆ ಗುಂಡು ಹೊಡೆಯ ಲಾಗಿದೆ. ಇಬ್ಬರನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಲಾಗಿದೆ.

ಗಿರಿನಗರದಲ್ಲಿ ಆರೋಪಿಗಳು ಬೈಕ್ ಕಳವು ಮಾಡಲು ಯತ್ನಿಸುವಾಗ ಬೆನ್ನಟ್ಟಿದೆವು. ಆರೋಪಿಗಳು ನಮ್ಮ ಕಡೆಗೆ ಕಲ್ಲು ತೂರಿ ತಪ್ಪಿಸಿಕೊಳ್ಳಲು ಓಡಿದರು. ಪಿಎಸ್‌ಐ ಮಲ್ಲಿಕಾರ್ಜುನ್ ಹೊಸೂರ್ ಮತ್ತು ಕಾನ್‌ಸ್ಟೇಬಲ್ ಇಸಾಕ್ ನಧಾಪ ಅವರಿಗೆ ಪೆಟ್ಟಾಗಿದೆ. ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಸಿದರೂ ಆರೋಪಿಗಳು ನಿಲ್ಲಲಿಲ್ಲ. ಇಬ್ಬರೂ ಆರೋಪಿಗಳ ಬಲಗಾಲಿಗೆ ಗುಂಡು ತಗುಲಿವೆ' ಎಂದು ವಿದ್ಯಾಗಿರಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಯೆಟ್ ಜೆಟ್‌ನಲ್ಲಿ ಅಗ್ಗದ ಪ್ರಯಾಣ

ಹೊ ಚಿ ಮಿನ್ಹ್ ಸಿಟಿಯಿಂದ, ವುಂಗ್ ಟಾವ್, ಕು ಚಿ ಟನಲ್, ಮೆಕಾಂಗ್ ಡೆಲ್ಟಾ, ವಾರ್ ಮ್ಯೂಸಿಯಂ, ಸೈಗಾನ್ ನದಿ, ಬೆನ್ ಥಾನ್ ಮಾರ್ಕೆಟ್, ಮುಂತಾದ ಐತಿಹಾಸಿಕ ಪ್ರಸಿದ್ಧಿಯ ಹಾಗೂ ಪ್ರಾಕೃತಿಕ ಅಚ್ಚರಿಯ ತಾಣಗಳನ್ನು ನೋಡಿ ಬರಲು ವಿಯೆಟ್ ಜೆಟ್ ನ ರೌಂಡ್ ಟ್ರಿಪ್ ಹೇಳಿ ಮಾಡಿಸಿದಂತಿದೆ. ಬೇಕೆನಿಸಿದಲ್ಲಿ ನಾ ಟ್ರಾಂಗ್, ಡಾನಾಂಗ್, ಹಾನಾಯ್, ಫು ಕೊಕ್ ದ್ವೀಪಗಳ ಕಡೆಗೂ ಒಮ್ಮೆ ಹೋಗಿ ಬರಬಹುದು. ಬಹಳ ಕಡಿಮೆ ಖರ್ಚಿನಲ್ಲಿ, ವಿಯೆಟ್ನಾಂ ಸಮುದ್ರದ ಬೀಚ್, ವಿಯೆಟ್ನಾಂ ನೈಟ್ ಲೈಫ್, ಆಹಾರ ಪದ್ಧತಿ, ವೈವಿಧ್ಯಮಯ ಸಂಸ್ಕೃತಿ ಸವಿದು ಬರಲು ಇದು ಸಕಾಲ. ಕೇವಲ 5 ಗಂಟೆಗಳಲ್ಲಿ ಬೆಂಗಳೂರಿನಿಂದ ನೇರ ವಿಯೆಟ್ನಾಂ ತಲುಪಿಸುತ್ತಿದೆ ವಿಯೆಟ್ ಜೆಟ್. ಭಾರತ ವಿಯೆಟ್ನಾಂ ನಡುವಣ ಎರಡು ಹೊಸ ಮಾರ್ಗಗಳು ತೆರೆದಿದ್ದು, ವಿಯೆಟ್ ಜೆಟ್ ಈಗ ಒಟ್ಟು ಹತ್ತು ಮಾರ್ಗಗಳ ಮೂಲಕ ಎಪ್ಪತ್ತೆಂಟು ವಿಮಾನಗಳನ್ನು ಹಾರಾಡಿಸಲಿದೆ. ಹ ನೋಯ್, ಡಾ ನಾಂಗ್ ಮತ್ತು ಹೊ ಚಿ ಮಿನ್ಹ್ ಹೋಗುವವರು ಇನ್ನುಮುಂದೆ ವಿಮಾನ ಬದಲಿಸುವ ಅವಶ್ಯಕತೆ ಇಲ್ಲ ವಿಯೆಟ್ ಜೆಟ್ ನೇರ ಸಂಪರ್ಕ ಏರ್ಪಡಿಸಿದೆ.

ಕೇವಲ ಐದು ಗಂಟೆಗಳ ಪ್ರಯಾಣ | 11 ರು. ಇದ್ದರೆ ವಿಯೆಟ್ನಾಂಗೆ ಹಾರಬಹುದು!

ಬೆಂಗಳೂರಿಗೆ ಹತ್ತಿರವಾದ ವಿಯೆಟ್ನಾಂ

ನವೀನ್ ಸಾಗರ್ ಹೊ ಚಿ ಮಿನ್ಹ್ ಸಿಟಿ ವಿಯೆಟ್ನಾಂ

ಕರ್ನಾಟಕದ ಪ್ರವಾಸಿಪ್ರಿಯರಿಗೆ ಇಲ್ಲೊಂದು ಸಿಹಿ ಸುದ್ದಿಯಿದೆ. ಕೇವಲ ಇಪ್ಪತ್ತು ಸಾವಿರ ರುಪಾಯಿ ಇದ್ದರೆ ನೀವು ವಿಯೆಟ್ನಾಂ ದೇಶಕ್ಕೆ ಹೋಗಿ ವಾಪಸ್ ಬರಬಹುದು. ಹೌದು, ಇದನ್ನು ಸಾಧ್ಯವಾಗಿಸುತ್ತಿರುವುದು ವಿಯೆಟ್ ಜೆಟ್ ಏರ್‌ಲೈನ್ಸ್.

ದಕ್ಷಿಣ ವಿಯೆಟ್ನಾಂನ ಪ್ರಮುಖ ನಗರವಾಗಿರುವ ಸೈಗಾನ್ ಅಲಿಯಾಸ್ ಹೊ ಚಿ ಮಿನ್ಹ್ ಸಿಟಿಗೆ ಇದೀಗ ಬೆಂಗಳೂರಿನಿಂದ ನೇರ ವಿಮಾನ ಸಂಪರ್ಕ ಲಭ್ಯವಾಗಿಸಿದೆ ವಿಯೆಟ್ ಜೆಟ್. ವಾರದಲ್ಲಿ ನಾಲ್ಕು ಬಾರಿ ವಿಯೆಟ್ ಜೆಟ್ ವಿಮಾನಗಳು ಬೆಂಗಳೂರು ಮತ್ತು ಹೊ ಚಿ ಮಿನ್ಹ್ ಸಿಟಿ ನಡುವೆ ಹಾರಾಡಲಿವೆ. ಬೆಂಗಳೂರಿನಿಂದ ಪ್ರತಿ ಸೋಮವಾರ, ಬುಧವಾರ ಮತ್ತು ಶುಕ್ರವಾರ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ ಟೂ ಮೂಲಕ ಹೊ ಚಿ ಮಿನ್ಹ್ ತಲುಪುವ ವಿಯೆಟ್ ಜೆಟ್ ಅಲ್ಲಿಂದ ವಾರಕ್ಕೆ ಮೂರು ಬಾರಿ ಬೆಂಗಳೂರಿಗೆ ಪಯಣಿಸಲಿದೆ.

ವೀಸಾ ಆನ್ ಅರೈವಲ್ ಸೌಲಭ್ಯ ಕೂಡ ಹೊಂದಿರುವ ವಿಯೆಟ್ನಾಂಗೆ ವಲಸೆ ಪ್ರಕ್ರಿಯೆ ಮತ್ತು ವೀಸಾ ಪ್ರಕ್ರಿಯೆಗಳು ಬಹಳ ಸರಳವಿದ್ದು, ಮಧ್ಯಮವರ್ಗದವರೂ ವಿಯೆಟ್ ಜೆಟ್ ಮೂಲಕ ವಿಯೆಟ್ನಾಂ ಹೋಗಿ ಬರುವ ಕನಸು ನನಸಾಗಿಸಿಕೊಳ್ಳಬಹುದು. ಫ್ರೆಂಚರ, ಚೀನಾದ ಮತ್ತು ಅಮೆರಿಕನ್ನರ ದಾಳಿಗಳಿಗೆ ತುತ್ತಾಗಿ ಯುದ್ಧ ನಡೆಸಿ ಸ್ವಾತಂತ್ರ್ಯ ಪಡೆದಿರುವ ನಾಡು ವಿಯೆಟ್ನಾಂ, 1975ರಲ್ಲಿ ಸ್ವತಂತ್ರವಾದ ನಂತರದಲ್ಲಿ ಅಭಿವೃದ್ಧಿಗೊಂಡ ರೀತಿಯೇ ಅದ್ಭುತ. ಅತ್ಯುತ್ತಮ ಪ್ರವಾಸೋದ್ಯಮ ಯೋಜನೆಗಳ ಮೂಲಕ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿರುವ ವಿಯೆಟ್ನಾಂ, ವಾಣಿಜ್ಯನಗರಿ ಹೊ ಚಿ ಮಿನ್ಹ್ ಮೂಲಕ ಪ್ರವಾಸಿ ತಾಣಗಳಿಗೆ ಪ್ರವೇಶ ಒದಗಿಸುತ್ತಿದೆ.

ಈ ಕಾರುಬಾರಿಗೆ ವಿಯೆಟ್ ಜೆಟ್ ಕೈಜೋಡಿಸಿದ್ದು, ಹಲವು ಆಫರ್‌ಗಳ ಮೂಲಕ ವಿಯೆಟ್‌ಜೆಟ್ ಭಾರತದ ಪ್ರತಿ ಪ್ರಮುಖ ನಗರಗಳಿಂದ ನೇರ ವಿಮಾನ ಸೇವೆ ನೀಡುತ್ತಿದೆ. ಬರುವ ಸೆಪ್ಟೆಂಬರ್‌ನಿಂದ ಮುಂದಿನ ಮೇ ಅವಧಿಯಲ್ಲಿ ವಿಯೆಟ್ನಾಂ ಹೋಗುವವರಿಗೆ ಒಂದು ಅಚ್ಚರಿಯ ಆಫರ್ ಕೂಡ ನೀಡಿದ್ದು, ಇಂದೇ ಬುಕ್ ಮಾಡಿ ದರೆ ಕೇವಲ 11 ರುಪಾಯಿಯಲ್ಲಿ ವಿಯೆಟ್ನಾಂ ತಲುಪಬಹುದು.

ಆಫರ್‌ಗಾಗಿ www.vietjetair.com ಭೇಟಿ ಕೊಡಿ

ಹೌದು, ಕೇವಲ 11 ರು.ಗೆ ವಿಯೆಟ್ನಾಂ ತಲುಪಿಸುವ ವಿಶೇಷ ಆಫರ್ ಕೂಡ ವಿಯೆಟ್ ಜೆಟ್ ನೀಡಿದ್ದು, ಇದರ ಬಗ್ಗೆ ತಿಳಿಯಲು www.vietjetair.com ಸಂಪರ್ಕಿಸಬೇಕಾಗುತ್ತದೆ. ಇದರ ಹೊರತಾಗಿಯೂ ಮಿಕ್ಕೆಲ್ಲಾ ವಿಮಾನಗಳಿಗಿಂತ ವಿಯೆಟ್ ಜೆಟ್ ದರ ಗಣನೀಯವಾಗಿ ಕಡಿಮೆ ಇದೆ. ವಿಯೆಟ್ ಜೆಟ್‌ನಲ್ಲಿ ಆತಿಥ್ಯ ಉಪಚಾರದ ಜತೆ ಸೌಲಭ್ಯಗಳೂ ಹಿತಕರವಾಗಿವೆ. ಸ್ಕೈಬಾಸ್ ಎಂಬ ಸ್ಪೆಷಲ್ ದರ್ಜೆ ಸೇವೆಯೂ ಇದರಲ್ಲಿದ್ದು, ಲಾಂಜ್, ಆಹಾರ ವ್ಯವಸ್ಥೆ, ಸುಲಭ ಇಮ್ಮಿಗ್ರೇಷನ್ ಸೌಕರ್ಯ ಸಿಗುತ್ತವೆ.

ವಿಯೆಟ್ನಾಂ ಮತ್ತು ಭಾರತದ ಎಲ್ಲ ಪ್ರಮುಖ ನಗರಗಳ ಮಧ್ಯೆ ನೇರ ವಿಮಾನ ಸಂಪರ್ಕ ಕಲ್ಪಿಸುವುದು ವಿಯೆಟ್ ಜೆಟ್‌ನ ಗುರಿ. ಅದರ ಜತೆಯಲ್ಲಿ ವಿಯೆಟ್ನಾಂ ಪ್ರವಾಸವು ಮಧ್ಯಮ ವರ್ಗದ ಜನರಿಗೂ ಕೈಗೆಟುಕುವಂತೆ ಮಾಡುವುದು ನಮ್ಮ ಆದ್ಯತೆ. ಪ್ರವಾಸಿಗರಿಗೂ ಉದ್ಯಮಿಗಳಿಗೂ ಅನುಕೂಲವಾಗುವಂಥ ವೇಳಾಪಟ್ಟಿಯೊಂದಿಗೆ ಅತ್ಯುತ್ತಮ ವೈಮಾನಿಕ ಅನುಭವ ನೀಡುವುದು ನಮ್ಮ ಆಶಯ.

-ಕೀವ್ ಡಿಯಿಂಗ್ ಎಮಿ
ಅಂತಾರಾಷ್ಟ್ರೀಯ ಸಂಪರ್ಕಾಧಿಕಾರಿ, ವಿಯೆಟ್ ಜೆಟ್ ಏರ್ ಲೈನ್ಸ್

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಹದ್ದಿನ ಕಣ್ಣಿಗೆ ಧೂಳು ಬಿದ್ದಿತ್ತೇ?

ಮೋರಿಸ್ ಸ್ಯಾಮ್ಯುಯೆಲ್ ಎಂಬ ಭೂಪ ಗುಜರಾತಿನ ಗಾಂಧಿನಗರದಲ್ಲಿ 2019ರಿಂದ ನಕಲಿ ನ್ಯಾಯಾಲಯವೊಂದನ್ನು ಹುಟ್ಟುಹಾಕಿ ಬರೋಬ್ಬರಿ 5 ವರ್ಷಗಳವರೆಗೆ ಅದನ್ನು ನಡೆಸಿಕೊಂಡು ಬಂದಿದ್ದರ ಸುದ್ದಿಯನ್ನು ನೀವು ಸಾಕಷ್ಟು ದಿನದ ಹಿಂದೆ ಓದಿರಬಹುದು. ಈ ನಕಲಿ ನ್ಯಾಯಾಲಯದ ಕೊಠಡಿಯಲ್ಲಿ ಆತ ನ್ಯಾಯಾಧೀಶನ ಕುರ್ಚಿಯಲ್ಲಿ ಕೂತು, ಜಮೀನು ವ್ಯಾಜ್ಯಗಳಿಗೆ ಸಂಬಂಧಿಸಿ ತನ್ನದೇ ಆದ ರೀತಿಯಲ್ಲಿ ತೀರ್ಪುನೀಡುತ್ತಿದ್ದ. ಈತನ ಸಹವರ್ತಿಗಳು ನ್ಯಾಯಾಲಯದ ಸಿಬ್ಬಂದಿಗಳಂತೆ ನಟಿಸುತ್ತಿದ್ದರು ಎಂಬ ಸಂಗತಿ ಬಯಲಾದಾಗ ಪೊಲೀಸರೇ ದಂಗಾಗಿದ್ದುಂಟು. ಈಗ ಇಂಥ ಮತ್ತೊಬ್ಬ ಆಸಾಮಿಯನ್ನು ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಪೊಲೀಸರು ಬಂಧಿಸಿದ್ದಾರೆ. 'ವೆಸ್ಟ್ ಆರ್ಟಿಕಾ' ಹೆಸರಿನಲ್ಲಿ ನಕಲಿ ರಾಯಭಾರ ಕಚೇರಿಯನ್ನು ನಡೆಸುತ್ತಿದ್ದ ವಂಚಕನೊಬ್ಬ, ಪ್ರಧಾನ ಮಂತ್ರಿ, ರಾಷ್ಟ್ರಪತಿ ಮತ್ತಿತರ ಗಣ್ಯರ ಜತೆ ನಿಂತಿರುವಂತೆ ಛಾಯಾಚಿತ್ರಗಳನ್ನು ಸೃಷ್ಟಿಸಿ ಜನರನ್ನು ನಂಬಿಸುತ್ತಿದ್ದ, ನಕಲಿ ಕಂಪನಿಗಳ ಹೆಸರಿನಲ್ಲಿ ಅಕ್ರಮ ಹಣವರ್ಗಾವಣೆ (ಹವಾಲಾ) ದಂಧೆ ನಡೆಸುತ್ತಿದ್ದ ಮತ್ತು ವಿವಿಧ ದೇಶಗಳಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಯುವಜನರಿಗೆ ವಂಚಿಸುತ್ತಿದ್ದ ಎಂಬುದು ಲಭ್ಯಮಾಹಿತಿ. ಈತನನ್ನು ಕೊನೆಗೂ ಬಂಧಿಸಿರುವುದು ಶ್ಲಾಘನೀಯ ಬೆಳವಣಿಗೆಯೇ. ಆದರೆ 'ರಾಯಭಾರ ಕಚೇರಿ' ಸಂಬಂಧಿತ ನಾಮಫಲ ಕವನ್ನು ನೋಡಿದ ಮೇಲೂ, ಶುರುವಿನಲ್ಲಿ ಯಾವ ಇಲಾಖಾಧಿಕಾರಿಗೂ/ ಪೊಲೀಸರಿಗೂ ಅನುಮಾನವೇ ಬರಲಿಲ್ಲವೇ? ಎಂಬುದು ಯಕ್ಷಪ್ರಶ್ನೆ. ಪಟ್ಟಣ-ನಗರಗಳು ಮಾತ್ರವಲ್ಲದೆ ಊರೂರು, ಕೇರಿ ಕೇರಿಗಳಲ್ಲಿ ತಥಾಕಥಿತ ಕ್ಲಿನಿಕ್ ತೆರೆದು, ನಕಲಿ ವೈದ್ಯ ಪ್ರಮಾಣಪತ್ರವನ್ನು ತೂಗುಹಾಕಿ 'ದಂಧೆ' ಮಾಡುತ್ತಿರುವ ಕಳ್ಳವೈದ್ಯರು ಪತ್ತೆಯಾದರೆ ಒಂದು ಕಾಲಕ್ಕೆ ಅದೇ ಸುದ್ದಿಯಾಗುತ್ತಿತ್ತು. ಆದರೆ ಈಗ ಕೆಲ ಘಟಿಂಗರು ನಕಲಿ ನ್ಯಾಯಾಲಯ, ನಕಲಿ ರಾಯಭಾರ ಕಚೇರಿಗಳನ್ನೂ ತೆರೆಯಬಲ್ಲವರಾಗಿದ್ದಾರೆ ಎಂದರೆ, ನಮ್ಮ ವ್ಯವಸ್ಥೆಯ 'ಹದ್ದಿನ ಕಣ್ಣುಗಳು' ಅದಿನ್ಯಾವ ಮಟ್ಟಿಗೆ ಮಂಜಾಗಿರಬೇಕು?!

ಸೊಂಪಾದಕೀಯ

ಆ್ಯಂಟಿ ಸೋಷಿಯಲ್ ಮೀಡಿಯಾ

ನಮ್ಮ ಸಮಾಜದಲ್ಲಿ ಸೆಲೆಬ್ರಿಟಿ ಆಗೋದು ಸುಲಭವಾಗಿದೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಯಾರು ಬೇಕಾದರೂ ಬಹಳ ಬೇಗನೆ ಹೀರೋ ಆಗಬಹುದು, ಹೀರೋಯಿನ್ ಆಗಬಹುದು. ನೀವು ಒಳ್ಳೆಯ ಕಾರಣಕ್ಕೆ ಹೆಸರು ಮಾಡಬೇಕು ಎಂದಿಲ್ಲ. ಯಾವುದೋ ಒಂದು ರೀತಿಯಲ್ಲಿ ಹೆಸರು ಮಾಡಿದರೆ ಸಾಕು ಎನ್ನುವಂಥ ಪರಿಸ್ಥಿತಿ ಇಂದಿನದು. ಸಿನಿಮಾ, ರಾಜಕೀಯ ರಂಗದಲ್ಲಿ ಹೆಸರು ಮಾಡಿ ದವರ ಅಭಿಮಾನಿ ಸಂಘಗಳ ಪೇಜ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿದಿನವೂ ಸದ್ದು ಮಾಡುತ್ತಿರುತ್ತವೆ. ಈಗಿನ ಬೆಳವಣಿಗೆ ನೋಡಿದರೆ ನಿಮ್ಮ ಹೆಸರು ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡಲು ನೀವು ಸಿನಿಮಾ ತೆರೆಯ ಮೇಲಾಗಲೀ, ರಾಜಕೀಯ ರಂಗದಲ್ಲಾಗಲೀ ಹೀರೋ ಆಗಿರಬೇಕು ಅಂತೇನಿಲ್ಲ ಅನ್ನೋದು ಗೊತ್ತಾಗುತ್ತದೆ. ಯಾಕೆಂದರೆ ಈಗ ರೌಡಿಗಳಿಗೂ ಅಭಿಮಾನಿ ಸಂಘಗಳು ಹುಟ್ಟಿಕೊಂಡಿವೆ. ಅಪರಾಧ ಎಸಗಿ ಜೈಲು ಸೇರಿರುವ ರೌಡಿಗಳಿಗೂ ಈಗ ಸ್ಟಾರ್ ಪಟ್ಟ ದೊರಕುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಇಂಥವರ ಅಭಿಮಾನಿ ಸಂಘಗಳ ಹೆಸರಿನಲ್ಲಿ ಅನೇಕ ಪೇಜುಗಳು ತಲೆ ಎತ್ತಿವೆ. ಈಗ ಇವರ ಹಾವಳಿ ಮಿತಿಮೀರಿರುವುದರಿಂದ ಪೊಲೀಸರು, ಹೀಗೆ ಅನಧಿಕೃತವಾಗಿ ತಲೆಯೆತ್ತಿರುವ ರೌಡಿ ಪೇಜ್‌ಗಳ ಬಾಲ ಕಟ್ ಮಾಡಲು ಮುಂದಾಗಿದ್ದಾರೆ. ಸೋಷಿಯಲ್ ಮೀಡಿಯಾ ಅಂದ್ರೆ ಅದು ಆರೋಗ್ಯಕರ ಚರ್ಚೆಗೆ ಇರುವಂಥ ವೇದಿಕೆ. ಆದರೆ ಅಂಥ ಸೋಷಿಯಲ್ ಮೀಡಿಯಾ ಗಳಲ್ಲಿ ಆ್ಯಂಟಿ ಸೋಷಿಯಲ್ ಎಲಿಮೆಂಟ್‌ಗಳನ್ನೂ ಆರಾಧಿಸುವ ಮಟ್ಟಕ್ಕೆ ಹೋಗಿ ರೌಡಿಗಳನ್ನು ಕೊಂಡಾಡುತ್ತಿದ್ದರೆ ಪೊಲೀಸರು ತಾನೇ ಹೇಗೆ ಸುಮ್ಮನಿದ್ದಾರು? ಹಾಗಾಗಿ ಅವರು ಇಂಥ ಪುಂಡ-ಪೋಕರಿಗಳನ್ನು ಫುಟ್ಬಾಲ್‌ನಂತೆ ಚೆಂಡಾಡಲು ರೆಡಿಯಾಗಿದ್ದಾರೆ. ಅದರಲ್ಲೂ ನಟ ದರ್ಶನ್ ಕೊಲೆ ಆರೋಪದ ಮೇಲೆ ಜೈಲು ಸೇರಿದ ನಂತರ ಇಂಥ ಪುಂಡ-ಪೋಕರಿಗಳ ಪೇಜುಗಳ ಆರ್ಭಟ ಹೆಚ್ಚಾಗಿದೆ. ದರ್ಶನ್ ಕೊಲೆ ಮಾಡಿದ್ದರೂ ನಾವು ಅವ ರನ್ನು ಬೆಂಬಲಿಸುತ್ತೇವೆ ಎನ್ನುವ ಅಯೋಗ್ಯರಂತೆ ರೌಡಿಗಳನ್ನು ಬೆಂಬಲಿಸುವ ಪೇಜುಗಳನ್ನು ಈಗ ಪೊಲೀಸರು ಹದ್ದಿನ ಕಣ್ಣಿಟ್ಟು ಕಾಯುತ್ತಿದ್ದಾರೆ. ಖದೀಮರನ್ನು ಬೆಂಬಲಿಸುವ ಕೆಲಸ ಮಾಡುವವರಿಗೆ ಕಾನೂನಿನ ಪ್ರಕಾರ ಪಾಠ ಕಲಿಸುವುದು ಪೊಲೀಸರ ಉದ್ದೇಶ. ಇದು ಇಂದು ಅಗತ್ಯವಾಗಿ ಮಾಡಬೇಕಾಗಿರುವ ಕೆಲಸ ಕೂಡ ಅನ್ನೋದು 100% ಸತ್ಯ.

ಸಂಪಾದಕರ ಸದ್ಯಶೋಧನೆ

ಎಂಜಿನ್‌ಗೆ ನಾಣ್ಯ ಎಸೆಯಬಹುದೇ?

ನಮ್ಮ ದೇಶದಲ್ಲೊಂದೇ ಅಲ್ಲ, ಬೇರೆ ದೇಶಗಳಲ್ಲೂ ಈ ನಂಬಿಕೆ ಇದೆ. ಅದೇನೆಂದರೆ, ಜನ ಕೆಲವು ಸ್ಥಳಗಳಲ್ಲಿ ತಮಗೆ ಒಳ್ಳೆಯದಾಗಲಿ ಎಂದು ನಾಣ್ಯಗಳನ್ನು ಎಸೆಯುತ್ತಾರೆ. ನಮ್ಮ ದೇಶದಲ್ಲಿ ಜನ ಕೆರೆ, ಬಾವಿ ಸೇರಿದಂತೆ ಪವಿತ್ರ ಸ್ಥಳಗಳಲ್ಲಿ ನಾಣ್ಯಗಳನ್ನು ಎಸೆಯುತ್ತಾರೆ. ಈ ಪದ್ಧತಿ ವಿದೇಶಗಳಲ್ಲೂ ಇದೆ. ತಾವು ದೇವರಿಗೆ ಕಾಣಿಕೆ ಅರ್ಪಿಸುತ್ತಿರುವುದಾಗಿ ಭಾವಿಸುತ್ತಾರೆ. ನಮ್ಮ ದೇಶದಲ್ಲಿ ಸಾಕ್ಷಾತ್ ಹನುಮಂತನ ಅಪರವತಾರ ಎಂದು ಕೋತಿಗಳಿಗೆ ನಾಣ್ಯ ಎಸೆಯುವುದುಂಟು. ಕೋತಿ ಸತ್ತಾಗಲೂ ಜನ ಮೃತದೇಹಕ್ಕೆ ನಾಣ್ಯ ಬಿಸಾಡುವುದುಂಟು. ಇಂದಿಗೂ ತಮ್ಮ ಇಷ್ಟದ ನಾಯಕ ನಟನ ಸಿನಿಮಾ ನೋಡಲು ಹೋದಾಗ, ಆತ ಪರದೆ ಮೇಲೆ ಮೊದಲ ಬಾರಿಗೆ ಬರುತ್ತಿರುವಂತೆ ಅಭಿಮಾನಿಗಳು ಕೇಕೆ ಹಾಕಿ ಪರದೆಯ ಕಡೆಗೆ ನಾಣ್ಯ ಬಿಸಾಡುವುದುಂಟು. ನಾನು ಏಸುಕ್ರಿಸ್ತನ ಜನ್ಮಸ್ಥಳವಾದ ಬೆತ್ಲಹಮ್‌ಗೆ ಹೋದಾಗಲೂ ಏಸುವಿನ ಪ್ರತಿಮೆ ಎದುರು ನಾಣ್ಯಗಳ ರಾಶಿಯೇ ಇತ್ತು. ಬಂದವರೆಲ್ಲ ನಾಣ್ಯ ಚೆಲ್ಲಿ ಹೋಗುವುದು ಅಲ್ಲಿನ ಸಂಪ್ರದಾಯ. ದೇವರ ಮೂರ್ತಿಗೆ, ಫೋಟೋಕ್ಕೆ ನಾಣ್ಯ ಎಸೆಯುವುದು ಸಾಮಾನ್ಯ ಬಿಡಿ. ಆದರೆ ವಿಮಾನದ ಎಂಜಿನ್‌ಗೆ ನಾಣ್ಯ ಎಸೆಯುವುದನ್ನು ನೋಡಿದ್ದೀರಾ? ಕೆಲ ದಿನಗಳ ಹಿಂದೆ, ಶಾಂಘೈ ಪುಡಾಂಗ್ ವಿಮಾನ ನಿಲ್ದಾಣದಲ್ಲಿ 80ರ ವೃದ್ಧೆಯೊಬ್ಬಳು ವಿಮಾನದ ಜೆಟ್ ಎಂಜಿನ್‌ಗೆ ನಾಣ್ಯಗಳನ್ನು ಎಸೆದುಬಿಟ್ಟಳು. ಈ ಘಟನೆ ಅಲ್ಲೋಲಕಲ್ಲೋಲವನ್ನುಂಟು ಮಾಡಿತು. ಚೀನಾ ಸದರ್ನ್ ವಿಮಾನದಲ್ಲಿ ಗುವಾಂಗ್ಝೌಗೆ ಹೊರಟಿದ್ದ ಈಕೆ, ಸುಖ ಮತ್ತು ಸುರಕ್ಷಿತ ಪ್ರಯಾಣಕ್ಕೆ ದೇವರಲ್ಲಿ ಪ್ರಾರ್ಥಿಸಿ, ಎಂಜಿನ್ ಕಡೆಗೆ ಒಂದು ಮುಷ್ಟಿ ನಾಣ್ಯಗಳನ್ನು ಎಸೆದಳು. ಇದು ಸುರಕ್ಷಿತ ಪ್ರಯಾಣಕ್ಕೆ ದೇವರಿಗೆ ಸಲ್ಲಿಸುವ ಕಾಣಿಕೆ ಎಂದು ಆಕೆ ಭಾವಿಸಿದ್ದಳು. ಆ ನಾಣ್ಯಗಳಲ್ಲೊಂದು ನಿಜಕ್ಕೂ ಎಂಜಿನ್ ಒಳಗೆ ಹೋಗಿಬಿಟ್ಟಿತು. ಈ ಘಟನೆ ಸಣ್ಣದಾಗಿ ಕಂಡರೂ, ಪರಿಣಾಮಗಳು ದೊಡ್ಡದಾಗಿದ್ದವು. ಅದನ್ನು ಉಪೇಕ್ಷಿಸುವಂತಿರಲಿಲ್ಲ. ಇದನ್ನು ನೋಡಿದ ಗ್ರೌಂಡ್ ಸ್ಟಾಫ್, ತುರ್ತುಸ್ಥಿತಿಯನ್ನು ಘೋಷಿಸಿದ. ತಕ್ಷಣ ಮುಖ್ಯ ಸೇಫ್ಟಿ ಎಂಜಿನಿಯರ್‌ಗೆ ವಿಷಯವನ್ನು ತಲುಪಿಸಲಾಯಿತು. ತಕ್ಷಣ ಭದ್ರತಾ ಸಿಬ್ಬಂದಿ ಆಗಮಿಸಿ ಆಕೆಯನ್ನು ವಶಕ್ಕೆ ಪಡೆದುಕೊಂಡರು. ಎಂಜಿನ್ ನಿರ್ವಹಣಾ ತಂಡ ಆಗಮಿಸಿ ಇನ್ನೇನು ಹಾರಲು ರನ್ ವೇಗೆ ತೆರಳಬೇಕಾಗಿದ್ದ ವಿಮಾನವನ್ನು ನಿಲ್ಲಿಸಿತು. ಇಡೀ ಪ್ರಕರಣದ ವಿಚಾರಣೆ ಆಗದೇ ವಿಮಾನ ಹಾರುವಂತಿಲ್ಲ ಎಂದು ಏರ್‌ಲೈನ್ಸ್‌ಗೆ ಸೂಚಿಸಲಾಯಿತು. ಪರಿಣಾಮ, ವಿಮಾನ 5 ಗಂಟೆ ವಿಳಂಬವಾಗಿ ಪ್ರಯಾಣಿಕರಿಗೆ ತೀವ್ರ ತೊಂದರೆಯಾಯಿತು. ವಿಮಾನದಲ್ಲಿದ್ದ 150 ಪ್ರಯಾಣಿಕರನ್ನು ಕೆಳಕ್ಕಿಳಿಸಿ ಪರ್ಯಾಯ ವ್ಯವಸ್ಥೆ ಮಾಡಬೇಕಾಯಿತು. ಎಂಜಿನ್ ಅನ್ನು ಸಂಪೂರ್ಣ ತಪಾಸಣೆಗೆ ಒಳಪಡಿಸಲು ವಿಮಾನಯಾನ ಸಂಸ್ಥೆಯ ಮೆಕ್ಯಾನಿಕ್‌ಗಳಿಗೆ ಆದೇಶಿಸಲಾಯಿತು. ಎಂಜಿನ್‌ಗೆ ಹಾನಿಯಾಗಿದೆಯೇ ಅಥವಾ ಭವಿಷ್ಯದಲ್ಲಿ ಯಾವುದೇ ಸಮಸ್ಯೆ ಉಂಟಾಗಬಹುದೇ ಎಂದು ಖಚಿತಪಡಿಸಿಕೊಳ್ಳಲು ಇದು ಅವಶ್ಯವಾಗಿತ್ತು. ಎಸೆದ ನಾಣ್ಯಗಳ ಒಟ್ಟು ಮೌಲ್ಯ ಒಂದು ಡಾಲರ್ ಸಹ ಆಗಿರಲಿಲ್ಲ. ಆದರೆ ಇದರಿಂದಾದ ಸಮಯ, ಹಣ ಮತ್ತು ಸುರಕ್ಷತೆಯ ಅಪಾಯದ ವೆಚ್ಚ ಮಾತ್ರ ಅಳೆಯಲಾಗದಷ್ಟು. ಮಹಿಳೆಯ ವಯಸ್ಸು ಮತ್ತು ಅವಳ ಉದ್ದೇಶ ಕೆಟ್ಟದ್ದಾಗಿರಲಿಲ್ಲ ಎಂದು ಪರಿಗಣಿಸಿ, ಅವಳ ಮೇಲೆ ಯಾವುದೇ ಪ್ರಕರಣಗಳನ್ನು ದಾಖಲಿಸಲಿಲ್ಲ. ಆದರೆ ಈ ಘಟನೆ ವಿಮಾನದ ಎಂಜಿನ್‌ಗಳು ಪ್ರಾರ್ಥನಾ ಸ್ಥಳ ಅಲ್ಲ ಎಂಬುದನ್ನು ನೆನಪಿಸುತ್ತದೆ. ವಿಮಾನದ ಎಂಜಿನ್‌ಗಳು ಅತ್ಯಂತ ಸೂಕ್ಷ್ಮ ಮತ್ತು ಸಂಕೀರ್ಣ ಯಂತ್ರಗಳಾಗಿವೆ. ಅವುಗಳ ಕಾರ್ಯನಿರ್ವಹಣೆಗೆ ಸಣ್ಣ ಅಡಚಣೆಯೂ ದೊಡ್ಡ ದುರಂತಕ್ಕೆ ಕಾರಣವಾಗಬಹುದು. ಹೀಗಾಗಿ ಇಂಥ ವಿಷಯವನ್ನು ಉದಾಸೀನ ಮಾಡುವಂತಿಲ್ಲ. ವಿಮಾನ ಪ್ರಯಾಣವು ಆಧುನಿಕ ತಂತ್ರಜ್ಞಾನದ ಅದ್ಭುತಗಳಲ್ಲಿ ಒಂದಾಗಿದೆ. ಪ್ರತಿ ವಿಮಾನಕ್ಕೂ ಕಟ್ಟುನಿಟ್ಟಾದ ಸುರಕ್ಷತಾ ನಿಯಮಗಳು, ಕಾರ್ಯವಿಧಾನಗಳಿವೆ. ಇವುಗಳನ್ನು ಪ್ರಯಾಣಿಕರು ಮತ್ತು ವಿಮಾನ ಸಿಬ್ಬಂದಿ ಕಟ್ಟುನಿಟ್ಟಾಗಿ ಪಾಲಿಸುವುದು ಅತ್ಯಗತ್ಯ. ಎಂಜಿನ್‌ಗೆ ನಾಣ್ಯಗಳನ್ನು ಎಸೆಯುವಂತಿಲ್ಲ, ಮೊಬೈಲ್ ಫೋನ್ ಬಳಸುವಂತಿಲ್ಲ ಎಂದು ಹೇಳಿದಾಗಲೂ ಅಂಥ ಸುರಕ್ಷತಾ ಸೂಚನೆಗಳನ್ನು ನಿರ್ಲಕ್ಷಿಸುವುದು ವಿಮಾನದ ಸುರಕ್ಷತೆಗೆ ಅಪಾಯ ತಂದೊಡ್ಡಬಹುದು. ಅದೃಷ್ಟಕ್ಕಾಗಿ, ಪ್ರಾರ್ಥನೆಗಾಗಿ ನಾಣ್ಯಗಳನ್ನು ಬಾವಿ ಅಥವಾ ಕಾರಂಜಿಗಳಿಗೆ ಎಸೆಯುವುದು ಸೂಕ್ತ. ಆದರೆ ಜೆಟ್ ಟರ್ಬೈನ್‌ಗಳ ಸುರಕ್ಷತೆಯೊಂದಿಗೆ ಆಟವಾಡುವುದು ಸರ್ವಥಾ ಸರಿಯಲ್ಲ.

ಮರಗಳಿಗೇಕೆ ಹಾರ್ಟ್ ಅಟ್ಯಾಕ್ ಆಗುವುದಿಲ್ಲ?

ಕಾಯಿ ಬಿಡುವ, ಹಣ್ಣು ಕೊಡುವ ಮರಗಳು, ಬಿದಿರು, ಕೆಲವು ಹುಲ್ಲುಗಳು ಹಲವಾರು ವರ್ಷ ಬದುಕುತ್ತವೆಯಲ್ಲ, ಅವುಗಳ ಬದುಕು ಸಂಪೂರ್ಣ ವಿಭಿನ್ನ. ವಾರ್ಷಿಕ ಸಸ್ಯಗಳು ಏನೋ ಒಂದು ಚಿಕ್ಕ ಸಮಸ್ಯೆಯಾದರೆ ತಕ್ಷಣ ಸತ್ತುಹೋಗುತ್ತವೆ. ಆದರೆ ಮರಗಳು ಹಾಗಲ್ಲ. ಒಂದು ಮರಕ್ಕೆ ಒಂದು ಭಾಗದಲ್ಲಿ ಏನೋ ಒಂದು ಸಮಸ್ಯೆಯಾದರೆ ಆ ಭಾಗವನ್ನು ಅವು ರಿಪೇರಿ ಮಾಡಿಕೊಳ್ಳಲು ಹೋಗುವುದಿಲ್ಲ. ಬದಲಿಗೆ ಆ ಭಾಗಕ್ಕೆ ನೀರು, ಪೋಷಕಾಂಶದ ಪೂರೈಕೆಯನ್ನು ನಿಲ್ಲಿಸಿಕೊಂಡುಬಿಡುತ್ತದೆ. ಹೀಗೆ ಹಾನಿಗೊಳಗಾದ ಭಾಗವನ್ನಷ್ಟೇ ಒಣಗಿಸಿ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ.

ಶಿಶಿರಕಾಲ
ಶಿಶಿರ್ ಹೆಗಡೆ
shishirh@gmail.com

ಸಾವಿನ ಬಗ್ಗೆ ಅಸಂಖ್ಯ ಪುಸ್ತಕಗಳು ಪ್ರಕಟವಾಗಿವೆ. ಕೆಲವು ಅಧ್ಯಾತ್ಮದ ಹಿನ್ನೆಲೆಯವಾದರೆ ಇನ್ನು ಕೆಲವು ಧಾರ್ಮಿಕ, ವೈಜ್ಞಾನಿಕ ಇತ್ಯಾದಿ. ಬರೆದಿರುವ ಲೇಖಕರೆಲ್ಲ ತಾವು ಜೀವಂತವಾಗಿರುವಾಗಲೇ ಬರೆದದ್ದು ಎಂಬುದು ಈ ಪುಸ್ತಕಗಳ ವಿಶೇಷತೆ ಮತ್ತು ಸಾಮ್ಯತೆ! ಎಲ್ಲ ದೇಶ ಕಾಲದಲ್ಲೂ ಸಾವಿನ ಬಗ್ಗೆ ವಿವರಿಸಿದವರಿದ್ದಾರೆ, ಬರೆದವರಿದ್ದಾರೆ. ಕೆಲವರು ಯಾರೋ ಹೇಳಿದ ವಿವರಣೆಗಳನ್ನು ತಮ್ಮದೇ ಅವತರಣಿಕೆಯಲ್ಲಿ ಬರೆದರೆ ಇನ್ನು ಕೆಲವು ಭೂಪರು ಇಂಥ ನಾಲ್ಕಾರು ಪುಸ್ತಕಗಳನ್ನು ನಕಲು ಮಾಡಿ ತಾವೇ ಒಂದು ಪುಸ್ತಕ ಬರೆದು ಪ್ರಕಟಿಸಿದ ಉದಾಹರಣೆಗಳಿವೆ. ಸಾವಿನ, ಸಾವಿನ ನಂತರದ ಬಗ್ಗೆ ಕಾಲ್ಪನಿಕ ಕಥೆಗಳೂ ಸಾಕಷ್ಟಿವೆ. 'ಬೆಳಗ್ಗೆ ಎದ್ದು, ಹಲ್ಲುಜ್ಜುವಾಗ ಕನ್ನಡಿಯೊಳಗೆ ಮುಖ ಕಾಣಿಸುವುದಿಲ್ಲ. ಆಗ ಆ ವ್ಯಕ್ತಿಗೆ (!) ತಾನು ಸತ್ತಿದ್ದೇನೆ ಎಂಬುದು ತಿಳಿಯುತ್ತದೆ'- ಈ ಒಂದು ಲೈನ್ ಇಟ್ಟುಕೊಂಡು ಬರೆದ ಕಥೆಗಳು ಜಗತ್ತಿನ ಎಲ್ಲಾ ಭಾಷೆಗಳಲ್ಲಿಯೂ ಇವೆ. 'ತವರುಮನೆಯ ಸೆಂಟಿಮೆಂಟಿನ' ಚಲನಚಿತ್ರಗಳಿಗಿಂತ ಜಾಸ್ತಿ ಲೆಕ್ಕದಲ್ಲಿ ಈ ಕಥೆಯ ರೂಪಾಂತರಗಳಿವೆ.

'ಏಕೆ' ಎಂಬ ಪ್ರಶ್ನೆಯನ್ನು ಕೇಳಲು ಕಲಿತಾಗಿನಿಂದ ಪ್ರಶ್ನೆಯಾಗಿಯೇ ಉಳಿದಿರುವುದೆಂದರೆ 'ನಾವು ಏಕೆ ಸಾಯುತ್ತೇವೆ?'. ನೊಬೆಲ್, ಪದ್ಮವಿಭೂಷಣ ಪುರಸ್ಕೃತ ವಿಜ್ಞಾನಿ 'ಡಾ. ವೆಂಕಿ ರಾಮಕೃಷ್ಣನ್' ಬರೆದ Why We Die, The New Science of Aging and The quest for Immortality ಎಂಬ ಪುಸ್ತಕವನ್ನು ಇತ್ತೀಚೆಗೆ ಓದುತ್ತಿದ್ದೆ. ಅವರದ್ದೂ ಅದೇ ಪ್ರಶ್ನೆ. ಅವರು ಅಣುಜೀವಶಾಸ್ತ್ರಜ್ಞರು. ಹಾಗಾಗಿ ಅವರದು ಜೀವಕೋಶ ಹಂತದ ವಿವರಣೆ. ವಿಭಿನ್ನ. ಅದರಲ್ಲೊಂದು ವೈರುಧ್ಯದ ವಿವರಣೆ ಇದೆ. ಏನೆಂದರೆ ಈಗ ನೀವು ಈ ಕ್ಷಣ, ಈ ಲೇಖನವನ್ನು ಓದುತ್ತಿರುವ ಸಮಯದಲ್ಲಿಯೇ ಲಕ್ಷಾಂತರ ಜೀವಕೋಶಗಳು ನಿಮ್ಮ ದೇಹದೊಳಕ್ಕೆ ಸಾಯುತ್ತಿವೆ. ಜೀವಕೋಶಗಳ ಈ ಸಾವು ನಿರಂತರ. ಜೀವವಿರಬೇಕು ಎಂದರೆ ಅವು ನಿರಂತರ ಸಾಯುತ್ತಿರಬೇಕು, ಹೊಸ ಕೋಶಗಳು ವಿಭಜನೆಗೊಂಡು ಹುಟ್ಟುತ್ತಿರಬೇಕು. ಇದು ಒಂದು ಕಡೆಯಾದರೆ ಇನ್ನೊಂದು ಕಡೆ, ಒಬ್ಬ ವ್ಯಕ್ತಿ ಸತ್ತಿದ್ದಾನೆ ಎಂದು ಘೋಷಿಸಿದಾಕ್ಷಣ ಆತನ ಸಂಪೂರ್ಣ ದೇಹ ಸತ್ತಿದೆಯೆಂದಲ್ಲ. ಹೃದಯಾಘಾತವಾದವನಿಗೆ ಮಿದುಳಿನಿಂದ ಹಿಡಿದು ಬಹುತೇಕ ಅಂಗಗಳು 'ಸತ್ತ' ನಂತರವೂ ಜೀವಂತವಿರುತ್ತದೆ, ಅವು ಸತ್ತಿರುವುದಿಲ್ಲ. ಹೃದಯ ಸತ್ತದ್ದಕ್ಕೆ ಅನಿವಾರ್ಯವಾಗಿ ಅವು ಸಾಯಬೇಕಾಗುತ್ತದೆ. ಅಂಗ ದಾನ, ಕಣ್ಣಿನ ದಾನ ಇವೆಲ್ಲ ಅದೇ ಅಲ್ಲವೇ? ಡಾ. ವೆಂಕಿ ಹೇಳುವಂತೆ ಸಾವು ಎಂದರೆ ನಮ್ಮ ಇಡೀ ದೇಹ ಒಂದು ಸಿಸ್ಟಮ್‌ನಂತೆ ವ್ಯವಸ್ಥೆಯಾಗಿ ಕೆಲಸಮಾಡಲಾಗದ ಒಟ್ಟು ಸ್ಥಿತಿ.

ಆದರೆ ಇವತ್ತಿನ ನನ್ನ ಪ್ರಶ್ನೆ ಮನುಷ್ಯನ ಅಥವಾ ಪ್ರಾಣಿಯ ಸಾವಿನ ಬಗ್ಗೆ ಅಲ್ಲ, ಬದಲಿಗೆ ಸದ್ದುಗದ್ದಲವಿಲ್ಲದೆ, ಅಳು ರಂಪಾಟವಿಲ್ಲದೆ ಹೋಗಿಬಿಡುವ ಮರ-ಗಿಡಗಳ ಸಾವಿನ ಬಗ್ಗೆ. ಮನುಷ್ಯನಿಗೆ ಬರುವಂತೆ ಸಸ್ಯಗಳಿಗೂ ನೂರೆಂಟು ರೋಗಗಳು ಬರುತ್ತವೆ. ಹುಳ ಹಿಡಿಯುವುದು, ಸೂಕ್ಷ್ಮಾಣು ಜೀವಿಗಳ ದಾಳಿ, ಶಿಲೀಂಧ್ರ ದಾಳಿ, ಸಿಡಿಲು, ದುಂಬಿ ಇತ್ಯಾದಿ ಇತ್ಯಾದಿ. ಅವು ಮನುಷ್ಯನಿಗೆ ಕ್ಯಾನ್ಸರ್, ಮಣ್ಣು ಮಸಿ ರೋಗಗಳು ಬರುವಂತೆ. ಅಸಹಜ ಸಾವು ಪ್ರಾಣಿ ಸಸ್ಯಗಳೆರಡರಲ್ಲೂ ಇದೆ. ಆದರೆ ಸಸ್ಯಗಳಲ್ಲಿ ಸಹಜ ಸಾವು ಹೇಗೆ? ಮನುಷ್ಯನಲ್ಲಿ ಸಹಜ ಸಾವು ಎಂದರೆ ಯಾವುದೋ ಒಂದು ಅಥವಾ ಕೆಲವು ಅಂಗಗಳು ಇನ್ನು ತನ್ನ ಕೈಲಾಗುವುದಿಲ್ಲ ಎಂದು ಕೈ ಎತ್ತುವುದು. ಸಸ್ಯಗಳಲ್ಲಿ? ಅವಕ್ಕೆ ಹೃದಯವೂ ಇಲ್ಲ, ಕಿಡ್ನಿ, ಲಿವರ್‌ಗಳೂ ಇಲ್ಲ. ಹಾಗಾದರೆ ಅವು ಸಾಯುವುದು ಹೇಗೆ? ಒಂದು ಸಸ್ಯವನ್ನು ಯಾವುದೇ ರೋಗ ರುಜಿನಗಳಿಲ್ಲದೆ ಪ್ರಯೋಗಾಲಯದಲ್ಲಿ ಬೆಳೆಸಿದರೆ ಅವು ಸಾವಿಲ್ಲದೆ ಬದುಕಬಲ್ಲವೇ?

ಹುಟ್ಟುತ್ತಲೇ ಸಾವು ಆರಂಭವಾಗುತ್ತದೆ ಎಂಬುದು ಎಲ್ಲ ಜೀವಕ್ಕೂ ಸತ್ಯ. ನಮಗೆಲ್ಲರಿಗೂ ಸಾವಿನ ಬಗ್ಗೆ ನಿರಂತರ ಪ್ರಜ್ಞೆಯಿದೆ. ಮರೆತರೂ ಸಾವು ಎಂಬುದು ನಿಶ್ಚಿತ ಎಂಬುದು ಎಲ್ಲರಿಗೂ ಗೊತ್ತು. ನಾವು ಆಧುನಿಕವಾದಂತೆ ಸಾವನ್ನು ಉಪೇಕ್ಷಿಸುವ ಹೆಚ್ಚೆಚ್ಚು ಸಾಹಸ ಮಾಡುತ್ತಿದ್ದೇವೆ. ಆದರೆ ಈಗೀಗ ಹೆಚ್ಚೆಚ್ಚು ಆಚರಿಸಿಕೊಳ್ಳುವ ಹುಟ್ಟುಹಬ್ಬ, ವಾರ್ಷಿಕೋತ್ಸವ, ಹೊಸವರ್ಷಾಚರಣೆ ಸುಪ್ತವಾಗಿ ವಯಸ್ಸಾಗುತ್ತಿದೆ ಎಂದು ಪಿಸುಗುಡುತ್ತವೆ. ನಮ್ಮ ಎರಡು ತಲೆಮಾರಿನ ಹಿಂದಿನವರಿಗೆ ವಯಸ್ಸಾಗುತ್ತಿದ್ದುದು ಇಂದಿನ ನಮ್ಮಷ್ಟು ಬಾಧಿಸುತ್ತಿರಲಿಲ್ಲವೇನೋ. ಷಷ್ಟಿಪೂರ್ತಿ, ಸಹಸ್ರಚಂದ್ರದರ್ಶನಗಳಾದಾಗಲೇ ವಯಸ್ಸಾಗುತ್ತಿದೆ ಎಂದು ಬಹಿರಂಗವಾಗುತ್ತಿದ್ದದ್ದು. ಆದರೂ ಮನುಷ್ಯ ಪ್ರಜ್ಞೆಯಲ್ಲಿ ಯಾವತ್ತೂ ಸಾವು ಸಮೀಪಿಸುತ್ತಿದೆ ಎಂಬ ಕಲ್ಪನೆ ಇದ್ದೇ ಇದೆ. ಈಗೀಗಂತೂ ಹೋದಲ್ಲಿ ಬಂದಲ್ಲಿ ಎಲ್ಲರೂ ವಯಸ್ಸಾಯ್ತು ಎನ್ನುವವರೇ.

ವಯಸ್ಸಾಗುತ್ತಿದ್ದಂತೆ ತಮ್ಮ ಸಾವಿನ ಬಗ್ಗೆ ಶೋಕಾಚರಣೆ ಆರಂಭಿಸಿಕೊಳ್ಳುವವರಿದ್ದಾರೆ. ಮಾಡಿದ ತಪ್ಪುಗಳು, ಈಡೇರದ ಆಸೆಗಳು, ಒಂದಿಲ್ಲೊಂದು ದಿನ ಸಂಭವಿಸುವ ಸಾವು. ಸಾವು ಸಹಜ ಎಂಬ ಅರಿವಿದ್ದೂ ಬದುಕುವ, ಸಮೀಪಿಸಿದಾಗ ವ್ಯಥಿಸುವ ಏಕೈಕ ಪ್ರಾಣಿ ಮನುಷ್ಯನೇ ಇರಬೇಕು. ಖಾಲಿ ಸೈಟಿನಲ್ಲಿ ಬೆಳೆಯುವ ಕಾಟು ಗಿಡಗಳಿಗೆ, ನಾಚಿಕೆ ಮುಳ್ಳಿನ ಗಿಡಕ್ಕೆ, ನಡುವೆ ಹುಟ್ಟಿ ತಲೆಯೆತ್ತುವ ಪಪಾಯಾ ಗಿಡಕ್ಕೆ , ಪಶ್ಚಿಮ ಘಟ್ಟದ ತಪ್ಪಲಿನ ಬೀಟೆ ಮರಕ್ಕೆ, ದೊಡ್ಡಾಲದ ಮರಕ್ಕೆ ಸಾವು ಒಂದಿಲ್ಲೊಂದು ದಿನ ನಿಶ್ಚಿತವೆನ್ನುವುದು ತಿಳಿದಿದೆಯೇ?

ಮರಗಳ ಸಾವು ಪ್ರಾಣಿಪಕ್ಷಿಗಳ ಸಾವಿನಂತೆ ದಿಢೀರ್ ಜರಗುವ ಕ್ರಿಯೆ ಅಲ್ಲ. ಮರಗಳಿಗೆ ಡೆತ್ ಸರ್ಟಿಫಿಕೇಟ್‌ನಲ್ಲಿ ನಿಮಿಷ, ಕ್ಷಣ ಮರವೊಂದು ಸತ್ತಿತು ಎಂಬ ಸಾವಿನ ನಿಖರ ಸಮಯವಿಲ್ಲ. ಮರಗಳ ಸಾವು ನಿಧಾನದ ಪ್ರಕ್ರಿಯೆ. ಹೇಗೆ ಮನುಷ್ಯನಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯ ಮತ್ತು ಸಾವು ಇದೆಯೋ ಅದೇ ರೀತಿ ಮರಗಳಲ್ಲಿಯೂ ಬಾಲ್ಯವಿದೆ, ಹೂ ಬಿಡುವ- ಬೀಜ ಬಿಡುವ ಯೌವನವಿದೆ. ಆಮೇಲೆ ವೃದ್ಧಾಪ್ಯವಿದೆ, ಅದಾದ ಮೇಲೆ ಸಾವು. ಸೊಳ್ಳೆ, ನೊಣ ಇತ್ಯಾದಿ ಬದುಕುವುದು ಕೆಲವೇ ದಿನಗಳು. ನಾಯಿ ಕೆಲವು, ಮನುಷ್ಯ ಹಲವು ವರ್ಷ, ಆನೆ, ಆಮೆಗಳು ಇನ್ನಷ್ಟು ವರ್ಷ. ಹಾಗೆಯೇ ಜೋಳ, ಸೂರ್ಯಕಾಂತಿ ಇವುಗಳದ್ದು ಕೆಲವೇ ತಿಂಗಳುಗಳ ಬದುಕು. ಅದಾದ ಮೇಲೆ ಯಾವುದೇ ಆರೈಕೆ ಮಾಡಿದರೂ ಆ ಗಿಡಗಳು ಬದುಕಲು ಸಾಧ್ಯವಿಲ್ಲ. ಇನ್ನು ಅಜ್ಜ ನೆಟ್ಟ ಆಲದ ಮರ?

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಕೆಲವೊಂದಿಷ್ಟು ಮರ ಪ್ರಭೇದಗಳಿವೆ. ಬ್ರಿಸ್ಟಲ್ ಕೋನ್, ಇನ್ನೊಂದಿಷ್ಟು ಪೈನ್ ಮರಗಳು. ಅವು ಆರೆಂಟು ನೂರು ವರ್ಷ ಬದುಕುವುವು. ಅವುಗಳ ಮಧ್ಯೆ ಕೆಲವೊಂದಿಷ್ಟು ಮರಗಳು ಸಾವಿರಾರು ವರ್ಷದಿಂದ ದೈವದ ಕಲ್ಲಿನಂತೆ ನಿಂತಿವೆ. ಅಲ್ಲಿನ ಒಂದು ಮರವಂತೂ ಐದುಸಾವಿರ ವರ್ಷದಿಂದ ಜೀವಂತವಿದೆ. ಕಾರ್ಬನ್ ಡೇಟಿಂಗ್ ಮೊದಲಾದ ವಿಧಾನಗಳಿಂದ ಪಕ್ಕಾ ಆದ ಲೆಕ್ಕ ಇದು. ವಿಜ್ಞಾನಿಗಳು ಹೇಳುವಂತೆ ಮೇಥುಸೇಲಾ ಎಂಬ ಪೈನ್ ಮರವಂತೂ ಐದು ಸಾವಿರ ವರ್ಷದ ನಂತರವೂ ವೃದ್ಧಾಪ್ಯದ ಲಕ್ಷಣವನ್ನೇ ತೋರುತ್ತಿಲ್ಲವಂತೆ. ಮರಗಳ ಗಾತ್ರ ಹೆಚ್ಚಿದಂತೆ ಅವುಗಳ ಆಯುಷ್ಯ ಹೆಚ್ಚು ಎನ್ನುವುದು ಎಲ್ಲಾ ಮರಗಳ ಮಟ್ಟಿಗೆ ಸತ್ಯವಲ್ಲದಿದ್ದರೂ ಬಹುತೇಕ ಲಾಗೂ ಆಗುವ ವಿಚಾರ. ಮರ ದೊಡ್ಡವಾದಂತೆ ಅವುಗಳ ಮೇಲೆ ಕ್ರಿಮಿ, ಕೀಟಗಳ ದಾಳಿಯ ಸಾಧ್ಯತೆ ಹೆಚ್ಚು, ಬೀಸುವ ಗಾಳಿ, ಮಳೆಯ ಹೊಡೆತ ಅವಕ್ಕೆ ಜಾಸ್ತಿ. ಆದರೆ ಇದೆಲ್ಲದಕ್ಕೆ ವೈರುಧ್ಯವೆನಿಸುವಂತೆ ಮರಗಳು ಗಾತ್ರ ಹೆಚ್ಚಾದಂತೆ ಹೆಚ್ಚು ಕಾಲ ಬದುಕುತ್ತವೆ.

ಭತ್ತ, ಗೋಧಿ, ಸೂರ್ಯಕಾಂತಿ ಹೀಗೆ ವಾರ್ಷಿಕ ಬೆಳೆಗಳದ್ದು ಕೆಲವೇ ತಿಂಗಳುಗಳ ಬದುಕು. ಒಮ್ಮೆ ಹೂವು ಬಿಟ್ಟಿತು, ಬೀಜ ಬೆಳೆಯಿತು ಎಂದರೆ ಗಿಡ ಒಣಗಲು ಶುರುವಾಗಿಬಿಡುತ್ತದೆ. ಭತ್ತ ತೆನೆ ಬಿಟ್ಟ ನಂತರ ಸಾಯುವುದು ಅವುಗಳ ಗುಣ- ಸರಿ. ಆದರೆ ಆ ಸಾವು ಹೇಗೆ? ಇಡೀ ಭತ್ತದ ಗದ್ದೆಗೆ ಗದ್ದೆಯೇ ಪೈರು ಬಿಟ್ಟಾದ ನಂತರ ಅದೆಷ್ಟೇ ನೀರು ಹರಿಸಿದರೂ ಒಣಗಿ ನಿಲ್ಲುತ್ತವೆಯಲ್ಲ, ಹಾಗಾದರೆ ಅವೇನು ಆತ್ಮಹತ್ಯೆ ಮಾಡಿಕೊಳ್ಳುತ್ತವೆಯೇ? ಈ ರೀತಿ ಸಸ್ಯ ಸಾಯುವ ಪ್ರಕ್ರಿಯೆಯನ್ನು Senescence ಎನ್ನಲಾಗುತ್ತದೆ. ಇದೊಂದು ವ್ಯವಸ್ಥಿತ ಜೈವಿಕ 'ನಿರ್ಗಮನ' ಕ್ರಿಯೆ. ಆಯಾ ಸಸ್ಯಗಳ ವಂಶವಾಹಿನಿಯಲ್ಲಿಯೇ ಬದುಕಿನ ಕಾಲಮಿತಿಯೂ ಅಚ್ಚಾಗಿರುತ್ತದೆ. ಆ ಸಮಯ ಬರುತ್ತಿದ್ದಂತೆ ಸಾವಿನ ಪ್ರಕ್ರಿಯೆ ಶುರುವಾಗಿಬಿಡುತ್ತದೆ. ಭತ್ತದ ಗಿಡವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಭತ್ತದ ಹೂವು- ಕದಿರು ಬಿಡುತ್ತಿದ್ದಂತೆ ಗಿಡದಲ್ಲಿ ಅದರೊಳಗಿನ ಹಾರ್ಮೋನ್ ಬದಲಾವಣೆಗಳು ಶುರುವಾಗಿಬಿಡುತ್ತವೆ. ಭತ್ತದ ಬೀಜದೊಳಗೆ

ವಂಶವಾಹಿಯ ಜತೆ ಪೋಷಕಾಂಶಗಳು ತುಂಬಿಕೊಳ್ಳುತ್ತಿದ್ದಂತೆ ಈ 'ಕಿಲ್ ಸ್ವಿಚ್', ಸಾವಿನ ಪ್ರಕ್ರಿಯೆ ಇನ್ನಷ್ಟು ವೇಗ ಪಡೆಯುತ್ತದೆ. ಭತ್ತದ ಗಿಡ ಪ್ರಜ್ಞಾಪೂರ್ವಕವಾಗಿಯೇ ಎಲೆ, ಕಾಂಡಗಳಿಗೆ ಪೋಷಕಾಂಶ ಪೂರೈಸುವುದನ್ನು ತಡೆಯುತ್ತದೆ ಮತ್ತು ಕಾಂಡ ಎಲೆಗಳಲ್ಲಿನ ಕೆಲ ಪೋಷಕಾಂಶಗಳನ್ನು ಕೂಡ ಬೀಜಗಳಿಗೆ ರವಾನಿಸುತ್ತದೆ. ಇದರಿಂದ ಕ್ರಮೇಣ ಎಲೆ ಮೊದಲಿಗೆ ಒಣಗುತ್ತದೆ. ಹೀಗೆ ಗಿಡ ತನ್ನೊಳಗಿನ ಜೀವವನ್ನು ಬೀಜದಲ್ಲಿಡುತ್ತದೆ. ಸಾವು ಗಿಡವನ್ನು ಆವರಿಸುತ್ತದೆ. ಎಲ್ಲವೂ ಪೂರ್ವ ನಿರ್ಧಾರಿತ ಮತ್ತು timed- ನಿಗದಿತ ಕಾಲಮಿತಿ. ಯಾವುದೇ ಭತ್ತದ ಗಿಡ ಋತುಮಾನಕ್ಕೆ ತಕ್ಕಂತೆ ಬೀಜ ಬಿಟ್ಟಾದ ನಂತರ ಸತ್ತಿಲ್ಲವೆಂದರೆ ಆ ಗಿಡದೊಳಗಿನ ವಂಶವಾಹಿನಿಯಲ್ಲಿ ಏನೋ ಒಂದು ಸಮಸ್ಯೆಯಿದೆ ಎಂದೇ ಅರ್ಥ!!

ಆದರೆ ಕಾಯಿ ಬಿಡುವ, ಹಣ್ಣು ಕೊಡುವ ಮರಗಳು, ಬಿದಿರು, ಕೆಲವು ಹುಲ್ಲುಗಳು ಹಲವಾರು ವರ್ಷ ಬದುಕುತ್ತವೆಯಲ್ಲ, ಅವುಗಳ ಬದುಕು ಸಂಪೂರ್ಣ ವಿಭಿನ್ನ. ವಾರ್ಷಿಕ ಸಸ್ಯಗಳು ಏನೋ ಒಂದು ಚಿಕ್ಕ ಸಮಸ್ಯೆಯಾದರೆ ತಕ್ಷಣ ಸತ್ತುಹೋಗುತ್ತವೆ. ಆದರೆ ಮರಗಳು ಹಾಗಲ್ಲ. ಒಂದು ಮರಕ್ಕೆ ಒಂದು ಭಾಗದಲ್ಲಿ ಏನೋ ಒಂದು ಸಮಸ್ಯೆಯಾದರೆ ಆ ಭಾಗವನ್ನು ಅವು ರಿಪೇರಿ ಮಾಡಿಕೊಳ್ಳಲು ಹೋಗುವುದಿಲ್ಲ. ಬದಲಿಗೆ ಆ ಭಾಗಕ್ಕೆ ನೀರು, ಪೋಷಕಾಂಶದ ಪೂರೈಕೆಯನ್ನು ನಿಲ್ಲಿಸಿಕೊಂಡುಬಿಡುತ್ತದೆ. ಹೀಗೆ ಹಾನಿಗೊಳಗಾದ ಭಾಗವನ್ನಷ್ಟೇ ಒಣಗಿಸಿ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಇದ್ದ ಜಾಗದಲ್ಲಿ ಹಾನಿಯಾಗುತ್ತಿದೆ ಎಂದು ಅಲ್ಲಿನ ಕಾಲು ಕೀಳಲಿ ಅಂದರೆ ಮರಗಳಿಗೆ ಕಾಲುಗಳಿಲ್ಲವಲ್ಲ!! ಮರಗಳು ವಾರ್ಷಿಕ ಬೆಳೆಗಳಂತೆ ತಮ್ಮೆಲ್ಲ ಸತ್ವವನ್ನು ಬೀಜಕ್ಕೆ ಬಿಟ್ಟು ಸಾಯುವುದಿಲ್ಲ. ವರ್ಷಾನುಗಟ್ಟಲೆ ಇಡೀ ವ್ಯವಸ್ಥೆಯೇ ಸೋತು ಸುಣ್ಣವಾಗುವಾಗ Senescence- ಮರಣ ಕ್ರಿಯೆ ಆರಂಭವಾಗುತ್ತದೆ. ಈ ಮರಣ ಕ್ರಿಯೆಯೇ ವಂಶವಾಹಿಯಲ್ಲಿ ಇಲ್ಲದ ಮರಗಳು ಅಸಂಖ್ಯ ಇವೆ. ಅವುಗಳಿಗೆ ಕಾರ್ಯತಃ ಇಂತಿಷ್ಟು ವರ್ಷದ ಬದುಕು ಎಂಬುದು ಪೂರ್ವ ನಿರ್ಧರಿತವಲ್ಲ. ಅಂಥ ಮರಗಳೇ ನೂರಾರು ವರ್ಷ, ಕೆಲವೊಮ್ಮೆ ಸಾವಿರಾರು ವರ್ಷ ಬದುಕುವವು.

ಕೆಲ ವರ್ಷದ ಹಿಂದೆ ಕ್ಯಾಲಿಫೋರ್ನಿಯಾದ ಸಿಕೋಯಾ ರಾಷ್ಟ್ರೀಯ ರಕ್ಷಿತಾರಣ್ಯಕ್ಕೆ ಹೋಗಿದ್ದೆ. ಅಲ್ಲಿನವು ದೈತ್ಯಾಕಾರದ ಸಿಕೋಯಾ ಮರಗಳು. 70-80 ಮೀಟರ್ ಎತ್ತರ, 8-10 ಮೀಟರ್ ಅಗಲದ ಕಾಂಡಗಳು. ಅಲ್ಲಿನ ಅತಿ ದೊಡ್ಡ ಸಿಕೋಯಾ ಮರ 83 ಮೀಟರ್ ಎತ್ತರವಿದೆ. ಅದರ ಕಾಂಡದ ಸುತ್ತಳತೆ 31 ಮೀಟರ್. 2700 ವರ್ಷ ವಯಸ್ಸು ಆ ಮರಕ್ಕೆ. ಏಸು ಕ್ರಿಸ್ತನಿಗಿಂತ ಮೊದಲು ಹುಟ್ಟಿದ ಗಿಡ ಅದು. ನಾವು ಅದರ ಎದುರಿಗೆ ನಿಂತು ಫೋಟೋ ತೆಗೆಸಿಕೊಳ್ಳಲು ಮುಂದಾದರೆ ಮರ ಮತ್ತು ನಾವು ಒಂದೇ ಫ್ರೇಮಿನಲ್ಲಿ ಹಿಡಿಯುವುದಿಲ್ಲ. ಹಿಡಿಸಿದರೆ ನಾವು ಆ ಫೋಟೋದಲ್ಲಿ ಕಾಣಿಸುವುದಿಲ್ಲ. ಅಷ್ಟು ಗಾತ್ರ. ನಾನು ಅಲ್ಲಿಂದ ಬರುವಾಗ ಆ ಗಿಡದ ಬೀಜವನ್ನು ಕಿಸೆಗಿಳಿಸಿಕೊಂಡು ಬಂದಿದ್ದೆ. ಅದನ್ನು ಮನೆಗೆ ತಂದು, ಗಿಡ ಮಾಡಿದ್ದೂ ಆಯಿತು. ಆದರೆ 2700 ವರ್ಷ ಹಳೆಯ ಮರದಿಂದ ಹುಟ್ಟಿದ ಗಿಡ ಎರಡೇ ವರ್ಷದಲ್ಲಿ ಶಿವನ ಪಾದ ಸೇರಿತ್ತು. ಇಂಥ ಮರಗಳ ಆಯುಷ್ಯ ನಿರ್ಧಾರವಾಗುವುದು ವಾತಾವರಣ ಇತ್ಯಾದಿ ಬಾಹ್ಯ ಬದಲಾವಣೆಗಳಿಂದ ಮಾತ್ರ. ಅದು ಸಂಭವಿಸದಿದ್ದಲ್ಲಿ ಅವೆಲ್ಲ ಅಜರಾ'ಮರ'.

ಚಳಿ ಪ್ರದೇಶದ ಮರಗಳು ಚಳಿಗಾಲ ಶುರುವಾಗುತ್ತಿದ್ದಂತೆ ತಮ್ಮೆಲ್ಲ ಪೋಷಕಾಂಶಗಳನ್ನು ಬೇರಿಗೆ ರವಾನಿಸಿಬಿಡುತ್ತವೆ. ತಮ್ಮೆಲ್ಲ ಎಲೆಗಳನ್ನು ಉದುರಿಸಿ ಘೋರಚಳಿಗಾಲದಲ್ಲಿ ಕೋಮಾವಸ್ಥೆ, ಮತ್ತೆ ಬೇಸಗೆಯಲ್ಲಿ ಚಿಗುರಿದ ಬದುಕು. ಹೀಗೆ ಸಸ್ಯಗಳ ಸಾವಿನಲ್ಲೂ ಅಷ್ಟೇ ವೈವಿಧ್ಯವಿದೆ.

ಮರಗಿಡಗಳ ಹುಟ್ಟು ಮತ್ತು ಸಾವು ಎರಡೂ ಹಾಗೆಯೇ. ಕಂಪೌಂಡಿನ ಸಿಮೆಂಟ್ ಚಡಿಯಲ್ಲಿ ಆಳದ ಗಿಡವೊಂದು ಯಾರಿಗೂ ತಿಳಿಯದಂತೆ ಹುಟ್ಟಿಬಿಡುತ್ತದೆ. ಹಾಗೆಯೇ ದುಂಬಿ ಹೊಡೆದ ತೆಂಗಿನಕಾಯಿ ಗಲಾಟೆ ಆಕ್ರಂದನವಿಲ್ಲದೆ ಒಣಗಿ ಸತ್ತುಬಿಡುತ್ತದೆ. ಆದರೆ ಯಾವುದೇ ಗಿಡ ಸಾವಿನ ಭಯದಲ್ಲಿ ಎಂದೂ ಬದುಕುವುದಿಲ್ಲ. ಅದು ಬೇಕಾದರೆ ಬೆಂಗಳೂರಿನ ಪಾರ್ಕಿನಲ್ಲಿಯೇ ಇರಲಿ ಅಥವಾ ಜೋಗ ಜಲಪಾತದ ನೀರಿನ ಮಧ್ಯದಲ್ಲಿಯೇ ಇರಲಿ. ಮರಗಳೆಂದೂ ವಯಸ್ಸಾಗಿದೆ ಎಂದು ಬೇಸರಿಸುವುದಿಲ್ಲ! ಮರಕ್ಕೆ ನಮ್ಮಂತೆ ಸಾವಿರದೆಂಟು ನರಮಂಡಲ ವ್ಯವಸ್ಥೆ ಇಲ್ಲದಿರಬಹುದು. ಹಾಗಾಗಿ ಅವುಗಳಿಗೆ ನಮ್ಮಂತೆ ನೋವಿನ ಅನುಭವ ಆಗುವುದಿಲ್ಲ ಎಂಬುದನ್ನೂ ಒಪ್ಪೋಣ. ಆದರೆ ಜೀವ ಪ್ರಜ್ಞೆಯಂತೂ ಇದೆ. ಆ ಪ್ರಜ್ಞೆ ಇದ್ದು ಕೂಡ ಅವು ಸಮಯ ಬಂದಾಗ ನಿರ್ಮಿಸಲು ಅಂಜುವುದಿಲ್ಲ. ಅವುಗಳದು ಬದುಕುವಾಗಿನ ಗಟ್ಟಿತನ. ಸಾವಿನ ಸಮಯ ಬಂದಾಗ ಅಷ್ಟೇ ನಮ್ರತೆಯಿಂದ ಅದನ್ನು ಸ್ವೀಕರಿಸುವ, ಒಪ್ಪಿ ಆಲಿಂಗಿಸುವ ಪ್ರಜ್ಞೆ. ಮನುಷ್ಯ, ಪ್ರಾಣಿಗಳಿಗೆ ಮಾತ್ರ ತಿಳಿವಳಿಕೆ ಇದೆ, ಸಸ್ಯಗಳಲ್ಲಿ ತಿಳಿವಳಿಕೆಯಿಲ್ಲ ಆದರೆ ಅವು ಪ್ರತಿಕ್ರಿಯಿಸಬಲ್ಲವು ಎಂಬುದು ಇಂದಿನ ವಿಜ್ಞಾನ. ಆದರೆ ಇಲ್ಲೊಂದು ಸಮಸ್ಯೆಯಿದೆ. 'ಪ್ರಜ್ಞೆ', 'ಅರಿವು' ಇವುಗಳ ಬಗೆಗಿನ ನಮ್ಮ ತಿಳಿವಳಿಕೆ ಮನುಷ್ಯಕೇಂದ್ರಿತ.

ಸಸ್ಯಗಳಿಗೆ ನಾವಂದುಕೊಂಡ, ನಮ್ಮ ಅನುಭವಕ್ಕೆ ಬರುವ ಪ್ರಜ್ಞೆ ಇರದಿರಬಹುದು. ನಮಗೆ ತಿಳಿದಿಲ್ಲ ಹಾಗಾಗಿ ಅದು ಇಲ್ಲ ಎಂಬುದು ಆಧುನಿಕ ವಿಜ್ಞಾನದ ದೊಡ್ಡ ರೋಗ. ಮರಕ್ಕಿರುವ ಜೀವ ಮತ್ತು ಜೀವೋತ್ತರ ಪ್ರಜ್ಞೆ ನಮಗಿನ್ನೂ ಸರಿಯಾಗಿ ಅರ್ಥವಾಗಿಲ್ಲ ಬಿಡಿ !!

ನೋಟಿಸ್ ಗದ್ದಲಕ್ಕೆ ತೆರೆ, ಯುಪಿಐ ನಿರಾಕರಿಸದಿರಿ ಪ್ಲೀಸ್!

ಮನಿ ಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಕೊನೆಗೂ ರಾಜ್ಯದಲ್ಲಿ ಜಿಎಸ್‌ಟಿ ಗದ್ದಲಕ್ಕೆ ತೆರೆ ಬಿದ್ದಿದೆ. 9,000ಕ್ಕೂ ಹೆಚ್ಚು ವ್ಯಾಪಾರಸ್ಥರು ನಿರಾಳರಾಗಿದ್ದಾರೆ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಣ್ಣ ವರ್ತಕರ ಸಂಘಟನೆಗಳ ಜತೆ ಮಾತುಕತೆ ನಡೆಸಿ, ಯಾವುದೇ ಕಾರಣಕ್ಕೂ ತೊಂದರೆ ಆಗದಂತೆ ನೋಡಿಕೊಳ್ಳುವುದಾಗಿ ತಿಳಿಸಿದ್ದಾರೆ. 2021ರಿಂದ ತೆರಿಗೆ ಬಾಕಿಯ ವಸೂಲಾತಿಯೂ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ವಿನಾಯಿತಿ ಇರುವ ವಸ್ತುಗಳನ್ನು ಮಾರಾಟ ಮಾಡುವವರನ್ನು ಹೊರತುಪಡಿಸಿ, ಇತರರು ವರ್ಷಕ್ಕೆ 40 ಲಕ್ಷ ರುಪಾಯಿಗಿಂತ ಹೆಚ್ಚು ವ್ಯವಹಾರ ನಡೆಸುತ್ತಿದ್ದರೆ ಜಿಎಸ್‌ಟಿ ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕು ಎಂಬ ಕಾನೂನು ಅಂಶಗಳನ್ನು ವಿವರಿಸುವುದರೊಂದಿಗೆ ಗದ್ದಲಕ್ಕೆ ತೆರೆ ಬಿದ್ದಿದೆ. ಮುಷ್ಕರದ ನಿರ್ಧಾರವನ್ನು ಸಣ್ಣ ವ್ಯಾಪಾರಿಗಳು ಕೈಬಿಟ್ಟಿದ್ದಾರೆ. ಆದರೆ ಈ ಘಟನೆ ಹಲವಾರು ಪಾಠಗಳನ್ನು ಕಲಿಸಿದೆ. ಅದನ್ನು ಸರಕಾರಗಳು, ಸಣ್ಣ ವ್ಯಾಪಾರಿಗಳು ಮನನ ಮಾಡಿಕೊಂಡು ಮತ್ತಷ್ಟು ಸುಧಾರಣೆಗೊಳಿಸಿ ಮುಂದುವರಿಸಬೇಕಾಗಿದೆ. ಮತ್ತೆ ನಗದು ಬಳಕೆಯ ಗತಕಾಲಕ್ಕೆ ಹೆಜ್ಜೆಯನ್ನು ಇಡುವುದು ಬೇಡವೇ ಬೇಡ. ಯುಪಿಐ ಮತ್ತು ಜಿಎಸ್‌ಟಿಯ ಬಳಕೆಯು ಎಲ್ಲರಿಗೂ ಅನುಕೂಲವೇ ಹೊರತು ಅಪಾಯಕಾರಿಯಲ್ಲ.

ಮುಂದಿನ ದಿನಗಳಲ್ಲಿ ಪ್ರೈಮರಿ ಕಮಾಡಿಟಿ ಅಥವಾ ಪ್ರಿನ್ಸಿಪಲ್ ಕಮಾಡಿಟಿಗಳ ಮಾರಾಟದ ಜತೆಗೆ ಉಳಿದ ಹಲವಾರು ವಸ್ತುಗಳು ಮಾರಾಟಕ್ಕಿದ್ದರೂ, ಉದಾರವಾಗಿ ಸ್ಪಂದಿಸಲಾಗುವುದು ಎಂದು ಸರಕಾರ ಭರವಸೆ ನೀಡಿದೆ. ಉದಾಹರಣೆಗೆ ಒಬ್ಬ ವ್ಯಕ್ತಿ ಮುಖ್ಯವಾಗಿ ಹಾಲಿನ ಅಂಗಡಿ ಇಟ್ಟಿದ್ದಾನೆ ಎಂದಿಟ್ಟುಕೊಳ್ಳಿ. ಅಲ್ಲಿ ಹಾಲೇ ಪ್ರಿನ್ಸಿಪಲ್ ಕಮಾಡಿಟಿ, ಪ್ರಧಾನ ವಸ್ತು. ಅದಕ್ಕೆ ಸರಕಾರದ ವಿನಾಯಿತಿ ಇದೆ. ಆದರೆ ಅದರ ಜತೆಗೆ ಒಂದಷ್ಟು ಜ್ಯೂಸ್, ಕುರುಕಲು ತಿಂಡಿಗಳನ್ನು ಮಾರಾಟಕ್ಕೆ ಇಟ್ಟಿದ್ದರೂ, ಇನ್ನು ಮುಂದೆ ವ್ಯಾಪಾರಿ ಆತಂಕಪಡಬೇಕಿಲ್ಲ. ಏಕೆಂದರೆ ಅವುಗಳಿಗೆ ಟ್ಯಾಕ್ಸ್ ಸಂಗ್ರಹಿಸಬೇಕಿಲ್ಲ ಎಂದು ಸರಕಾರ ತಿಳಿಸಿದೆ. ಇಂಥ ಉಪಯುಕ್ತ ಮಾಹಿತಿಗಳು ಜನರಿಗೆ ಈಗ ಬೇಕಾಗಿದೆ. ಆಗ ಗೊಂದಲಗಳು ಪರಿಹಾರವಾಗಿ ಬಿಕ್ಕಟ್ಟು ತಿಳಿಯಾಗುತ್ತದೆ.

'ಯುಪಿಐ ಬೇಡ, ಕ್ಯಾಶ್ ಕೊಡ್ರಪ್ಪಾ' ಎಂದು ವ್ಯಾಪಾರಿಗಳು ಹೊಸ ರಗಳೆಯನ್ನು ಸೃಷ್ಟಿಸಿದರೆ ಏನಾಗಲಿದೆ? ಕ್ರಮೇಣ ಅವರ ಬಿಸಿನೆಸ್‌ಗೇ ಹೊಡೆತ ಬೀಳುವುದು ಪಕ್ಕಾ. ಏಕೆಂದರೆ ಗ್ರಾಹಕರಿಗೆ ಬೇರೆ ಆಯ್ಕೆಗಳು ಸಾಕಷ್ಟಿವೆ. ನಾವೀಗ ನಗದುರಹಿತ ಆರ್ಥಿಕ ವ್ಯವಸ್ಥೆಯತ್ತ ಭರದಿಂದ ಸಾಗುತ್ತಿದ್ದೇವೆ. ಇಲ್ಲಿ ನಗದನ್ನು ಹೆಚ್ಚು ದಿನ ಕದ್ದುಮುಚ್ಚಿ ಬಳಸುವುದು ಕಷ್ಟಕರವಾಗಲಿದೆ. ವಾಣಿಜ್ಯ ತೆರಿಗೆ ಇಲಾಖೆಯ ಕಣ್ಣಿಂದ ನೀವು ತಪ್ಪಿಸಿಕೊಂಡಿರುವಿರಿ ಎಂದಾದರೆ ಅದು ನಿಮ್ಮ ತಪ್ಪಾಗಬಹುದು. ಭವಿಷ್ಯದಲ್ಲಿ ಆದಾಯ ತೆರಿಗೆ ಇಲಾಖೆಯ ಕಣ್ಣಿಗೆ ನಿಮ್ಮ ದುಬಾರಿ ಖರ್ಚು ವೆಚ್ಚಗಳು ಬೀಳಬಹುದು. ಆಗ ನಗದು ಇದ್ದರೂ, ಬಳಸಲಾಗದಿದ್ದರೆ ಏನುಪಯೋಗ? ಹಾಲು, ಹಣ್ಣು, ತರಕಾರಿ, ಎಳನೀರು ಮಾರಾಟ ಮಾಡುವವರಿಗೆ ಜಿಎಸ್‌ಟಿ ಇಲ್ಲವಾದ್ದರಿಂದ ನಗದು ಬಳಸಿದರೆ ತೊಂದರೆಯಾಗಲು ಹೇಗೆ ಸಾಧ್ಯ?

ಇವತ್ತು ಜನ ಕ್ಯಾಶನ್ನು ಮರೆತರೂ ಜೀವನ ನಡೆಸಬಹುದು ಎನ್ನುವಷ್ಟರಮಟ್ಟಿಗೆ ಯುಪಿಐ ಜನಪ್ರಿಯವಾಗಿದೆ. ಫೋನ್ ಪೇ, ಗೂಗಲ್ ಪೇ, ಪೇಟಿಎಂ, ಸರಕಾರಿ ಸ್ವಾಮ್ಯದ ಭೀಮ್ ಹೀಗೆ ಎಷ್ಟೊಂದು ಆಯ್ಕೆಗಳು ಜನರ ಮುಂದಿವೆ! ಹೀಗಾಗಿ ಇವತ್ತು ಎಟಿಎಂ ಮುಂದೆ 'ನೋ ಕ್ಯಾಶ್' ಬೋರ್ಡ್ ಹಾಕಿದ್ದರೂ, ಸಾರ್ವಜನಿಕರು ನಿಶ್ಚಿಂತೆಯಿಂದ ಇದ್ದಾರೆ. ಈಗಿನ ಟ್ರೆಂಡ್ ಗಮನಿಸಿದರೆ ಇನ್ನೂ ಹತ್ತು ವರ್ಷ ಕಳೆದಾಗ, ನಗದು ಬಳಕೆ ಮತ್ತಷ್ಟು ಇಳಿಮುಖವಾಗುವುದು, ವ್ಯಾಪಾರಾದಿಗಳು ಬಹುತೇಕ ಔಪಚಾರಿಕವಾಗುವುದು ನಿಶ್ಚಿತ. ಆದರೆ ಒಂದು ವೇಳೆ ವರ್ತಕ ಸಮುದಾಯವು ಯುಪಿಐ ಬಳಕೆಗೆ ತಿಲಾಂಜಲಿ ಇತ್ತು 'ಕ್ಯಾಶ್ ಕೊಡಿ' ಎಂದು ಕುಳಿತರೆ ಜನರಿಗೆ ಆಗುವ ತೊಂದರೆಯನ್ನು ಕೇಳುವವರು ಯಾರು? ಎಟಿಎಂ

ನಲ್ಲಿ ಎಷ್ಟೋ ಸಲ ನಗದು ಇರುವುದಿಲ್ಲ. ಚಿಲ್ಲರೆ ಎಲ್ಲಿಂದ ತರುವುದು ಎಂಬ ಪ್ರಶ್ನೆ ಧುತ್ತನೆ ಎದುರಾಗುತ್ತದೆ. ಆದರೆ ಇವಿಷ್ಟೇ ಅಲ್ಲ, ಇದರ ಆಯಾಮ ಹತ್ತಾರು. ಮತ್ತೆ ನಗದು ವ್ಯವಸ್ಥೆಗೆ ಹಿಂತಿರುಗುವುದು ಎಂದರೆ ತೆರಿಗೆ ಸೋರಿಕೆ, ವಂಚನೆಗೂ ಒಂದು ಹಂತದ ತನಕ ಅದು ಎಡೆಮಾಡಿಕೊಡುತ್ತದೆ. ನೋಟುಗಳ ಚಲಾವಣೆ ಪ್ರಬಲವಾಗಿದ್ದಾಗ, ಮೂಲವನ್ನು ಪತ್ತೆ ಹಚ್ಚುವುದು ಕಷ್ಟವಾಗುತ್ತಿತ್ತು. ಆದರೆ ಭವಿಷ್ಯ ಇದೇ ರೀತಿ ಇರುವುದಿಲ್ಲ ಎಂಬುದನ್ನು ಮರೆಯುವಂತಿಲ್ಲ. ವಾರ್ಷಿಕ 40 ಲಕ್ಷ ರು. ವ್ಯವಹಾರ ದಾಟಿದ ಬಳಿಕ ಜಿಎಸ್‌ಟಿ ಅಡಿಯಲ್ಲಿ ನೋಂದಣಿಯಾಗುವುದರಿಂದ ಲಾಭವೂ ಇದೆ. ಮುಖ್ಯವಾಗಿ ವ್ಯಾಪಾರ ಸಂಘಟಿತವಾಗುತ್ತದೆ. ವಹಿವಾಟಿನ ಲೆಕ್ಕಾಚಾರಗಳು ನಡೆಸುವವರ ಕೈಯಲ್ಲೇ ಇರುತ್ತದೆ. ಜತೆಗೆ ಅದರ ಆಧಾರದಲ್ಲಿ ಸಾಲ ಪಡೆಯಲೂ ಅನುಕೂಲವಾಗುತ್ತದೆ. ಹಾಗೂ ಜಿಎಸ್‌ಟಿದಾರನಾಗಿ ದೇಶದ ಅಭಿವೃದ್ಧಿಯಲ್ಲಿ ಕೊಡುಗೆ ಸಲ್ಲಿಸಿದ ಹೆಮ್ಮೆಯೂ ನಿಮ್ಮದಾಗುತ್ತದೆ. ನೋಟುಗಳ ಬಳಕೆ ಹೆಚ್ಚು ಇದ್ದಾಗ ಚೀಟಿ ವ್ಯವಹಾರಗಳು ಹೆಚ್ಚು, ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಅನೇಕ ಮಂದಿ ಅಮಾಯಕರು, ಚೀಟಿ ವ್ಯವಹಾರದಲ್ಲಿ ನಡೆಯುವ ಅಕ್ರಮಗಳಿಂದ ಉಳಿತಾಯದ ಹಣವನ್ನೂ ಕಳೆದುಕೊಂಡಿದ್ದಾರೆ. ಅವರೆಲ್ಲ ಸುರಕ್ಷಿತ ಹೂಡಿಕೆಯ ಸಾಧನಗಳನ್ನು ಆಯ್ಕೆ ಮಾಡಿಕೊಳ್ಳಲು ಆನ್‌ಲೈನ್ ಹಣಕಾಸು ವರ್ಗಾವಣೆಗಳು ಪುಷ್ಟಿ ನೀಡುತ್ತವೆ.

ಇಲ್ಲೊಂದು ಅಂಶವನ್ನು ಗಮನಿಸಬೇಕು. ಇದು ಸರಳ ವಿಚಾರ. ಯಾರು ವರ್ಷಕ್ಕೆ 40 ಲಕ್ಷ ರುಪಾಯಿಗಿಂತ ಹೆಚ್ಚು ಉತ್ಪನ್ನಗಳು ಅಥವಾ ವಸ್ತುಗಳನ್ನು ಮಾರಾಟ ಮಾಡುತ್ತಾರೆಯೋ, ಅವರು ಸರಕು ಮತ್ತು ಸೇವಾ ತೆರಿಗೆ ಅಥವಾ ಜಿಎಸ್‌ಟಿ ವ್ಯಾಪ್ತಿಗೆ ಬರಬೇಕು ಹಾಗೂ ಜಿಎಸ್‌ಟಿಯನ್ನು ಸಂಗ್ರಹಿಸಿ ಸರಕಾರಗಳಿಗೆ ಕೊಡಬೇಕು. ಅದರಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಪಾಲು ಹೋಗುತ್ತದೆ. ಒಂದು ವೇಳೆ ಸೇವೆಗಳ ಮಾರಾಟ ವಲಯದಲ್ಲಿ ಇದ್ದರೆ, ವರ್ಷಕ್ಕೆ 20 ಲಕ್ಷ ರುಪಾಯಿಗಿಂತ ಹೆಚ್ಚು ವಹಿವಾಟು ನಡೆಸುತ್ತಿದ್ದರೆ, ಅವರೂ ಜಿಎಸ್‌ಟಿಯ ವ್ಯಾಪ್ತಿಗೆ ಒಳಪಡುತ್ತಾರೆ. ಇದು ಕಾನೂನು. ಈ ಮಿತಿಯನ್ನು ಮತ್ತಷ್ಟು ವಿಸ್ತರಿಸಬೇಕು ಎಂಬ ಬೇಡಿಕೆ ಇದೆ. ಅದು ಬೇರೆ ವಿಚಾರ.

ಹಾಗೆಯೇ ಜಿಎಸ್‌ಟಿ ಅಡಿಯಲ್ಲಿಯೇ ರಾಜಿ ತೆರಿಗೆ ಎಂಬ ವಿಧವಿದೆ. ಇದನ್ನು ಕಂಪೋಸಿಷನ್ ಸ್ಕೀಮ್ ಎಂದು ಕರೆಯುತ್ತಾರೆ. ಇದರ ಅಡಿಯಲ್ಲಿ ವ್ಯಾಪಾರಿಗಳು ವರ್ಷಕ್ಕೆ 1.50 ಕೋಟಿ ರುಪಾಯಿ ವಹಿವಾಟು ನಡೆಸಿದರೂ, ಕೇವಲ 1 ಪರ್ಸೆಂಟ್ ತೆರಿಗೆ ಸಂಗ್ರಹಿಸಿದರೆ ಸಾಕು. ಅಂದರೆ ಕೇವಲ ಒಂದೂವರೆ ಲಕ್ಷ ರುಪಾಯಿ! ನಿಜ, ಇಲ್ಲೂ ಕೆಲ ಉಪನಿಯಮಗಳು ಇವೆ. ಉದಾಹರಣೆಗೆ ಇದರಲ್ಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸಿಗುವುದಿಲ್ಲ, ಅಂತಾರಾಜ್ಯ ವಹಿವಾಟು ಮಾಡಲಾಗುವುದಿಲ್ಲ. ಪಾನ್ ಮಸಾಲಾ, ತಂಬಾಕು, ಐಸ್ ಕ್ರೀಂ ಮಾರಾಟ ಮಾಡುವವರಿಗೆ ಇದು ಆಗುವುದಿಲ್ಲ ಎಂಬಿತ್ಯಾದಿ. ಆದರೆ ಅಂತಾರಾಜ್ಯ ವ್ಯವಹಾರ ಮಾಡದಿರುವ ಲಕ್ಷಾಂತರ ಸಣ್ಣ ವ್ಯಾಪಾರಿಗಳಿಗೆ ಇದು ವರದಾನ.

ಜಿಎಸ್‌ಟಿಯಿಂದ ವಿನಾಯಿತಿ ಇರುವ ವಸ್ತುಗಳನ್ನು ಯಾರಾದರೂ ಎಷ್ಟು ಬೇಕಾದರೂ, ಮಾರಾಟ ಮಾಡಲಿ, ಕೋಟಿಗಟ್ಟಲೆ ಆದಾಯ ಬಂದರೂ, ಅದಕ್ಕೆ ಈ ತೆರಿಗೆಯನ್ನು ಕಟ್ಟಬೇಕಿಲ್ಲ, ಉದಾಹಣೆಗೆ ಎಳನೀರು, ಹಾಲು, ಬ್ರೆಡ್, ಅಗತ್ಯ ವಸ್ತುಗಳು, ತರಕಾರಿ, ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದರೆ, ಎಷ್ಟೇ ಕೋಟಿ ವ್ಯಾಪಾರವಾದರೂ, ಅಂಥವರು ಜಿಎಸ್‌ಟಿ ರಿಜಿಸ್ಟ್ರೇಶನ್ ಕೂಡ ಮಾಡಬೇಕಿಲ್ಲ, ಇಂಥ ಸಂದರ್ಭದಲ್ಲಿ ಮತ್ತೆ ಅನೌಪಚಾರಿಕ ಇಕಾನಮಿಗೆ ಜಾರುವುದು ದೊಡ್ಡ ದುರಂತಕ್ಕೆ ಕಾರಣವಾಗಬಹುದು. ಆದ್ದರಿಂದ ಜಿಎಸ್‌ಟಿ ಪದ್ಧತಿಯನ್ನು ಉಳಿಸಿಕೊಳ್ಳುವುದು ಮುಖ್ಯ ಎಂಬುದನ್ನು ಯಾರೂ ಮರೆಯಬಾರದು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಸಂಶೋಧಕರ ತಂಡ ಇತ್ತೀಚೆಗೆ ಜಿಎಸ್‌ಟಿಗೆ 8 ವರ್ಷ ಭರ್ತಿಯಾದ ಹಿನ್ನೆಲೆಯಲ್ಲಿ ವರದಿಯೊಂದನ್ನು ಬಿಡುಗಡೆಗೊಳಿಸಿದೆ. ಅದರಲ್ಲಿ ಕರ್ನಾಟಕದಲ್ಲಿ ಉಂಟಾಗಿದ್ದ ವಿವಾದವನ್ನು ಪ್ರಸ್ತಾಪಿಸಿದ್ದರಿಂದ ಸುದ್ದಿಯಾಗಿತ್ತು. ಜಿಎಸ್‌ಟಿ ಸ್ವತಂತ್ರ ಭಾರತದ ಆರ್ಥಿಕ ಇತಿಹಾಸದಲ್ಲಿಯೇ ಮಹತ್ವದ ಪರೋಕ್ಷ ತೆರಿಗೆ ಸುಧಾರಣೆಯಾಗಿದೆ. ಪಾರದರ್ಶಕತೆ, ಏಕರೂಪದ ಮಾರುಕಟ್ಟೆ, ಆದಾಯ ಸಂಗ್ರಹಣೆಯಲ್ಲಿ ಹೆಚ್ಚಳ ಉಂಟುಮಾಡುವುದು ಹಾಗೂ ಅನೌಪಚಾರಿಕ ವ್ಯಾಪಾರಗಳನ್ನು ಸಂಘಟಿತಗೊಳಿಸುವುದು ಇದರ ಉದ್ದೇಶವಾಗಿದೆ. ಈ ಉದ್ದೇಶಗಳು ಈಡೇರುತ್ತಿರುವುದರ ಬಗ್ಗೆ ನಾವು ಸಂಭ್ರಮಿಸುತ್ತಿರುವ ಹೊತ್ತಿನಲ್ಲಿಯೇ, ಈಗ ಉಂಟಾಗಿರುವ ಸವಾಲುಗಳ ಬಗ್ಗೆ ಯೋಚಿಸಬೇಕಾಗಿದೆ. ಕರ್ನಾಟಕದಲ್ಲಿ, ಮುಖ್ಯವಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ಅನೇಕ ಮಂದಿ ಸಣ್ಣ ವ್ಯಾಪಾರಿಗಳು, ಬೀದಿ ಬದಿಯ ವರ್ತಕರಿಗೆ, ಅವರ ಯುಪಿಐ ಟ್ರಾನ್ಸಾಕ್ಷನ್‌ಗಳನ್ನು ಆಧರಿಸಿದ ಭಾರಿ ಮೊತ್ತದ ಜಿಎಸ್‌ಟಿ ತೆರಿಗೆ ನೋಟಿಸ್‌ಗಳನ್ನು ಕಳಿಸಿರುವುದರಿಂದ ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ. ಇದು ಕಳವಳಕಾರಿ ಬೆಳವಣಿಗೆಯಾಗಿದೆ ಎಂದು ಎಸ್‌ಬಿಐನ ವರದಿ ಹೇಳಿದೆ.

ಆರ್ಥಿಕ ಚಟುವಟಿಕೆಗಳ ನಿಖರ ಚಿತ್ರಣವನ್ನು ಪಡೆಯುವುದು, ತೆರಿಗೆ ಸೋರಿಕೆಯನ್ನು ತಡೆಯುವುದು ಈ ಜಿಎಸ್‌ಟಿ ನೋಟಿಸ್‌ಗಳ ಹಿಂದಿನ ಉದ್ದೇಶವಾದರೂ, ನೋಟಿಸ್ ಕಳಿಸಿರುವ ರೀತಿಯಲ್ಲಿ ಸಮತೋಲನ ಮತ್ತು ಸಂವೇದನಾಶೀಲತೆ ಇರಲೇಬೇಕಿತ್ತು. ಈ ರೀತಿಯ ತೀಕ್ಷ್ಣ, ಕಠಿಣ ಕ್ರಮಗಳನ್ನು ದಿಢೀರ್ ಕೈಗೊಳ್ಳುವುದರಿಂದ ಸಣ್ಣ ವ್ಯಾಪಾರಿಗಳ ಸಮುದಾಯವು ಮತ್ತೆ ನಗದು ವ್ಯವಹಾರಕ್ಕೆ ಹಿಂತಿರುಗುವ ಸಾಧ್ಯತೆ ಇದೆ. ಇದರಿಂದಾಗಿ ಸಣ್ಣ ವ್ಯಾಪಾರಿಗಳನ್ನು ಔಪಚಾರಿಕ ವಲಯಕ್ಕೆ ಸೇರ್ಪಡೆಗೊಳಿಸುವ ಮೂಲ ಆಶಯಕ್ಕೇ ಧಕ್ಕೆಯಾಗಲಿದೆ ಎಂದು ಎಸ್‌ಬಿಐನ ಸಂಶೋಧನಾ ವರದಿ ಕಳವಳ ವ್ಯಕ್ತಪಡಿಸಿದೆ.

ಜಿಎಸ್‌ಟಿಯ ಹಿಂದೆ ಪಾರದರ್ಶಕತೆ ಮತ್ತು ಕಂದಾಯ ಸೃಷ್ಟಿಯ ಭದ್ರ ಬುನಾದಿಯಿದೆ. ಆದರೆ ಇದು ದೀರ್ಘಕಾಲೀನವಾಗಿ, ಯಶಸ್ವಿಯಾಗಿ ಮುಂದುವರಿಯಬೇಕಿದ್ದರೆ, ಅದರಿಂದ ಎಲ್ಲ ಪಾಲುದಾರರಿಗೂ ಅನುಕೂಲ ಸಿಗುವಂತಿರಬೇಕು. ಯಾರಿಗೂ ಅದರಿಂದ ತೊಂದರೆ ಆಗಬಾರದು. ವಿಶೇಷವಾಗಿ ಸಣ್ಣ ವ್ಯಾಪಾರಿಗಳನ್ನು ದಂಡಿಸುವಂತಿರದೆ, ಅವರನ್ನು ಬಲಪಡಿಸುವಂತಿರಬೇಕು. ಸಮಗ್ರತೆ, ನ್ಯಾಯಸಮ್ಮತ ಅನುಷ್ಠಾನ ಇಲ್ಲಿ ನಿರ್ಣಾಯಕ ಎಂದು ಎಸ್‌ಬಿಐ ವರದಿ ಹೇಳಿದೆ.

ಜಾರಿಯಾಗಿ 5 ವರ್ಷಗಳಲ್ಲಿಯೇ ಜಿಎಸ್‌ಟಿ ಸಂಗ್ರಹದ ಪ್ರಮಾಣ ಡಬಲ್ ಆಗಿದೆ. ಪ್ರತಿ ತಿಂಗಳಿನ ಸರಾಸರಿ ಕಲೆಕ್ಷನ್ 2 ಲಕ್ಷ ಕೋಟಿ ರುಪಾಯಿಗಳಾಗಿವೆ. ಆದ್ದರಿಂದಲೇ ಇದೊಂದು ಕ್ರಾಂತಿಕಾರಕ ಪರೋಕ್ಷ ತೆರಿಗೆಯಾಗಿದೆ. ಇದೇ ನೂರಕ್ಕೆ ನೂರು ಪರಿಪೂರ್ಣ ಎಂದಲ್ಲ. ಆದರೆ ಸುಧಾರಣೆಗೆ ಅವಕಾಶ ಇದ್ದೇ ಇದೆ. ಅಂದಹಾಗೆ ಜಿಎಸ್‌ಟಿ ಸಂಗ್ರಹದಲ್ಲಿ ಟಾಪ್ 5ರಲ್ಲಿರುವ ರಾಜ್ಯಗಳೆಂದರೆ, ಮಹಾರಾಷ್ಟ್ರ, ಕರ್ನಾಟಕ, ಗುಜರಾತ್, ತಮಿಳುನಾಡು ಮತ್ತು ಹರಿಯಾಣ.

ಸ್ವಾರಸ್ಯವೇನೆಂದರೆ ಸಣ್ಣ ವ್ಯಾಪಾರಿಗಳ ಸಂಖ್ಯೆ ಹೆಚ್ಚು, ಪಬ್ಲಿಕ್ ಮತ್ತು ಪ್ರೈವೇಟ್ ಲಿಮಿಟೆಡ್ ಕಂಪನಿಗಳ ಸಂಖ್ಯೆ ಕಡಿಮೆ. ಆದರೆ ಜಿಎಸ್‌ಟಿ ಆದಾಯದ ಸಂಗ್ರಹಣೆಯಲ್ಲಿ ಹೆಚ್ಚು ಪಾಲು ಕೊಡುವವರು ಪಬ್ಲಿಕ್ (ಶೇಕಡಾ 34.83) ಮತ್ತು ಪ್ರೈವೇಟ್ ಲಿಮಿಟೆಡ್ (ಶೇಕಡಾ 27.94) ಕಂಪನಿಗಳು. ಮೂರನೇ ಸ್ಥಾನದಲ್ಲಿ ಪ್ರೊಪ್ರೈಟರ್‌ಶಿಪ್ (13.28) ಅಥವಾ ಸಣ್ಣ ವ್ಯಾಪಾರಿಗಳು ಬರುತ್ತಾರೆ. ಇರಲಿ, ಇನ್ನಾದರೂ ಯುಪಿಐಗೆ ಬೆನ್ನು ಹಾಕದಿರಲಿ.

ಇಲ್ಲಿದೆ ನೋಡಿ, ಹಬ್ಬದೂಟದ ಮೆನುಕಾರ್ಡ್

ವಿಭಿನ್ನ ವಿಷಯಗಳ ಕುರಿತಾದ ಹಲವು ಮೌಲಿಕ ಪುಸ್ತಕಗಳನ್ನು ಪ್ರಕಟಿಸಿರುವ ಹೆಗ್ಗಳಿಕೆಯ 'ವಿಶ್ವವಾಣಿ ಪುಸ್ತಕ' ಪ್ರಕಾಶನವು ಶನಿವಾರ (ಜುಲೈ 26ರಂದು) ಪುಸ್ತಕ ಪ್ರೇಮಿಗಳಿಗೆ ಮತ್ತೊಂದು ಹಬ್ಬದೂಟವನ್ನು ಬಡಿಸಲಿದೆ. ಅಂದರೆ, ಈ ಪ್ರಕಾಶನದ ವತಿಯಿಂದ ಮತ್ತಷ್ಟು ಪುಸ್ತಕಗಳು ಅಂದು ಬಿಡುಗಡೆಯಾಗಲಿವೆ. ಈಗಾಗಲೇ ನಾಡಿನ ವಿವಿಧೆಡೆ ಘಮಘಮಿಸುತ್ತಿರುವ 'ವಿಶ್ವವಾಣಿ ಪುಸ್ತಕ' ಪ್ರಕಾಶನದ ಚಿತ್ತಾಕರ್ಷಕ 'ಕೃತಿಸುಮ'ಗಳ ಸಾಲಿಗೆ ಸೇರಲಿರುವ ಈ ಪುಸ್ತಕಗಳ ಕುರಿತಾದ ಒಂದು ಪಕ್ಷಿನೋಟ ಇಲ್ಲಿದೆ. ಇದು ನಿಮಗಾಗಿ, ನಿಮ್ಮ ಅವಗಾಹನೆಗಾಗಿ..

ಉಭಯದೇಶವಾಸಿ

ಲೇಖಕರು: ಕಿರಣ್ ಉಪಾಧ್ಯಾಯ

(ಬೆಲೆ: 250 ರು.)



ವಿದೇಶವಾಸಿ, ಪರದೇಶವಾಸಿ, ಹೊರದೇಶವಾಸಿ, ದೂರದೇಶವಾಸಿ... ಇದೀಗ 'ಉಭಯದೇಶವಾಸಿ'. ಕಿರಣ್ ಉಪಾಧ್ಯಾಯ ಅವರ ಮುಂದಿನ ಪುಸ್ತಕದ ಶೀರ್ಷಿಕೆ ಏನಿದ್ದಿರಬಹುದು? ಎಂಬ ಬಗ್ಗೆ ಅನೇಕರಿಗೆ ಕುತೂಹಲವಿದೆ, ಇರಲಿ. ಬಹ್ರೈನ್ ದೇಶದಲ್ಲಿ ನೆಲೆಸಿರುವ ಕಿರಣ್ ಮೂಲತಃ ಉದ್ಯಮಿ ಹಾಗೂ ಪ್ರವೃತ್ತಿಯಲ್ಲಿ ಅಂಕಣಕಾರರು. ಅವರ ಈ ಎಲ್ಲ ಕೃತಿಗಳೂ 'ವಿಶ್ವವಾಣಿ ಪುಸ್ತಕ' ಪ್ರಕಾಶನದಿಂದ ಬೆಳಕು ಕಂಡಿವೆ ಎಂಬುದು ಸಂತಸದ ಸಂಗತಿ. ಕಿರಣ್ ಸದಾ ಸಕಾರಾತ್ಮಕ ಮತ್ತು ಕ್ರಿಯಾಶೀಲ. ಓದು, ಶೋಧ, ಅಧ್ಯಯನ, ಹರಟೆ, ಪ್ರವಾಸ ವೃತ್ತಿಯ ಆಚೆ ಕಿರಣ್‌ಗೆ ತಾಕಿದ 'ಅಂಟುರೋಗ'ಗಳು. ವಿದೇಶದಲ್ಲಿದ್ದರೂ ತಾವೊಬ್ಬ ಭಾರತೀಯ ಪ್ರಜೆ ಎಂಬ ದೇಶಾಭಿಮಾನದಿಂದ ಪ್ರತಿ ಚುನಾವಣೆಗೂ ಲಕ್ಷಾಂತರ ಖರ್ಚುಮಾಡಿಕೊಂಡು ಬಂದು ಮತ ಚಲಾಯಿಸುವ ಜವಾಬ್ದಾರಿಯುತ ಮತದಾರ! ಇನ್ನು 'ಉಭಯದೇಶವಾಸಿ' ಕೃತಿಯ ಬಗ್ಗೆ ಹೇಳುವುದಾದರೆ, ಉಭಯ ಎಂದರೆ ಎರಡು. ವಿಜ್ಞಾನದ ಪ್ರಕಾರ ನೀರು, ನೆಲದಲ್ಲಿ ವಾಸಿಸುವ ಜೀವಿಗಳನ್ನು 'ಉಭಯವಾಸಿ' ಅಂತೀವಿ. ಆದರೆ ಕಿರಣ್ ದೇಶ-ವಿದೇಶದಲ್ಲಿ ವಾಸಿಸುತ್ತಲೇ ಎರಡೂ ದೇಶಗಳ ಕೊಂಡಿಯಂತೆ ಇಲ್ಲಿನ ಬರಹಗಳನ್ನು ರೂಪಿಸಿದ್ದಾರೆ. ವ್ಯಾಪಾರ, ವ್ಯವಹಾರ, ಸುತ್ತಾಟ, ಸಂಸಾರ... ಈ ಎಲ್ಲ ಜಂಜಾಟಗಳ ನಡುವೆಯೂ ಅಪ್ಪಟ ಅಕ್ಷರಪ್ರೀತಿಯನ್ನು ಇಟ್ಟುಕೊಂಡಿರುವುದಕ್ಕೆ ನಿದರ್ಶನ ಕಿರಣ್ ಅವರ 'ಉಭಯದೇಶವಾಸಿ' ಕೃತಿ. ವಿದೇಶದಲ್ಲಿದ್ದರೂ ತಾಯ್ನೆಲದೊಂದಿಗೆ ತಾಯಿಬೇರಿನ ಕಕ್ಕುಲತೆ ಇಟ್ಟುಕೊಂಡಿರುವ ಕಿರಣ್ ಅಭಿನಂದನಾರ್ಹರು.

ಸಂಪಾದಕರ ಸದ್ಯಶೋಧನೆ-8

ಲೇಖಕರು: ವಿಶ್ವೇಶ್ವರ ಭಟ್

(ಬೆಲೆ: 250 ರು.)



ಸಂಪಾದಕನಾದವನು ಓದಬೇಕು ಹಾಗೂ ಬರೆಯಬೇಕು. ಇವೆರಡರ ಮಧ್ಯೆ ಸಮಯ ಮಾಡಿಕೊಂಡು ಸಂಶೋಧನೆ, ಅಧ್ಯಯನ, ವಿವಿಧ ರಂಗಗಳ ಜನರ ಭೇಟಿ ಮತ್ತು ಪ್ರವಾಸವನ್ನು ಮಾಡಬೇಕು. ಇವೇನೂ ವಿಶೇಷ ಗುಣಗಳಲ್ಲ. ಸಂಪಾದಕ ಇರಬೇಕಾ ದುದೇ ಹಾಗೆ. ಆಗಲೇ ನಿರಂತರವಾಗಿ ಬರೆಯಲು ಸಾಧ್ಯ. ಇಲ್ಲದಿದ್ದರೆ ಬರವಣಿಗೆ ಶುಷ್ಕವಾಗುತ್ತದೆ, ಸೋಲುತ್ತದೆ. ಅವನ್ನು ಒಂದು ತಪಸ್ಸಿನಂತೆ ಪಾಲಿಸಿದರೆ, ದೈನಂದಿನ ಅಂಕಣ ಬರೆಯುವ ಆತ್ಮವಿಶ್ವಾಸ ಮೂಡುತ್ತದೆ. ಅಂಕಣ ಬರೆಯುವ ಸಂಪಾದಕನಿಗೆ ತನ್ನ ಅನುಭವವೇ ಮೂಲದ್ರವ್ಯ. ಸುಮಾರು ಅರ್ಧ ಶತಮಾನ ಕಾಲ ಜಗತ್ತಿನ ನೂರಾರು ಪತ್ರಿಕೆಗಳಿಗೆ ಅಂಕಣ ಬರೆದ ಆರ್ಟ್ ಬುಕ್ವಾಲ್ಡ್ ಒಂದೆಡೆ, I am working when I am fighting with my wife. I constantly ask myself- how can I use this stuff to literary advantage ಎಂದು ಬರೆಯುತ್ತಾನೆ. ಆತ ಹೆಂಡತಿಯೊಂದಿಗಿನ ಕ್ಷುಲ್ಲಕ ಜಗಳವನ್ನೂ ತನ್ನ ಅಂಕಣದಲ್ಲಿ ಸ್ವಾರಸ್ಯದ ಸರಕಾಗಿಸುತ್ತಿದ್ದ. ಬರಹ ಬಹು ಆಯಾಮ ಪಡೆಯುವುದು ಆಗಲೇ. ದೈನಂದಿನ ಅಂಕಣ ಬರೆಯುವಾಗ ಪ್ರತಿದಿನವೂ 'ತಲೆ ಮೇಲೆ ಸೇಬು ಹಣ್ಣು ಬೀಳುವುದಿಲ್ಲ'. ಆದರೆ ಓದುಗರ ಮುಂದೆ ನೆಪಗಳನ್ನು ಹೇಳಲಾಗುವುದಿಲ್ಲ. ಪ್ರತಿದಿನವೂ ಓದುಗರಿಗೆ 'ಯುರೇಕಾ' ಕ್ಷಣಗಳನ್ನು ಕಟ್ಟಿಕೊಡಬೇಕಾದುದು ಅಂಕಣಕಾರನ ಕರ್ತವ್ಯ. The number one rule of thieves is that nothing is too small to steal. ಈ ಮಾತು ಅಂಕಣಕಾರನಿಗೂ ಅನ್ವಯ. ಆತನಿಗೆ ಯಾವ ವಿಷಯವೂ ವರ್ಜ್ಯವಲ್ಲ. ಎಲ್ಲ ವಿಷಯಗಳನ್ನು ತುಂಬಿಕೊಳ್ಳುತ್ತಾ ಹೋಗಬೇಕು. ತುಂಬಿಕೊಳ್ಳು ವಾಗಲೇ ಪ್ರತ್ಯೇಕಿಸಿ (Segregate) ತುಂಬಿಕೊಳ್ಳುವುದು ಕಸವನ್ನು ಮಾತ್ರ. ಈ ಕೃತಿ ಓದುವಾಗ, ನಿಮಗೆ ಅನೇಕ ಹೊಸ ಹೊಳಹುಗಳು ಸಿಗಬಹುದು.

ಯಶಸ್ವಿ ಬದುಕಿಗೆ ಸರಳ ಸೂತ್ರಗಳು

ಲೇಖಕರು: ಎಸ್.ಷಡಕ್ಷರಿ

(ಬೆಲೆ: 250 ರು.)



ಈ ಕೃತಿಯ ಬಗ್ಗೆ ವಿಶ್ವೇಶ್ವರ ಭಟ್ಟರು ಹೇಳಿಕೊಂಡಿರುವುದು ಹೀಗೆ: ''ನನ್ನ ಆತ್ಮೀಯ, ಹಿರಿಯ ಮಿತ್ರರಾದ ನಾಡೋಜ ಎಸ್. ಷಡಕ್ಷರಿ ಅವರು ಹೋಟೆಲ್ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದರೂ, ಕನ್ನಡಿಗರಿಗೆ ಹೆಚ್ಚು ಪರಿಚಿತ ಮತ್ತು ಆಪ್ತರಾಗಿರು ವುದು ಅಕ್ಷರೋದ್ಯಮಿ ಯಾಗಿ. ಕಾರಣ, ಸುಮಾರು 16 ವರ್ಷಗಳ ಕಾಲ ನಿರಂತರವಾಗಿ, ಒಂದು ನೆಪ ಹೇಳದೆ ಅವರು, ನಾನು ಸಂಪಾದಕನಾಗಿರುವ ಎಲ್ಲ ಪತ್ರಿಕೆಗಳಲ್ಲಿ ದೈನಂದಿನ ಅಂಕ ಣವನ್ನು ಬರೆದು ಮನೆ ಮಾತಾದವರು. ಷಡಕ್ಷರಿ ಅವರದು ಸದಾ ನಗು ಮುಖ, ಲವಲವಿಕೆಯ ವ್ಯಕ್ತಿತ್ವ. ಅವರು ಇದ್ದಲ್ಲಿ ಹಾಸ್ಯಚಟಾಕಿ, ಸ್ಫೂರ್ತಿದಾಯಕ ಮಾತುಗಳಿಗೆ ಬರವಿಲ್ಲ. ಈ ಗುಣಗಳೇ ನಮ್ಮನ್ನು ಅವರ ಸ್ನೇಹದ ಪರಿಧಿಯೊಳಗೆ ಅಯಾಚಿತವಾಗಿ ಸೇರುವಂತೆ ಮಾಡಿಬಿಡುತ್ತವೆ. ಷಡಕ್ಷರಿಯವರ 'ಕ್ಷಣಹೊತ್ತು ಆಣಿಮುತ್ತು' ಕೃತಿಯ ಮಾರಾಟವು, ಕನ್ನಡ ಪುಸ್ತಕೋದ್ಯಮದಲ್ಲಿ ಒಂದು ಅಪೂರ್ವ ದಾಖಲೆಯೇ. ಈ ಕೃತಿ ಅಸಂಖ್ಯ ಜನರಿಗೆ ಸಾಂತ್ವನ ನೀಡಿ, ಅವರ ಬದುಕನ್ನು ಬದಲಿಸಿಕೊಳ್ಳಲು ಕ್ರಿಯಾವರ್ಧಕವಾಗಿರುವುದು ವಾಸ್ತವ. ಹೊಸವರ್ಷದ ಮೊದಲ ದಿನ 'ವಿಶ್ವವಾಣಿ' ಓದುಗರಿಗಾಗಿ ಅವರು ನೀಡಿದ ಸ್ಫೂರ್ತಿಯ ಗುಚ್ಛವೇ 'ಯಶಸ್ವಿ ಬದುಕಿಗೆ ಸರಳ ಸೂತ್ರಗಳು' ಎಂಬ ಈ ಪುಸ್ತಕ. ಈ ಕೃತಿಯ 'ನುಡಿಮುತ್ತು'ಗಳಲ್ಲಿ ಜೀವನದ ಸಾರವೇ ಅಡಗಿದೆ. ಸರ್ವಜ್ಞನ ತ್ರಿಪದಿ, ಡಿವಿಜಿಯ ಮಂಕುತಿಮ್ಮನ ಕಗ್ಗ, ಶರಣರ ವಚನಗಳು ಹೇಗೆ ನಮ್ಮ ಬದುಕಿನ ದಾರಿದೀಪಗಳಾಗಿವೆಯೋ, ಹಾಗೆ ಷಡಕ್ಷರಿ ಅವರ ಇಲ್ಲಿನ ವಿಚಾರಗಳು ಓದುಗರಿಗೆ ತೋರುದೀಪಗಳಾಗಿವೆ. ವ್ಯಂಗ್ಯ, ವಿಡಂಬನೆ, ಹಾಸ್ಯಲೇಪಿತ, ವಿಚಾರಪೂರ್ಣ ಚಿಕ್ಕ ಚೊಕ್ಕ 'ಯಶಸ್ವಿ ಬದುಕಿಗೆ ಸರಳ ಸೂತ್ರಗಳು' ಓದುಗರ ಮನಸ್ಸಿಗೆ ಹಿತವಾದ ಪ್ರೇರಣೆ ನೀಡಿ, ಮನಸ್ಸಿನ ಮೇಲೆ ಸವಾರಿ ಮಾಡುತ್ತವೆ. ಈ ಸೂತ್ರಗಳು ಸದಾ ಅನುಕರಣೀಯ. ಅದೇ ಈ ಕೃತಿಯ ಸೊಗಸು, ಸಾರ್ಥಕ್ಯ''.

ವಿದೇಶಕಾಲ

ಲೇಖಕರು: ವಿಶ್ವೇಶ್ವರ ಭಟ್

(ಬೆಲೆ: 500 ರು.)



ಈ ಕೃತಿಯ ಕುರಿತು ವಿಶ್ವೇಶ್ವರ ಭಟ್ಟರು ಹೇಳಿರುವ ಮಾತುಗಳಿವು:

''ನನ್ನ ವೃತ್ತಿ ಮತ್ತು ಪ್ರವೃತ್ತಿಗಳು ನೂರಕ್ಕೂ ಹೆಚ್ಚು ದೇಶಗಳಿಗೆ, ಮುನ್ನೂರ ಎಂಬತ್ತಕ್ಕೂ ಹೆಚ್ಚು ಸಲ ಹೋಗುವಂತೆ ಮಾಡಿವೆ. ಒಂದು ದೇಶಕ್ಕೆ ಒಂದೇ ಸಲ ಹೋಗಿದ್ದಿದ್ದರೆ, ಇಷ್ಟೊತ್ತಿಗೆ ನಾನು ಇಡೀ ಜಗತ್ತನ್ನು ಒಂದೂವರೆ ಸಲ ಸುತ್ತಿರುತ್ತಿದ್ದೆ. ಸಾಮಾನ್ಯವಾಗಿ ಯಾರೂ ಹೋಗದ ಸುಡಾನ್, ಬುರುಂಡಿ, ರವಾಂಡ, ಉಗಾಂಡದಂಥ ದೇಶಗಳಿಂದ ಹಿಡಿದು, ಉತ್ತರ ಧ್ರುವಕ್ಕೆ ಹತ್ತಿರವಿರುವ ಐಸ್ಲೆಂಡ್ ತನಕ ಹೋಗಿಬಂದಿದ್ದೇನೆ. ನೋಡಿದ ಪ್ರತಿ ದೇಶವೂ ನನಗೆ ಅಪರೂಪವಾಗಿ, ವಿಶಿಷ್ಟವಾಗಿ ಕಂಡಿದೆ. ಇಸ್ರೇಲ್ ನನ್ನನ್ನು ಹತ್ತು ಸಲ ಬರಮಾಡಿಕೊಂಡಿದೆ. ಇದೊಂದೇ ಕಾರಣಕ್ಕೆ ಸೌದಿ ಅರೇಬಿಯಾ ನನಗೆ 16 ವರ್ಷ ವೀಸಾ ಕೊಟ್ಟಿರಲಿಲ್ಲ. ಒಮಾನಿನ ಭಯಾನಕ ಮರುಭೂಮಿಯಲ್ಲಿ ಸಾವಿರಾರು ಮೈಲು ಪ್ರಯಾಣ ಮಾಡಿ, ನಂತರ ಯೆಮನ್ ಗಡಿ ತನಕ ಗೊತ್ತಿಲ್ಲದೇ ಹೋಗಿದ್ದೆ. ವಾಪಸ್ ಬಂದಿದ್ದೇ ಪುಣ್ಯ. ಉಗಾಂಡ, ಕಾಂಗೋ ಮತ್ತು ರವಾಂಡದ ಗಡಿ ಸಂಧಿಸುವ ವಿರುಂಗಾ ಅರಣ್ಯ ಪ್ರದೇಶದಲ್ಲಿ ಮೌಂಟನ್ ಗೊರಿಲ್ಲಾಗಳನ್ನು ಹಿಂಬಾಲಿಸಿ ಹೋಗಿದ್ದೆ. ಹತ್ತಾರು ಸಾವಿರ ಕಡಲಾಮೆಗಳು ಒಂದೆಡೆ ಮೊಟ್ಟೆ ಇಡುವುದನ್ನು ನೋಡಲೆಂದು ಮಸ್ಕತ್‌ನ ಸುರ್‌ಗೆ ಹೋಗಿದ್ದೆ. ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಜತೆಗೆ 14 ದಿನಗಳ ಕಾಲ ನಾಲ್ಕು ದೇಶಗಳನ್ನು ಸುತ್ತಿ ಬಂದಿದ್ದೇನೆ. ಕಳೆದ 25 ವರ್ಷಗಳಲ್ಲಿ ಅಧಿಕಾರಕ್ಕೆ ಬಂದ ಬಹುತೇಕ ರಾಷ್ಟ್ರಪತಿ, ಪ್ರಧಾನಿ, ವಿದೇಶಾಂಗ ಸಚಿವರ ಜತೆ ಇಪ್ಪತ್ತಕ್ಕೂ ಹೆಚ್ಚು ದೇಶಗಳಿಗೆ ಹೋಗಿದ್ದೇನೆ. ಇಂಥ ನಾಯಕರು ಭಾಗವಹಿಸುವ ಎಲ್ಲ ಅಂತಾರಾಷ್ಟ್ರೀಯ ಶೃಂಗ ಮತ್ತು ಸಮಾವೇಶಗಳ ವರದಿ ಮಾಡಿದ್ದೇನೆ. ಎಷ್ಟೇ ದೇಶ ಸುತ್ತಿದರೂ ನೆರೆಯ ಪಾಕಿಸ್ತಾನಕ್ಕೆ ಹೋಗಿ ಬರುವುದು ಅಷ್ಟು ಸುಲಭವಲ್ಲ. ಅಲ್ಲಿಗೂ ಎರಡು ಸಲ ಹೋಗಿದ್ದೆ. ಲಂಡನ್‌ನಲ್ಲಿ ವಿದ್ಯಾರ್ಥಿಯಾಗಿದ್ದಾಗ ಯುರೋಪಿನ ಬಹುತೇಕ ದೇಶಗಳನ್ನು ನೋಡುವ ಅವಕಾಶ ಒದಗಿಬಂದಿತ್ತು. ಲಕ್ಷಾಂತರ ಪ್ರಾಣಿಗಳು ಗುಳೆ (ಗ್ರೇಟ್ ಮೈಗ್ರೇಶನ್) ಹೋಗುವುದನ್ನು ನೋಡಲೆಂದೇ ಕೀನ್ಯಾದ ಮಸ್ಸೈ ಮರಾಕ್ಕೆ ಹೋಗಿದ್ದೆ. ಉಷ್ಟ್ರಪಕ್ಷಿಗಳ ರೇಸ್ ನೋಡಲು ದಕ್ಷಿಣ ಆಫ್ರಿಕಾದ ಕೇಪ್‌ಟೌನ್ ಕರೆದಿತ್ತು. ಬೆಂಗಳೂರಿನಿಂದ ಸಿಂಗಾಪುರಕ್ಕೆ ಹೋದರೂ, ಹೊರಗೆ ಹೋಗದೇ, ಅಲ್ಲಿನ ಚಾಂಗಿ ಏರ್‌ಪೋರ್ಟಿನಲ್ಲಿ ಮೂರು ದಿನ ಉಳಿದುಬಂದಿದ್ದೆ. ಸೌದಿ ಅರೇಬಿಯಾದ 'ಎಂಡ್ ಆಫ್ ದಿ ವರ್ಲ್ಡ್' ಎಂಬ ತಾಣವನ್ನು ನೋಡಲು ಹೋಗಿ ದಾರಿ ತಪ್ಪಿಸಿಕೊಂಡು ಕಣ್ಮರೆಯಾಗುವುದರಿಂದ ಸ್ವಲ್ಪದರಲ್ಲಿ ಬಚಾವ್ ಆಗಿದ್ದೆ. ಸ್ಲೊವೇಕಿಯ, ಆಸ್ಟ್ರಿಯಾ ಮತ್ತು ಹಂಗರಿ– ಈ ಮೂರೂ ದೇಶಗಳ ಗಡಿ ಸಂಧಿಸುವೆಡೆ ಇಟ್ಟ ಒಂದೇ ಟೇಬಲ್‌ನಲ್ಲಿ ಕಾಫಿ ಕುಡಿದು ಪುಳಕಗೊಂಡಿದ್ದೇನೆ. ಸೀಶೆಲ್ಸ್, ಕೊಸುಮ್ಮೈ, ಕೊಟಕಿನಬಾಲು, ಇಬಿಜ್ಜಾದಂಥ ನಯನಮನೋಹರ ದ್ವೀಪ, ಕೊಪಕಬಾನ, ಪ್ಲಯ ಡಿ ಮುರೊ, ಬನಾನದಂಥ ಬೀಚುಗಳಲ್ಲಿ ವಿಹರಿಸಿದ್ದೇನೆ. ಮೃತ ಸಮುದ್ರ (ಡೆಡ್ ಸೀ)ದಲ್ಲಿ ತೇಲುತ್ತಾ ಪತ್ರಿಕೆ, ಪುಸ್ತಕ ಓದಿದ್ದೇನೆ. ಬರ್ನಾರ್ಡ್ ಶಾ ಹೇಳಿದಂತೆ I deslike feeling at home when I am abroad!. ಒಂದು ವರ್ಷವಂತೂ 192 ದಿನ ವಿದೇಶದಲ್ಲೇ ಕಳೆದಿದ್ದೆ! ಈ ಪುಸ್ತಕ ಆ ಎಲ್ಲ ಸ್ವಾರಸ್ಯಕರ ಕಥನಗಳನ್ನು ಒಳಗೊಂಡಿದೆ. ನಾನು ಇಲ್ಲಿ ಹೇಳಿದ್ದಕ್ಕಿಂತ ಪುಸ್ತಕದಲ್ಲಿ ಹೇಳಿರುವುದೇ ಹೆಚ್ಚು!''

ಜುಲೈ 26 ಶನಿವಾರ
ಸಂಜೆ 5 ಗಂಟೆಗೆ

ಎಫ್‌ಕೆಸಿಸಿಐ ಸಭಾಂಗಣ
ಬೆಂಗಳೂರು

ಲೊಕೇಶನ್‌ಗಾಗಿ ಸ್ಕ್ಯಾನ್ ಮಾಡಿ

ಒಂದೊಳ್ಳೆ ಮಾತು-4

ಲೇಖಕಿ: ರೂಪಾ ಗುರುರಾಜ್

(ಬೆಲೆ: 250 ರು.)

ವಿಶ್ವವಾಣಿ' ಪತ್ರಿಕೆಯಲ್ಲಿ ದೈನಿಕ ಅಂಕಣವನ್ನು ಬರೆಯುತ್ತಿರುವ ರೂಪಾ ಗುರುರಾಜ್ ಅವರ ಬರಹಗಳ ಪುಸ್ತಕವೇ 'ಒಂದೊಳ್ಳೆ ಮಾತು ಭಾಗ-4'. ಈ ಅಂಕಣವನ್ನು ಒಂದು ತಪಸ್ಸೆಂದು ಭಾವಿಸಿರುವ ರೂಪಾ, ಅದನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ರೂಪಾ ಅವರದು ಬಹುಶ್ರುತ ಪ್ರತಿಭೆ. ಅವರು ಉತ್ತಮ ನಿರೂಪಕಿ, ಸಂದರ್ಶಕಿ, ಕಂಠದಾನ ಕಲಾವಿದೆ. 'ವಿಶ್ವವಾಣಿ ಕ್ಲಬ್‌ಹೌಸ್' ನಿರ್ವಾಹಕಿಯಾಗಿ ರೂಪಾ ಮನೆಮಾತು. ಈ ಮಧ್ಯೆ ಬರವಣಿಗೆಯನ್ನೂ ಗಂಭೀರವಾಗಿ ಪರಿಗಣಿಸಿರುವ ರೂಪಾ, 'ಒಂದೊಳ್ಳೆ ಮಾತಿನ' ಮೂಲಕ ತಮ್ಮ ಅಂತಃಸತ್ವ ವನ್ನು ಸಾಬೀತುಪಡಿಸಿದ್ದಾರೆ. ರಾಮಾಯಣ, ಮಹಾ ಭಾರತ, ಭಗವದ್ಗೀತೆ, ಪುರಾಣ, ಉಪನಿಷತ್ತಿನ ಕಥೆ ಗಳನ್ನು ಪ್ರಸಕ್ತ ವಿದ್ಯಮಾನ ಗಳಿಗೆ ಸಮಕಾಲೀನಗೊಳಿಸಿ ಅವರು ಬರೆಯುತ್ತಿರುವುದರಿಂದಾಗಿ ಅವರ ಅಂಕಣ ಆಪ್ತವಾಗಿದೆ. ಪತ್ರಿಕೆಯ ಅಸಂಖ್ಯ ಓದುಗರಿಗೆ 'ಒಂದೊಳ್ಳೆ ಮಾತು' ಅಂಕಣದ ಓದು 'ನಿತ್ಯಕಾಯಕ'ವಾಗಿದೆ. ಸ್ಫೂರ್ತಿದಾಯಕ, ಪ್ರೇರಣಾದಾಯಕ ಹಾಗೂ ಸೋತ ಬದುಕಿನಿಂದ ಗೆಲುವು ಕಂಡುಕೊಳ್ಳುವ ಆತ್ಮವಿಶ್ವಾಸ ಮೂಡಿಸುವ ರೂಪಾ ಅವರ ಅಂಕಣ ನಿಜಕ್ಕೂ ಚೇತೋಹಾರಿ. ಅಂಕಣದ ಹೆಸರೇ ಬರವಣಿಗೆಯ ಆಶಯವಾಗಿರುವಾಗ, ಒಂದೊಳ್ಳೆ ಮಾತನ್ನು ಕೇಳದಿರುವುದಾದರೂ ಹೇಗೆ? ಒಳ್ಳೆಯ ಮಾತು ಯಾರಿಗೆ ತಾನೇ ಇಷ್ಟವಾಗುವುದಿಲ್ಲ? ಇಲ್ಲಿನ ಪ್ರತಿ ಅಧ್ಯಾಯವೂ ಸದಾ ನೆನಪಿಸಿಕೊಳ್ಳಬೇಕಾದ, ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಒಂದು ಅಮೂಲ್ಯ ನೀತಿ-ಸಂದೇಶವನ್ನು ಒಳಗೊಂಡಿರುವುದು ವಿಶೇಷ. Good words cool more than cold water ಎಂಬ ಮಾತಿದೆ. ಇದು ರೂಪಾ ಅವರ ಈ ಕೃತಿಗೆ ಹೆಚ್ಚು ಒಪ್ಪುತ್ತದೆ.

ಆಸ್ಕ್ ದಿ ಎಡಿಟರ್-3

ಲೇಖಕರು: ವಿಶ್ವೇಶ್ವರ ಭಟ್

(ಬೆಲೆ: 250 ರು.)



ಈ ಕೃತಿಯ ಕುರಿತಾಗಿ ಏನಾದರೂ ಹೇಳುವುದಕ್ಕಿಂತ, ಜ್ಯೋತಿಕಾ ಎಂಬಾಕೆ ವಿಶ್ವೇಶ್ವರ ಭಟ್ಟರಿಗೆ ಇ-ಮೇಲ್ ಮೂಲಕ ಕೇಳಿದ ಪ್ರಶ್ನೆ ಹಾಗೂ ಅದಕ್ಕೆ ಭಟ್ಟರು ಉತ್ತರಿಸಿದ ಪರಿಯನ್ನು ನಿಮ್ಮ ಗಮನಕ್ಕೆ ತರುವುದು ಒಳಿತು ಎನಿಸುತ್ತದೆ: **ಪ್ರಶ್ನೆ:** ಸಂಪಾದಕರೇ, ನನ್ನ ಸ್ನೇಹಿತೆ ನಿಮ್ಮ ಪತ್ರಿಕೆಯನ್ನು ಓದುತ್ತಾಳೆ. ನನ್ನದೊಂದು ಸಮಸ್ಯೆಯನ್ನು ಅವಳ ಮುಂದೆ ಹೇಳಿದೆ. ಅದಕ್ಕೆ ಅವಳು, 'ನೀನೇಕೆ ನಿನ್ನ ಸಮಸ್ಯೆಯನ್ನು ಭಟ್ಟರ ಮುಂದೆ ಹೇಳಿಕೊಳ್ಳಬಾರದು?' ಎಂದು ಹೇಳಿದಳು. ನನ್ನ ಸಮಸ್ಯೆ ಅಂದ್ರೆ, ನಾನು ಇಷ್ಟು ದಿನ ಒಬ್ಬನನ್ನು ಪ್ರೀತಿಸುತ್ತಿದ್ದೆ. ಈಗ ಮತ್ತೊಬ್ಬ ಸಿಕ್ಕಿದ್ದಾನೆ. ಅವರಿಬ್ಬರನ್ನೂ ನನ್ನಿಂದ ಬಿಟ್ಟು ಇರಲಾಗುತ್ತಿಲ್ಲ. ಏಕಕಾಲಕ್ಕೆ ಇಬ್ಬರನ್ನೂ ಪ್ರೀತಿಸುವುದು ತಪ್ಪಾ? **ಉತ್ತರ:** ಜ್ಯೋತಿಕಾ ಅವರೇ, ಈ ಪ್ರಶ್ನೆಯನ್ನು ನನ್ನ ಮುಂದೆ ಕೇಳುವ ಬದಲು, ಏಕಕಾಲದಲ್ಲಿ ನೀವು ಪ್ರೀತಿಸುತ್ತಿರುವ ಆ ಇಬ್ಬರನ್ನೂ ಒಟ್ಟಿಗೇ ಎದುರಾ-ಬದುರಾ ಕುಳ್ಳಿರಿಸಿಕೊಂಡು ಅವರ ಮುಂದೆ ಹೇಳಬೇಕಿತ್ತು. ಅವರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದನ್ನು ನನಗೆ ತಿಳಿಸಿ. ನಿಮ್ಮ ಪ್ರಸ್ತಾಪವನ್ನು ಅವರಿಬ್ಬರೂ ಒಪ್ಪಿದರೆ, ಸಮಸ್ಯೆಯೇ ಇಲ್ಲ. ಅವರಿಬ್ಬರ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳಲು ನಾನೂ ಉತ್ಸುಕನಾಗಿದ್ದೇನೆ. ನಂತರ ನನ್ನ ಉತ್ತರವನ್ನು ಹೇಳುತ್ತೇನೆ. ನನಗಾಗಿ ಈ ಉಪಕಾರ ಮಾಡುತ್ತೀರಲ್ಲಾ?!

ಓದುಗರ ಪ್ರಶ್ನೆ ಚಿತ್ರ-ವಿಚಿತ್ರ! ಅವುಗಳಿಗೆ ಈ ಅಂಕಣದಲ್ಲಿ ದಕ್ಕುವ ಉತ್ತರವೂ ಅಷ್ಟೇ. ಇಂಥ ಅವೆಷ್ಟೋ ಪ್ರಶ್ನೆ-ಉತ್ತರಗಳು ಇಲ್ಲಿವೆ.

ಸಂಪಾದಕರ ಸದ್ಯಶೋಧನೆ-7

ಲೇಖಕರು: ವಿಶ್ವೇಶ್ವರ ಭಟ್

(ಬೆಲೆ: 250 ರು.)



ಈ ಪುಸ್ತಕದ ಕುರಿತಾಗಿ ಅದರ ಲೇಖಕ ವಿಶ್ವೇಶ್ವರ ಭಟ್ ಅವರು ಹೇಳಿಕೊಂಡಿರುವ ಮಾತುಗಳಿವು: ''ಕಳೆದ ಇಪ್ಪತ್ತೈದು ವರ್ಷಗಳಿಂದ, ನನ್ನ ಸಂಪಾದಕತ್ವದ ಪತ್ರಿಕೆಗಳಲ್ಲಿ ವಾರಕ್ಕೆ ನಾಲ್ಕು ಅಂಕಣಗಳನ್ನು ಬರೆದುಕೊಂಡು ಬಂದವನು ನಾನು. ಅಷ್ಟೂ ಸಾಲದೆಂಬಂತೆ, ಐದು ವರ್ಷಗಳ ಹಿಂದೆ, 'ಸಂಪಾದಕರ ಸದ್ಯಶೋಧನೆ' ಹೆಸರಿನಲ್ಲಿ ಪ್ರತಿದಿನವೂ ಒಂದು ಅಂಕಣವಿರಲಿ ಎಂದು ಬಯಸಿ ಬಯಸಿ ನಾನೇ ಮೈಮೇಲೆ ಎಳೆದುಕೊಂಡ ಅಂಕಣವಿದು. ದೈನಂದಿನ ಅಂಕಣ ಬರೆಯುವುದು ಸುಲಭವಲ್ಲ ಎಂಬ ಪರಿಜ್ಞಾನವಿದ್ದೂ ಸುಖಾಸುಮ್ಮನೆ ಉಸಾಬರಿ ತಂದುಕೊಂಡವರಂತೆ ಬರೆಯಲು ಆರಂಭಿಸಿದ ಅಂಕಣವಿದು. ಆದರೆ ಬರೆಯಲು ಆರಂಭಿಸಿದ ನಂತರ, ನನಗೆ ಅತ್ಯಂತ ಇಷ್ಟವಾದ ಮತ್ತು ಸಲೀಸಾದ ಅಂಕಣವೂ ಇದೇ ಎನಿಸಿದ್ದು ಸುಳ್ಳಲ್ಲ. ಇದು ಆ ಹೊತ್ತಿನ ಶೋಧನೆ, ನಿವೇದನೆ. ಈ ಅಂಕಣಕ್ಕೆ ಪದಮಿತಿ ಇರಬಹುದು. ಆದರೆ ವಿಷಯದ ಹರಹಿನ ಮಿತಿಯಿಲ್ಲ. ಇಲ್ಲಿ ಚರ್ಚಿತವಾಗದ ವಿಷಯಗಳಿಲ್ಲ. ನನಗೆ ಬಂದ ಒಂದು ವಾಟ್ಸ್ಯಾಪ್ ಸಂದೇಶ, ಎಂದೋ ಪ್ರಯಾಣಿಸಿದ ಒಂದು ವಿಮಾನದ ಬೋರ್ಡಿಂಗ್ ಪಾಸ್, ವಿಧಾನಸೌಧದ ಲಿಫ್ಟ್ ಆಪರೇಟರುಗಳ ಸಂಕಟ, ಅನಾಮಧೇಯನ ಮಿಸ್ಡ್ ಕಾಲ್‌ಗಳಿಂದ ಹಿಡಿದು, ಇಂಗ್ಲೆಂಡಿನ ರಾಣಿಯ ಬ್ಯಾಗಿನ ಖಯಾಲಿ, ಆಕೆಯ ಟೇಲರ್‌ಗಳ ಪರಿತಾಪ, ಭಾಷಾ ಗೊಂದಲ, ಹನ್ನೆರಡು ನಿಮಿಷಗಳ ವಿಮಾನ ಪ್ರಯಾಣದ ಮಜಕೂರು.... ಹೀಗೆ ಅನೇಕ ಸಂಗತಿಗಳು ಈ ಅಂಕಣದಲ್ಲಿ ಹಾದುಹೋಗಿವೆ. ವಿಷಯ ಯಾವುದೇ ಇರಬಹುದು, ಆದರೆ ಬರೆದುದೆಲ್ಲವೂ ಸ್ವಾರಸ್ಯಕರವಾಗಿರಬೇಕು, ಓದುಗರಿಗೆ ಹೊಸತು ಎನಿಸಬೇಕು ಎಂಬ ಒಂದೇ ಒಂದು ನಿಯಮವನ್ನು ಹಾಕಿಕೊಂಡು, ಅದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿರುವ ಬರಹಗಳಿವು ಎಂದಷ್ಟೇ ಹೇಳಬಲ್ಲೆ. ಈ ಮಾತಿಗೆ ನೀವು ತಸ್ಸೆ ಒತ್ತಬೇಕಷ್ಟೇ!...'' 'ಸಂಪಾದಕರ ಸದ್ಯಶೋಧನೆ-7' ಕೃತಿಯು ನಿಮ್ಮ ಪುಸ್ತಕದ ಕಪಾಟಿನಲ್ಲಿ ಏಕೆ ಸೇರಿಕೊಳ್ಳಬೇಕು ಎಂಬುದಕ್ಕೆ ಇಷ್ಟು ಕಾರಣ ಸಾಕಲ್ಲ...?!

ಗೆದ್ದವರ ಕಥೆಗಳು

ಲೇಖಕರು: ರಾಜು ಅಡಕಳ್ಳಿ

(ಬೆಲೆ: 250 ರು.)



ವಿಶ್ವವಾಣಿ' ಪತ್ರಿಕೆಯ ಸೋದರ ಪತ್ರಿಕೆ 'ಲೋಕಧ್ವನಿ' ದೈನಿಕದಲ್ಲಿ ಪತ್ರಕರ್ತ ರಾಜು ಅಡಕಳ್ಳಿ ಬರೆಯುತ್ತಿರುವ 'ವ್ಯಕ್ತಿ-ಶಕ್ತಿ' ಅಂಕಣ ಬರಹಗಳ ಪುಸ್ತಕವೇ 'ಗೆದ್ದವರ ಕಥೆಗಳು'. ಈಗಾಗಲೇ 'ವ್ಯಕ್ತಿ-ಶಕ್ತಿ', 'ಹೊಸಮುಖ', 'ಸ್ಫೂರ್ತಿವಂತರು' ಈ ಸರಣಿಯ ಕೃತಿಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯ ಪ್ರತಿಭಾವಂತರು, ಸಾಧಕರು ರಾಜ್ಯ-ದೇಶ, ವಿಶ್ವಮಟ್ಟದಲ್ಲಿ ಮಾದರಿಯಾಗಿ ನಿಂತ ವ್ಯಕ್ತಿಚಿತ್ರಣಗಳು ಇಲ್ಲಿವೆ. ವ್ಯಕ್ತಿ ಮೀರಿದ ಶಕ್ತಿಯಾಗಿರುವ ಸ್ವರ್ಣವಲ್ಲಿ ಶ್ರೀಗಳಿಂದ ಹಿಡಿದು, ನೌಕಾಪಡೆಯಲ್ಲೇ ಬಾಳನೌಕೆ ಸಾಗಿಸಿದ ನಿಖಿಲ್ ಅವರ ತನಕ ಮೂವತ್ನಾಲ್ಕು ಜನರ 'ಗೆದ್ದವರ ಕಥೆಗಳು' ಇಲ್ಲಿ ಹರಳುಗಟ್ಟಿವೆ. ಅಡಕಳ್ಳಿಯವರು ಇಂಥ ಸಾಧಕರ ವ್ಯಕ್ತಿತ್ವ ಕಟ್ಟಿಕೊಡುವ, ಸರಳ ಭಾಷಾ ಶೈಲಿಯ ನಿರೂಪಣಾ ವಿಧಾನವು ಓದುಗರಿಂದ ಕುತೂಹಲದಿಂದ ಓದಿಸಿಕೊಳ್ಳುತ್ತದೆ. ಪ್ರತಿ ಯೊಬ್ಬರ ಬಾಳಕಥನಗಳಲ್ಲೂ ಒಂದೊಂದು ಸ್ಫೂರ್ತಿದಾಯಕ ಅಂಶ ಗಳಿವೆ. ಜೀವನದ ಏರಿಳಿತಗಳಲ್ಲೂ ಬದುಕನ್ನು ಹಸನು ಮಾಡಿಕೊಂಡ 'ಗೆದ್ದವರ ಕಥೆಗಳು' ಓದುಗರ ಮನಸೆಳೆಯುವುದರಲ್ಲಿ ಸಂಶಯವೇ ಇಲ್ಲ. ಕಲೆ, ಸಾಹಿತ್ಯ, ಯಕ್ಷಗಾನ, ವೈದ್ಯಕೀಯ, ಕೃಷಿ ಹೀಗೆ ಎಲ್ಲ ಕ್ಷೇತ್ರದ ವ್ಯಕ್ತಿಗಳು ಈ ಕೃತಿಯಲ್ಲಿ ಸಿಗುತ್ತಾರೆ. ಇವರೆಲ್ಲ ಬಹುತೇಕ ಸಮಾಜವಾದಿ ಕಾರ್ಯದಲ್ಲಿ ನಿರತರಾಗಿದ್ದು, ಸಾಧನೆ ಮಾಡುವವರಿಗೆ ಮಾರ್ಗದರ್ಶಕರಾಗಿಯೂ ನಿಲ್ಲುತ್ತಾರೆ. ಅಡಕಳ್ಳಿ ಯವರು ಈ ಒಂದು ಕೃತಿಯಲ್ಲಿ ಇಷ್ಟು ಜನರನ್ನು ಸೇರಿಸಿರುವುದು ಒಂದು ರೀತಿಯಲ್ಲಿ ಸಾಧಕರ ಸಮಾವೇಶವೇ..!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:137

ಸಮಾಚಾರ ಸಣ್ಣದಲ್ಲ

ಧನಕರ್‌ಗೆ ಗೌರವ ವಿದಾಯ: ಕಾಂಗ್ರೆಸ್ ಪಕ್ಷದ ಒತ್ತಾಯ

ದೆಹಲಿ: ಉಪ ರಾಷ್ಟ್ರಪತಿ ಹುದ್ದೆಗೆ ದಿಢೀರ್ ರಾಜೀನಾಮೆ ಸಲ್ಲಿಸಿರುವ ಜಗದೀಪ್ ಧನಕರ್ ಅವರಿಗೆ ಗೌರವಯುತ ವಿದಾಯ ನೀಡುವುದಕ್ಕೆ ಸಂಸತ್ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಕೇಂದ್ರ ಸರಕಾರಕ್ಕೆ ಕಾಂಗ್ರೆಸ್ ಗುರುವಾರ ಒತ್ತಾಯಿಸಿದೆ. ಆದರೆ ಕೇಂದ್ರ ಸರಕಾರ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ರಾಜಸಭೆಯ ವ್ಯವಹಾರ ಸಲಹಾ ಸಮಿತಿ (ಬಿಎಸಿ) ಬುಧವಾರ ಸಂಜೆ ಕರೆದಿದ್ದ ಸಭೆಯಲ್ಲಿ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು, 3 ವರ್ಷಗಳ ಕಾಲ ಉಪ ರಾಷ್ಟ್ರಪತಿಯಾ ಗಿದ್ದ, ರಾಜ್ಯಸಭೆ ಸಭಾಪತಿಯಾಗಿ ಕಲಾಪ ನಡೆಸಿದ ಧನಕರ್ ಅವರಿಗೆ ಗೌರವಯುತ ಬೀಳ್ಕೊಡುಗೆ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಕೋರಿದರು. ಆದರೆ, ಸಭೆಯಲ್ಲಿದ್ದ ಕೇಂದ್ರ ಸಚಿವರಾದ ಜೆ.ಪಿ. ನಡ್ಡಾ ಮತ್ತು ಕಿರಣ್ ರಿಜಿಜು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ ಎನ್ನಲಾಗಿದೆ.

ಆರೋಗ್ಯ ಕಾರಣದಿಂದಾಗಿ ರಾಜಿನಾಮೆ ನೀಡಿರುವೆ ಎಂದು ಧನಕರ್ ಅವರೇ ಹೇಳಿಕೊಂಡಿದ್ದರೂ ಪ್ರತಿಪಕ್ಷಗಳು ಮಾತ್ರ ಅನು ಮಾನ ವ್ಯಕ್ತಪಡಿಸುತ್ತಿವೆ. ಉಪ ರಾಷ್ಟ್ರಪತಿ ದಿಢೀರ್ ರಾಜೀನಾಮೆಗೆ ಕಾರಣ ಬಹಿರಂಗ ಪಡಿಸುವಂತೆ ಕೇಂದ್ರ ಸರಕಾರಕ್ಕೆ ಕಾಂಗ್ರೆಸ್ ಸೇರಿದಂತೆ ವಿವಿಧ ಪಕ್ಷಗಳ ನಾಯಕರು ಒತ್ತಾಯಿಸುತ್ತಿದ್ದಾರೆ.

ಆಟಿಕೆ ಗನ್ ಬಳಸಿ ಲೂಟಿ: ಯೋಧ ಸೆರೆ

ದೆಹಲಿ: ಆಟಿಕೆ ಬಂದೂಕು ತೋರಿಸಿ ಜೂ.19ರಂದು ಚಿನ್ನಾಭರಣ ಲೂಟಿ ಮಾಡಿದ್ದ ಆರೋಪಿ, ಗಡಿ ಭದ್ರತಾ ಪಡೆ(ಬಿಎಸ್‌ಎಫ್) ಯೋಧ ಗೌರವ್ ಯಾದವ್(22)ನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಈತ ಜೂನ್‌ನಲ್ಲಷ್ಟೇ ಬಿಎಸ್‌ಎಫ್‌ಗೆ ನಿಯೋಜನೆಗೊಂಡಿದ್ದು, ಪಂಜಾಬ್ ರಾಜ್ಯದ ಫಾಜಿಲ್ಕಾದಲ್ಲಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ನಿಯೋಜನೆಗೊಂಡ ಮರು ದಿನವೇ ತುರ್ತು ರಜೆ ಪಡೆದು ದೆಹಲಿಗೆ ವಾಪಸಾಗಿ, ಚಿನ್ನಾಭರಣದಂಗಡಿ ಲೂಟಿ ನಡೆಸಿದ್ದ. ರೈಲಿಗಾಗಿ ಕಾಯುತ್ತಿದ್ದಾಗಲೇ ಲೂಟಿಗೆ ಯೋಜನೆ ರೂಪಿಸಿದ್ದ ಎಂದು ಎಸಿಪಿ ಪ್ರಶಾಂತ್ ಗೌತಮ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ಪ್ರಧಾನಿ ಮೋದಿಗೆ ಸಾಂಪ್ರದಾಯಿಕ ಸ್ವಾಗತ

ಎಫ್‌ಟಿಎಗೆ ಸಹಿ: ಮೋದಿ ಬ್ರಿಟನ್ ಪ್ರವಾಸದಲ್ಲಿ ಸಿಹಿ

ಮೋದಿ ಅವರನ್ನು ಸ್ವಾಗತಿಸಲು ಲಂಡನ್‌ನಲ್ಲಿ ಕಾದಿದ್ದ ಭಾರತೀಯ ಸಮೂಹ.

ಲಂಡನ್: ಗ್ರೇಟ್ ಬ್ರಿಟನ್ ಮತ್ತು ಮಾಲ್ಡೀವ್ಸ್‌ಗೆ 4 ದಿನಗಳ ಕಾಲ ಅಧಿಕೃತ ಪ್ರವಾಸ ಹಮ್ಮಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೊದಲ ಯತ್ನದಲ್ಲೇ ಬ್ರಿಟನ್ ಪ್ರವಾಸದಲ್ಲಿ ಯಶಸ್ಸು ಸಿಕ್ಕಿದೆ. ದೀರ್ಘ ಅವಧಿಯಿಂದ ಬಾಕಿಯಾಗಿದ್ದ ಭಾರತ-ಬ್ರಿಟನ್ ನಡುವಿನ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ)ಕ್ಕೆ ಕಡೆಗೂ ಒಪ್ಪಿಗೆಯ ಸಹಿ ಬಿದ್ದಿದೆ. ಭಾರತದ ಪಾಲಿಗಿದು ಸಿಹಿ ಸುದ್ದಿಯಾಗಿದೆ.

4 ದಿನಗಳ ಪ್ರವಾಸದಲ್ಲಿ ಮೊದಲಿಗೆ ಪ್ರಧಾನಿ ಮೋದಿ ಅವರು ಬುಧವಾರ ತಡರಾತ್ರಿ ಲಂಡನ್‌ಗೆ ಆಗಮಿಸಿದರು. ಬ್ರಿಟನ್ ಪ್ರಧಾನಿ ಕೀರ್ ಸ್ಟಾಮರ್ ಅವರು ಪ್ರಧಾನಿ ಮೋದಿಗೆ ಸಾಂಪ್ರದಾಯಿಕ ಸ್ವಾಗತ ಕೋರಿದರು. ಸ್ವಾಗತಿಸಲು ನೂರಾರು ಸಂಖ್ಯೆಯಲ್ಲಿ ಹಾಜರಾಗಿದ್ದ ಭಾರತೀಯರ ಸಮೂಹವನ್ನು ಕಂಡು ಮೋದಿ ಭಾರೀ ಸಂಸತ ವ್ಯಕ್ತಪಡಿಸಿದರು.

2 ದಿನಗಳ ಕಾಲ ಬ್ರಿಟನ್ ಪ್ರವಾಸದ ಅವಧಿಯಲ್ಲಿ ಪ್ರಧಾನಿ ಮೋದಿ ಮತ್ತು ಸ್ಟಾರ್ಮರ್ ಅವರು ಭಾರತ-ಬ್ರಿಟನ್ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಗುರಿ ಹೊಂದಿದ್ದಾರೆ. ಈ ದಿಸೆಯಲ್ಲಿ ಕೀರ್ ಸ್ಟಾರ್ಮರ್ ಮತ್ತು ಮೋದಿ ವಿಸ್ತೃತ ಮಾತುಕತೆ ನಡೆಸಿದ್ದಾರೆ.

ರಕ್ಷಣಾ ವಲಯ, ಶಿಕ್ಷಣ, ಸಂಶೋಧನೆ ಸೇರಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಇಬ್ಬರೂ ಪ್ರಧಾನಿಗಳು ಮಾತುಕತೆ ನಡೆಸಲಿದ್ದಾರೆ ಎನ್ನಲಾಗಿದೆ.

ಮೋದಿ ಭಾವುಕ: ಲಂಡನ್‌ನಲ್ಲಿ ತಮ್ಮನ್ನು ಸ್ವಾಗತಿಸಲು ಕಾದಿದ್ದ ಭಾರತೀಯರ ಸಮೂಹವನ್ನು ಕಂಡು ಪ್ರಧಾನಿ ಮೋದಿ ಕ್ಷಣ ಭಾವುಕರಾದರು. ಭಾರತ ಮಾತೆಯಂತೆ ವೇಷ ಧರಿಸಿದ್ದ ಬಾಲಕಿಯೊಬ್ಬಳ ತಲೆಸವರಿ ಪ್ರೀತಿಯಿಂದ ಮಾತನಾಡಿಸಿದರು. ಸಾಂಪ್ರದಾಯಿಕ ಸ್ವಾಗತಕ್ಕಾಗಿ ಭಾರತೀಯ ಸಮೂಹಕ್ಕೆ ಧನ್ಯವಾದ ಸಲ್ಲಿಸಿದರು. ಈ ಸಂದರ್ಭ ಮಹಿಳಾ ಸಮೂಹ ಮೋದಿ ಅವರ ಕೈಕುಲುಕಿ ಶುಭ ಕೋರಲು ಭಾರೀ ಪೈಪೋಟಿಯನ್ನೇ ನಡೆಸಿತು. ನಿಮ್ಮ ಪ್ರೀತಿ ಮತ್ತು ಬದ್ಧತೆ ನೋಡಿ ಹೃದಯ ತುಂಬಿಬಂದಿದೆ ಎಂದು ಮೋದಿ ಹೇಳಿದರು. ಬ್ರಿಟನ್ ಭೇಟಿ ಬಳಿಕ, ಪ್ರಧಾನಿ ಮೋದಿ ಜು.25ರಂದು ಮಾಲ್ಡೀವ್ಸ್‌ಗೆ ತೆರಳಿ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಯಾವುದಕ್ಕೆಲ್ಲಾ ತೆರಿಗೆ ವಿನಾಯಿತಿ

ಭಾರತದಿಂದ ರಫ್ತಾಗುವ ಸರಕುಗಳಲ್ಲಿ ಜವಳಿ ಉತ್ಪನ್ನಗಳು, ಜನರಿಕ್ ಔಷಧ ಗಳು, ವೈದ್ಯಕೀಯ ಸಲಕರಣೆಗಳು, ಚರ್ಮೋತ್ಪನ್ನಗಳು, ಕೃಷಿ ಉತ್ಪನ್ನಗಳು, ರಾಸಾಯನಿಕ ಪದಾರ್ಥಗಳು ಬ್ರಿಟನ್‌ನಿಂದ ತೆರಿಗೆ ವಿನಾಯಿತಿ ಪಡೆಯಲಿವೆ. ಬ್ರಿಟನ್‌ನಿಂದ ಭಾರತಕ್ಕೆ ರಫ್ತಾಗುವ ಉತ್ಪನ್ನಗಳಾದ ವಿಸ್ಕಿ ಮತ್ತು ಕಾರುಗಳು, ಇತರೆ ಆಟೋಮೊಬೈಲ್ ಉಪಕರಣಗಳು ಭಾರತದ ಮಾರುಕಟ್ಟೆಗೆ ತೆರಿಗೆ ವಿನಾಯಿತಿಯೊಂದಿಗೆ ಸುಲಭ ಪ್ರವೇಶ ಪಡೆಯಲಿವೆ.

ಉಭಯ ದೇಶ ವಹಿವಾಟು 3400 ಕೋಟಿ ಡಾಲರ್‌ಗೆ!

ಮೂರು ವರ್ಷಗಳಲ್ಲಿ ಹಲವು ಹಂತಗಳಲ್ಲಿ ಚರ್ಚೆ ನಡೆಸಿದ ಬಳಿಕ ಇದೇ ವರ್ಷದ ಮೇ ತಿಂಗಳಲ್ಲಿ ಮುಕ್ತ ವ್ಯಾಪಾರ ಒಪ್ಪಂದದ ದಾಖಲೆಗೆ ಅಂತಿಮ ರೂಪ ನೀಡಲಾಗಿತ್ತು. ಈಗ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿರುವುದರಿಂದ ಭಾರತದಿಂದ ಯುನೈಟೆಡ್ ಕಿಂಗ್ಡಂಗೆ ರಫ್ತಾಗುವ ಸರಕುಗಳಲ್ಲಿ ಶೇ.99ರಷ್ಟು ವಸ್ತುಗಳ ಮೇಲಿನ ಬ್ರಿಟನ್ ಸುಂಕ ರದ್ದಾಗಲಿದೆ. ಇದೇ ವೇಳೆ ಯುನೈಟೆಡ್ ಕಿಂಗ್ಡಂನಿಂದ ಭಾರತದ ಮಾರುಕಟ್ಟೆಗೆ ಬರುವ ಸರಕುಗಳಲ್ಲಿ ಶೇ.90ರಷ್ಟು ವಸ್ತುಗಳಿಗೆ ತೆರಿಗೆ ವಿನಾಯಿತಿ ಸಿಗಲಿದೆ. ಇದರಿಂದ ಎರಡೂ ದೇಶಗಳ ನಡುವಿನ ವಾರ್ಷಿಕ ವ್ಯಾಪಾರ ವಹಿವಾಟು 3400 ಕೋಟಿ ಡಾಲರ್‌ಗಳ ಗಾತ್ರಕ್ಕೆ ಹಿಗ್ಗಲಿದೆ ಎಂದು ನಿರೀಕ್ಷಿಸಲಾಗಿದೆ.

ಗಡಿಪಾರು ಚರ್ಚೆ

ಭಾರತದ ಬ್ಯಾಂಕ್‌ಗಳಿಗೆ ಸಾವಿ ರಾರು ಕೋಟಿ ರು. ವಂಚಿಸಿ ದೇಶ ತೊರೆದು ಓಡಿಹೋಗಿ ಬ್ರಿಟನ್‌ನಲ್ಲಿ ಸುರಕ್ಷಿತ ನೆಲೆ ಕಂಡು ಕೊಂಡಿರುವ ವಿಜಯ್ ಮಲ್ಯ, ನೀರವ್ ಮೋದಿ, ಲಲಿತ್ ಮೋದಿ ಮತ್ತಿತರರು ಭಾರತದ ನ್ಯಾಯಾಲಯ ಗಳಿಂದ ಘೋಷಿತ ಅಪರಾಧಿಗಳಾಗಿದ್ದಾರೆ. ಅವರ ಗಡಿಪಾರು ಪ್ರಕ್ರಿಯೆ ವರ್ಷಗಳಿಂದ ನಡೆ



ಯುತ್ತಲೇ ಇದೆ. ಅದನ್ನು ತ್ವರಿತ ಗೊಳಿಸಲು ಭಾರತ-ಬ್ರಿಟನ್ ನಡುವೆ ಮಾತುಕತೆ ನಡೆಯಲಿದೆ. ಅಲ್ಲದೇ, ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾರತದಲ್ಲಿ ವಿಚಾರಣೆಗೊಳಗಾಗ ಬೇಕಿರುವ ಖಲಿ ಸ್ತಾನಿವಾದಿಗಳಲ್ಲಿ ಹಲವರ ಗಡಿಪಾರು ಕುರಿತೂ ಭಾರತದ ನಿಯೋಗ ಇದೇ ವೇಳೆ ಚರ್ಚಿಸಲಿದೆ ಎಂದು ಹೇಳಲಾಗಿದೆ.

ವಹಿವಾಟು ದ್ವಿಗುಣ

2024ರಲ್ಲಿ 5670 ಕೋಟಿ ಡಾಲರ್‌ಗಳಷ್ಟಿದ್ದ ದ್ವಿಪಕ್ಷೀಯ ವಾಣಿಜ್ಯ ವಹಿವಾಟು ಈಗ ಮುಕ್ತ ವ್ಯಾಪಾರ ಒಪ್ಪಂದ ಆಗಿರುವುದರಿಂದ 2030ರ ವೇಳೆಗೆ ದ್ವಿಗುಣಗೊಳ್ಳಲಿದೆ. 2024ರಲ್ಲಿ ಬ್ರಿಟನ್‌ನಿಂದ ಭಾರತಕ್ಕೆ 13000 ಕೋಟಿ ಡಾಲರ್‌ಗಳಷ್ಟು (ಭಾರತದ ಜಿಡಿಪಿಯ ಶೇ. 3.3ರಷ್ಟು) ವಿದೇಶಿ ವಿನಿಮಯ ಹರಿವು ದಾಖಲಾಗಿದೆ. ಭಾರತಕ್ಕೆ ಹೆಚ್ಚಿನ ಆರ್ಥಿಕ ಉತ್ತೇಜನ ಸಿಗಲಿದೆ. ವಿಶೇಷವಾಗಿ, ಬ್ರಿಟನ್‌ನಲ್ಲಿ ಉದ್ಯೋಗಿಗಳಾಗಿರುವ ಭಾರತೀಯರಿಗೆ 3 ವರ್ಷಗಳವರೆಗೆ ರಾಷ್ಟ್ರೀಯ ವಿಮೆಯಿಂದ ವಿನಾಯಿತಿ ಸಿಗಲಿದೆ. ಇದರಿಂದ ಉದ್ಯೋಗಿಗಳಿಗೆ ಭಾರೀ ಉಳಿತಾಯವಾಗಿ ಭಾರತದತ್ತ ವಿದೇಶಿ ವಿನಿಮಯದ ಹರಿವು ಹೆಚ್ಚಿಸಲು ಕಾರಣ ವಾಗಲಿದೆ ಎಂದು 'ಎಸ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್' ವಿಶ್ಲೇಷಿಸಿದೆ.

49 ಮಂದಿ ತಲೆಗಿತ್ತು 2.27 ಕೋಟಿ ಇನಾಮು

ಛತ್ತೀಸ್‌ಗಢ: 66 ನಕ್ಸಲರು ಶರಣು

ಬಸ್ತಾರ್: ಛತ್ತೀಸ್‌ಗಢದ ಬಸ್ತಾರ್ ವಲಯದ 5 ಜಿಲ್ಲೆಗಳಿಂದ 27 ಮಹಿಳೆಯರು ಸೇರಿದಂತೆ ಒಟ್ಟು 66 ನಕ್ಸಲರು ಗುರುವಾರ ಪೊಲೀಸರಿಗೆ ಶರಣಾಗಿದ್ದಾರೆ. ಇವರಲ್ಲಿ 49 ಮಂದಿಯ ವಿರುದ್ಧ ಒಟ್ಟು 2.27 ಕೋಟಿ ಇನಾಮು ಘೋಷಣೆಯಾಗಿತ್ತು.

ಬಿಜಾಪುರ ಜಿಲ್ಲೆಯ 25 ನಕ್ಸಲರು, ದಾಂತೇವಾಡದ 15, ಕಾಂಕೇರ್‌ನ 13, ನಾರಾಯಣಪುರದ 8 ಮತ್ತು ಸುಕ್ಮಾದಲ್ಲಿನ ಐವರು ನಕ್ಸಲರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾದರು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಗುರುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಜ್ಯ ಸರಕಾರ ದೂರದ ಹಳ್ಳಿಗಳಿಗೆ ಮೂಲಸೌಕರ್ಯ ಅಭಿವೃದ್ಧಿಪಡಿಸುವ' ನಿಯಾದ್ ನೆಲ್ಲನಾರ್' ಯೋಜನೆ ಮತ್ತು ಶರಣಾದ ನಕ್ಸಲರಿಗೆ ಪುನರ್ವಸತಿ ಒದಗಿಸುತ್ತಿರುವುದರಿಂದ ತಾವು ಪ್ರಭಾವಿತರಾಗಿ ಶರಣಾಗಿರುವುದಾಗಿ ನಕ್ಸಲರು ಸುದ್ದಿಗಾರರ ಬಳಿ ಹೇಳಿದ್ದಾರೆ. ಈವರೆಗೆ ದಾಂತೇವಾಡ ಜಿಲ್ಲೆ ಯೊಂದರಲ್ಲಿಯೇ 1,020 ನಕ್ಸಲರು ಹಿಂಸಾಚಾರ ಕೈಬಿಟ್ಟು ಶರಣಾಗಿದ್ದಾರೆ ದಾಂತೇವಾಡ ಹೆಚ್ಚುವರಿ ಎಸ್ ಪಿ ಉದಿತ್ ಪುಷ್ಕರ್ ಹೇಳಿದ್ದಾರೆ. ಶರಣಾದ ನಕ್ಸಲರೆಲ್ಲರಿಗೂ ರಾಜ್ಯ ಸರಕಾರದಿಂದ ತಲಾ 50,000 ರು. ಆರ್ಥಿಕ ನೆರವು ಮತ್ತು ಪುನರ್ವಸತಿ ನೀತಿಯಡಿ ವಸತಿ ಸೌಕರ್ಯ ಒದಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಛತ್ತೀಸ್‌ಗಢ ಪೊಲೀಸರಿಗೆ ಶರಣಾದ ನಕ್ಸಲರಿಗೆ ಪರಿಹಾರ ಚೆಕ್ ವಿತರಿಸಿದರು.

ಸ್ಫೋಟ ಆರೋಪಿ ಖುಲಾಸೆಗೆ ತಡೆ

ದೆಹಲಿ: 2006ರ ಜುಲೈ 11ರಂದು ಮುಂಬೈನ ಲೋಕಲ್ ರೈಲುಗಳಲ್ಲಿ ನಡೆದ ಸರಣಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಪ್ರಕರಣದ ಎಲ್ಲ 12 ಆರೋಪಿಗಳನ್ನು ಖುಲಾಸೆಗೊಳಿಸಿ ಬಾಂಬೆ ಹೈಕೋರ್ಟ್ ನೀಡಿದ್ದ ತೀರ್ಪಿಗೆ ಸುಪ್ರೀಂ ಕೋರ್ಟ್ ಗುರುವಾರ ತಡೆ ನೀಡಿದೆ. ನ್ಯಾಯಮೂರ್ತಿ ಎಂ.ಎಂ.ಸುಂದರೇಶ್ ಮತ್ತು ನ್ಯಾ. ಎನ್ ಕೋಟೀಶ್ವರ್ ಸಿಂಗ್ ಅವರ ದ್ವಿಸದಸ್ಯ ಪೀಠ, 12 ಆರೋಪಿಗಳಿಗೂ ನೋಟಿಸ್ ಜಾರಿಗೊಳಿಸಿದ್ದು, ಮೇಲ್ಮನವಿ ಕುರಿತು ಪ್ರತಿ ಹೇಳಿಕೆ ಸಲ್ಲಿಸುವಂತೆ ಸೂಚನೆ ನೀಡಿದೆ. ಭವಿಷ್ಯದಲ್ಲಿ ಈ ಹೈಕೋರ್ಟ್ ತೀರ್ಪನ್ನು ಬೇರೆ ಅಪರಾಧ ಪ್ರಕರಣಗಳ ವಾದ-ತೀರ್ಪು ವೇಳೆ ಪೂರ್ವನಿದರ್ಶನವಾಗಿ ಪರಿಗಣಿಸಬಾರದು ಎಂದು ಸುಪ್ರೀಂ ಕೋರ್ಟ್ ಪೀಠ ಒತ್ತಿ ಹೇಳಿದೆ. ಆರೋಪಿಗಳನ್ನು ಹೈಕೋರ್ಟ್ ಖುಲಾಸೆಗೊಳಿಸಿರುವುದನ್ನು ಪ್ರಶ್ನಿಸಿ ಮಹಾರಾಷ್ಟ್ರ ಸರಕಾರ ಮೇಲ್ಮನವಿ ಸಲ್ಲಿಸಿದ್ದು, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದರು.

ಮೋದಿ ಸಮಯಪ್ರಜ್ಞೆ

ಲಂಡನ್: ಭಾರತ ಮತ್ತು ಬ್ರಿಟನ್ ಪ್ರಧಾನಿಗಳಾದ ನರೇಂದ್ರ ಮೋದಿ ಮತ್ತು ಕೀರ್ ಸ್ಟಾರ್ಮರ್ ಗುರುವಾರ ಜಂಟಿ ಸುದ್ದಿಗೋಷ್ಠಿ ನಡೆಸುವಾಗ ಅನುವಾದಕರು ಇಲ್ಲದೇ ಆರಂಭದಲ್ಲಿ ಸಮಸ್ಯೆಯಾಗಿದೆ. ಕೆಲವು ವ್ಯವಹಾರಿಕ ಪದಗಳನ್ನು ಅನುವಾದ ಮಾಡುವುದರಲ್ಲಿ ಸಮಸ್ಯೆಯಾಗಿದೆ. ಆಗ ಸಮಯಪ್ರಜ್ಞೆ ಮೆರೆಗೆ ಪ್ರಧಾನಿ ಮೋದಿ, 'ತೊಂದರೆ ತೆಗೆದುಕೊಳ್ಳದಿರಿ, ನಾವು ಮಧ್ಯೆ ಮಧ್ಯೆ ಇಂಗ್ಲೀಷ್‌ನಲ್ಲಿಯೇ ಮಾತನಾಡಬಹುದಾಗಿದೆ' ಎಂದು ಪತ್ರಕರ್ತ ರಿಗೆ ಹೇಳಿದ್ದಾರೆ. ಮೋದಿ ಅವರ ಮಾತಿಗೆ ನಗುತ್ತಾ ತಲೆದೂಗಿದ ಪ್ರಧಾನಿ ಕೀರ್ ಸ್ಟಾರ್ಮರ್, ನಾವಿಬ್ಬರೂ ಪರಸ್ಪರರನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇವೆ ಎಂದರು.

ಕಲಾಪ ಮತ್ತೆ ಮುಂದಕ್ಕೆ

ದೆಹಲಿ: ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಕ್ಷಿಪ್ರ ಪರಿಷ್ಕರಣೆ(ಎಸ್‌ಐಆರ್) ಕುರಿತು ಚರ್ಚೆಗೆ ಒತ್ತಾಯಿಸಿ ಪ್ರತಿಪಕ್ಷಗಳು ಕಲಾಪಕ್ಕೆ ಅಡ್ಡಿಪಡಿಸಿದ್ದರಿಂದ ಸಂಸತ್ತಿನ ಉಭಯ ಸದನಗಳ ಕಲಾಪ ಗುರುವಾರವೂ ನಡೆಯಲಿಲ್ಲ. ಸತತ ನಾಲ್ಕನೇ ದಿನವೂ ಎರಡೂ ಸದನಗಳ ಕಲಾಪವನ್ನು ಮುಂದೂಡಲಾಯಿತು. ಚರ್ಚೆಗೆ ಪಟ್ಟು ಹಿಡಿದ ಪ್ರತಿಪಕ್ಷಗಳ ಸಂಸದರು ಸತತ ಪ್ರತಿಭಟನೆ ನಡೆಸಿದರು. ಘೋಷಣೆ ಕೂಗಿ ಗದ್ದಲ ಎಬ್ಬಿಸಿದ್ದರಿಂದ ಮಹತ್ವದ ವಿಧೇಯಕಗಳ ಮಂಡನೆ ಸಾಧ್ಯವಾಗಲಿಲ್ಲ. ಹಾಗಾಗಿ ಲೋಕಸಭೆ ಮತ್ತು ರಾಜ್ಯಸಭೆ ಕಲಾಪಗಳನ್ನು ಶುಕ್ರವಾರಕ್ಕೆ ಮುಂದೂಡಲಾಯಿತು.

ಪೀಠಿಕೆ ಬದಲಿಲ್ಲ: ಸ್ಪಷ್ಟನೆ

ದೆಹಲಿ: ಭಾರತದ ಸಂವಿಧಾನದ ಪೀಠಿಕೆಯಲ್ಲಿಂದ ಬಹು ಚರ್ಚಿತ ಎರಡು ಪದಗಳನ್ನು ತೆಗೆದುಹಾಕುವ ಸಂಬಂಧ ಯಾವುದೇ ಕಾನೂನು ಅಥವಾ ಸಾಂವಿಧಾನಿಕ ಪ್ರಕ್ರಿಯೆಯನ್ನು 'ಔಪಚಾರಿಕವಾಗಿ' ಆರಂಭಿಸಿಲ್ಲ. 1975ರಲ್ಲಿ ತುರ್ತು ಪರಿಸ್ಥಿತಿ ಜಾರಿಯಾದ ಸಂದರ್ಭ ಸಂವಿಧಾನದ ಪೀಠಿಕೆಗೆ ಸೇರ್ಪಡೆ ಮಾಡಲಾದ 'ಸಮಾಜವಾದ' ಮತ್ತು 'ಜಾತ್ಯತೀ ತತೆ' ಪದಗಳನ್ನು ತೆಗೆದುಹಾಕುವ ರಾಜಕೀಯ ವಲಯಗಳಲ್ಲಿ ಚರ್ಚೆ ಆಗುತ್ತಿರಬಹುದು. ಆದರೆ ಈ ಪದಗಳ ಕುರಿತು ಸರಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಕಾನೂನು ಸಚಿವ ಅರ್ಜುನ್‌ರಾಮ್ ಮೇಘವಾಲ್ ಸದನಕ್ಕೆ ಲಿಖಿತ ಉತ್ತರ ನೀಡಿದ್ದಾರೆ.

ಸಂವಾದ: ಆರ್‌ಎಸ್‌ಎಸ್ ಒಲವು

ದೆಹಲಿ: ರಾಷ್ಟ್ರದ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಹಿಂದೂಗಳು ಹಾಗೂ ಮುಸ್ಲಿಮರ ನಡುವೆ ಸಂವಾದ ನಡೆಸುವುದಕ್ಕೆ ಆರ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹಾಗೂ ಸಮಾಜದ ಧರ್ಮ ಗುರುಗಳು ಸಮ್ಮತಿಸಿದ್ದಾರೆ ಎಂದು ಅಖಿಲ ಭಾರತ ಇಮಾಮ್ ಸಂಘಟನೆ ಮುಖ್ಯಸ್ಥ ಉಮರ್ ಅಹ್ಮದ್ ಇಲಿಯಾಸಿ ಗುರುವಾರ ಹೇಳಿದ್ದಾರೆ.

ಇಲ್ಲಿನ ಹರಿಯಾಣ ಭವನದಲ್ಲಿ ಸಂಘಟನೆಯು ಆಯೋಜಿಸಿದ್ದ ಸಭೆಯಲ್ಲಿ ಇಮಾಮರು, ಮದರಸಾಗಳ ಮುಖ್ಯಸ್ಥರು ಸೇರಿ ಮುಸ್ಲಿಂ ಸಮಾಜದ 60 ಪ್ರಮುಖರು ಪಾಲ್ಗೊಂಡಿದ್ದರು.

ಮಹಾಭಿಯೋಗಕ್ಕೆ ಸಚಿವ ಶಾ ಚಾಲನೆ

ದೆಹಲಿ: ದೆಹಲಿ ನಿವಾಸದಲ್ಲಿ ಕೋಟಿ ಮೊತ್ತದ ನಗದು ಪತ್ತೆ ಪ್ರಕರಣದಲ್ಲಿ ಸದ್ಯ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆಗೊಂಡಿರುವ ನ್ಯಾ. ಯಶವಂತ್ ವರ್ಮಾ ಅವರ ಪದಚ್ಯುತಿ ಸಂಬಂಧ

ಸಂಸತ್ತಿನಲ್ಲಿ ಮಹಾಭಿಯೋಗ ಪ್ರಕ್ರಿಯೆಗೆ ಕೇಂದ್ರ ಗೃಹ ಸಚಿವಾಲಯ ಬುಧವಾರ ಚಾಲನೆ ನೀಡಿದೆ.

ಕೇಂದ್ರ ಸಚಿವ ಅಮಿತ್ ಶಾ ಅವರು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ರಾಜ್ಯಸಭೆ ಉಪ ಸಭಾಪತಿ ಹರಿವಂಶ್ ನಾರಾಯಣ್ ಸಿಂಗ್ ಅವರ ಜತೆ ಪ್ರತ್ಯೇಕ ಸಭೆ ನಡೆಸಿದರು.

ಈಗ ನ್ಯಾಯಾಧೀಶರ ನ್ಯಾ.ವರ್ಮಾ ಅವರ ವಿರುದ್ಧದ ಭ್ರಷ್ಟಾಚಾರ ಆರೋಪ ಪರಿಶೀಲನೆಗೆ ಶಾಸನಾತ್ಮಕ ಸಮಿತಿ ರಚನೆ ಪ್ರಕ್ರಿಯೆ ಆರಂಭಿಸಬಹುದು ಎಂದು ಲೋಕಸಭಾ ಸ್ಪೀಕರ್ ಅನುಮತಿ ನೀಡಿದರು ಎಂದು ವರದಿಯಾಗಿದೆ. ಸಮಿತಿಯ ತನಿಖಾ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿ ಎರಡೂ ಸದನಗಳಲ್ಲಿ ಚರ್ಚಿಸಲಾಗುವುದು. ನಂತರ ನ್ಯಾಯಮೂರ್ತಿ ಪದಚ್ಯುತಿ ಪ್ರಸ್ತಾ ವನೆ ಮೇಲೆ ಮತದಾನ ನಡೆಯಲಿದೆ.

ಈವರೆಗೆ ಲೋಕಸಭೆಯ 145 ಮತ್ತು ರಾಜ್ಯಸಭೆಯ 63 ಸದಸ್ಯರು ನ್ಯಾ.ವರ್ಮಾ ಅವರ ಪದಚ್ಯುಗಿ ಆಗ್ರಹಿ ಸುವ ಪತ್ರಕ್ಕೆ ಈ ಮೊದಲೇ ಸಹಿ ಹಾಕಿದ್ದಾರೆ.

ಅಸ್ಸಾಂನಲ್ಲಿ ಮುಸ್ಲಿಂ ಜನಸಂಖ್ಯೆಯು ಬಗ್ಗೆ ಸಿಎಂ ಬಿಸ್ವಾ ಹೇಳಿಕೆ

2041ರ ವೇಳೆ ಹಿಂದೂ, ಮುಸ್ಲಿಂ ಜನಸಂಖ್ಯೆ ಸಮ

ದಿಸ್‌ಪುರ: ಅಸ್ಸಾಂ ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆಯು ಪ್ರಸ್ತುತ ಬೆಳವಣಿಗೆಯ ದರದಲ್ಲಿ ಮುಂದುವರಿದರೆ 2041ರ ವೇಳೆಗೆ ಹಿಂದೂ ಜನಸಂಖ್ಯೆಯೊಂದಿಗೆ ಅದು ಸಮಾನವಾಗಲಿದೆ

ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ದಿಬ್ರುಗಢದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

2011ರ ಜನಗಣತಿಯ ಪ್ರಕಾರ, ಅಸ್ಸಾಂನ ಒಟ್ಟು 3.12 ಕೋಟಿ ಜನಸಂಖ್ಯೆಯಲ್ಲಿ ಮುಸ್ಲಿಮರ ಸಂಖ್ಯೆ ಶೇ. 34.22(1.07 ಕೋಟಿ) ಇದ್ದು, ಇದರಲ್ಲಿ ಶೇ. 31ರಷ್ಟು ವಲಸೆ ಬಂದವರಾಗಿದ್ದಾರೆ ಎಂದು ಶರ್ಮಾ ತಿಳಿಸಿದ್ದಾರೆ.

ರಾಜ್ಯದ ಒಟ್ಟು ಮುಸ್ಲಿಮರಲ್ಲಿ ಕೇವಲ ಶೇ. 3ರಷ್ಟು ಮಾತ್ರ ಸ್ಥಳೀಯ ಅಸ್ಸಾಮಿ ಮುಸ್ಲಿಮರಾಗಿದ್ದಾರೆ ಎಂದು ಅವರು ದೃಢಪಡಿಸಿದ್ದಾರೆ. 'ಇದು ನನ್ನ ಅಭಿಪ್ರಾಯವಲ್ಲ, ಜನಗಣತಿಯ ಅಂಕಿಅಂಶಗಳ ಆಧಾರದ ಮೇಲೆ ಈ ಲೆಕ್ಕಾಚಾರವಿದೆ.

2021, 2031 ಮತ್ತು 2041ರ ವೇಳೆಗೆ ಜನಸಂಖ್ಯೆಯು ಸುಮಾರು 50:50ರ ಅನುಪಾತಕ್ಕೆ ಬರಲಿದೆ' ಎಂದು ಶರ್ಮಾ ಸ್ಪಷ್ಟಪಡಿಸಿದರು.

2011ರ ಜನಗಣತಿಯಂತೆ, ಅಸ್ಸಾಂನ ಒಟ್ಟು ಜನಸಂಖ್ಯೆಯಲ್ಲಿ ಹಿಂದೂಗಳು ಶೇ. 61.47ರಷ್ಟಿದ್ದಾರೆ (1.92 ಕೋಟಿ). 2001ರಲ್ಲಿ ರಾಜ್ಯದ 23 ಜಿಲ್ಲೆಗಳ ಪೈಕಿ ಆರು ಜಿಲ್ಲೆಗಳು (ಧುಬ್ರಿ, ಗೋಲ್‌ಪಾರ, ಬಾರ್ಪೆಟ, ನಗಾಂವ್, ಕರೀಮ್‌ಗಂಜ್, ಹೈಲಾಕಾಂಡಿ) ಮುಸ್ಲಿಂ ಬಹುಸಂಖ್ಯಾತವಾಗಿದ್ದವು. 2011ರಲ್ಲಿ ಜಿಲ್ಲೆಗಳ ಸಂಖ್ಯೆ 27ಕ್ಕೆ ಏರಿತು ಮತ್ತು ಮುಸ್ಲಿಂ ಬಹುಸಂಖ್ಯಾತ ಜಿಲ್ಲೆಗಳ ಸಂಖ್ಯೆ ಒಂಬತ್ತಕ್ಕೆ (ಧುಬ್ರಿ, ಗೋಲ್‌ಪಾರ, ಬಾರ್ಪೆಟ, ಮೊರಿಗಾಂವ್, ನಗಾಂವ್, ಕರೀಮ್‌ಗಂಜ್, ಹೈಲಾಕಾಂಡಿ, ಬೊಂಗಾಯಿಗಾಂವ್, ದರಾಂಗ್) ಏರಿತು. ಬಿಜೆಪಿ ಪ್ರಕಾರ, ಈ ಸಂಖ್ಯೆ ಈಗ ಕನಿಷ್ಠ 11ಕ್ಕೆ ಏರಿದೆ, ಆದರೆ 2021ರ ಜನಗಣತಿ ದತ್ತಾಂಶ ಇನ್ನೂ ಬಿಡುಗಡೆಯಾಗಿಲ್ಲ.

ಈ ಹೇಳಿಕೆಯು ರಾಜ್ಯದ ಜನಸಂಖ್ಯಾ ಬದಲಾವಣೆಗಳ ಕುರಿತು ರಾಜಕೀಯ ಚರ್ಚೆಗೆ ಕಾರಣವಾಗಿದ್ದು, ಹೇಳಿಕೆಯು ಅಸ್ಸಾಂನ ಜನಸಂಖ್ಯೆಯ ಭವಿಷ್ಯದ ಬಗ್ಗೆ ಗಂಭೀರ ವಿಶ್ಲೇಷಣೆಯ ಅಗತ್ಯವನ್ನು ಎತ್ತಿ ತೋರಿಸಿದೆ ಎಂದು ತಜ್ಞರು ಹೇಳಿದ್ದಾರೆ.

ಏರ್ ಇಂಡಿಯ ಸಂಸ್ಥೆಗೆ ಡಿಜಿಸಿಎ 4 ನೋಟಿಸ್

ಮುಂಬೈ: ಪೈಲಟ್‌ಗಳಿಗೆ ವಿಶ್ರಾಂತಿ ಮತ್ತು ಸೇವಾ ನಿಯಮ, ಕ್ಯಾಬಿನ್ ಸಿಬ್ಬಂದಿಗೆ ತರಬೇತಿ ನಿಯಮ ಗಳು ಮತ್ತು ಕಾರ್ಯಾಚರಣೆ ವಿಧಾನಗಳಿಗೆ ಸಂಬಂಧಿಸಿ ಏರ್ ಇಂಡಿಯ ವಿಮಾನಯಾನ ಸಂಸ್ಥೆ ಯಿಂದ ಹಲವು ಉಲ್ಲಂಘನೆಗಳಾಗಿವೆ ಎಂದಿರುವ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ಏರ್ ಇಂಡಿಯ ಸಂಸ್ಥೆಗೆ ಗುರುವಾರ 4 ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಜೂ.20 ರಂದು ಏರ್ ಇಂಡಿಯ ಕೆಲವು ಮಾಹಿತಿಗಳನ್ನು ಡಿಜಿಸಿಎ ಜತೆಗೆ ಹಂಚಿಕೊಂಡ ಬಳಿಕ ಶೋಕಾಸ್ ನೋಟಿಸ್ ನೀಡಲಾಗಿದೆ. ಏ.27ರಂದು 2 ವಿಮಾನ ಗಳಲ್ಲಿ, ಏ.28 ಮತ್ತು ಮೇ 2ರಂದು ತಲಾ ಒಂದು ವಿಮಾನ ಸಂಚಾರದ ವೇಳೆ ನಿಯಮಗಳ ಉಲ್ಲಂಘನೆ ಯಾಗಿದೆ ಎಂದು ಡಿಜಿಸಿಎ ಹೇಳಿದ್ದು, ಸಮಜಾಯಿಸಿ ಕೇಳಿದೆ. ಅಹಮದಾಬಾದ್‌ನಿಂದ ಲಂಡನ್‌ನತ್ತ ಜೂ.12ರಂದು ತೆರಳುತ್ತಿದ್ದ ಏರ್ ಇಂಡಿಯ ಸಂಸ್ಥೆಯ 'ಎಐ-171' ಬೋಯಿಂಗ್ 787-8 ವಿಮಾನ ಟೇಕಾಫ್ ಆದ 28 ಸೆಕೆಂಡ್‌ಗಳಲ್ಲೇ ಪತನಗೊಂಡು 260 ಜನರ ಸಾವಿಗೆ ಕಾರಣವಾಗಿತ್ತು ಎಂಬುದು ಉಲ್ಲೇಖಾರ್ಹ.

ಯೆಸ್‌ಬ್ಯಾಂಕ್‌ಗೆ ಅನಿಲ್ ಲಂಚ: ಇ.ಡಿ

ಮುಂಬೈ: ಅನಿಲ್ ಅಂಬಾನಿ ನೇತೃತ್ವದ ಕಂಪನಿಗಳ ಸಮೂಹಕ್ಕೆ 2017-19ರ ಅವಧಿಯಲ್ಲಿ 3,000 ಕೋಟಿ ರು.ಗಳ ಬೃಹತ್ ಮೊತ್ತದ ಸಾಲವನ್ನು ದಾಖಲೆ ಪತ್ರಗಳನ್ನು ಸರಿಯಾಗಿ ಪರಿಶೀಲಿಸದೆಯೇ ಮಂಜೂರು ಮಾಡುವುದಕ್ಕಾಗಿ 'ಯೆಸ್ ಬ್ಯಾಂಕ್'ನ ಉನ್ನತ ಅಧಿಕಾರಿಗಳಿಗೆ ಲಂಚ ನೀಡಲಾಗಿದೆ ಎಂಬುದು ಜಾರಿ ನಿರ್ದೇಶನಾಲಯ(ಇ.ಡಿ) ತನಿಖೆ ವೇಳೆ ಪತ್ತೆಯಾಗಿದೆ. ಈ ಸಂಬಂಧ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ತಂಡ, ಅನಿಲ್ ಅಂಬಾನಿ ನೇತೃತ್ವದ ಕಂಪನಿ ಗಳಿಗೆ ಸಂಬಂಧಿಸಿದ 35ಕ್ಕೂ ಹೆಚ್ಚು ಸ್ಥಳಗಳಲ್ಲಿ ಗುರುವಾರ ಬೃಹತ್ ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ. ಗುರುವಾರ ಸಂಜೆಯವರೆಗೆ 50ಕ್ಕೂ ಹೆಚ್ಚು ಕಂಪನಿಗಳನ್ನು ಶೋಧಿಸಲಾಗಿದೆ ಮತ್ತು ಸಾಲ ಹಣದ ಪ್ರಯೋಜನ ಪಡೆದ 25ಕ್ಕೂ ಹೆಚ್ಚು ಅಧಿಕಾರಿಗಳನ್ನು ಇ.ಡಿ ತಂಡ ಪ್ರಶ್ನಿಸಿದೆ. ತನಿಖೆ ಮತ್ತಷ್ಟು ವಿಸ್ತಾರಗೊಳ್ಳುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಪಾಲಕರ ಆರೈಕೆಗೆ 30 ದಿನ ರಜೆ

ದೆಹಲಿ: ಕೇಂದ್ರ ಸರಕಾರಿ ನೌಕರರು ವಯಸ್ಸಾದ ಪಾಲಕರ ಆರೈಕೆಗೆ 30 ದಿನಗಳ ರಜೆ ಪಡೆಯಬಹುದು ಎಂಬ ಆದೇಶ ಹೊರಬಿದ್ದಿದೆ. 'ಸೇವಾ ನಿಯಮಗಳ ಪ್ರಕಾರ ಕೇಂದ್ರ ಸರಕಾರಿ ನೌಕರರಿಗೆ 30 ದಿನಗಳ ವೇತನ ಸಹಿತ ರಜೆ ಸಿಗಲಿದೆ. ಇದನ್ನು ವೃದ್ಧ ಪಾಲಕರ ಆರೈಕೆ ಸೇರಿದಂತೆ ಯಾವುದೇ ವೈಯಕ್ತಿಕ ಕಾರಣಕ್ಕಾಗಿ ಪಡೆಯಬಹುದು' ಎಂದು ಕೇಂದ್ರ ಸಿಬ್ಬಂದಿ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಗುರುವಾರ ರಾಜ್ಯಸಭೆಯಲ್ಲಿ ತಿಳಿಸಿದರು. ಸರಕಾರಿ ನೌಕರರು ತಮ್ಮ ವೃದ್ಧ ಪಾಲಕರನ್ನು ಆರೈಕೆ ಮಾಡಲು ರಜೆ ಪಡೆಯಲು ಯಾವುದೇ ಅವಕಾಶವಿದೆಯೇ ಎಂಬ ಪ್ರಶ್ನೆಗೆ ಅವರು ಉತ್ತರಿಸಿದರು. ಕೇಂದ್ರ ನಾಗರಿಕ ಸೇವೆಗಳ (ರಜೆ) ನಿಯಮ 1972ರ ಪ್ರಕಾರ, ಕೇಂದ್ರ ಸರಕಾರಿ ನೌಕರರಿಗೆ ಇತರ ಅರ್ಹ ರಜೆಗಳನ್ನು ಹೊರತುಪಡಿಸಿ, 30 ದಿನಗಳ ಹೆಚ್ಚುವರಿ ವೇತನ ಸಹಿತ ರಜೆ, 20 ದಿನಗಳ ಅರ್ಧ ವೇತನ ರಜೆ, 8 ದಿನಗಳ ಸಾಂದರ್ಭಿಕ ರಜೆ ಮತ್ತು 2 ದಿನಗಳ ನಿರ್ಬಂಧಿತ ರಜೆಯನ್ನು ವಾರ್ಷಿಕವಾಗಿ ನೀಡಲಾಗುತ್ತದೆ. ಇದನ್ನು ವಯಸ್ಸಾದ ಪಾಲಕರ ಆರೈಕೆ ಸೇರಿದಂತೆ ಯಾವುದೇ ವೈಯಕ್ತಿಕ ಕಾರಣಗಳಿಗಾಗಿ ಪಡೆಯಬಹುದು ಎಂದು ಸಚಿವರು ಲಿಖಿತ ಉತ್ತರದಲ್ಲಿ ವಿವರಿಸಿದರು.

ಜು.28, 29ರಂದು ಸಿಂದೂರ ಚರ್ಚೆ: ಸಂಸತ್ತಿನ ಅಧಿವೇಶದಲ್ಲಿ ಆಪರೇಷನ್ ಸಿಂದೂರದ ಕುರಿತು ಜು. 28 ಹಾಗೂ 29ರಂದು ಚರ್ಚೆ ನಡೆಯಲಿದೆ. ಜು. 28ರಂದು ಲೋಕಸಭೆಯಲ್ಲಿ ಹಾಗೂ ಜು. 29ರಂದು ರಾಜ್ಯಸಭೆಯಲ್ಲಿ ಸಿಂದೂರದ ಬಗ್ಗೆ ಚರ್ಚೆಗೆ ಕೇಂದ್ರ ಸರಕಾರ ಅವಕಾಶ ಕಲ್ಪಿಸಿದೆ. ಉಭಯ ಸದನಗಳಿಗೂ 16 ತಾಸು ಚರ್ಚೆಗೆ ಸಮಯ ನಿಗದಿಪಡಿಸಲಾಗಿದೆ. ಚರ್ಚೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸರಕಾರದ ಪರ ಮಾತನಾಡುವ ನಿರೀಕ್ಷೆಯಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029 ದೂ: 080-4110 6508
ಇ-ಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಂಖ್ಯೆ: KWB/TEC/CE(B)/HYR/NGR OHT/578/2025-26 Dated: 23.07.2025
ಕಾಮಗಾರಿಯ ಹೆಸರು: ನಗರೋತ್ಥಾನ [ಮುನಿಸಿಪಾಲಿಟಿ]-4ರಡಿಯಲ್ಲಿ ಹಿರಿಯೂರು ನಗರದ ವಾರ್ಡ್ ಸಂಖ್ಯೆ-28ರಲ್ಲಿ 5.00 ಎಲ್‌ಎಲ್ ಆರ್‌ಸಿಸಿ ಓಹೆಚ್‌ಟಿ ನಿರ್ಮಾಣ ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಮಾಡುವುದು ಹಾಗೂ ಉದ್ದೇಶಿತ ಹೊಸ ಓಹೆಚ್‌ಟಿಗೆ ಪ್ರಸ್ತುತವಿರುವ ಡಿಐ ಮಾರ್ಗದಿಂದ 200 ಮಿಮೀ ವ್ಯಾಸದ ಡಿಐ-ಕೆ7 ರೈಸಿಂಗ್ ಮ್ಯೆನ್ ಒದಗಿಸುವುದು, ಅಳವಡಿಸುವುದು, ಪರೀಕ್ಷೆ ಮತ್ತು ಕಾರ್ಯಾಚರಣೆಗೊಳಿಸುವುದು.
ಇಂಡೆಂಟ್ ಸಂಖ್ಯೆ: KUWSDB/2025-26/WS/Work_Indent360
ಸಂಖ್ಯೆ: KWB/TEC/CE(B)/HYR/NGR PIPE/579/2025-26 Dated: 23.07.2025
ಕಾಮಗಾರಿಯ ಹೆಸರು: 2. ಹಿರಿಯೂರು ನಗರದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ [ಮುನಿಸಿಪಾಲಿಟಿ]-4 ರಡಿಯಲ್ಲಿ ಹಿರಿಯೂರು ನಗರ ವ್ಯಾಪ್ತಿಯ ಗಾಂಧಿ ವೃತ್ತದಿಂದ ಟಿಬಿ ವೃತ್ತದ ನಡುವೆ ರಸ್ತೆ ಅಗಲೀಕರಣದ ಉದ್ದೇಶದಿಂದ ಪ್ರಸ್ತುತ ಅಳವಡಿಸಿರುವ ನೀರು ಸರಬರಾಜು ಕೊಳವೆಮಾರ್ಗಗಳನ್ನು ಸ್ಥಳಾಂತರಿಸುವುದು.
ಇಂಡೆಂಟ್ ಸಂಖ್ಯೆ: KUWSDB/2025-26/WS/Work_Indent361
ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.inನಲ್ಲಿ ಸಂಪರ್ಕಿಸಬಹುದು.
ಸಹಿ/- ಮುಖ್ಯ ಅಭಿಯಂತರರು (ಬೆಂ),
ಡಿಐಪಿಆರ್/ಸಿಪಿ/2021/ಸಿಸಿಎಲ್/2025-26 ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101
e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ:08152-227443

ಇ-ಟೆಂಡರ್ ಪ್ರಕಟಣೆ- ಕೆಡಬ್ಲ್ಯು -4
ಟೆಂಡರ್ ಪ್ರಕಟಣೆ ಸಂಖ್ಯೆ-14/2025-26 ದಿನಾಂಕ: 23.07.2025

ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443 ಠೇವಣಿ ವಂತಿಗೆ ಅಡಿಯಲ್ಲಿ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಯ ಅಂದಾಜು ಮೊತ್ತ: ರೂ. 203.00 ಲಕ್ಷಗಳು ಮತ್ತು ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ** ಕಾಲಾವಧಿ : 11 ತಿಂಗಳು ನಿರ್ವಹಿಸಲು **3ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರಿಗೆ** ಕೆಪಿಪಿ ಪೋರ್ಟಲ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು-4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz.,http://kppp.karnataka. gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 07.08.2025 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 11.08.2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಕೆ.ಪಿ.ಪಿ ಪೋರ್ಟಲ್** ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು **ಕೆ.ಪಿ.ಪಿ ಪೋರ್ಟಲ್ (Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ
ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/-
ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:203/ಕೆಎಸ್‌ಎಂಸಿಎ/2025-26

ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ
ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೊಲೀಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ- 561203
ಸಂ.: DPA/TP/CLU/15/2025-26 ದಿನಾಂಕ: 24.07.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು 'ಕೈಗಾರಿಕಾ' ವಲಯದಿಂದ 'ವಸತಿ' ವಲಯಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ಜಮೀನಿನ ವಿವರಗಳು ಈ ಕೆಳಕಂಡಂತಿರುತ್ತವೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ (ಎ-ಗು)	ಬಿಐಎಪಿಎ ಯೋಜನಾ ಪ್ರಾಧಿಕಾರದ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ತುಲಸಾನ್ NEC Ltd.	ದೊಡ್ಡಬಳ್ಳಾಪುರ	ಕಸಬಾ	ವರದನಹಳ್ಳಿ	62/2	1-09	ಕೈಗಾರಿಕಾ	ವಸತಿ
2.	ತುಲಸಾನ್ NEC Ltd.	ದೊಡ್ಡಬಳ್ಳಾಪುರ	ಕಸಬಾ	ವರದನಹಳ್ಳಿ	62/3	1-28.25	ಕೈಗಾರಿಕಾ	ವಸತಿ

ಷರಾ: ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಕಾನೂನುಬದ್ಧವಾದ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆ, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬುದಾಗಿ ಅರ್ಜಿದಾರರು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ ಸದರಿ ಪ್ರದೇಶವನ್ನು 'ಕೈಗಾರಿಕಾ' ವಲಯದಿಂದ 'ವಸತಿ' ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.
ಸಹಿ/-ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿಗಳು, ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ, ದೊಡ್ಡಬಳ್ಳಾಪುರ.

ಸಮಾಚಾರ ಸಣ್ಣದಲ್ಲ

ವಂಚನೆ: ಕೆಎಸ್‌ಆರ್‌ಟಿಸಿ ನೌಕರ ಅಮಾನತಿಗೆ ಆದೇಶ

ಬೆಂಗಳೂರು: ನಕಲಿ ಸಹಿ ಮಾಡಿ ವಂಚನೆ ಮಾಡಿದ ಸಾರಿಗೆ ಸಿಬ್ಬಂದಿಯನ್ನು ಅಮಾನತು ಗೊಳಿಸಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆದೇಶಿಸಿದ್ದು, ಈ ಮೂಲಕ ಇಂತಹ ವಂಚನೆ ಸಹಿಸುವುದಿಲ್ಲ ಎಂಬು ದಾಗಿ ಇತರರಿಗೆ ಎಚ್ಚರಿಕೆಯನ್ನು ನೀಡಿದ್ದಾರೆ. ಕೆಎಸ್‌ಆರ್‌ಟಿಸಿಯ ಸಿಬ್ಬಂದಿಯೊಬ್ಬರು ನಕಲಿ ಸಹಿ ಮಾಡಿ ವಂಚನೆ ಮಾಡಿರುವ ಬಗ್ಗೆ ತನಿಖೆಗೆ ಸಚಿವರು ಆದೇಶಿಸಿದರು. ಆರೋಪ ಸಾಬೀತಾದ ಹಿನ್ನಲೆಯಲ್ಲಿ ಸಿಬ್ಬಂದಿಯ ಅಮಾನತಿಗೆ ಆದೇಶಿಸ ಲಾಗಿದೆ. ಬೆಂಗಳೂರು ಕೇಂದ್ರ ಕಚೇರಿಯ ಲೆಕ್ಕಪತ್ರ ಇಲಾಖೆಯ ಆಪರೇಟರ್ ರಿಚರ್ಡ್.ಜೆ. ಎಂಬುವ ವರು ಶಿವಮೊಗ್ಗ ಘಟಕದ ಸಹಾಯಕ ಕುಶಲಕರ್ಮಿ ನಾಗರಾಜಪ್ಪ ಅವರ ಮನವಿಯಂತೆ ದಾವಣಗೆರೆ ವಿಭಾಗಕ್ಕೆ ವರ್ಗಾವಣೆ ಮಾಡಿಸುವುದಾಗಿ ನಂಬಿಸಿ ಅವರಿಂದ, ವಜಾಗೊಂಡ ಚಾಲಕ ನಾಗರಾಜ ಎನ್.ಎ ಅವರನ್ನು ಪುನರ್ ನೇಮಕ ಮಾಡಿಸುವುದಾಗಿ ಮತ್ತು ಅವರ ಸ್ನೇಹಿತ ಚಂದ್ರಹಾಸ ಎಸ್ ಆಚಾರಿ, ಚಾಲಕ, ಬಿ.ಸಂ.1939 ರವರನ್ನು ಕುಂದಾಪುರ ಘಟಕದಿಂದ ಶಿವಮೊಗ್ಗ ವಿಭಾಗಕ್ಕೆ ವರ್ಗಾವಣೆ ಮಾಡಿಸುವುದಾಗಿ ನಂಬಿಸಿ, ಹಣವನ್ನು ಪಡೆದಿದ್ದರು. ಅವರಿಗೆ ನಕಲಿ ವರ್ಗಾವಣೆ ಮತ್ತು ಪುನರ್ ನೇಮಕಾತಿ ಆದೇಶಗಳನ್ನು ತಯಾ ರಿಸಿ ಸೃಷ್ಟಿಸಿ, ಈ ಆದೇಶಗಳ ಮೇಲೆ ಸಂಬಂಧಪಟ್ಟ ಇಲಾಖೆಗಳ ಮುಖ್ಯಸ್ಥರ ಸಹಿಗಳನ್ನು ಸ್ಕ್ಯಾನ್ ಮಾಡಿ ಅವರೇ ತಯಾರಿಸಿದ್ದ ಆದೇಶಗಳಿಗೆ ಲಗತ್ತಿಸಿ, ಪ್ರಿಂಟ್ ತೆಗೆಯುವ ಮೂಲಕ ನಕಲಿ ಆದೇಶಗಳನ್ನು ಸೃಷ್ಟಿಸಿದ್ದರು.

ಹೋರಾಟ ಮಾಡುವ ನೈತಿಕತೆ ಬಿಜೆಪಿಗೆ ಇಲ್ಲ: ಮುನಿಯಪ್ಪ

ಬೆಂಗಳೂರು: ಒಳಮೀಸಲಾತಿ ಅನುಷ್ಠಾನ ಕುರಿತು ಹೋರಾಟ ಮಾಡುವ ನೈತಿಕತೆ ಬಿಜೆಪಿಗೆ ಇಲ್ಲ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದ್ದಾರೆ. ವಿಧಾನಸೌಧದಲ್ಲಿ ಸುದ್ದಿ ಗೋಷ್ಠಿಯಲ್ಲಿ

ಮಾತನಾಡಿ, ಒಳ ಮೀಸಲಾತಿ ಅನುಷ್ಠಾನ ಕುರಿತು ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ನ್ಯಾಯ ಮೂರ್ತಿ ನಾಗ ಮೋಹನ್ ದಾಸ್ ರವರ ನೇತೃತ್ವದ ಏಕ ಸದಸ್ಯ ಆಯೋಗ ರಚಿಸಿ 101 ಜಾತಿಗಳ ನಿರ್ದಿಷ್ಟ ದತ್ತಾಂಶ ಸಂಗ್ರಹಿಸಿದ್ದು ಗ್ರಾಮಾಂತರ ಪ್ರದೇಶಗಳಲ್ಲಿ ನೂರರಷ್ಟು ಸಮೀಕ್ಷೆಯಾಗಿದೆ. ಬೆಂಗಳೂರು ನಗರದಲ್ಲಿ ಶೇ60 ರಷ್ಟು ಸಮೀಕ್ಷೆ ಕಾರ್ಯ ಮುಗಿದಿದ್ದು ಅಂತಿಮ ವರದಿ ಸಿದ್ದಪಡಿಸು ತ್ತಿದ್ದು ಅತಿ ಶೀಘ್ರದಲ್ಲಿ ಸರಕಾರಕ್ಕೆ ಸಲ್ಲಿಸದ್ದಾರೆ ಎಂದರು. ಈ ವರದಿ ಬಂದ ತಕ್ಷಣ ಇದರ ಕುರಿತು ಮುಖ್ಯಮಂತ್ರಿಗಳು ಸೂಕ್ತ ಕ್ರಮ ವಹಿಸಲಿದ್ದಾರೆ. ಆದರೆ, ವಿರೋಧ ಪಕ್ಷದವರು ಅನಗತ್ಯವಾಗಿ ಆಗಸ್ಟ್ 1ರಂದು ಹಮ್ಮಿಕೊಂಡಿರುವ ಪ್ರತಿಭಟನೆ ಕೈಬಿಡಬೇಕೆಂದು ಮನವಿ ಮಾಡಿದರು.

ಮೆಟ್ರೋ ಹಳದಿ ಮಾರ್ಗ: ಸುರಕ್ಷತಾ ತಪಾಸಣೆ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗದಲ್ಲಿ ಮಂಗಳವಾರದಿಂದ ಮೆಟ್ರೋ ಸುರಕ್ಷತಾ ಆಯುಕ್ತರ ತಂಡವು ಸುರಕ್ಷತಾ ತಪಾಸಣೆಯನ್ನು ಆರಂಭಿಸಿದೆ. ಬೆಂಗಳೂರಿನ ಆರ್‌ವಿ ರಸ್ತೆ ಮತ್ತು ಬೊಮ್ಮಸಂದ್ರ ಮಧ್ಯೆ ನಿರ್ಮಾಣವಾಗಿರುವ ಮೆಟ್ರೋ ಹಳದಿ ಮಾರ್ಗದ ಸುರಕ್ಷತಾ ತಪಾಸಣೆಯು ಆರಂಭವಾಗಿದ್ದು, ಸ್ವತಂತ್ರ ಸುರಕ್ಷತಾ ಮೌಲ್ಯಮಾಪನ ವರದಿಯನ್ನು ಸ್ವೀಕರಿಸಿದ ನಂತರ ಮೆಟ್ರೋ ಸುರಕ್ಷತಾ ಆಯುಕ್ತರ ತಂಡದಿಂದ ತಪಾಸಣೆ ಆರಂಭವಾಗಿದೆ. ಈ ಮಾರ್ಗವು ಆಗಸ್ಟ್ 15ರೊಳಗಾಗಿ ವಾಣಿಜ್ಯ ಸಂಚಾರವನ್ನು ಆರಂಭಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿದೆ.

ನಮ್ಮ ಮೆಟ್ರೋವು ಈ ಹಿಂದೆ ನಿಗದಿಪಡಿಸಿದಂತೆ ಜೂನ್ ತಿಂಗಳಿಗೆ ಈ ಮಾರ್ಗದ ಕಾಮಗಾರಿ ಮುಕ್ತಾಯಗೊಳಿಸಿದೆ. ಆದರೆ, ಕಾಮಗಾರಿ ಪರಿಶೀಲನೆ, ಸುರಕ್ಷತಾ ಕಾರ್ಯಗಳ ಪರಿಶೀಲನೆ, ಕೇಂದ್ರದ ರೈಲ್ವೆ ಸಚಿವಾಲಯದ ಅನುಮತಿ ಸೇರಿ ಇನ್ನಿತರೆ ಕಾರಣಗಳಿಂದ ರೈಲು ಸಂಚಾರಕ್ಕೆ ಆರಂಭವಾಗುವುದು ಒಂದೂವರೆ ತಿಂಗಳಷ್ಟು ವಿಳಂಬವಾಗಿದ್ದು, ಕೊನೆಗೂ ಅಂತಿಮ ಹಂತ ತಲುಪಿದೆ. ಮಂಗಳವಾರ ಬೆಳಗ್ಗೆಯಿಂದ ಮಾರ್ಗದ ತಪಾಸಣೆ ಆರಂಭವಾಗಿದ್ದು, ಜು.24ರವರೆಗೆ ಸುರಕ್ಷತಾ ತಪಾಸಣೆ ಕಾರ್ಯವನ್ನು ಮಾಡಲಿದ್ದಾರೆ. ರೈಲ್ವೆ ಸುರಕ್ಷತಾ ಆಯುಕ್ತರು ಈ ವೇಳೆ ನಿಲ್ದಾಣಗಳ ಸೌಲಭ್ಯಗಳು, ಹಳಿಗಳ ಸ್ಥಿತಿ, ಟ್ರ್ಯಾಕ್ ಜೋಡಣೆ, ರೈಲ್ವೆ ಸಿಗ್ನಲಿಂಗ್ ವ್ಯವಸ್ಥೆ, ಎಮರ್ಜೆನ್ಸಿ ಪ್ರತಿಕ್ರಿಯೆಗಳ ಸಮೀಕ್ಷೆ ಮುಂತಾದವುಗಳನ್ನು ಪರಿಶೀಲನೆ ನಡೆಯಲಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ **ಜೈರಾಮ್ ರಮೇಶ್** } ಕಾಂಗ್ರೆಸ್ ನಾಯಕ

ಗಾಜಾದಲ್ಲಿ ಇಸ್ರೇಲ್ ನಡೆಸುತ್ತಿರುವ ದೌರ್ಜನ್ಯವು ವಿವರಣೆಗೆ ನಿಲುಕದ್ದಾಗಿದ್ದು, ಪ್ರಧಾನಿ ಮೋದಿ ಅವರ ಸ್ನೇಹಿತ ನೆತನ್ಯಾಹು ಅವರು ಪ್ಯಾಲೆಸ್ಟೀನ್ ಜನರ ಮೇಲೆ ನಡೆಸುತ್ತಿರುವ ದೌರ್ಜನ್ಯವು ನಿಜಕ್ಕೂ ಘೋರ ವಾಗಿದೆ. ಈ ವಿಷಯದಲ್ಲಿ ಮೋದಿ ಮೌನ ವಹಿಸಿದ್ದು, ಭಾರತವು ಈ ಮಟ್ಟದ ನೈತಿಕ ಹೇಡಿತನವನ್ನು ಎಂದೂ ಪ್ರದರ್ಶಿಸಿರಲಿಲ್ಲ.

ಕಂಜನ್ ಸೇರಿ 9 ಆನೆಗಳ ಮೊದಲ ಪಟ್ಟಿ ಬಿಡುಗಡೆ | ಜಂಬೂ ಸವಾರಿಗೆ ಈ ಬಾರಿಯೂ ಅಭಿಮನ್ಯು ಸಾರಥ್ಯ

ಆ.4ರಂದು ವೀರನಹೊಸಳ್ಳಿಯಿಂದ ಗಜಪಯಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಈ ಬಾರಿಯೂ ಅಭಿಮನ್ಯು ದಸರಾ ಜಂಬೂಸವಾರಿಯಲ್ಲಿ ಅಂಬಾರಿ ಹೊರಲಿದ್ದು, ಆ.4ರಂದು ಹುಣಸೂರು ಬಳಿಯ ವೀರನಹೊಸಳ್ಳಿಯಿಂದ ವಿಧ್ಯುಕ್ತವಾಗಿ ಗಜಪಯಣಕ್ಕೆ ಚಾಲನೆ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ವಿಕಾಸಸೌಧದಲ್ಲಿ 2025ನೇ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಒಟ್ಟು 14 ಆನೆಗಳ ಪೈಕಿ 9 ಆನೆಗಳ ಪಟ್ಟಿ ಬಿಡುಗಡೆ ಮಾಡಿದ ಅವರು, 2020ರಿಂದ ವಿಜಯ ದಶಮಿಯ ದಿನದಂದು ಜಂಬೂ ಸವಾರಿಯಲ್ಲಿ ನಾಡದೇವಿ ಚಾಮುಂಡೇಶ್ವರಿ ವಿಗ್ರಹವಿರುವ ಚಿನ್ನದ ಅಂಬಾರಿ ಹೊರುತ್ತಿರುವ ಅಭಿಮನ್ಯುವೇ ಈ ಬಾರಿಯೂ ಕ್ಯಾಪ್ಟನ್ ಆಗಲಿದ್ದಾನೆ. ನಾಗರಹೊಳೆಯ ಮತ್ತಿಗೋಡು ಶಿಬಿರದಲ್ಲಿರುವ 59 ವರ್ಷ ವಯಸ್ಸಿನ ಅಭಿಮನ್ಯು 300ಕ್ಕೂ ಹೆಚ್ಚು ಆನೆ ಸೆರೆ ಕಾರ್ಯಾಚರಣೆ ಹಾಗೂ 80ಕ್ಕೂ ಹೆಚ್ಚು ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವ ಪ್ರಮುಖ ಕುಮ್ಕಿ ಆನೆ ಎಂದೇ ಖ್ಯಾತನಾಗಿದ್ದಾನೆ ಎಂದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ.ರೇ, ಉನ್ನತಾಧಿಕಾರಿ ಮಹೇಶ್ ಶಿರೂರ್, ಮನೋಜ್ ಕುಮಾರ್, ಮಾಲತಿ, ಪ್ರಭುಗೌಡ ಬಿರಾದಾರ್ ಉಪಸ್ಥಿತರಿದ್ದರು.

ವಿಕಾಸಸೌಧದಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ 2025ನೇ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಒಟ್ಟು 14 ಆನೆಗಳ ಪೈಕಿ 9 ಆನೆಗಳ ಪಟ್ಟಿ ಬಿಡುಗಡೆ ಮಾಡಿದರು. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ, ಮುಖ್ಯ ವನ್ಯಜೀವಿ ಪರಿಪಾಲಕ ಪಿ.ಸಿ.ರೇ, ಉನ್ನತಾಧಿಕಾರಿ ಮಹೇಶ್ ಶಿರೂರ್, ಮನೋಜ್ ಕುಮಾರ್, ಮಾಲತಿ, ಪ್ರಭುಗೌಡ ಬಿರಾದಾರ್ ಇದ್ದರು.

ಮೊದಲ ಹಂತದಲ್ಲಿ ಮೈಸೂರಿಗೆ ಆಗಮಿಸುವ ಆನೆಗಳು

ಈ ಬಾರಿಯ ಜಂಬೂಸವಾರಿಯಲ್ಲಿ ಮತ್ತಿಗೋಡು ಶಿಬಿರದ ಭೀಮ (25 ವರ್ಷ), ದುಬಾರೆ ಶಿಬಿರದ ಕಂಜನ್ (24), ಧನಂಜಯ (44) ಮತ್ತು ಪ್ರಶಾಂತ್ (53), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡ ಹರವೆ ಶಿಬಿರದ ಏಕಲವ್ಯ (40) ಗಂಡಾನೆಗಳು ಹಾಗೂ ದುಬಾರೆ ಶಿಬಿರದ ಕಾವೇರಿ (45) ಹಾಗೂ ಬಳ್ಳೆಯ ಲಕ್ಷ್ಮಿ (53) ಹೆಣ್ಣಾನೆಗಳು ಮೊದಲ ಹಂತದಲ್ಲಿ ಮೈಸೂರಿಗೆ ಆಗಮಿಸಲಿವೆ ಎಂದು ಮಾಹಿತಿ ನೀಡಿದ್ದಾರೆ.

ಮೊದಲ ಹಂತದಲ್ಲಿ 9 ಆನೆಗಳನ್ನು ಹಾಗೂ ಎರಡನೇ ಹಂತದಲ್ಲಿ 5 ಆನೆಗಳನ್ನು ಕಾಡಿನಿಂದ ಮೈಸೂರಿಗೆ ತರಲಾಗುವುದು. ಕಾಡಿನಿಂದ ನಾಡಿಗೆ ಬರುವ ಈ ಆನೆಗಳಿಗೆ ಆ.4ರಂದು ನಡೆಯುವ ಗಜಪಯಣದಲ್ಲಿ ವಿಧ್ಯುಕ್ತವಾಗಿ ಮತ್ತು ಸಾಂಪ್ರದಾಯಿಕವಾಗಿ ಬೀಳ್ಕೊಡಲಾಗುವುದು.

-ಈಶ್ವರ್ ಖಂಡ್ರೆ, ಅರಣ್ಯ ಸಚಿವ

ನೆರೆರಾಜ್ಯದಿಂದ ದನಕರು ತಂದು ಮೇಯಿಸುವುದಕ್ಕೆ ಮಾತ್ರ ಕಡಿವಾಣ: ಖಂಡ್ರೆ

ಜಾನುವಾರು ಮೇಯಿಸಲು ಸ್ಥಳೀಯರಿಗೆ ಅವಕಾಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅರಣ್ಯದಲ್ಲಿ ಜಾನುವಾರುಗಳ ಮೇಯಿಸುವುದಕ್ಕೆ ರಾಜ್ಯ ಸರಕಾರ ನಿಷೇಧ ಹೇರಿದ್ದನ್ನು ಅರಣ್ಯ ಭಾಗದ ಸ್ಥಳೀಯರು ವಿರೋಧಿಸಿದ ಬೆನ್ನಲ್ಲೇ ಇದೀಗ, ಹೊರರಾಜ್ಯದ ಜಾನುವಾರುಗಳಿಗೆ ಮಾತ್ರ ನಿಷೇಧಿಸಲಾಗಿದೆ ಎಂದು ಸ್ಪಷ್ಟಪಡಿಸಲಾಗಿದೆ.

ಈ ಸಂಬಂಧ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿದ್ದು, ಅರಣ್ಯ ಹಕ್ಕು ಕಾಯಿದೆ-2006 ಅಡಿಯಲ್ಲಿ ಅರಣ್ಯವಾಸಿಗಳು ಮತ್ತು ಬುಡಕಟ್ಟು ಜನಾಂಗದವರಿಗೆ ಕಾಡಿನಲ್ಲಿ ತಮ್ಮ ಜಾನುವಾರು ಮೇಯಿಸಲು ಅವಕಾಶವಿದೆ. ಆದರೆ ನೆರೆರಾಜ್ಯದಿಂದ ಸಾವಿರಾರು ಸಂಖ್ಯೆಯಲ್ಲಿ ದನಕರು ತಂದು ಮೇಯಿಸುವುದಕ್ಕೆ ಮಾತ್ರ ಕಡಿವಾಣ ಹಾಕಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ಮದ್ರಾಸ್ ಹೈಕೋರ್ಟ್‌ನಲ್ಲಿ ಈ ಸಂಬಂಧ ಸುದೀರ್ಘವಾದ ಪ್ರತಿವಾದ ನಡೆದು, ಅಂತಿಮವಾಗಿ ತಮಿಳುನಾಡಿನ ಅರಣ್ಯಗಳಲ್ಲಿ ಜಾನುವಾರು ಮೇಯಿಸಲು ಅವಕಾಶ ಇರುವುದಿಲ್ಲ ಎಂಬ ತೀರ್ಪು ಬಂದಿದೆ. ಆ ತೀರ್ಪಿನ ಬಳಿಕ ರಾಜ್ಯಕ್ಕೆ ನೆರೆ ರಾಜ್ಯದಿಂದ ಸಾವಿರಾರು ಸಂಖ್ಯೆಯಲ್ಲಿ ಜಾನುವಾರು ತಂದು ರಾಜ್ಯದ ಕಾಡಿನಲ್ಲಿ ಮೇಯಿಸಲಾಗುತ್ತಿದೆ. ತಿಂಗಳುಗಟ್ಟಲೆ ಹೀಗೆ ಕಾಡಿನಲ್ಲಿ ದನಕರು ಮೇಯಿಸುವುದರಿಂದ ಕಾಡಿನ ಹುಲ್ಲುಗಾವಲು ಬರಿದಾಗುತ್ತಿದೆ, ಜತೆಗೆ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ. ಇದು ವನ್ಯಜೀವಿಗಳಿಗೆ ವಿಷ ಹಾಕುವ ಹಂತ ತಲುಪಿದ್ದ ಹಿನ್ನೆಲೆ ಕಾನೂನು ರೀತ್ಯ ಮತ್ತು ನಿಯಮಾನುಸಾರ ಕ್ರಮ ವಹಿಸಲು ಸೂಚಿಸಲಾಗಿದೆ. ಆದರೆ ರಾಜ್ಯದ ಕೆಲವು ಅರಣ್ಯ ಭಾಗದಲ್ಲಿ ಹಲವು ವರ್ಷದಿಂದ ಇಂತಹ ರೂಢಿ ಇದೆ ಎಂದರು.

ಸಾಂಕ್ರಾಮಿಕ ಕಾಯಿಲೆಗಳು ಹಬ್ಬುವ ಅಪಾಯ

ಮಲೆಮಹದೇಶ್ವರ ಬೆಟ್ಟ ವನ್ಯಜೀವಿಧಾಮದ ವ್ಯಾಪ್ತಿಯಲ್ಲಿ ಸುಮಾರು 33 ಸಾವಿರ ದನಕರುಗಳಿವೆ ಎಂದು ಪಶುಸಂಗೋಪನಾ ಇಲಾಖೆ ಅಂಕಿ ಅಂಶ ತಿಳಿಸುತ್ತದೆ. ಇಷ್ಟೊಂದು ದನಕರುಗಳನ್ನು ಒಟ್ಟಿಗೆ ಕಾಡಿಗೆ ತೆಗೆದುಕೊಂಡು ಹೋಗುವುದರಿಂದ ವನ್ಯಜೀವಿಗಳಾದ ಆನೆ, ಕಾಡೆಮ್ಮೆ, ಕಾಡುಕೋಣ, ಜಿಂಕೆ, ಕಡವೆ ಇತ್ಯಾದಿಗಳಿಗೆ ಮೇವಿನ ಕೊರತೆ, ನೀರಿನ ಕೊರತೆ ಎದುರಾಗುತ್ತಿದೆ. ಕಾಲುಬಾಯಿ ರೋಗ, ಚರ್ಮಗಂಟು ಅಥವಾ ಬಾವು, ನೆರಡಿ ಮೊದಲಾದ ಸಾಂಕ್ರಾಮಿಕ ಕಾಯಿಲೆಗಳು ವನ್ಯಜೀವಿಗಳಿಗೂ ಹಬ್ಬುವ ಅಪಾಯ ಇರುತ್ತದೆ. ಈ ಹಿನ್ನೆಲೆ ಕಾನೂನು ರೀತ್ಯ ಜಾನುವಾರುಗಳನ್ನು ಕಾಡಿನಲ್ಲಿ ಮೇಯಿಸುವುದನ್ನು ನಿಷೇಧಿಸಲು ಸೂಚಿಸಲಾಗಿದೆ. ಆದರೆ ಸ್ಥಳೀಯರ ದನಕರುಗಳಿಗೆ ಮತ್ತು ಅರಣ್ಯಹಕ್ಕು ಕಾಯಿದೆಯಡಿ ಹಕ್ಕು ಪಡೆದವರಿಗೆ ವಿನಾಯಿತಿ ನೀಡಲಾಗುವುದು ಎಂದು ಸ್ಪಷ್ಟನೆ ನೀಡಿದ್ದಾರೆ.

ಶಿವ ದೇಗುಲಕ್ಕೆ ಥಾಯ್-ಕಾಂಬೋಡಿಯಾ ಘರ್ಷಣೆ!

ಬ್ಯಾಂಕಾಕ್: ಇಲ್ಲಿನ ವಿಶ್ವ ಪ್ರಸಿದ್ಧ ಶಿವನ ದೇವಸ್ಥಾನದ ವಿಚಾರದಲ್ಲಿ ಥಾಯ್ಲೆಂಡ್ ಮತ್ತು ಕಾಂಬೋಡಿಯಾದ ಮಧ್ಯೆ ಮತ್ತೆ ಘರ್ಷಣೆ ನಡೆಯುತ್ತಿದ್ದು ಕನಿಷ್ಠ 13 ಮಂದಿ ಮೃತಪಟ್ಟಿದ್ದಾರೆ. ಮೃತರಲ್ಲಿ ಹೆಚ್ಚಿನವರು ನಾಗರಿಕರಾಗಿದ್ದಾರೆ.

ಬುಧವಾರ ದಟ್ಟವಾದ ಅರಣ್ಯದಿಂದ ಕೂಡಿದ ಡ್ಯಾಂಗ್ರೆಕ್ ಪರ್ವತ ಶ್ರೇಣಿಯಲ್ಲಿ ಕಾಂಬೋಡಿಯನ್ ಡ್ರೋನ್ ಪತ್ತೆಯಾಗಿದೆ ಎಂದು ಥಾಯ್ಲೆಂಡ್ ಹೇಳಿತ್ತು. ಇದಾದ ಸ್ವಲ್ಪ ಸಮಯದ ನಂತರ, ನೆಲಬಾಂಬ್ ಸ್ಫೋಟಗೊಂಡು ಐವರು ಥಾಯ್ಲೆಂಡ್ ಸೈನಿಕರು ಗಾಯಗೊಂಡಿದ್ದು ಈಗ ಗಲಾಟೆಗೆ ಮೂಲ ಕಾರಣ. ಈ ನೆಲ ಬಾಂಬ್ ಅನ್ನು ಕಾಂಬೋಡಿಯಾ ಇಟ್ಟಿತ್ತು ಎಂದು ಥಾಯ್ಲೆಂಡ್ ದೂರಿದೆ. ಉದ್ವಿಗ್ನ ಪರಿಸ್ಥಿತಿ ನಿರ್ಮಾಣಗೊಂಡ ಬೆನ್ನಲ್ಲೇ ಎರಡೂ ದೇಶಗಳು ರಾಯಭಾರಿಗಳನ್ನು ಹೊರ ಹಾಕಿವೆ. ನಂತರ ಥಾಯ್ಲೆಂಡ್ ಕಾಂಬೋಡಿಯಾದ ಮೇಲೆ ಡ್ರೋನ್ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಕಾಂಬೋಡಿಯಾದ ಫಿರಂಗಿ ಗುಂಡಿನ ದಾಳಿ ನಡೆಸಿದೆ. ಎರಡು ದೇಶಗಳು ಗಡಿಯನ್ನು ಮುಚ್ಚಿದ್ದು ತನ್ನ ದೇಶದ ಜನರು ಮರಳುವಂತೆ ಸೂಚಿಸಿವೆ. ಕಾಂಬೋಡಿಯಾದ ದಾಳಿಯಿಂದ ಒಂಬತ್ತು ಥಾಯ್ ನಾಗರಿಕರು ಸಾವನ್ನಪ್ಪಿದ್ದಾರೆ ಎಂದು ಥಾಯ್ ಅಧಿಕಾರಿಗಳು ಹೇಳಿದಾರೆ. ಇದಕ್ಕೆ ಪ್ರತಿಯಾಗಿ ಥಾಯ್ ಸೈನ್ಯವು ಕಾಂಬೋಡಿಯನ್ ಪಡೆಗಳ ಮೇಲೆ ಬಿಎಂ-21 ರಾಕೆಟ್‌ಗಳನ್ನು ಹಾರಿಸಿವೆ. ಅಷ್ಟೇ ಅಲ್ಲದೇ ಎಫ್ 16 ಯುದ್ಧ ವಿಮಾನದ ಮೂಲಕ ಏರ್ ಸ್ಟ್ರೈಕ್ ಮಾಡಿವೆ.

ಜ್ಞಾನಭಾರತಿಯಲ್ಲಿ ವಾಹನಕ್ಕೆ ನಿರ್ಬಂಧ?

ಬೆಂಗಳೂರು: ಜ್ಞಾನಭಾರತಿ ಆವರಣದಲ್ಲಿ ಹೆಚ್ಚಿನ ವಾಹನ ದಟ್ಟಣೆಯಿಂದಾಗಿ ಶಬ್ದ ಮಾಲಿನ್ಯ, ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ವಾಹನ ಸಂಚಾರ ನಿರ್ಬಂಧಿಸಲು ಸರಕಾರ ಹಾಗೂ ಪೊಲೀಸ್ ಇಲಾಖೆಗೆ ಪತ್ರ ಬರೆಯಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಬೆಂಗಳೂರು ವಿ.ವಿ ತಿಳಿಸಿದೆ. ಜ್ಞಾನಭಾರತಿ ಆವರಣದಲ್ಲಿ ಪ್ರತಿ ನಿತ್ಯ 25 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುವುದರಿಂದ ವಾಹನ ದಟ್ಟಣೆಯುಂಟಾಗಿದ್ದು ಇದರಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ಸಮಸ್ಯೆಯಾಗುತ್ತಿದೆ. ಅನೇಕ ಅಪಘಾತಗಳೂ ಸಂಭವಿಸಿರುವುದರಿಂದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ವಿದ್ಯಾರ್ಥಿಗಳು ಹಾಗೂ ಶೈಕ್ಷಣಿಕ ಚಟುವಟಿಕೆಗಳ ಹಿತದೃಷ್ಟಿಯಿಂದ ವಿ.ವಿ.ಗೆ ಹಾದುಹೋಗುವ ರಸ್ತೆಯಲ್ಲಿ ಸಾರ್ವಜನಿಕ ವಾಹನ ಸಂಚಾರವನ್ನು ನಿರ್ಬಂಧಿಸಬೇಕು ಎಂದು ಸಭೆಯಲ್ಲಿ ಸೂಚಿಸಲಾಯಿತು. ಜ್ಞಾನಭಾರತಿ ಆವರಣದಲ್ಲಿ ಯಾವುದೇ ವ್ಯಕ್ತಿ ಮತ್ತು ಸಂಘ ಸಂಸ್ಥೆಗಳು ಗಿಡ ನೆಡುವುದಾದರೆ ಸಿಂಡಿಕೇಟ್ ಪೂರ್ವಾನುಮತಿ ಪಡೆದುಕೊಳ್ಳುವಂತೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು ಮತ್ತು ಜ್ಞಾನಭಾರತಿ ವಾಯು ವಿಹಾರಿಗಳ ಸಂಘ ಸೇರಿದಂತೆ ಸಂಘ ಸಂಸ್ಥೆಗಳು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಯಾವುದೇ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧಿಸಲು ನಿರ್ಣಯಿಸಲಾಯಿತು.

ವಾಣಿಜ್ಯ ಉದ್ದೇಶದ ಬಳಕೆ: ನೆಲಮಾಳಿಗೆ ತೆರವಿಗೆ ಆದೇಶ

ಬೆಂಗಳೂರು: ನಗರದಲ್ಲಿ ಅವೈಜ್ಞಾನಿಕವಾಗಿ, ಅಕ್ರಮ ಅವ್ಯವಸ್ಥಿತ ಬಹು ಅಂತಸ್ತಿನ ಕಟ್ಟಡಗಳು ತಲೆ ಎತ್ತಿದ್ದು, ಈ ಹಿನ್ನೆಲೆ ನೆಲಮಹಡಿಯಲ್ಲಿ ಪಾರ್ಕಿಂಗ್ ಉದ್ದೇಶಕ್ಕೆ ಹೊರತುಪಡಿಸಿ ವಾಣಿಜ್ಯ ಉದ್ದೇಶಕ್ಕೆ ನಡೆಸಲಾಗುತ್ತಿರುವ ಮಳಿಗೆಗಳ ತೆರವುಗೊಳಿಸುವಂತೆ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿದೆ. ಅಕ್ರಮ, ಅವೈಜ್ಞಾನಿಕ ಕಟ್ಟಡಗಳಿಂದಾಗಿ ಅವ ಘಡ ಹಾಗೂ ಪ್ರಮಾದ ಗಳುಂಟಾಗಿರುವ ಹಿನ್ನೆಲೆ ಮಹತ್ವದ ಸಭೆ ನಡೆಸಿರುವ ಮುಖ್ಯ ಆಯುಕ್ತರು ನೆಲಮಳಿಗೆಗಳಲ್ಲಿ ಪಾರ್ಕಿಂಗ್ ಹೊರತುಪಡಿಸಿ ವಾಣಿಜ್ಯ ಉದ್ದೇಶಕ್ಕಾಗಿ ಬಳಕೆಯಾಗುತ್ತಿರುವ ಮಳಿಗೆಗಳನ್ನು ತೆರವುಗೊಳಿಸಲು ಸೂಚನೆ ನೀಡಿದ್ದಾರೆ.

ಕೌಶಲ ತರಬೇತಿ ಕೇಂದ್ರ ಸ್ಥಾಪನೆ

ಬೆಂಗಳೂರು: ಇ.ವೈ ಗ್ಲೋಬಲ್ ಡೆಲಿವರಿ ಸರ್ವಿಸಸ್, ಲರ್ನಿಂಗ್ ಲಿಂಕ್ಸ್ ಫೌಂಡೇಶನ್ ಸಹಯೋಗದೊಂದಿಗೆ ಬೆಂಗಳೂರಿನ ಸರಕಾರಿ ಪ್ರೌಢ ಶಾಲೆಯೊಂದರಲ್ಲಿ ತನ್ನ ಪ್ರಪ್ರಥಮ ಗ್ರೀನ್ ಸ್ಕಿಲ್ ಸೆಂಟರ್ ಆಫ್ ಎಕ್ಸೆಲೆನ್ಸ್ ಸ್ಥಾಪಿಸಲಾಗಿದೆ. ಈ ಕೇಂದ್ರವು ಕೌಶಲ ಹಾಗೂ ವಿಕಸನಗೊಳ್ಳುತ್ತಿರುವ ತಂತ್ರಜ್ಞಾನಗಳಲ್ಲಿ ವಾಸ್ತವ ಜ್ಞಾನ ಮತ್ತು ಕೌಶಲಗಳೊಂದಿಗೆ ಅವಕಾಶ ವಂಚಿತ ಸಮುದಾಯಗಳ 1,200ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಗುರಿ ಹೊಂದಿದೆ. ವಿದ್ಯಾರ್ಥಿಗಳಿಗಾಗಿ ವಿನ್ಯಾಸಗೊಂಡಿರುವ ಗ್ರೀನ್ ಸ್ಕಿಲ್ಸ್ ಕೇಂದ್ರಗಳು, ಹವಾಮಾನ ಬದಲಾವಣೆ, ಜೈವಿಕ ವೈವಿಧ್ಯತೆ, ತ್ಯಾಜ್ಯ ನಿರ್ವಹಣೆ, ನವೀಕರಿಸಬಹುದಾದ ಶಕ್ತಿ ಮತ್ತು ಎ.ಐ ಹಾಗೂ ಅನಲಿಟಿಕ್ಸ್ ನಂತಹ ಡಿಜಿಟಲ್ ಆವಿಷ್ಕಾರಗಳ ಕ್ಷೇತ್ರಗಳಲ್ಲಿ ವಾಸ್ತವ, ಪ್ರಾಜೆಕ್ಟ್-ಆಧಾರಿತ ಕಲಿಕೆಯನ್ನು ಒದಗಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಿ.ವಿ. ಮಹೇಶ್ ಚಂದ್ರ

2047ರ ವೇಳೆಗೆ 5 ಟ್ರಿಲಿಯನ್ (5 ಲಕ್ಷ ಕೋಟಿ) ಅಮೆರಿಕನ್ ಡಾಲರ್ ಆರ್ಥಿಕ ಶಕ್ತಿಯಾಗಿ ಅಭಿವೃದ್ಧಿ ಹೊಂದುವ ಗುರಿ ಇಟ್ಟುಕೊಂಡಿರುವ ಭಾರತ, ಜಾಗತಿಕ ಮಟ್ಟದ ಮಾರುಕಟ್ಟೆಗಳಲ್ಲಿ ದೊಡ್ಡ ಮಟ್ಟ ದಲ್ಲಿ ಮಾರಾಟ ವಹಿವಾಟು ನಡೆಸುವುದಕ್ಕೆ ಯತ್ನಿಸುತ್ತಿದೆ. ವಿವಿಧ ದೇಶಗಳ ಜತೆಗಿನ ತನ್ನ ವ್ಯಾಪಾರ ವಹಿವಾಟು ಸರಾಗ ವಾಗಿ ಸಾಗಲಿ ಎಂಬ ಉದ್ದೇಶದಿಂದ ಭಾರತ ಹಲ ವಾರು ದೇಶಗಳ ಜತೆಗೆ 'ಮುಕ್ತ ವ್ಯಾಪಾರ ಒಪ್ಪಂದ' ವನ್ನು ಮಾಡಿಕೊಳ್ಳುತ್ತಾ ಬಂದಿದೆ. ಸದ್ಯ ಬ್ರಿಟನ್ ಸರಕಾರದ ಜತೆಗೂ ಮುಕ್ತ ರೀತಿಯಲ್ಲಿ ವ್ಯಾಪಾರ ವಹಿವಾಟು ನಡೆಸುವ ಸಲುವಾಗಿ ಭಾರತ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಮಾಡಿಕೊಳ್ಳುತ್ತಿದೆ. ಮಾತುಕತೆ ಅಂತಿಮ ಹಂತದಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಅವರೂ ಬ್ರಿಟನ್ ಪ್ರವಾಸದಲ್ಲಿದ್ದಾರೆ. ಮೋದಿ ಮತ್ತು ಸ್ಟಾರ್ಮರ್ ಉಪಸ್ಥಿತಿಯಲ್ಲಿಯೇ ಎರಡೂ ದೇಶಗಳ ವಾಣಿಜ್ಯ ಸಚಿವರು ಗುರುವಾರ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ)ಕ್ಕೆ ಸಹಿ ಹಾಕಿದ್ದಾರೆ. ಇದರಿಂದ ಎರಡೂ ದೇಶಗಳ ನಡುವಿನ ವಾರ್ಷಿಕ ವ್ಯಾಪಾರ ವಹಿವಾಟು '2550 ಕೋಟಿ ಪೌಂಡ್ ಸ್ಟರ್ಲಿಂಗ್ (2,98,350 ಕೋಟಿ ರು.)ಗಳಷ್ಟು ಗಾತ್ರಕ್ಕೆ ವೃದ್ಧಿ ಕಾಣುವ ನಿರೀಕ್ಷೆ ಇದೆ.

ಉಭಯತ್ರರಿಗೂ ಲಾಭದಾಯಕ ಎಫ್‌ಟಿಎ

'ಮುಕ್ತ ವ್ಯಾಪಾರ ಒಪ್ಪಂದ' ಎಂಬುದು ಭಾರತಕ್ಕಷ್ಟೇ ಅಲ್ಲ, ಒಪ್ಪಂದಕ್ಕೆ ಸಹಿ ಹಾಕಿದ ಇನ್ನೊಂದು ದೇಶಕ್ಕೂ ಭಾರತದ ಜತೆಗಿನ ವ್ಯಾಪಾರ ವಹಿವಾಟನ್ನು ಸರಾಗವಾಗಿಸುತ್ತದೆ.

ಒಪ್ಪಂದಕ್ಕೆ ಒಳಪಟ್ಟ ದೇಶವು ಭಾರತದ ಮಾರುಕಟ್ಟೆಗಳಲ್ಲಿ ಪೂರ್ವ ನಿಗದಿತ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಮುಕ್ತ ಅವಕಾಶವಿರುತ್ತದೆ. ಆ ಉತ್ಪನ್ನಗಳನ್ನು ಭಾರತಕ್ಕೆ ರಫ್ತು ಮಾಡುವುದಕ್ಕೆ ಆ ದೇಶ ಪ್ರತಿ ಬಾರಿಯೂ ಭಾರತ ಸರಕಾರದ ಅನುಮತಿ ಕೇಳಬೇಕಾಗಿ ಬರುವುದಿಲ್ಲ. ಮುಕ್ತ ವ್ಯಾಪಾರ ಒಪ್ಪಂದದ ಮತ್ತೊಂದು ಅನುಕೂಲವೆಂದರೆ ಒಪ್ಪಂದಕ್ಕೆ ಒಳಪಟ್ಟ ದೇಶಗಳಿಗೆ ಅವು ಭಾರತದ ಮಾರುಕಟ್ಟೆಗೆ ರಫ್ತು ಮಾಡುವ ಸರಕುಗಳಿಗೆ ಹೆಚ್ಚಿನ ತೆರಿಗೆ ಹೊರೆಯೂ ಇರುವುದಿಲ್ಲ. ಅದೇ ರೀತಿ ಭಾರತದಲ್ಲಿ ತಯಾರಾದ ಸರಕುಗಳಿಗೂ ಒಪ್ಪಂದ ಮಾಡಿಕೊಂಡ ದೇಶದಲ್ಲಿ ತೆರಿಗೆ ಹೊರೆ ಕಡಿಮೆ ಇರುತ್ತದೆ ಅಥವಾ ಶೂನ್ಯ ವಾಗಿರುತ್ತದೆ. ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವುದರಿಂದ ಉಭಯ ದೇಶಗಳಿಗೂ ಆಮದು-ರಫ್ತು ವಹಿವಾಟಿನಲ್ಲಿ ದೊಡ್ಡ ಮಟ್ಟದಲ್ಲಿ ಪ್ರಯೋಜನವಿರುತ್ತದೆ. ತೆರಿಗೆ ಹೊರೆ ತಗ್ಗುತ್ತದೆ, ಪೂರ್ವಾನುಮತಿಗಾಗಿ ಕಾಯುವ ಅಗತ್ಯವಿಲ್ಲದೇ, ಹೆಚ್ಚುವರಿ ಕಾಗದಪತ್ರಗಳ ಗೋಜಿಲ್ಲದೇ, ಹೆಚ್ಚಿನ ನಿರ್ಬಂಧಗಳ ತಾಕಲಾಟವಿಲ್ಲದೇ, ಸರಕು ಸಾಗಣೆ ಮತ್ತು ಮಾರುಕಟ್ಟೆಯಲ್ಲಿ ಮಾರಾಟ ಎಂಬುದೆಲ್ಲವೂ ಬಲು ಸರಾಗವಾಗಿ ಸಾಗುತ್ತದೆ. ಎರಡೂ ಕಡೆಯ ದೇಶಗಳ ಜನತೆಗೂ ಅತ್ಯಗತ್ಯವಾದ ಸರಕು ಸಾಮಗ್ರಿಗಳು ಸುಲಭವಾಗಿ ಸಕಾರಾತ್ಮಕ ಬೆಲೆಗೆ ಲಭ್ಯವಾಗಲು ಅವಕಾಶವಿರುತ್ತದೆ. ಎರಡೂ ಕಡೆಯ ದೇಶಗಳಲ್ಲಿಯೂ ಆರ್ಥಿಕ ಪ್ರಗತಿಗೂ ವೇಗ ಸಿಗುತ್ತದೆ.

ಎಫ್‌ಟಿಎಗೆ ಪರ್ಯಾಯ!

ಮುಕ್ತ ವ್ಯಾಪಾರ ಒಪ್ಪಂದಕ್ಕೆ ಪರ್ಯಾಯವಾಗಿ ಭಾರತ ಹಲವು ದೇಶಗಳು, ಒಕ್ಕೂಟಗಳ ಜತೆಗೆ ಕಾಂಪ್ರ ಹೆನ್ಸಿವ್ ಎಕನಾಮಿಕ್ ಕೋ ಆಪರೇಷನ್ ಅಗ್ರೀಮೆಂಟ್'(ಸಿಇಸಿಎ), 'ಕಾಂಪ್ರಹೆನ್ಸಿವ್ ಎಕನಾಮಿಕ್ ಕೊ ಆಪರೇಷನ್ ಅಂಡ್ ಪಾರ್ಟನರ್‌ಷಿಪ್ ಅಗ್ರೀಮೆಂಟ್'(ಸಿಇಸಿಪಿಎ), ಕಾಂಪ್ರಹೆನ್ಸಿವ್ ಎಕನಾಮಿಕ್ ಪಾರ್ಟನರ್‌ಷಿಪ್ ಅಗ್ರೀಮೆಂಟ್(ಸಿಇಪಿಎ), 'ಎಕನಾಮಿಕ್ ಕೊ ಆಪರೇಷನ್ ಅಂಡ್ ಟ್ರೇಡ್ ಅಗ್ರೀಮೆಂಟ್' (ಇಸಿಟಿಎ), ಟ್ರೀಟಿ ಆಫ್ ಟ್ರೇಡ್(ಟಿಒಟಿ) ಹಾಗೂ 'ಪ್ರಿಫರೆನ್ಷಿಯಲ್ ಟ್ರೇಡ್ ಅಗ್ರೀಮೆಂಟ್'(ಪಿಟಿಎ) ರೀತಿಯ ಒಪ್ಪಂದಗಳನ್ನೂ ಮಾಡಿಕೊಂಡಿದೆ. ಇದರಲ್ಲಿ ಶ್ರೀಲಂಕಾ, ಥಾಯ್ಲೆಂಡ್ ಜತೆಗೆ ಭಾರತ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ) ಮಾಡಿಕೊಂಡಿದೆ. ಸಿಂಗಪುರ, ಮಲೇಷಿಯದ ಜತೆಗೆ ಎಫ್‌ಟಿಎ ರೀತಿಯದ್ದೇ ಆದ ಕಾಂಪ್ರಹೆನ್ಸಿವ್ ಎಕನಾಮಿಕ್ ಪಾರ್ಟನರ್‌ಷಿಪ್ ಅಗ್ರೀಮೆಂಟ್' (ಸಿಇಸಿಎ) ಏರ್ಪಟ್ಟಿದೆ. ದಕ್ಷಿಣ ಕೊರಿಯ, ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಜತೆಗೆ ಭಾರತ 'ಕಾಂಪ್ರಹೆನ್ಸಿವ್ ಎಕನಾಮಿಕ್ ಪಾರ್ಟನರ್‌ಷಿಪ್ ಅಗ್ರೀಮೆಂಟ್'(ಸಿಇಪಿಎ) ಮಾಡಿಕೊಂಡಿದೆ. ಆಸ್ಟ್ರೇಲಿಯ ಜತೆಗೆ ಮಾತ್ರ ಭಾರತದ್ದು 'ಎಕನಾಮಿಕ್ ಕೊ ಆಪರೇಷನ್ ಅಂಡ್ ಟ್ರೇಡ್ ಅಗ್ರೀಮೆಂಟ್' (ಇಸಿಟಿಎ) ಆಗಿದೆ. ಮಾರಿಷಸ್ ಜತೆಗೆ ಭಾರತದ್ದು 'ಕಾಂಪ್ರಹೆನ್ಸಿವ್ ಎಕನಾಮಿಕ್ ಕೊ ಆಪರೇಷನ್ ಅಂಡ್ ಪಾರ್ಟನರ್‌ಷಿಪ್ ಅಗ್ರೀಮೆಂಟ್'(ಸಿಇಸಿಪಿಎ) ರೀತಿಯ ವ್ಯಾಪಾರ ಒಪ್ಪಂದವಾಗಿದೆ. ಇನ್ನು, ಪುಟ್ಟ ಹಿಂದೂ ರಾಷ್ಟ್ರ ನೇಪಾಳದ ಜತೆಗೆ ಹಿಂದೂಸ್ಥಾನದ್ದು 'ಟ್ರೀಟಿ ಆಫ್ ಟ್ರೇಡ್'(ಟಿಒಟಿ) ರೀತಿಯ ಒಪ್ಪಂದವಾಗಿದೆ.

ಮಾತುಕತೆ ಹಂತದಲ್ಲಿ...

ಇ.ಯು

ಯೂರೋಪ್ ಖಂಡದಲ್ಲಿರುವ ಹತ್ತಾರು ದೇಶಗಳನ್ನು ಒಳಗೊಂಡು ರಚನೆಯಾಗಿರುವ 'ಯೂರೋಪಿಯನ್ ಯೂನಿಯನ್' (ಇ.ಯು) ಅರ್ಥಾತ್ 'ಯೂರೋಪ್ ದೇಶಗ ಒಕ್ಕೂಟ'ದ ಜತೆಗೆ ಭಾರತ ಸರಾಗ ವ್ಯಾಪಾರ ವಹಿವಾಟಿಗಾಗಿ 'ಬ್ರಾಡ್ ಬೈಲ್ಯಾಟರಲ್ ಟ್ರೇಡ್ ಅಂಡ್ ಇನ್ವೆಸ್ಟ್‌ಮೆಂಟ್ ಅಗ್ರೀಮೆಂಟ್'(ಬಿಟಿಐಎ) ಮಾಡಿಕೊಳ್ಳಲು ಮುಂದಾಗಿದ್ದು, ಈ ದಿಸೆಯಲ್ಲಿ ಮಾತುಕತೆ ನಡೆಯುತ್ತಿದೆ.

ಅಮೆರಿಕ

ಭಾರತ-ಅಮೆರಿಕದ ನಡುವೆ ಉತ್ತಮ ವ್ಯಾಪಾರ ವಹಿವಾಟು ಸಂಬಂಧವಿದ್ದರೂ 'ಮುಕ್ತ ವ್ಯಾಪಾರ ಒಪ್ಪಂದ' ಏರ್ಪಟ್ಟಿಲ್ಲ. ಸದ್ಯ ಅಮೆರಿಕದಲ್ಲಿ ಜ.20ರಿಂದ ಅಧ್ಯಕ್ಷರಾಗಿರುವ ಡೊನಾಲ್ಡ್ ಟ್ರಂಪ್ ಅವರೂ ಭಾರತದ ಮಾರುಕಟ್ಟೆಯ ಬಗ್ಗೆ ಭಾರೀ ಆಸಕ್ತಿ ಹೊಂದಿದ್ದು, 'ಮುಕ್ತ ವ್ಯಾಪಾರ ಒಪ್ಪಂದ' (ಎಫ್‌ಟಿಎ) ಮಾಡಿಕೊಳ್ಳುವುದಕ್ಕೆ ಆಸಕ್ತಿ ತೋರಿದ್ದಾರೆ. ಈ ನಿಟ್ಟಿನಲ್ಲಿ ಹಲವು ಸುತ್ತಿನ ಮಾತುಕತೆಗಳು ನಡೆದಿವೆ. ಇತ್ತೀಚೆ ಗಷ್ಟೇ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರ ನೇತೃತ್ವದಲ್ಲಿ ಭಾರತದ ವಾಣಿಜ್ಯ ಸಚಿವಾಲಯದ ಉನ್ನತ ಮಟ್ಟದ ಅಧಿಕಾರಿಗಳ ತಂಡ ಅಮೆರಿಕಕ್ಕೆ ತೆರಳಿ ವಾರದವರೆಗೂ ಹಲವು ಸುತ್ತು ಮಾತುಕತೆ ನಡೆಸಿದೆ. ಆದರೆ, ಈವರೆಗೂ 'ಎಫ್‌ಟಿಎ'ಗೆ ಅಂತಿಮ ರೂಪ ಸಿಕ್ಕಿಲ್ಲ.

ಕೆನಡಾ

ಪಂಜಾಬ್ ಜನತೆ ಹೆಚ್ಚಾಗಿ ಇರುವ, ಭಾರತೀಯರೂ, ವಿದ್ಯಾರ್ಥಿಗಳೂ ದೊಡ್ಡ ಸಂಖ್ಯೆಯಲ್ಲಿರುವ ದೇಶ ಕೆನಡಾ. ಹಿಂದಿನ ಪ್ರಧಾನಿ ಜಸ್ಟಿನ್ ಟ್ರುಡೊ ಅವಧಿಯಲ್ಲಿ ಭಾರತ-ಕೆನಡಾ ಸಂಬಂಧ ಪೂರ್ಣ ಹದಗೆಟ್ಟಿತ್ತು. ಆದರೆ, ಈಗ 'ಬ್ಯಾಂಕಿಂಗ್ ತಜ್ಞ' ಮಾರ್ಕ್ ಕಾರ್ನಿ ಪ್ರಧಾನಿ ಹುದ್ದೆ ಅಲಂಕರಿಸಿದ ಬಳಿಕ ಭಾರತದ ಜತೆಗಿನ ಸಂಬಂಧ ಸುಧಾರಣೆಗೆ ಯತ್ನಿಸುತ್ತಿದ್ದಾರೆ. ಕೆನಡಾ ಆತಿಥ್ಯದಲ್ಲಿ ಇತ್ತೀಚೆಗೆ ಜರುಗಿದ 'ಜಿ-7' ಶೃಂಗ ಸಭೆಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿದ್ದರು. ಮೋದಿ-ಕಾರ್ನಿ ನಡುವಿನ ದ್ವಿಪಕ್ಷೀಯ ಚರ್ಚೆಯು ಬಹಳ ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ಅಲ್ಲದೇ, ಭಾರತ-ಕೆನಡಾ ನಡುವೆಯೂ ವ್ಯಾಪಾರ ವಹಿವಾಟು ಸುಲಭವಾಗಿಸಲು ಮುಕ್ತ ವ್ಯಾಪಾರ ಒಪ್ಪಂದ ಕುರಿತು ಚರ್ಚೆ ನಡೆಯುತ್ತಿದೆ.

ಇಸ್ರೇಲ್

ಭಾರತದ ಪರಮಾಪ್ತ ಮಿತ್ರ ರಾಷ್ಟ್ರ ಇಸ್ರೇಲ್ ಜತೆಗೂ 'ಮುಕ್ತ ವ್ಯಾಪಾರ ಒಪ್ಪಂದ'(ಎಫ್‌ಟಿಎ) ಮಾತುಕತೆ ನಡೆದಿದೆ. ಉಳಿದಂತೆ, ಓಮನ್ ಮತ್ತು ಪೆರು ದೇಶಗಳ ಕೂಡಾ ಭಾರತದ ಜತೆಗೆ 'ಎಫ್‌ಟಿಎ' ಒಪ್ಪಂದಕ್ಕೆ ಮಾತುಕತೆ ನಡೆಸುತ್ತಿವೆ.

ಒಕ್ಕೂಟ ರಾಷ್ಟ್ರಗಳ ಜತೆಗಿನ ಒಪ್ಪಂದ

'ಅಸಿಯಾನ್' ದೇಶಗಳ ಒಕ್ಕೂಟದ ಜತೆಗೆ ಭಾರತ ವ್ಯಾಪಾರ ವಹಿವಾಟು ಸಂಬಂಧ ಬಲು ಹಿಂದೆಯೇ 'ಕಾಂಪ್ರಹೆನ್ಸಿವ್ ಎಕನಾಮಿಕ್ ಕೊ ಆಪರೇಷನ್ ಅಗ್ರೀಮೆಂಟ್'(ಸಿಇಸಿಎ) ಮೂಲಕ ನಡೆಯುತ್ತಿದೆ. ಯೂರೋಪ್ ದೇಶಗಳ ವ್ಯಾಪಾರಿ ಸಂಘಟನೆಯಾದ 'ಯೂರೋ ಪಿಯನ್ ಫ್ರೀ ಟ್ರೇಡ್ ಅಸೋಸಿಯೇಷನ್' (ಇಎಫ್‌ಟಿಎ) ಜತೆಗೆ ಭಾರತ ಬೇರೆಯದೇ ರೀತಿಯ ಒಪ್ಪಂದ ಮಾಡಿಕೊಂಡಿದೆ. ಐಸ್‌ಲ್ಯಾಂಡ್, ಲೀಷ್ಟೆಸ್ಟೀನ್, ನಾರ್ವೆ ಮತ್ತು ಸ್ವಿಜರ್ಲೆಂಡ್' ದೇಶಗಳು ಸದಸ್ಯರಾಗಿರುವ 'ಇಎಫ್‌ಟಿಎ' ಜತೆಗೆ ಭಾರತ 'ಟ್ರೇಡ್ ಅಂಡ್ ಎಕನಾಮಿಕ್ ಪಾರ್ಟನರ್‌ಷಿಪ್ ಅಗ್ರೀಮೆಂಟ್' ಆಗಿದೆ. ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ಡೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾ ದೇಶಗಳನ್ನು ಒಳಗೊಂಡಿರುವ ಒಕ್ಕೂಟದಲ್ಲಿ 'ಸೌತ್ ಏಷ್ಯನ್ ಫ್ರೀ ಟ್ರೇಡ್ ಏರಿಯ'(ಎಸ್‌ಎಫ್‌ಟಿಎ) ಒಪ್ಪಂದವಾಗಿದೆ. ಇನ್ನೊಂದೆಡೆ, ಬಾಂಗ್ಲಾ ದೇಶ, ಭಾರತ, ಮ್ಯಾನ್ಮಾರ್, ಶ್ರೀಲಂಕಾ, ಥಾಯ್ಲೆಂಡ್, ಭೂತಾನ್ ಮತ್ತು ನೇಪಾಳ ಜತೆ 'ದಿ ಬೇ ಆಫ್ ಬೆಂಗಾಲ್ ಇನಿಷಿಯೇಟಿವ್ ಫಾರ್ ಮಲ್ಟಿ ಸೆಕ್ಟೊರಲ್ ಟೆಕ್ನಿಕಲ್ ಅಂಡ್ ಎಕನಾಮಿಕ್ ಕೊ ಆಪರೇಷನ್' (ಬಿಐಎಂಎಸ್‌ಟಿಇಸಿ) ಒಪ್ಪಂದವಾಗಿದೆ.

ಅಸಿಯಾನ್

'ಅಸೋಸಿಯೇಷನ್ ಆಫ್ ಸೌತ್‌ಈಸ್ಟ್ ಏಷ್ಯನ್ ನೇಷನ್ಸ್' (ಅಸಿಯಾನ್) ಒಕ್ಕೂಟದಲ್ಲಿ ಬ್ರೂನಿ, ಕಾಂಬೋಡಿಯ, ಇಂಡೊನೇಷಿಯ, ಲಾವೋಸ್, ಮಲೇಷಿಯ, ಮ್ಯಾನ್ಮಾರ್, ಫಿಲಿ ಪ್ಪೀನ್ಸ್, ಸಿಂಗಪುರ, ಥಾಯ್ಲೆಂಡ್ ಮತ್ತು ವಿಯೆಟ್ನಾಂ ದೇಶಗಳು ಸದಸ್ಯತ್ವ ಪಡೆದಿವೆ. ಭಾರತ 'ಅಸಿಯಾನ್' ಒಕ್ಕೂಟದ ಜತೆಗೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವುದರಿಂದ ಈ 10 ದೇಶಗಳ ಮತ್ತು ಭಾರತದ ನಡುವೆ ವ್ಯಾಪಾರ ವಹಿವಾಟು ಯಾವುದೇ ಅಡೆತಡೆ ಇಲ್ಲದೇ ಸರಾಗವಾಗಿ ಸಾಗಲು ಅವಕಾಶವಾಗಿದೆ. 'ಇಎಫ್‌ಟಿಎ' ಕೂಟದಲ್ಲಿ ಐಸ್‌ಲ್ಯಾಂಡ್, ಲೀಷ್ಟೆಸ್ಟೀನ್, ನಾರ್ವೆ ಮತ್ತು ಸ್ವಿಜರ್ಲೆಂಡ್ ದೇಶಗಳು ಸೇರಿಕೊಂಡಿವೆ.

ಮುಂದಿನ ಉಪರಾಷ್ಟ್ರಪತಿ ಯಾರು ಎನ್ನುವ ಗೊಂದಲಕ್ಕೆ ಸದ್ಯದಲ್ಲೇ ತೆರೆ

ಉಪರಾಷ್ಟ್ರಪತಿ ಚುನಾವಣೆ ಪ್ರಕ್ರಿಯೆ ಹೇಗಿರುತ್ತೆ?

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ದಿಢೀರ್ ರಾಜೀನಾಮೆಯಿಂದ ತೆರವಾಗಿರುವ ಹುದ್ದೆಗೆ ಹೊಸಬರ ಆಯ್ಕೆ ನಡೆಯಬೇಕಿದೆ. ಇದಕ್ಕೆ ಭಾರತೀಯ ಚುನಾವಣಾ ಆಯೋಗ ಬುಧವಾರ ಪ್ರಕ್ರಿಯೆ ಆರಂಭಿಸಿದೆ. ಮುಂದಿನ ಎರಡ್ಮೂರು ದಿನಗಳಲ್ಲಿ ಆಯೋಗ ಚುನಾವಣಾ ವೇಳಾಪಟ್ಟಿ ಪ್ರಕಟಿಸಲಿದೆ ಎನ್ನಲಾಗಿದೆ. ತೆರವಾಗಿರುವ ಉಪರಾಷ್ಟ್ರಪತಿ ಸ್ಥಾನಕ್ಕೆ ಮಾರ್ಗಸೂಚಿಗಳಿಗೆ ಅನುಗುಣವಾಗಿ ಚುನಾವಣೆ ನಡೆಯಲಿದೆ. ಆಗಸ್ಟ್ ಕೊನೆಯ ವಾರದೊಳಗೆ ದೇಶವು ಹೊಸ ಉಪರಾಷ್ಟ್ರಪತಿಯನ್ನು ಪಡೆಯುವ ನಿರೀಕ್ಷೆ ಇದೆ. ಹಾಗಾದರೆ ಯಾವಾಗ ಚುನಾವಣೆ ನಡೆಯುತ್ತದೆ? ಎಷ್ಟು ದಿನಗಳಲ್ಲಿ ಚುನಾವಣೆ ಮುಗಿಯಬೇಕು? ಚುನಾವಣೆ ಪ್ರಕ್ರಿಯೆ ಹೇಗಿರು ತ್ತದೆ? ಎಂಬುದರ ಕುರಿತು ಸಮಗ್ರ ಮಾಹಿತಿ ಇಲ್ಲಿದೆ.

ಎಷ್ಟು ಸಮಯದ ಒಳಗೆ ನಡೆಯಬೇಕಿದೆ ಚುನಾವಣೆ?

ಉಪರಾಷ್ಟ್ರಪತಿ ಸ್ಥಾನ ಖಾಲಿ ಆದ ಕೂಡಲೇ ಇಂತಿಷ್ಟೇ ಸಮಯದಲ್ಲಿ ಚುನಾವಣೆ ನಡೆಯಬೇಕು ಎಂಬ ನಿಯಮ ಇಲ್ಲ. ಸಂವಿಧಾನದ ವಿಧಿ 68(2)ರ ಪ್ರಕಾರ ಚುನಾವಣೆಯನ್ನು 'ಸಾಧ್ಯವಾದಷ್ಟು ಬೇಗ' ನಡೆಸಬೇಕು ಎಂದಷ್ಟೇ ಇದೆ. ಇದಕ್ಕೆ ನಿರ್ದಿಷ್ಟ ಗಡುವು ಇಲ್ಲ. ಗೃಹ ಸಚಿವಾಲಯವು ಚುನಾವಣಾ ಆಯೋಗಕ್ಕೆ ರಾಜೀನಾಮೆ ಅಂಗೀಕಾರವಾಗಿರುವ ಮಾಹಿತಿಯನ್ನು ಔಪಚಾರಿಕವಾಗಿ ತಿಳಿಸಿದೆ. ಇದಾದ ತಕ್ಷಣವೇ ಚುನಾವಣಾ ಪ್ರಕ್ರಿಯೆಗಳು ಶುರುವಾಗಿವೆ. ಅಧಿಸೂಚನೆಯನ್ನು ಚುನಾವಣಾ ಆಯೋಗವು ಮುಂದಿನ ಎರಡ್ಮೂರು ದಿನಗಳಲ್ಲಿ ಹೊರಡಿಸುವ ಸಾಧ್ಯತೆಯಿದೆ.

32 ದಿನಗಳಲ್ಲಿ ಮುಗಿಯಬೇಕು ಪ್ರಕ್ರಿಯೆ

1952ರ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಚುನಾವಣಾ ಕಾಯ್ದೆಯ ಪ್ರಕಾರ, ಒಮ್ಮೆ ಚುನಾವಣಾ ಆಯೋಗವು ಅಧಿಸೂಚನೆಯನ್ನು ಹೊರಡಿಸಿದ ನಂತರ, ನಾಮಪತ್ರಗಳ ಸಲ್ಲಿಕೆ, ಪರಿಶೀಲನೆ, ಹಿಂಪಡೆಯುವಿಕೆ, ಮತದಾನ ಮತ್ತು ಎಣಿಕೆ ಸೇರಿದಂತೆ ಎಲ್ಲ ಪ್ರಕ್ರಿಯೆಯನ್ನು ಗರಿಷ್ಠ 32 ದಿನಗಳಲ್ಲಿ ಪೂರ್ಣಗೊಳಿಸಬೇಕು. ಹೀಗಾಗಿ ಸದ್ಯದ ನಿರೀಕ್ಷೆ ಪ್ರಕಾರ ಭಾರತದ ಮುಂದಿನ ಉಪರಾಷ್ಟ್ರಪತಿ ಆಗಸ್ಟ್ ಅಂತ್ಯದ ವೇಳೆಗೆ ಆಯ್ಕೆಯಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆ ಇದೆ.

ಹೇಗಿರಲಿದೆ ಪ್ರಕ್ರಿಯೆ?

ಚುನಾವಣಾ ಆಯೋಗವು ಅಧಿಸೂಚನೆ ಹೊರಡಿಸಿದ 14 ದಿನಗಳ ಒಳಗೆ ನಾಮಪತ್ರಗಳನ್ನು ಸಲ್ಲಿಸಬೇಕು. ಇದರಲ್ಲಿಯೂ ಎಲೆಕ್ಟೋರಲ್ ಕಾಲೇಜ್ ಪ್ರಕ್ರಿಯೆ ನಡೆಯಲಿದೆ. ಆದರೆ ಉಪರಾಷ್ಟ್ರಪತಿ ಚುನಾವಣೆಗೆ ರಾಜ್ಯಸಭೆ ಹಾಗೂ ಲೋಕಸಭೆಯ ಚುನಾಯಿತ ಮತ್ತು ನಾಮನಿರ್ದೇಶಿತ ಸದಸ್ಯರು ಮಾತ್ರ ಮತದಾನದ ಅವಕಾಶ ಹೊಂದಿರುತ್ತಾರೆ. ಈ ಎಲೆಕ್ಟೋರಲ್ ಕಾಲೇಜ್ ಸಿದ್ಧತೆ ಸೇರಿದಂತೆ ಅಗತ್ಯ ಸಿದ್ಧತೆಗಳನ್ನು ಚುನಾವಣಾ ಆಯೋಗ ಈಗಾಗಲೇ ಆರಂಭಿಸಿದೆ.

ಮತದಾನ ಹೇಗೆ?

ಸಂವಿಧಾನದ ಅನುಚ್ಛೇದ 66(1)ರ ಪ್ರಕಾರ, ಉಪರಾಷ್ಟ್ರಪತಿ ಚುನಾವಣೆಯನ್ನು ಪ್ರಮಾಣಾನುಗುಣ ಪ್ರಾತಿನಿಧ್ಯ ವ್ಯವಸ್ಥೆಯ ಮೂಲಕ ಮಾಡಲಾಗುತ್ತದೆ, ಇದು ಲೋಕಸಭೆ ಅಥವಾ ವಿಧಾನಸಭಾ ಚುನಾವಣೆಗಳ ಮತದಾನ ಪ್ರಕ್ರಿಯೆಗಿಂತ ಸಂಪೂರ್ಣವಾಗಿ ಭಿನ್ನವಾಗಿದೆ. ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತದಾನವನ್ನು ಏಕ ವರ್ಗಾವಣೆ ಮತ ವ್ಯವಸ್ಥೆಯ ಮೂಲಕ ಮಾಡಲಾಗುತ್ತದೆ. ಸರಳವಾಗಿ ಹೇಳುವುದಾದರೆ, ಈ ಚುನಾವಣೆಯಲ್ಲಿ ಮತದಾರನು ಆದ್ಯತೆಯ ಆಧಾರದ ಮೇಲೆ ಮತ ಚಲಾಯಿಸಬೇಕು. ಉದಾಹರಣೆಗೆ, ಅವರು ತನ್ನ ಮೊದಲ ಆಯ್ಕೆಯನ್ನು ಒಂದು ಎಂದು, ಎರಡನೇ ಆಯ್ಕೆಯನ್ನು ಎರಡು ಎಂದು ಬರೆಯುತ್ತಾನೆ ಮತ್ತು ಅದೇ ರೀತಿ ತನ್ನ ಆದ್ಯತೆಯ ಸಂಖ್ಯೆಯನ್ನು ಇತರ ಅಭ್ಯರ್ಥಿಗಳ ಮುಂದೆ ಮತಪತ್ರದಲ್ಲಿ ಬರೆಯುತ್ತಾರೆ. ಈ ಸಂಪೂರ್ಣ ಪ್ರಕ್ರಿಯೆಯನ್ನು ರಹಸ್ಯ ಮತದಾನ ವ್ಯವಸ್ಥೆಯ ಮೂಲಕ ಮಾಡಲಾಗುತ್ತದೆ. ಮತದಾರನು ತನ್ನ ಆದ್ಯತೆಯನ್ನು ರೋಮನ್ ಅಂಕಿಗಳ ರೂಪದಲ್ಲಿ ಮಾತ್ರ ಬರೆಯಬೇಕು. ಇದನ್ನು ಬರೆಯಲು, ಚುನಾವಣಾ ಆಯೋಗವು ಒದಗಿಸಿದ ವಿಶೇಷ ಪೆನ್ನು ಬಳಸಬೇಕಾಗುತ್ತದೆ.

ರಾಷ್ಟ್ರಪತಿ ಚುನಾವಣೆಗಿಂತ ಎಷ್ಟು ಭಿನ್ನ?

ಸಂಸತ್ತಿನ ಉಭಯ ಸದನಗಳ ಸದಸ್ಯರು ಉಪರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುತ್ತಾರೆ. ಇವುಗಳಲ್ಲಿ ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯರು ಸಹ ಸೇರಿದ್ದಾರೆ. ಎಲ್ಲ ರಾಜ್ಯಗಳ ಚುನಾಯಿತ ಸಂಸದರು ಮತ್ತು ಶಾಸಕರು ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುತ್ತಾರೆ. ನಾಮನಿರ್ದೇಶಿತ ಸಂಸದರು ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಲು ಸಾಧ್ಯವಿಲ್ಲ, ಆದರೆ ಉಪರಾಷ್ಟ್ರಪತಿ ಚುನಾವಣೆಯಲ್ಲಿ ಹಾಗಲ್ಲ. ಅಂತಹ ಸದಸ್ಯರು ಉಪರಾಷ್ಟ್ರಪತಿ ಚುನಾವಣೆಯಲ್ಲಿಯೂ ಮತ ಚಲಾಯಿಸಬಹುದು.

ಅರ್ಹತೆ ಏನು?

ಭಾರತದ ಪ್ರಜೆಯಾಗಿರುವುದು ಕಡ್ಡಾಯ, ಕನಿಷ್ಠ 35 ವರ್ಷ ವಯಸ್ಸನ್ನು ಪೂರ್ಣಗೊಳಿಸಿರಬೇಕು, ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸುವ ಯಾವುದೇ ಅಭ್ಯರ್ಥಿಯು 15 ಸಾವಿರ ರು. ಭದ್ರತಾ ಮೊತ್ತವನ್ನು ಠೇವಣಿ ಇಡಬೇಕು. ಚುನಾವ ಣೆಯ ಸಮಯದಲ್ಲಿ 1/6 ಮತಗಳನ್ನು ಪಡೆಯ ದಿದ್ದರೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಈ ಚುನಾವ ಣೆಗೆ ನಿಲ್ಲಲು ಯಾವುದೇ ವ್ಯಕ್ತಿಯು ಕನಿಷ್ಠ 20 ಸಂಸತ್ ಸದಸ್ಯರನ್ನು ಪ್ರಸ್ತಾವಕರಾಗಿ ಮತ್ತು ಕನಿಷ್ಠ 20 ಸಂಸತ್ ಸದಸ್ಯರನ್ನು ಬೆಂಬಲಿಗರಾಗಿ ನಾಮನಿ ರ್ದೇಶನ ಮಾಡಬೇಕು.

ಯಾವ ಪಕ್ಷಗಳ ಬಲಾಬಲ ಎಷ್ಟಿದೆ?

ಉಪರಾಷ್ಟ್ರಪತಿ ಚುನಾವಣೆಯ ಮತದಾರರ ಯಾದಿಯಲ್ಲಿ ಸಂಸತ್ತಿನ ಉಭಯ ಸದನಗಳ ಸದಸ್ಯರು ಅಂದರೆ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರು ಇದ್ದಾರೆ. ಅದೇ ರೀತಿ ಚುನಾಯಿತ ಹಾಗೂ ನಾಮ ನಿರ್ದೇಶಿತ ಸದಸ್ಯರು ಕೂಡ ಈ ಚುನಾವಣೆಯಲ್ಲಿ ಮತಚಲಾವಣೆ ಮಾಡುವ ಹಕ್ಕು ಹೊಂದಿರುತ್ತಾರೆ. ಉಪರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಸಂಸತ್ತಿನ ಉಭಯ ಸದನಗಳಲ್ಲಿ ಆಡಳಿತಾರೂಢ ಬಿಜೆಪಿ, ಎನ್‌ಡಿಎ ಹಾಗೂ ಪ್ರತಿಪಕ್ಷ, ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ಸಂಖ್ಯಾ ಬಲ ಹೇಗಿದೆ ನೋಡೋಣ.

ಗೆಲುವಿಗೆ ಬೇಕು 392 ಮತ

ಪ್ರಸ್ತುತ 543 ಸದಸ್ಯ ಬಲದ ಲೋಕಸಭೆಯಲ್ಲಿ ಒಂದು ಸ್ಥಾನ ಖಾಲಿ ಇದೆ. ಪಶ್ಚಿಮ ಬಂಗಾಳದ ಬಸೀರ್‌ಹಟ್ ಸ್ಥಾನ ಖಾಲಿ ಇದೆ. ಇನ್ನು 245 ಸದಸ್ಯ ಬಲದ ರಾಜ್ಯಸಭೆಯಲ್ಲಿ 5 ಸ್ಥಾನಗಳು ಖಾಲಿ ಇವೆ. ಈ ಪೈಕಿ ನಾಲ್ಕು ಜಮ್ಮು-ಕಾಶ್ಮೀರದ್ದು, ಒಂದು ಪಂಜಾಬ್‌ನದ್ದು. ಹೀಗಾಗಿ, ಖಾಲಿ ಸ್ಥಾನಗಳನ್ನು ಹೊರತುಪಡಿಸಿದ ಸಂಸತ್ತಿನ ಉಭಯ ಸದನಗಳ ಅಂದರೆ ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಒಟ್ಟು ಸಂಖ್ಯೆ 782. ಈ ಲೆಕ್ಕಾಚಾರದ ಪ್ರಕಾರ ಮತ ಚಲಾವಣೆಯಾದರೆ, ಉಪರಾಷ್ಟ್ರಪತಿ ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿ ಗೆಲ್ಲಬೇಕಾದರೆ 392 ಮತ ಗಳಿಸಬೇಕು.

ಸಂಖ್ಯಾ ಬಲ ಎಷ್ಟು?

ಲೋಕಸಭೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎಗೆ 293 ಸದಸ್ಯ ಬಲವಿದೆ. ರಾಜ್ಯಸಭೆಯಲ್ಲಿ ಎನ್‌ಡಿಎಗೆ 129 ಸದಸ್ಯ ಬಲವಿದೆ. ಆಡಳಿತಾರೂಢ ಎನ್‌ಡಿಎ ಸದಸ್ಯ ಬಲ 422 ಆಗಿದ್ದು, ಎನ್‌ಡಿಎ ಅಭ್ಯರ್ಥಿ ಸುಲಭವಾಗಿ ಉಪರಾಷ್ಟ್ರಪತಿ ಸ್ಥಾನದ ಚುನಾವಣೆ ಗೆಲ್ಲಬಹುದು. ಇನ್ನು ಕಾಂಗ್ರೆಸ್ ಪಕ್ಷಕ್ಕೆ ಲೋಕಸಭೆಯಲ್ಲಿ 99, ರಾಜ್ಯಸಭೆಯಲ್ಲಿ 27 ಸದಸ್ಯ ಬಲವಿದೆ. ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟ ಸಂಖ್ಯಾ ಬಲ 350ಕ್ಕೂ ಹೆಚ್ಚಿದೆ. ಆದರೆ, ಕೆಲವು ಸದಸ್ಯರು ಮತ ಚಲಾಯಿಸದೇ ಇರಬಹುದು ಅಥವಾ ಅಡ್ಡಮತ ಚಲಾಯಿಸಬಹುದು. ಇಂಡಿಯಾ ಒಕ್ಕೂಟದಿಂದ ಇತ್ತೀಚೆಗೆ ಆಮ್ ಆದ್ಮಿ ಪಾರ್ಟಿ ಹೊರಗೆ ಬಂದಿತ್ತು. ಹೀಗಾಗಿ ಸಂಖ್ಯಾಬಲ ನಿಖರವಾಗಿ ಹೇಳಲಾಗುತ್ತಿಲ್ಲ.

ಮೂವರಲ್ಲಿ ಯಾರು?

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ಹಠಾತ್ ರಾಜೀನಾಮೆಯಿಂದ ತೆರವಾಗಿರುವ ಸ್ಥಾನಕ್ಕೆ ಮುಂದಿನ ಆಯ್ಕೆ ಯಾರು ಎನ್ನುವ ಕುತೂಹಲ ಗರಿಗೆದರಿದೆ. ಮೂಲಗಳ ಪ್ರಕಾರ, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೂವರ ಹೆಸರನ್ನು ಶಾರ್ಟ್ ಲಿಸ್ಟ್ ಮಾಡಿದ್ದಾರೆ ಎನ್ನಲಾಗಿದೆ. ಈ ಮೂವರಲ್ಲಿ ಯಾರ ಕೈ ಮೇಲಾಗುತ್ತದೆ ಮತ್ತು ಏಕೆ ಎಂಬ ಬಗ್ಗೆ ನೋಡೋಣ.

ಬಿಹಾರ ಸಿಎಂ ನಿತೀಶ್ ಕುಮಾರ್

ಮುಂದಿನ ನವೆಂಬರ್ ಒಳಗೆ ಬಿಹಾರದಲ್ಲಿ ವಿಧಾನಸಭಾ ಚುನಾವಣೆ ನಡೆಯಬೇಕಿದೆ. ಈಗಾಗಲೇ ಎನ್‌ಡಿಎ ಮತ್ತು ಮಹಾಘಟಬಂಧನ್ ಮೈತ್ರಿಕೂಟ ಹೊಂದಾ ಣಿಕೆಯ ಚರ್ಚೆಯಲ್ಲಿ ನಿರತವಾಗಿದೆ. ಈ ನಡುವೆ, ಸಿಎಂ ನಿತೀಶ್ ಕುಮಾರ್ ಅವರ ಹೆಸರು ಉಪರಾಷ್ಟ್ರಪತಿಗೆ ಹುದ್ದೆಗೆ ಮುನ್ನಲೆಗೆ ಬಂದಿದೆ. ನಿತೀಶ್ ಕುಮಾರ್ ಆಯ್ಕೆಯ ಹಿಂದೆ ಎರಡು ಮುಖ್ಯ ಕಾರಣಗಳು ಇವೆ ಎನ್ನಲಾಗಿದೆ. ಒಂದು, ಕಳೆದ ಕೆಲವು ದಶಕಗಳಿಂದ ರಾಷ್ಟ್ರ ಮತ್ತು ಬಿಹಾರ ರಾಜ್ಯ ರಾಜಕಾರಣದಲ್ಲಿ ಕಿಂಗ್ ಮೇಕರ್ ಆಗಿರುವ ನಿತೀಶ್ ಕುಮಾರ್ ಅವರನ್ನು ಉಪ ರಾಷ್ಟ್ರಪತಿಗಳನ್ನಾಗಿ ಮಾಡಿದರೆ, ಅವರಿಗೆ ಸಕ್ರಿಯ ರಾಜಕಾರಣದಿಂದ ಗೌರವಯುತ ಬೀಳ್ಕೊಡುಗೆ ನೀಡಿದಂತಾಗುತ್ತದೆ. ಇನ್ನೊಂದು, ಒಬಿಸಿ ಮತಗಳನ್ನು ಸೆಳೆಯಲು ಇದು ಅನುಕೂಲವಾಗುತ್ತದೆ ಎನ್ನುವುದು ಮೋದಿ-ಶಾ ಲೆಕ್ಕಾಚಾರವಾಗಿದೆ. ಬಿಹಾರದಲ್ಲಿ ಒಬಿಸಿ ಮತಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ನಿತೀಶ್ ಕುಮಾರ್ ಅವರನ್ನು ದೇಶದ ಎರಡನೇ ದೊಡ್ಡ ಹುದ್ದೆಗೆ ಆಯ್ಕೆ ಮಾಡಿದರೆ, ಬಿಹಾರಕ್ಕೆ ತುಂಬಾ ಒಳ್ಳೆಯದು ಎನ್ನಲಾಗಿದೆ.

ಕಾಂಗ್ರೆಸ್ ಸಂಸದ ಶಶಿ ತರೂರ್: ಮುನ್ನಲೆಗೆ ಬಂದಿರುವ ಇನ್ನೊಂದು ಅಚ್ಚರಿಯ ಹೆಸರು ತಿರುವನಂತಪುರಂ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರದ್ದು. ತರೂರ್ ಮತ್ತು ಕಾಂಗ್ರೆಸ್ ಜತೆಗಿನ ಸಂಬಂಧ ದಿನದಿಂದ ದಿನಕ್ಕೆ ಹಳಸುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ಕಾರ್ಯವೈಖರಿಯ ಬಗ್ಗೆ ತರೂರ್ ಬಹಿರಂಗವಾಗಿಯೇ ಪ್ರಶಂಶೆ ಮಾಡುತ್ತಿದ್ದಾರೆ. ಕಾಂಗ್ರೆಸ್ಸಿನಲ್ಲಿ ಶಶಿ ತರೂರ್ ಇಲ್ಲ ಎನ್ನುವ ಹೇಳಿಕೆಯನ್ನೂ ಕೆಲವು ದಿನಗಳ ಹಿಂದೆ ಕೇರಳ ಕಾಂಗ್ರೆಸ್ ಘಟಕ ನೀಡಿತ್ತು. ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವ ನಿರ್ಣಯವನ್ನು ರಾಜ್ಯ ಘಟಕ ತೆಗೆದುಕೊಂಡಿದೆ. ಕಾಂಗ್ರೆಸ್ಸಿನ ನಾಯಕರೊಬ್ಬರನ್ನು ಉಪರಾಷ್ಟ್ರಪತಿ ಹುದ್ದೆಗೆ ಬಿಜೆಪಿ ಆಯ್ಕೆ ಮಾಡುತ್ತದಾ ಎನ್ನುವುದು ಕುತೂಹಲಕ್ಕೆ ಕಾರಣವಾಗಿದೆ.

ಜೆಡಿಯು ನಾಯಕ ಹರಿವಂಶ್ ಸಿಂಗ್

ಜಗದೀಪ್ ಧನ್‌ಕರ್ ರಾಜೀನಾಮೆ ನೀಡಿದ ಬೆನ್ನಲ್ಲೇ ಹಲವು ಹೆಸರುಗಳು ಮುನ್ನೆಲೆಗೆ ಬಂದಿದ್ದು, ಅದರಲ್ಲಿ ಒಂದು ಸಂಯುಕ್ತ ಜನತಾದಳದ ನಾಯಕ ಮತ್ತು ಹಾಲಿ ರಾಜ್ಯಸಭೆಯ ಉಪಸಭಾಪತಿಯೂ ಆಗಿರುವ ಹರಿವಂಶ್ ಸಿಂಗ್ ಅವರ ಹೆಸರು ಕೂಡ ಕೇಳಿ ಬರುತ್ತಿದೆ. ಪಕ್ಷಾತೀತವಾಗಿ ಎಲ್ಲರ ಜತೆ ಉತ್ತಮ ಬಾಂಧವ್ಯ ಇಟ್ಟುಕೊಂಡಿರುವ ಹರಿವಂಶ ಸಿಂಗ್ ಅವರು, ಬಿಜೆಪಿ ನಾಯಕರ ಜತೆಗೂ ಉತ್ತಮ ಸಂಬಂಧ ಹೊಂದಿದ್ದಾರೆ. ಇವರು ಕೂಡ ರೇಸಿನಲ್ಲಿರುವ ಪ್ರಮುಖರು ಎನ್ನಲಾಗಿದೆ.

ಎತ್ತಿನಹೊಳೆಗೆ ಭೂ ಸ್ವಾಧೀನ ಪ್ರಕ್ರಿಯೆ | ಜಿಲ್ಲೆಯ 144 ಗ್ರಾಮಗಳಿಗೆ ಕುಡಿವ ನೀರು | ಬೈರಗೊಂಡ್ಲುವರೆಗೆ ಸಾಗಿದೆ ಕಾಮಗಾರಿ | ಬಯಲಿನ ಏಳು ಜಿಲ್ಲೆಗೆ ನೀರಿನ ಯೋಜನೆ

ಆಗಸ್ಟ್ ಮಾಸಾಂತ್ಯಕ್ಕೆ ಹರಿಯಲಿದೆ ನೀರು

ಜಿಲ್ಲಾ ನೋಟ

ರಂಗನಾಥ ಕೆ. ಹೊನ್ನಮರಡಿ, ತುಮಕೂರು

ಜಿಲ್ಲೆಯ 144 ಗ್ರಾಮಗಳಿಗೆ ನೀರೊದಗಿಸುವ ಮಹತ್ವಾಕಾಂಕ್ಷೆಯುಳ್ಳ ಎತ್ತಿನಹೊಳೆ ಯೋಜನೆಗೆ ಬಾಕಿ ಇರುವ ಭೂ ಸ್ವಾಧೀನ ಪ್ರಕ್ರಿಯೆ ಸಂಪೂರ್ಣಗೊಳಿಸಿ ನೀರು ಹರಿಸಲು ಜಿಲ್ಲಾಡಳಿತ ಸಜ್ಜಾಗಿದೆ. ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆ ಯನ್ನು ಚುರುಕುಗೊಳಿಸಿ ಆಗಸ್ಟ್ ತಿಂಗಳ ಒಳಗಾಗಿ ಪೂರ್ಣಗೊಳಿಸಲು ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ನೀರಾವರಿ ತಜ್ಞರ ಫಲ: ನೀರಾವರಿ ತಜ್ಞ ಪರಮಶಿವಯ್ಯ ಹಾಸನ, ಚಿಕ್ಕಮಗಳೂರು, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಬಯಲುಸೀಮೆ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆ ಮಾಡಬೇಕೆಂದು ಪ್ರಸ್ತಾಪ ಸಲ್ಲಿಸಿದ್ದರು. ಅದರ ಫಲವೇ ಎತ್ತಿನಹೊಳೆ ಯೋಜನೆ.

ಕೋಟ್ಟಿಗಟ್ಟಲೇ ಬಾಕಿ: ಎತ್ತಿನಹೊಳೆ ಯೋಜನೆಯು ಜಿಲ್ಲೆಯ 144 ಗ್ರಾಮಗಳನ್ನೊಳಗೊಂಡಿದ್ದು, ಈವರೆಗೆ 3529 ಭೂ ಮಾಲೀಕರಿಗೆ 746 ಕೋಟಿ ರುಪಾಯಿ ಪರಿಹಾರವನ್ನು ಪಾವತಿಸಲಾಗಿದ್ದು, 925 ಕೋಟಿ ಪರಿಹಾರ ಮೊತ್ತ ಪಾವತಿಗೆ ಅವಾರ್ಡ್ ಅನುಮೋದನೆಯಾಗಿದೆ. ಉಳಿದಂತೆ 819 ಭೂ ಮಾಲೀಕರಿಗೆ 163 ಕೋಟಿ ಪರಿಹಾರ ಪಾವತಿಸಬೇಕಾಗಿದೆ.

ಏಳು ಜಿಲ್ಲೆಗಳಿಗೆ ನೀರು: ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ವಾರ್ಷಿಕ 24.01 ಟಿ.ಎಂ.ಸಿ ಪ್ರವಾಹದ ನೀರನ್ನು ಸಕಲೇಶಪುರದಿಂದ ಕರ್ನಾಟಕದ ಪೂರ್ವಭಾಗಕ್ಕೆ ತಿರುಗಿಸಿ, ಕುಡಿಯುವ ನೀರಿನ ತೀವ್ರ ಅಭಾವ ಎದುರಿಸುತ್ತಿರುವ ಹಾಸನ, ಚಿಕ್ಕಮಗಳೂರು, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ ನೀರು ಒದಗಿಸುವ ಯೋಜನೆಯೇ ಎತ್ತಿನಹೊಳೆ.

ಕಾಮಗಾರಿ ವಿಳಂಬ: ಕೆಲವು ಕಡೆ ಭೂಸ್ವಾಧೀನಕ್ಕೆ ರೈತರು ಅಡ್ಡಿಪಡಿಸುತ್ತಿರುವುದರಿಂದ ಕಾಮಗಾರಿ ಅನುಷ್ಠಾನ ವಿಳಂಬವಾಗುತ್ತಿದೆ. ರಾಮೇನಹಳ್ಳಿ ಹಾಗೂ ಶೆಟ್ಟಿಹಳ್ಳಿ ಗ್ರಾಮದಲ್ಲಿ 1.34 ಕಿ.ಮೀ. ಪ್ರದೇಶದಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಸಮಸ್ಯೆಯಿದ್ದು, ಸಮಸ್ಯೆ ತೀರಿದ ನಂತರ ಸ್ವಾಧೀನಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಕರಾವಳಿ ಸೇರುವ ಉಪನದಿ: ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನಲ್ಲಿ ಉಗಮಿಸುವ ಎತ್ತಿನಹೊಳೆ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಕರಾವಳಿ ಭಾಗದಲ್ಲಿ ಸೇರುವ ನದಿ. ಎತ್ತಿನಹೊಳೆ ನದಿಯ ಜಲಾನಯನ ಪ್ರದೇಶ 65.80 ಚಕಿಮೀ. ಎತ್ತಿನಹೊಳೆ ನೇತ್ರಾವತಿ ನದಿಯ ಪ್ರಮುಖ ಉಪ ನದಿಗಳ ಪೈಕಿ ಒಂದು. ಅಲ್ಲಿಂದ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶಿಸಿ ಗುಂಡ್ಯ ಮತ್ತು ಕುಮಾರಧಾರಾ ನದಿಯ ಮೂಲಕ ನೇತ್ರಾವತಿಗೆ ಹೋಗಿ ಅಲ್ಲಿ ವಿಲೀನವಾಗುತ್ತದೆ.

ಬಯಲ ನಾಡಿಗೆ ನೀರು: ನೇತ್ರಾವತಿ ಹಾಗೂ ಕುಮಾರಧಾರಾ ನದಿಗಳಿಗೆ ನೀರೊದಗಿಸುವ ಐದು ಹಳ್ಳಗಳ ನೀರನ್ನು ಬಯಲುನಾಡಿನ ಕಡೆಗೆ ಹರಿಯಿಸುವ ಯೋಜನೆಯೇ ಎತ್ತಿನಹೊಳೆ. ವಾರ್ಷಿಕ ಸರಾಸರಿ ನೇತ್ರಾವತಿಯಲ್ಲಿ 548 ಟಿಎಂಸಿ ಅಡಿ ಹಾಗೂ ಕುಮಾರಧಾರಾದಲ್ಲಿ 220 ಟಿಎಂಸಿ ಅಡಿ ನೀರಿನ ಹರಿವು ಇದೆ. ಈ ಪೈಕಿ ಎತ್ತಿನ ಹೊಳೆಗೆ ಬಳಕೆಯಾಗುತ್ತಿರುವುದು 24.01 ಟಿಎಂಸಿ ಅಡಿ ಮಾತ್ರ. ಅಂದರೆ 768 ಟಿಎಂಸಿ ಅಡಿಯಲ್ಲಿ ಅತ್ಯಲ್ಪ ನೀರನ್ನು ಮಾತ್ರ ಎತ್ತಿನಹೊಳೆ ಯೋಜನೆಗೆ ಕೆಂಪುಹೊಳೆ, ಹೊಂಗದ ಹಳ್ಳ, ಕೇರಿಹೊಳೆ, ಕಾಡುಮನೆ ಹೊಳೆ1,2 ಹಾಗೂ ಎತ್ತಿನ ಹೊಳೆಯ ಎರಡು ಉಪಹೊಳೆಗಳ ನೀರನ್ನು ಬಳಸಿಕೊಳ್ಳಲಾಗುತ್ತದೆ. ಜಲಾನಯನ ಪ್ರದೇಶದಲ್ಲಿ ಲಭ್ಯವಾಗುವ 34.26 ಟಿಎಂಸಿ ಅಡಿ ನೀರಿನ ಪೈಕಿ 24.01 ಟಿಎಂಸಿ ನೀರು ಬಳಸಿಕೊಳ್ಳಲಾಗುತ್ತದೆ.

> ಜಿಲ್ಲೆಯಲ್ಲಿ ಪ್ರಗತಿಯಲ್ಲಿರುವ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಚುರುಕುಗೊಳಿಸಿ ಆಗಸ್ಟ್ ಮಾಹೆಯೊಳಗಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.
> ಡಾ.ಜಿ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವರು

ಹೊಳೆಗಳ ಹರಿವಿನ ಮಧ್ಯೆ, ಕಿರು ಕಟ್ಟೆ ಕಟ್ಟಿ ಸುಮಾರು 940 ಅಡಿ ಎತ್ತರಕ್ಕೆ ಪಂಪ್ ಮಾಡಿ ನೀರು ಹರಿಸಲಾಗುತ್ತದೆ.

ಬೈರಗೊಂಡ್ಲುವರೆಗೆ ಕಾಮಗಾರಿ: ಸಕಲೇಶಪುರ ತಾಲೂಕಿನಿಂದ ಕೋಲಾರದ ಶ್ರೀನಿವಾಸಪುರದವರೆಗೆ ನಾನಾ ಹಂತಗಳಲ್ಲಿ ಯೋಜನೆ ಅನುಷ್ಠಾನವಾಗುತ್ತದೆ. 260 ಕಿ.ಮೀ ಉದ್ದ ತೆರೆದ ಕಾಲುವೆ ಹಾಗೂ ಪೈಪ್ ಲೈನ್ ಮೂಲಕ ನೀರು ಹರಿಯುತ್ತದೆ. ಕಾಲುವೆಯ ಮಾರ್ಗದುದ್ದಕ್ಕೂ ಬರುವ ತಾಲ್ಲೂಕುಗಳ ಕೆರೆ ತುಂಬಿಸುವುದು ಯೋಜನೆಯ ರೂಪುರೇಷೆ. ಒಮ್ಮೆ ಏತನೀರಾವರಿ ಮೂಲಕ ನೀರೆತ್ತಿ ನಾಲೆಗೆ ಹರಿಸಿದರೆ ಜಿಲ್ಲೆಯ ಕೊರಟಗೆರೆ ತಾಲೂಕಿನಲ್ಲಿ ನಿರ್ಮಾಣವಾಗಲಿರುವ ಬೈರಗೊಂಡ್ಲು ಜಲಾಶಯದವರೆಗೆ ನೀರು ಗುರುತ್ವಾಕರ್ಷಣೆ ಬಲದ ಮೇಲೆ ಹರಿಯಲಿದೆ. ಕುಂದಣ ಎಂಬಲ್ಲಿ 7080 ಮೀಟರ್ ನೀರನ್ನು ಮತ್ತೆ ಪಂಪ್ ಮೂಲಕ ಮೇಲೆತ್ತಿ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಹರಿಸಲಾಗುತ್ತದೆ. ಬೈರಗೊಂಡ್ಲುವಿನವರೆಗೆ ಕಾಮಗಾರಿ ಅಂತಿಮಗೊಂಡಿದೆ.

'ವಂದೇ ಭಾರತ್' 2 ರೈಲು ಶಿವಮೊಗ್ಗಕ್ಕೆ ಬರಲಿವೆ | ಹೊಸ ಐದು ರೈಲುಗಳ ಸಂಚಾರಕ್ಕೆ ಹಸಿರು ನಿಶಾನೆ ಅಂತರರಾಜ್ಯ ಸಂಪರ್ಕ ರೈಲುಗಳ ಓಡಾಟ ಶೀಘ್ರ | ಮಲೆನಾಡು- ಉತ್ತರ ಕರ್ನಾಟಕ ಸಂಪರ್ಕಕೊಂಡಿ

ಮಲೆನಾಡಿನ ಶಿವಮೊಗ್ಗಕ್ಕೆ ಹೊಸ ರೈಲುಗಳ ಕ್ರಾಂತಿ

ಜಿಲ್ಲಾ ನೋಟ

ಹೆಗ್ಗೆರೆ ರೇಣುಕಾರಾಧ್ಯ, ಶಿವಮೊಗ್ಗ

ಈಗಾಗಲೇ ನಗರದ ವಿಮಾನ ನಿಲ್ದಾಣ ಸ್ಥಾಪನೆ ಮಾಡುವಲ್ಲಿ ಯಶಸ್ವಿಯಾಗಿದ್ದ ಸಂಸದ ರಾಘವೇಂದ್ರ ಅವರು ಮಲೆನಾಡಿನ ಜನತೆಗೆ ವಂದೇ ಮಾತರಂ ರೈಲಿನ ಕೊಡುಗೆಯನ್ನೂ ನೀಡಲು ಸಿದ್ಧತೆ ನಡೆಸಿದ್ದಾರೆ.

'ವಂದೇ ಭಾರತ್' ಶಿವಮೊಗ್ಗಕ್ಕೆ : ಎಲ್ಲ ಅಂದುಕೊಂಡಂತೆ ಆದರೆ, ಒಂದಲ್ಲ ಎರಡು 'ವಂದೇ ಭಾರತ್' ರೈಲುಗಳು ಶಿವಮೊಗ್ಗದಿಂದ ಹೊರಡಲಿವೆ. ವಂದೇ ಭಾರತ್ ತಲುಪದ ಅನೇಕ ಪ್ರಸಿದ್ಧ ನಗರಗಳು ನಮ್ಮ ದೇಶದ ಉದ್ದಗಲ ಇವೆ. ಆದರೆ, ಸಂಸದ ರಾಘವೇಂದ್ರ ಅವರ ಹುಮ್ಮಸ್ಸಿನ ವೇಗ ಎಷ್ಟಿದೇ ಎಂದರೆ ಈ ರೈಲು ಕರ್ನಾಟಕದಲ್ಲಿ ಶಿವಮೊಗ್ಗವನ್ನು ಶೀಘ್ರ ತಲುಪಿ ಬಿಡಬೇಕು ಎಂಬ ಕಾರಣಕ್ಕಾಗಿ ಹಠಕ್ಕೆ ಬಿದ್ದು ಎರಡು ರೈಲುಗಳನ್ನು ಮಂಜೂರು ಮಾಡಿಸಿಕೊಂಡು ಬಂದಿದ್ದಾರೆ.

ವೇಳಾಪಟ್ಟಿ ಬಿಡುಗಡೆ : ಎರಡು ವಂದೇ ಭಾರತ್ ರೈಲುಗಳು ಶಿವಮೊಗ್ಗದಿಂದ ಸಂಚಾರ ಆರಂಭಿಸುತ್ತವೆ. ಈಗಾಗಲೆ ಎರಡೂ ವಂದೇ ಭಾರತ್ ರೈಲುಗಳ ವೇಳಾಪಟ್ಟಿ ಹಾಗೂ ಗಾಡಿ ಸಂಖ್ಯೆಯನ್ನೂ ಇಲಾಖೆ ಪ್ರಕಟಿಸಿದೆ. ಶಿವಮೊಗ್ಗ ತಿರುಪತಿ ವಂದೇ ಭಾರತ್ ರೈಲು ಮುಂಜಾನೆ 4.30ಕ್ಕೆ ಶಿವಮೊಗ್ಗದಿಂದ ಹೊರಟು ಮಧ್ಯಾಹ್ನ 12.30ಕ್ಕೆ ತಿರುಪತಿ ತಲುಪುತ್ತದೆ. ಮತ್ತೆ ಸಂಜೆ 4.30ಕ್ಕೆ ಹೊರಟು ರಾತ್ರಿ 12.30ಗಂಟೆಗೆ ಶಿವಮೊಗ್ಗ ತಲುಪುತ್ತದೆ. ಮತ್ತೊಂದು ವಂದೇ ಭಾರತ್ ರೈಲು ಶಿವಮೊಗ್ಗ- ಬೆಂಗಳೂರು ನಡುವೆ ಸಂಚರಿಸಲಿದೆ. ಇದರ ಜತೆಗೆ ಐದು ರೈಲುಗಳು ಹೊಸದಾಗಿ ಶಿವಮೊಗ್ಗದಿಂದ ಸಂಚಾರ ಆರಂಭಿಸಲು ಹಸಿರು ನಿಶಾನೆ ತೋರಾಲಾಗಿದೆ.

ರೈಲ್ವೆ ಕೋಚಿಂಗ್ ಡಿಪೋ : ಶಿವಮೊಗ್ಗ ಎರ್ನಾಕುಲಂ (ಕೇರಳ), ಶಿವಮೊಗ್ಗ ಬಗಲ್‌ಪುರ್(ಬಿಹಾರ), ಶಿವಮೊಗ್ಗ ಜಮ್‌ಶೆಡ್‌ಪುರ್(ಜಾರ್ಖಂಡ್), ಶಿವಮೊಗ್ಗ ಚಂಡೀಗಢ, ಶಿವಮೊಗ್ಗ ಗೌಹಾಟಿ ರೈಲುಗಳ ಸಂಚಾರ ಜನವರಿ ಮತ್ತು ಫೆಬ್ರವರಿಯಲ್ಲಿಆರಂಭಿಸಲು ಇಲಾಖೆ ನಿರ್ಧರಿಸಿದೆ. ರೈಲ್ವೆ ಕೋಚಿಂಗ್ ಡಿಪೋ 2026ನೇ ಜನವರಿ ಅಂತ್ಯದೊಳಗೆ ಆರಂಭವಾಗಲಿದೆ. ಇದರಿಂದ ಹೆಚ್ಚು ಅನುಕೂಲ ಹಾಗೂ ಬೆಂಗಳೂರು ರೈಲ್ವೆ ನಿಲ್ದಾಣದ ಮೇಲೆ ಇದ್ದ ಒತ್ತಡ ತಗ್ಗಲಿದೆ. ಹಾಗಾಗಿ ರೈಲ್ವೆ ಕೋಚಿಂಗ್ ಡಿಪೋ ಕಾರಣದಿಂದ ಹೆಚ್ಚು ರೈಲುಗಳು ಶಿವಮೊಗ್ಗದಿಂದ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. ಇದೆಲ್ಲವೂ ತಿಳಿದಿದ್ದ ಸಂಸದ ರಾಘವೇಂದ್ರ ಅವರು ಕೋಚಿಂಗ್ ಡಿಪೋ ಕಾಮಗಾರಿ ಶೀಘ್ರ ಮುಗಿಸಲು ಆದ್ಯತೆ ನೀಡಿದ್ದಾರೆ. ಆನಂತರದಲ್ಲಿ ಇನ್ನಷ್ಟು ರೈಲುಗಳು ಶಿವಮೊಗ್ಗದ ಮೂಲಕ ಹಾದು ಹೋದರೂ ಸಂಚಾರಕ್ಕೆ ತೊಂದರೆ ಇಲ್ಲ.

ರಾಜಧಾನಿ ಮತ್ತಷ್ಟು ಹತ್ತಿರ: ಮಲೆನಾಡಿನ ಭಾಗವೂ ದೇಶಕ್ಕೆ ಸಂಪರ್ಕ ಪಡೆಯದೇ ಹಲವು ಕಾರಣಗಳಿಂದ ರೈಲು ಸಂಪರ್ಕ ವಿದ್ದರೂ ಇಲ್ಲದಂತೆ ಉಳಿದು ಹೋಗಿತ್ತು. ಮೊದಲ ಬಾರಿಗೆ ಸಂಸದ ರಾಘವೇಂದ್ರ ಅವರು ಹಲವು ರೈಲೆಗಳನ್ನು ಮಂಜೂರು ಮಾಡಿಸಿಕೊಳ್ಳುವ ಮೂಲಕ ಶಿವಮೊಗ್ಗದ ಜನರಿಗೆ ಶೀಘ್ರ ರಾಜಧಾನಿಗೆ ಸಂಪರ್ಕ ಕಲ್ಪಿಸುವುದಕ್ಕೆ ಅವಕಾಶ ಮಾಡಿಕೊಟ್ಟರು. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಒಳನಾಡಿನ ಪ್ರದೇಶಗಳಿಂದ ಬೆಂಗಳೂರು ತಲುಪಲು ಶಿವಮೊಗ್ಗ ಪ್ರಮುಖ ಕೇಂದ್ರ ಆಗಬೇಕು ಎಂಬ ಅವರ ಕಲ್ಪನೆ ಸಾಕಾರವಾಗುವ ಕಾಲ ಬಂದಿದೆ.

ಶಿವಮೊಗ್ಗ ಅಭಿವೃದ್ಧಿಗೆ ವೇಗ : ಈಗಾಗಲೇ ಶಿರಸಿ, ಸಿದ್ದಾಪುರ, ಕಾರವಾರ ಹಾಗೂ ಅಲ್ಲಿನ ಸುತ್ತಮುತ್ತಲಿನ ಜನರಿಗೆ ಬೆಂಗಳೂರಿಗೆ ಶಿವಮೊಗ್ಗದ ಮೂಲಕ ಹೋಗಿಬರುವ ಸಂಪರ್ಕ ಸುಲಭವಾಗಿದೆ. ಹಾಗೆಯೇ ಇತರ ಪ್ರದೇಶಗಳಿಗೂ ರೈಲ್ವೆ ಸಂಪರ್ಕ ಆರಂಭವಾದರೆ ಶಿವಮೊಗ್ಗ ಇನ್ನಷ್ಟು ಅಭಿವೃದ್ಧಿ ಹೊಂದುತ್ತದೆ ಎಂಬ ಕಲ್ಪನೆಯೂ ಸಂಸದರಿಗೆ ಇದ್ದಂತೆ ಇದೆ.

ಮಲೆನಾಡು- ಉತ್ತರ ಕರ್ನಾಟಕ : ಈ ಕಾರಣದಿಂದ ಅವರು ಹೊಸ ಹೊಸ ರೈಲು ತರುವ ಜೊತೆಗೆ ಉತ್ತರ ಕರ್ನಾಟಕ ಹಾಗೂ ಮಲೆನಾಡು ಭಾಗ ಸಂಪರ್ಕ ಮಾಡುವ ಹೊಸ ರೈಲು ಮಾರ್ಗದ ಕಾಮಗಾರಿಯನ್ನು ಚುರುಕು ಮಾಡಿದ್ದಾರೆ. ಈಗಾಲೇ ಶೇ.30 ಕ್ಕೂ ಹೆಚ್ಚು ಭಾಗ ಕಾಮಗಾರಿ ಅವಕಾಶ ಪಡೆದಿರುವ ಶಿವಮೊಗ್ಗ- ರಾಣೆಬೆನ್ನೂರು ರೈಲ್ವೆ ಕಾಮಗಾರಿ ವೇಗ ಹೆಚ್ಚುತ್ತಲಿದೆ. ಇದರಿಂದ ಇನ್ನಷ್ಟು ರೈಲುಗಳು ಶಿವಮೊಗ್ಗದ ಮೂಲಕ ಹಾದು ಹೋಗಲಿವೆ.

ಮಲೆನಾಡಿನ ಭಾಗದಲ್ಲಿ ಕೊನೆಯ ನಿಲ್ದಾಣ ಹೊಂದಿದ ಜಿಲ್ಲೆ ಎಂಬ ಹೆಗ್ಗಳಿಕೆಯಲ್ಲಿದ್ದ ಶಿವಮೊಗ್ಗ ಈಗ ಬಹುಮುಖಿ ಸಂಪರ್ಕವನ್ನು ಕಲ್ಪಿಸುತ್ತಿದೆ. ನಿಧಾನವಾಗಿ ರೈಲು ಈ ಭಾಗದ ವ್ಯಾಪಾರ ವಹಿವಾಟನ್ನು ಹೆಚ್ಚಳ ಮಾಡುತ್ತಿದೆ. ಹಾಗೆಯೇ ಇತರ ರಾಜ್ಯಗಳ ಸಂಪರ್ಕದಿಂದ ವ್ಯಾಪಾರ ಸಂಪರ್ಕವೂ ಸುಲಭವಾಗುತ್ತಿದೆ. ಇಲ್ಲಿನ ಕೈಗಾರಿಕೆಗಳಿಗೂ ಅನುಕೂಲವಾಗುತ್ತಿದೆ.

ತಾಳಗುಪ್ಪ - ಹುಬ್ಬಳ್ಳಿ : ಮತ್ತೊಂದು ಕಡೆ ತಾಳಗುಪ್ಪದಿಂದ ಹುಬ್ಬಳ್ಳಿ ಸಂಪರ್ಕಕ್ಕೆ ಸಿದ್ದಾಪುರ, ಶಿರಸಿ, ಮುಂಡಗೋಡು ತಡಸ ನಡುವೆ 150 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಾಣಕ್ಕೆ ಸರ್ವೆ ಆಗಿದೆ. ಈ ಮಾರ್ಗದಲ್ಲಿ195 ಹೆಕ್ಟೆರ್ ಖುಷ್ಕಿ ಭೂಮಿ, 317 ಹೆಕ್ಟೆರ್ ನೀರಾವರಿ, 190 ಹೆಕ್ಟೆರ್ ಅರಣ್ಯ ಭೂಮಿ ಬರುತ್ತದೆ. ಅರಣ್ಯ ಭೂಮಿಗೆ ಬದಲಿ ಭೂಮಿ ಕೊಡುವ ಕಾರ್ಯ ಆರಂಭವಾಗಿದೆ.

ತಾಳಗುಪ್ಪ- ಹೊನ್ನಾವರ ರೈಲು ಮಾರ್ಗದ ಸರ್ವೆ ಸಹ ಆಗಿದೆ. ಈಶಾನ್ಯದಿಂದ ಹಿಡಿದು ಪೂರ್ವ ಹಾಗೂ ಪಶ್ಚಿಮ ಭಾಗದವರೆಗೆ ಎಲ್ಲ ಕಡೆಗಳಿಗೂ ರೈಲು ಸಂಪರ್ಕ ಸಾಧ್ಯವಾಗಬೇಕು ಹಾಗೂ ಉನ್ನತ ದರ್ಜೆಯ ರೈಲುಗಳು ಶಿವಮೊಗ್ಗದಿಂದಲೇ ಹೊರಡಬೇಕು ಎಂಬ ಸಂಸದರ ಶ್ರಮ ವ್ಯರ್ಥವಾಗಿಲ್ಲ.

> ಬೆಂಗಳೂರು ಮತ್ತು ಮೈಸೂರು ರೈಲ್ವೆ ಮೇಲಿನ ಒತ್ತಡ ಕಡಿಮೆ ಮಾಡಲು ರೈಲ್ವೆ ಇಲಾಖೆ ನಿರ್ಧರಿಸಿದ್ದು, ಅದಕ್ಕಾಗಿ ಬಹಳಷ್ಟು ರೈಲುಗಳು ಬೆಂಗಳೂರು ಮತ್ತು ಮೈಸೂರು ಬದಲಾಗಿ ಮಲೆನಾಡಿನ ಹೆಬ್ಬಾಗಿಲು ಶಿವಮೊಗ್ಗದಿಂದಲೇ ಸಂಚಾರ ಆರಂಭಿಸಲು ಯೋಜನೆ ರೂಪಿಸಲಾಗಿದೆ.
> -ಬಿ.ವೈ.ರಾಘವೇಂದ್ರ, ಸಂಸದ

ಚಿತ್ತವಿಹಾರ

ನಿರ್ವಿಕಾರ ಮನೋಭಾವ

● ವಿದ್ಯಾಶಂಕರ ಶರ್ಮ

ಬಿಸಿಬಿಸಿಯಾದ ಚಹಾ ಅಥವಾ ಕಾಫಿಯನ್ನೋ ಕುಡಿಯುವಾಗ, ಕೈಯಲ್ಲಿ ಇದ್ದ ಪಿಂಗಾಣಿಯ, ಗಾಜಿನ ಲೋಟವು ಅಕಸ್ಮಾತ್ತಾಗಿ ಜಾರಿ ಬಿದ್ದು ಒಡೆಯಬಹುದು. ಲೋಟದಲ್ಲಿ ಇದ್ದ ಚಹಾ/ಕಾಫಿ ಚೆಲ್ಲಿ ಬಟ್ಟೆಯು ಕಲೆಯಾಗಿ ಕಿರಿಕಿರಿಯಾಗಬಹುದು. ಗೊಣಗಿಕೊಳ್ಳುತ್ತಲೇ ಒಡೆದು ಲೋಟದ ಚೂರುಗಳನ್ನು ಸ್ವಚ್ಛ ಮಾಡುತ್ತೇವೆ, ಬಟ್ಟೆಯನ್ನು ಬದಲಾಯಿಸಿ ಸಮಾಧಾನ ಪಡುತ್ತೇವೆ. ಹಾಗೆಯೇ ಅದನ್ನು ಮರೆತು ನಮ್ಮ ದೈನಂದಿನ ಕೆಲಸಗಳಲ್ಲಿ ಮಗ್ನರಾಗುತ್ತೇವೆ. ಇದು ವಸ್ತುಗಳ ವಿಷಯದಲ್ಲಿ ನಾವು ತೋರುವ ನಿರ್ವಿಕಾರ ಮನೋಭಾವ. ಆದರೆ ಬದುಕಿನ ಪಿಂಗಾಣಿ ಪಾತ್ರೆಯು ಒಡೆದಾಗ, ಅನಿರೀಕ್ಷಿತ ಹೊಡೆತಗಳ ಕಲೆ ನಮ್ಮನ್ನು ಆವರಿಸಿದಾಗ, ನಾವು ವರ್ತಿಸುವ ರೀತಿ ತೀರ ಭಿನ್ನ.

ಅದಕ್ಕೆ ಕಾರಣ ಬಲು ಸ್ಪಷ್ಟ. ಗಾಜಿನ/ಪಿಂಗಾಣಿ ಲೋಟದ ಜೊತೆ ನಮಗೆ ಯಾವ ರೀತಿಯ ಮೋಹವೂ ಇರದು, ಹಾಗಾಗಿ ಅವುಗಳ ಚೂರುಗಳನ್ನು ಕಸದಬುಟ್ಟಿಗೆ ಎಸೆದು ಹಗುರವಾಗುತ್ತೇವೆ. ಆದರೆ ಅದೇ ನಿರ್ಮೋಹದ ಭಾವ ವ್ಯಕ್ತಿ, ವಿಷಯ, ಸಂಪತ್ತು, ಅಧಿಕಾರಗಳನ್ನು ಕಳೆದುಕೊಂಡಾಗ ನಮಗೆ ಇರದು. ಇದು ನಮ್ಮಲ್ಲಿ ದ್ವಂದ್ವವನ್ನು ಉಂಟುಮಾಡುತ್ತದೆ. ನಿಜ, ಮನುಷ್ಯ ಎಂದ ಮೇಲೆ ಭಾವನೆಗಳು ಸಹಜ. ಆದರೆ ಅವುಗಳ ಸರಿಯಾದ ನಿಯಂತ್ರಣ ಬದುಕಿನಲ್ಲಿ ಬಹು ಮುಖ್ಯವಾಗುತ್ತದೆ. ಇಲ್ಲದಿದ್ದರೆ ಬದುಕು ಒಂದು ಅಸಹನೀಯ ಅಧ್ಯಾಯವಾಗಿ ಬದಲಾಗುತ್ತದೆ. ನಮ್ಮ ಬದುಕು, ನಮ್ಮ ನಿರ್ಧಾರ, ನಮ್ಮ ಆಯ್ಕೆ ಯಾವುದಕ್ಕೂ ನಾವು ಇತರರನ್ನು ಕೇಳಿಲ್ಲ. ಎಲ್ಲವೂ ನಮ್ಮ ಯೋಜನೆಗಳೇ, ಹಾಗಾಗಿ ಅವುಗಳ ಪರಿಣಾಮವನ್ನೂ ನಾವೇ ಭರಿಸಬೇಕು. ಇದು ಸುಲಭವಂತೂ ಅಲ್ಲ, ಆದರೆ ಅಸಾಧ್ಯ ಕೂಡ ಅಲ್ಲ. ಮನದ ಸತತ ತಾಲೀಮು, ಸಾಧನೆ, ಸಹನೆ ಇವೆಲ್ಲ ನಮಗೆ ಅನುಕೂಲವಾಗುವ ಪರಿಕರಗಳು.

ಬದುಕಿನ ವಿಪರ್ಯಾಸ ನೋಡಿ, ನಮಗೆ ಆಯ್ಕೆಯ ಸ್ವಾತಂತ್ರ್ಯವಿರುವದರಿಂದ ನಮಗೆ ತೋಚಿದ ನಡೆಗಳನ್ನು ಕಾರ್ಯರೂಪಕ್ಕೆ ತರುತ್ತೇವೆ. ಆದರೆ ಅದರ ಪರಿಣಾಮಗಳಲ್ಲಿ ನಮಗೆ ಆಯ್ಕೆಗಳಿಗಿಂತ ಅನಿವಾರ್ಯತೆಗಳೇ ಹೆಚ್ಚು. ಅಂದರೆ ಅದು ಸ್ವಾತಂತ್ರ್ಯದಿಂದ ಸಂಕೋಲೆಯ ಕಡೆಗೆ ನಮ್ಮ ಪಯಣ. ಅಂತಹ ಪರಿಸ್ಥಿತಿಯನ್ನು ಒಪ್ಪಿಕೊಂಡು ಗಟ್ಟಿತನ ಮೆರೆಯದೆ ಬೇರೆ ದಾರಿಯಿಲ್ಲ ನಮಗೆ. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆ ಒಂದಿರಲಿ' ಎಂಬ ವಾಣಿಯಂತೆ ಒಡೆದ, ಸೀದು ಹೋದ, ಬಾಡಿ ಹೋದ ಬದುಕಿನ ಸಂಗತಿಗಳನ್ನು ನಮ್ಮ ತೆಕ್ಕೆಯಲ್ಲಿ ಇರಿಸಿಕೊಂಡು ಮುಂದೆ ಸಾಗಬೇಕು. ಇಂತಹ ದೃಷ್ಟಿಕೋನವು ಹಲವು ಹೊಸ ಆಯಾಮಗಳಿಗೆ ನಮ್ಮನ್ನು ತೆರೆದುಕೊಳ್ಳುವಂತೆ ಮಾಡುತ್ತದೆ.

ಹನಿ ಮಳೆ

ವಿಪರ್ಯಾಸ

ಮುಂದುವರೆದ ಜಗತ್ತು
ಕೈ ತುಂಬಾ ಅವಕಾಶ
ದೂರ ಇಲ್ಲ ಆಕಾಶ
ರಸ್ತೆ ಮೇಲಿನ
ಚಿಕ್ಕ ವಿಷಯಗಳಿಗೆ
ಮನುಜ ಇನ್ನೂ ಹತಾಶ

● ಮಹಾಂತೇಶ ಮಾಗನೂರ

ನಗುವಿನ ಹೊನಲಿಲ್ಲದ ಬದುಕು ಬೆಂಗಾಡಿನಂತೆ. ನಗಬಲ್ಲವರು ಭೂಮಿಯಲ್ಲಿ ಸ್ವರ್ಗವನ್ನೇ ನಿರ್ಮಿಸಬಲ್ಲವರಾಗಿರುತ್ತಾರೆ . ನಗುನಗುತ ಹೇಳುವ ಮಾತು ನಗುನಗುತ ಮಾಡುವ ಕೆಲಸ ಮನಸ್ಸಿಗೆ ಮುದ ನೀಡುತ್ತದೆ, ಹೃದಯ ಅರಳಿ ಮತ್ತೊಂದು ಕೆಲಸಕ್ಕೆ ನಮ್ಮನ್ನು ಪ್ರೇರೇಪಿಸುತ್ತದೆ. ಮುಖವೇ ಮನಸ್ಸಿನ ಕನ್ನಡಿ ಎನ್ನುವಂತೆ ಮುಖದಲ್ಲಿ ನಗು ಇರುವ ವ್ಯಕ್ತಿ ಸ್ನೇಹಜೀವಿಯಾಗಿದ್ದು ಸಾಮಾಜಿಕ ಸಂಬಂಧಗಳೊಂದಿಗೆ ವ್ಯವಹರಿಸುತ್ತಾನೆ .

ನಗುವೇ ಜೀವನದ ಪರಮ ಔಷಧಿ



● ಅಂಜಿನಪ್ಪ ಡಿ, ಉಪನ್ಯಾಸಕರು ಕೊಟ್ಟೂರು

ನಗು ನಗುತಾ ನಲಿ ನಲಿ ಏನೇ ಆಗಲಿ ಎಲ್ಲಾ ದೇವನಾ ಕಲೆಯಂದೇ ನೀ ತಿಳಿ. ಡಾ.ರಾಜಕುಮಾರ್ ಅವರ ಬಂಗಾರದ ಮನುಷ್ಯ ಚಿತ್ರದ ಈ ಹಾಡನ್ನು ಯಾರು ತಾನೆ ಕೇಳಿಲ್ಲ ? ಈ ಹಾಡನ್ನು ಕೇಳಿದಾಗಲೆಲ್ಲ ಪ್ರತಿಯೊಬ್ಬರಲ್ಲಿ ಹೊಸ ಚೈತನ್ಯ ಮತ್ತು ಸ್ಪೂರ್ತಿಯನ್ನು ಉಂಟುಮಾಡುತ್ತದೆ. ಜೀವನದಲ್ಲಿ ಎಷ್ಟೇ ಕಷ್ಟ ಕಾರ್ಪಣ್ಯಗಳು ಬರಲಿ ಅವೆಲ್ಲವನ್ನು ನಗುನಗುತ ಎದುರಿಸಿ ಎಂದು ಹೇಳುವ ಈ ಹಾಡು ಜೀವನದಲ್ಲಿ ನಗುವಿನ ಮಹತ್ವವನ್ನು ತಿಳಿಸುತ್ತದೆ

ನಗು, ಮನುಷ್ಯನಿಗೆ ದೇವರು ಪ್ರಕೃತಿದತ್ತವಾಗಿ ನೀಡಿರುವ ಸಹಜ ಕ್ರಿಯೆ ಹಾಗೂ ಪ್ರತಿಯೊಬ್ಬರ ಬಾಳಿನ ಸಂಜೀವಿನಿಯಾಗಿದ್ದು ಬದುಕಿನ ಜೀವಸೆಲೆಯು ಕೂಡ ಆಗಿದೆ. ನಗುವಿಗೆ ಮನುಷ್ಯನ ಎಲ್ಲ ನೋವನ್ನ ಮರೆಸುವ ಶಕ್ತಿ ಇದೆ.

ನಗುವು ಸಹಜದ ಧರ್ಮ, ನಗಿಸುವುದು ಪರ ಧರ್ಮ॥
ನಗುವ ಕೇಳುತ ನಗುವುದತಿಶಯದ ಧರ್ಮ ॥

ನಾವು ನಗುತ ನಗುತಾ ಜೀವನವನ್ನು ನಡೆಸುವುದಲ್ಲದೆ ಇತರರನ್ನು ನಗಿಸುತ್ತಾ ಜೀವಿಸುವುದೇ ನಿಜವಾದ ಮನುಷ್ಯ ಧರ್ಮ. ಇದುವೇ ನಿಜವಾದ ಅರೋಗ್ಯದ ಗುಟ್ಟು . ಬಾಲ್ಯದಲ್ಲಿ ತುಂಟಾಟಗಳ ಮೂಲಕ ಯಾವುದೇ ದ್ವೇಷ ಅಸೂಯೆಗಳಿಲ್ಲದೆ ನಗುನಗುತ್ತಾ ಸುಂದರ ಜೀವನ ನಡೆಸುವ ನಾವು ಬೆಳೆದಂತೆ ಜವಾಬ್ದಾರಿಗಳು ಹೆಗಲೇರುತ್ತವೆ. ನಮ್ಮ ಮುಖದಿಂದ ದಿನೇ ದಿನೇ ನಗು ಮಾಯವಾಗುತ್ತಾ ಹೋಗುತ್ತದೆ

ಇಂದಿನ ಆಧುನಿಕ ಜೀವನಶೈಲಿ ಮತ್ತು ಒತ್ತಡದ ಯಾಂತ್ರಿಕ ಬದುಕಿನಿಂದಾಗಿ ಮುಖದಲ್ಲಿ ನಗು ಇಲ್ಲದಂತಾಗಿದೆ. ಸಮೂಹ ಮಾಧ್ಯಮಗಳ ಸನ್ನಿ ಆಗಿರುವ ಮನುಷ್ಯನಿಗೆ ವ್ಯಕ್ತಿಗಳ ವ್ಯಕ್ತಿಗಳ ನಡುವೆ ಪರಸ್ಪರ ಸಂಪರ್ಕ ಇಲ್ಲದಂತಾಗಿ ನಗು ಎಲ್ಲಿಂದ ಬರಬೇಕು? ಇದು ಮನುಷ್ಯನಿಗೆ ಅತ್ಯಂತ ಹೆಚ್ಚಿನ ಒತ್ತಡವನ್ನು ಉಂಟುಮಾಡುತ್ತದೆ. ಇದರಿಂದಾಗಿ ದೀರ್ಘಕಾಲಿಕ ದೈಹಿಕ ಮತ್ತು ಮಾನಸಿಕ ಕಾಯಿಲೆಗಳನ್ನು ಉಂಟುಮಾಡುತ್ತದೆ

ಹುಸಿ ನಗುತಾ ಬಂದೇವ ನಸು ನಗುತ ಬಾಳೋಣ । ಬಡ ನೂರು ವರುಷಾನ ಹರುಷಾದಿ ಕಳೆಯೋಣ ।

ನಗುನಗುತ ಭೂಮಿಗೆ ಬಂದಿರುವ ನಾವು ಜೀವನದಲ್ಲಿ ಬರುವ ಎಲ್ಲಾ ಸಂಕಷ್ಟಗಳನ್ನು ನಗುತ ಸ್ವೀಕರಿಸೋಣ. ಅಧೈರ್ಯರಾಗಿ ಕುಗ್ಗುವ ಬದಲು ಸಂತೋಷದಿಂದಲೇ ಅವುಗಳನ್ನ ಎದುರಿಸಿ ಜೀವನದ ಎಲ್ಲ ಮಜಲುಗಳನ್ನು ಅನುಭವಿಸೋಣ. ಬದುಕಿನಲ್ಲಿ ಅದೆಷ್ಟೋ ನೋವಿರಲಿ ದುಃಖವಿರಲಿ ಮುಖದಲ್ಲಿ ಮೂಡುವ ಸಣ್ಣ ನಗು ಎಲ್ಲವನ್ನ ಮರೆಸಿ ಹೊಸ ಪ್ರಪಂಚವನ್ನು ಸೃಷ್ಟಿಸುತ್ತದೆ. ನಗು ಮನುಷ್ಯನಿಗೆ ದಿವ್ಯ ಔಷಧಿಯಂತೆ ಕೆಲಸ ಮಾಡುತ್ತದೆ. ಪ್ರಾಚೀನ ಕಾಲದಲ್ಲಿ ಹಳ್ಳಿಗಳಲ್ಲಿ ಊರ ಮುಂದಿನ ಚಾವಡಿಗಳಲ್ಲಿ ದೇವಸ್ಥಾನದ ಮುಂಭಾಗದಲ್ಲಿ ವಿರಾಮಕಾಲವಿದ್ದಾಗ ಒಂದೆಡೆ ಸೇರಿ ಹರಟೆ ವಿನೋದಗಳ ಮೂಲಕ ಹೊಟ್ಟೆ ಹುಣ್ಣಾಗುವಷ್ಟು ನಗುತ್ತಿದ್ದರು. ಇದರಿಂದ ಕಷ್ಟಗಳನ್ನೆಲ್ಲ ಮರೆತು ಸಂತಸ ಪಡುತ್ತಿದ್ದರು. ಇಂದು ಮನುಷ್ಯನು ಹಣದ ಅಹಮಿಕೆಯ ನಶೆಯಿಂದಾಗಿ ಒಬ್ಬರನ್ನೊಬ್ಬರು ಪ್ರೀತಿಸುವ ಬದಲು ದ್ವೇಷದಲ್ಲಿ ಮುಳುಗಿರುವಾಗ ನಗು ಎಲ್ಲಿಂದ ಬಂದೀತು? ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ? ಮೋಡ ಕಟ್ಟಿತು ಹೇಗೆ? ನೆಲಕ್ಕೆ ಹಸಿರು ಮೂಡಿತು ಹೇಗೆ? ಪ್ರಾಚೀನ ಕಾಲದಲ್ಲಿ ರಾಜ ಮಹಾರಾಜರು ತಮ್ಮ ಆಸ್ಥಾನಗಳಲ್ಲಿ ವಿಕಟ ಕವಿಗಳನ್ನು ಹಾಗೂ ವಿದೂಷಕರನ್ನ ನೇಮಿಸಿಕೊಂಡು ತಾವು ನಗುವುದಲ್ಲದೆ ಇಡೀ ರಾಜ್ಯ ದರ್ಬಾರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು. ಇದು ಅಂದಿನ ನಗುವಿನ ಮಹತ್ವವನ್ನು ತಿಳಿಸುತ್ತದೆ. 12ನೇ ಶತಮಾನದಲ್ಲಿ ಮಾರಿತಂದೆ ಎಂಬ ವಚನಕಾರ ನಗುವನ್ನೇ ಕಾಯಕ ಮಾಡಿಕೊಂಡು ಎಲ್ಲರನ್ನೂ ನಗಿಸುತ್ತಿದ್ದನಂತೆ ಆದ್ದರಿಂದಲೇ ಅವನಿಗೆ ನಗುವಿನ ಮಾರಿತಂದೆ ಎಂದು ಹೆಸರು ಬಂದಿತ್ತು.

ನಗು ಆರೋಗ್ಯಕ್ಕೆ ಬಹಳ ಮುಖ್ಯ. ಇದು ಒತ್ತಡವನ್ನು ಕಡಿಮೆ ಮಾಡಿ ಸಂತೋಷವನ್ನುಂಟು ಮಾಡುತ್ತದೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ನಗು, ದೇಹ ಮತ್ತು ಮನಸ್ಸಿಗೆ ಹಿತವನ್ನುಂಟು ಮಾಡಿ ಸಕಾರಾತ್ಮಕ ಚಿಂತನೆಯನ್ನು ತರುತ್ತದೆ. ನಗು ಮಾನಸಿಕ ಆರೋಗ್ಯ ಸುಧಾರಿಸುವ ಜೊತೆಗೆ ಆತಂಕ ಮತ್ತು ಖಿನ್ನತೆಗಳನ್ನು ಕಡಿಮೆ ಮಾಡುತ್ತದೆ.

ಜಗತ್ತನ್ನೇ ನಗೆಗಡಲಲ್ಲಿ ತೇಲಿಸಿದ್ದ ಚಾರ್ಲಿ ಚಾಪ್ಲಿನ್ ನಗುವಿಲ್ಲದ ದಿನ ವ್ಯರ್ಥ ದಿನ ಎಂದು ಹೇಳುತ್ತಿದ್ದ. ನಗು ಸಾಮಾಜಿಕ ಬಾಂಧವ್ಯವನ್ನ ಉತ್ತೇಜಿಸಿ ಸಂಬಂಧಗಳನ್ನು ಬಲಪಡಿಸುತ್ತದೆ ಎಲ್ಲರೊಂದಿಗೆ ಸಾಮರಸ್ಯ ಜೀವನ ನಡೆಸಲು ಸಹಾಕಾರಿಯಾಗುತ್ತದೆ

ನಕ್ಕು ಸಾಯ್ರಿ, ಎಲ್ಲಾ ನಕ್ಕು ಸಾಯ್ರಿ
ನಕ್ಕು ಸತ್ರ, ಎಲ್ಲಾ ನಕ್ಷತ್ರ, ಅಕ್ಕಿರೀ

ಬೇಂದ್ರೆ ಅವರ ಈ ಸಾಲುಗಳಲ್ಲಿ ಮನುಷ್ಯನ ಬದುಕು ಕ್ಷಣಿಕ,ಇರುವ ತನಕ ಬದುಕನ್ನು ನಗುನಗುತ ಕಳೆಯಿರಿ. ಬದುಕಿನ ಪ್ರತಿಕ್ಷಣವನ್ನು ಆನಂದದಿಂದ ಅನುಭವಿಸಿ. ನಕ್ಕರೆ ನಕ್ಷತ್ರದಂತೆ ಜೀವನ ಸುಂದರವಾಗಿರುತ್ತದೆ. ಸಾವನ್ನು ಕೂಡ ನಗುನಗುತ ಸ್ವೀಕರಿಸಿ. ಇದೇ ನಿಜವಾದ ಸಾರ್ಥಕತೆಯ ಬದುಕು. ನಗುವಿನ ಹೊನಲಿಲ್ಲದ ಬದುಕು ಬೆಂಗಾಡಿನಂತೆ. ನಗಬಲ್ಲವರು ಭೂಮಿಯಲ್ಲಿ ಸ್ವರ್ಗವನ್ನೇ ನಿರ್ಮಿಸಬಲ್ಲವರಾಗಿರುತ್ತಾರೆ. ನಗುನಗುತ ಹೇಳುವ ಮಾತು ನಗುನಗುತ ಮಾಡುವ ಕೆಲಸ ಮನಸ್ಸಿಗೆ ಮುದ ನೀಡುತ್ತದೆ, ಹೃದಯ ಅರಳಿ ಮತ್ತೊಂದು ಕೆಲಸಕ್ಕೆ ನಮ್ಮನ್ನು ಪ್ರೇರೇಪಿಸುತ್ತದೆ. ಮುಖವೇ ಮನಸ್ಸಿನ ಕನ್ನಡಿ ಎನ್ನುವಂತೆ ಮುಖದಲ್ಲಿ ನಗು ಇರುವ ವ್ಯಕ್ತಿ ಸ್ನೇಹಜೀವಿಯಾಗಿದ್ದು ಸಾಮಾಜಿಕ ಸಂಬಂಧಗಳೊಂದಿಗೆ ವ್ಯವಹರಿಸುತ್ತಾನೆ. ನಗುವಿಲ್ಲದ ವ್ಯಕ್ತಿಯ ಮುಖವು ರೌದ್ರತೆಯಿಂದ ಕೂಡಿದ್ದು ನೋಡುಗರಲ್ಲಿ ಭಯ ಉಂಟು ಮಾಡುವುದರ ಜೊತೆಗೆ ಸಾಮಾಜಿಕ ಸಂಬಂಧಗಳಿಂದ ದೂರ ಉಳಿಯುತ್ತಾನೆ.

ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಪ್ರಕಾರ ನಗು ಹೃದಯದ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ. ನಗುವುದರಿಂದ ಎಂಡಾರ್ಫಿನ್ ಎಂಬ ಹಾರ್ಮೋನ್ ದೇಹದಲ್ಲಿ ಬಿಡುಗಡೆಯಾಗುತ್ತದೆ. ಇವು ಮೆದುಳಿಗೆ ಉತ್ತಮ ರಾಸಯನಿಕಗಳಾಗಿದ್ದು ಸದಾ ಸಂತೋಷವಾಗಿರಲು ಸಹಾಯ ಮಾಡುತ್ತವೆ. ನಗುವುದರಿಂದಾಗಿ ಮುಖದಲ್ಲಿನ ಸ್ನಾಯುಗಳೆಲ್ಲವೂ ಕೂಡ ಚಲನಶೀಲಗೊಳ್ಳುತ್ತವೆ. ಮತ್ತು ದೇಹದಲ್ಲಿನ ಸಕ್ಕರೆ ಮಟ್ಟವನ್ನು ಕಾಪಾಡಿಕೊಳ್ಳಲು ಕೂಡ ಸಹಾಯ ಮಾಡುತ್ತದೆ. ಉತ್ತಮವಾಗಿ ನಿದ್ರಿಸಲು ಕಾರಣವಾಗುತ್ತದೆ. ದೇಹದಲ್ಲಿರುವ ಅಧಿಕ ಕೊಬ್ಬನ್ನು ನಿಯಂತ್ರಿಸಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಯಾವ ವ್ಯಕ್ತಿ ಹೆಚ್ಚು ಸಂತೋಷದಿಂದ ಇರುತ್ತಾನೋ ಅವನ ಆಯಸ್ಸು ಕೂಡ ಹೆಚ್ಚಾಗಿ ದೀರ್ಘಕಾಲ ಬಾಳುತ್ತಾನೆ ಎಂದು ರಾಷ್ಟ್ರೀಯ ಆರೋಗ್ಯ ಸಂಸ್ಥೆ ತಿಳಿಸಿದೆ.

ಇಂದು ಪ್ರಪಂಚದಾದ್ಯಂತ 150ಕ್ಕೂ ಹೆಚ್ಚು ದೇಶಗಳು ನಗುವಿನ ಕ್ಲಬ್ ಗಳನ್ನು ಸ್ಥಾಪಿಸಿ ಜನರನ್ನ ನಗಿಸುತ್ತಾ ಮನುಷ್ಯನ ಆರೋಗ್ಯಕ್ಕೆ ನಗು ಎಷ್ಟು ಮುಖ್ಯ ಎಂಬುದನ್ನು ತಿಳಿಸುತ್ತಿವೆ. ಇತ್ತೀಚೆಗೆ ಹಲವಾರು ದೇಶಗಳಲ್ಲಿ ನಗು ಯೋಗ ಚಳುವಳಿಯನ್ನು ಆರಂಭಿಸಿದ್ದು ಜನರ ಮುಖದಲ್ಲಿ ನಗುವಿನ ಅಲೆಯನ್ನು ಎಬ್ಬಿಸುವ ಕೆಲಸ ಮಾಡುತ್ತಿವೆ. ನಗುವಾಗ ದೇಹವು ನೈಸರ್ಗಿಕ ವಿಶ್ರಾಂತಿ ಪ್ರತಿಕ್ರಿಯೆಯನ್ನು ಅನುಭವಿಸುತ್ತದೆ. ನಗು ಜನರ ನಡುವಿನ ಅಹಮಿಕೆಯ ಗೋಡೆಗಳನ್ನು ತೆಗೆದು ಒಟ್ಟಿಗೆ ತರುವ ಕೆಲಸ ಮಾಡುತ್ತದೆ. ನಗುವು ಮನುಷ್ಯನಿಗೆ ನೈಸರ್ಗಿಕ ಟಾನಿಕ್ ಇದ್ದಂತೆ. ಇಂದು ನಾವು ನಗುವುದಕ್ಕೆ ಹಣವನ್ನು ಖರ್ಚು ಮಾಡುವ ಅವಶ್ಯಕತೆ ಇಲ್ಲ. ಸಮಯ ಸಿಕ್ಕಾಗಲೆಲ್ಲ ಸ್ನೇಹಿತರೊಂದಿಗೆ ನಮ್ಮ ಹಿತೈಷಿಗಳೊಂದಿಗೆ ಮುಕ್ತ ಮಾತುಕತೆಗಳ ಮೂಲಕ ವಿನೋದ ಹರಟೆ ಮೂಲಕ ನಗಬಹುದು. ವದನದಲಿ ಯಾವಾಗಲೂ ಸ್ಮಿತವಿರಲಿ, ಆದರೆ ಇನ್ನೊಬ್ಬರ ಕಿವಿಗೆ ಕೇಳಿಸದಿರಲಿ, ಹಿತವಿರಲಿ ವಚನದಲ್ಲಿ. ಆದರೆ ಎಂದಿಗೂ ಋತವ ಬಿಡದಿರಲಿ, ಇದು ನಮ್ಮ ಉತ್ತಮ ಬದುಕಿನ ದಾರಿಯಾಗಲಿ.

ಸರ್ವರೋಗಕ್ಕೂ ನಗುವೆ ಮದ್ದು. ನಕ್ಕರೆ ಜೀವನವೇ ಸ್ವರ್ಗ. ನಗುನಗುತಾ ನಲಿಯೋಣ, ನಗುನಗುತ ಬಾಳೋಣ, ಜೀವನವನ್ನು ಸ್ವರ್ಗ ಸುಖವಾಗಿಸೋಣ.

ನಾನು ಎನ್ನುವ ದಿವ್ಯಮಂತ್ರ

ನಾನು ಹೋದರೆ ಹೋದೇನು ಎಂದರು ದಾಸರು. ಅಂದರೆ ನಾನು ಎನ್ನುವ ಅಹಂಕಾರ ಹೋದರೆ ನಾನು ಸ್ವರ್ಗಕ್ಕೆ ಹೋದೇನು ಎಂಬುದಾಗಿದೆ. ಅಂದರೆ ದಾಸರು ಅಂದಿನ ಕಾಲದಲ್ಲಿಯೇ ನಾನು ಎನ್ನುವ ಮಮಕಾರವನ್ನು ತೊರೆಯಬೇಕು ಎಂದು ಹೇಳಿದ್ದರು. ವ್ಯಾವಹಾರಿಕ ಬದುಕಲ್ಲಿ ನಾನು ಎನ್ನುವುದು ಮುಖ್ಯ, ಆದರೆ ಅಧ್ಯಾತ್ಮಿಕ ಬದುಕಲ್ಲಿ ನಾನು ಮುಖ್ಯ ಅಲ್ಲವೇ ಅಲ್ಲ. ಸ್ವಾಮಿ ವಿವೇಕಾನಂದರು ನಾನು ಎನ್ನುವ ಒಂದು ಚಿಕ್ಕ ಪದವನ್ನು ನಮ್ಮ ಚಿಂತನೆಯಿಂದ ತೆಗೆದುಹಾಕೋಣ ಎಂದಿದ್ದಾರೆ. ಹೇಗೆ ತೆಗೆದುಹಾಕುವುದು ಎಂದರೆ ವಿವೇಕದಿಂದ. ಹಾಗಾದರೆ ವಿವೇಕ ಎಲ್ಲಿಂದ ಬರುತ್ತದೆ ಎಂದರೆ ನಮ್ಮ ಬುದ್ಧಿಶಕ್ತಿಯಿಂದ ಬುದ್ಧಿಶಕ್ತಿಗೆ. ಇದು ಹೇಗೆ ತಿಳಿಯುತ್ತದೆ ಎಂದರೆ ನಮ್ಮ ಮನಸ್ಸು ಪಂಚಭೂತಗಳಿಂದ ಸದಾ

ಆವೃತ್ತವಾಗಿರುವ ಈ ಮನಸ್ಸನ್ನು ಅರಿಯುವ ಪ್ರಯತ್ನ ಮಾಡುವಾಗ ಎಂಬುದನ್ನು ಅರಿತುಕೊಳ್ಳಬೇಕು. ನಾನು ಇರಬೇಕು, ಆದರೆ ನಾನು ಇರಬಾರದು ಎನ್ನುವ ಭಾವ ಮೂಡುತ್ತದೆ. ಇದು ಹೇಗೆ ಎಂದರೆ ನಾನು ಎನ್ನುವ ಶರೀರ ಇರಬೇಕು, ಈ ಶರೀರದ ಮೂಲಕವೇ ಒಳಗಿರುವ ಆತ್ಮನಿಗೆ ಮುಕ್ತಿ. ಹೀಗೆ ಆತ್ಮ ಮುಕ್ತಿಗಳಿಸಿಕೊಳ್ಳಬೇಕಾದರೆ ಈ ದೇಹವೂ ಸಹಕರಿಸಬೇಕು. ಮನುಷ್ಯನ ಪ್ರತೀ ಹುಟ್ಟಿನ ಒಳಗಿರುವ ಗುಟ್ಟು ಏನೆಂದರೆ ಮತ್ತೆ ಹುಟ್ಟಿ ಬಾರದೇ ಇರುವುದು ಹೇಗೆ ಎನ್ನುವುದನ್ನು ಕಲಿಯುವುದಕ್ಕಾಗಿಯೇ ಮನುಷ್ಯ ಪದೇ ಪದೇ ಹುಟ್ಟುತ್ತಾನೆ ಎನ್ನುವುದಾಗಿದೆ. ಯಾವಾಗ ಈ ಗುಟ್ಟು ತಿಳಿಯುವುದೋ ಆಗ ಮತ್ತೆ ಹುಟ್ಟುವ ಪ್ರಮೇಯವೇ ಬರುವುದಿಲ್ಲ. ಈ ಗುಟ್ಟನ್ನು ಅರಿಯಲು ನಾಲ್ಕು ವಿಧಾನಗಳಿವೆ. ಇದನ್ನು ನಮ್ಮ ಜ್ಞಾನ ಯೋಗ ತಿಳಿಸಿಕೊಡುತ್ತದೆ. ನಮ್ಮ ಬದುಕಿನಲ್ಲಿ ನಮ್ಮನ್ನು ಆವರಿಸಿರುವುದು ಜ್ಞಾನ ಅಜ್ಞಾನ, ವಿದ್ಯೆ ಅವಿದ್ಯೆ ಇವುಗಳು. ಅಜ್ಞಾನವನ್ನು ದಾಟಿ ಜ್ಞಾನದೆಡೆಗೆ ಸಾಗಿದಾಗ, ಅವಿದ್ಯೆಯಿಂದ ವಿದ್ಯೆಯೆಡೆಗೆ ಸಾಗಿದಾಗ ನಮಗೆ ನಮ್ಮ ಈ ಶರೀರ ಶಾಶ್ವತವಲ್ಲ ಒಳಗಿರುವ ಆತ್ಮ ಶಾಶ್ವತ ಎನ್ನುವುದು ಅರಿವಾಗುತ್ತದೆ, ಈ ಅರಿವು ನಮಗೆ ದೊರೆಯುವುದು ಸಮರ್ಥ ಗುರುವಿನಿಂದ. ಹಾಗಾದರೆ ಈ ಜ್ಞಾನ ಅಜ್ಞಾನ, ವಿದ್ಯೆ ಅವಿದ್ಯೆಗಳಿಂದ ಮುಕ್ತನಾಗಿ ಜಾಗೃತವಾಗಿರುವವನು ಯಾರು ಎಂದರೆ ವಿವೇಕಿ. ನಾವು ವಿವೇಕವನ್ನು ಗಳಿಸುವ ಹಾದಿಯಲ್ಲಿ ಕ್ರಮಿಸುತ್ತಿರುವಾಗ ಸತ್ಯ, ಅಸತ್ಯ, ಆತ್ಮ ಮತ್ತು ದೇಹ, ಶಾಶ್ವತ ಅಶಾಶ್ವತ ಇವುಗಳ ಬೇಧವನ್ನು ಅರಿತಿರುತ್ತಾನೋ ಅವನು. ಇಂಥ ವಿವೇಕಿ ವ್ಯಾವಹಾರಿಕ ಬದುಕಿನಿಂದ ವೈರಾಗ್ಯದ ಬದುಕಿನತ್ತ ಹೆಜ್ಜೆ ಹಾಕುತ್ತಾನೆ. ಆಗ ಅವನಿಗೆ ಇಡೀ ಬ್ರಹ್ಮಾಂಡಕ್ಕೆ ಒಬ್ಬನೇ ಅಧಿಪತಿ, ಅವನೇ ಪರಮಾತ್ಮ, ಅವನ ಅಂಶವೇ ನಮ್ಮೊಳಗಿರುವುದು, ಅದೇ ಆತ್ಮ ಎನ್ನುವ ಸತ್ಯದ ಅರಿವುಂಟಾಗಿ ನಾವು ಯಾವ ಪರಮಾತ್ಮನ ಸ್ವರೂಪವಾಗಿ ಬಂದಿದ್ದೇವೋ, ಆ ಪರಮಾತ್ಮನನ್ನೇ ಮತ್ತೆ ಸೇರಿಕೊಳ್ಳುವಂತೆ ಬದುಕಬೇಕು ಎನ್ನುವ ಜ್ಞಾನ ಬಂದು ನಮ್ಮೊಳಗೆ ದಿವ್ಯಜ್ಞಾನದ ಅರಿವು ಉಂಟಾಗುತ್ತದೆ. ಅಲ್ಲಿಂದ ಮುಂದೆ ನಮ್ಮ ಪಯಣ ಮುಕ್ತಿಯ ಕಡೆಗೆ. ಅಂಥ ಜ್ಞಾನ ಪ್ರತಿಯೊಬ್ಬರಲ್ಲೂ ಮೂಡಲಿ ಎನ್ನುವುದೇ ಆಶಯ.

ಬೇಲೂರು ರಾಮಮೂರ್ತಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2	■	3		4		■
	■	5			■		■	6
7	8		■		■	9		
■		■	10		11	■	■	
12				■	13		14	
	■	■	15	16		■		■
17		18	■		■	19		20
	■		■	21			■	
■	22				■		■	

ಎಡದಿಂದ ಬಲಕ್ಕೆ

3. ದಿಕ್ಕಿಲ್ಲದವನು, ಅನಾಥ (4)
5. ಗವಿಯ ಬಳಿ ಸಿಕ್ಕಿದವನು ಹೆಡ್ಡ (3)
7. ನರಿಯ ನಡುವೆ ಸಿಲುಕಿದೆ ಚರ್ಮವಾದ್ಯ (3)
9. ಕೂಡಲೇ ತಿನ್ನಿ ದ್ವಿದಳ ಧಾನ್ಯ (3)
10. ಕಾವ್ಯವನ್ನು ರಾಗಬದ್ಧವಾಗಿ ಹಾಡುವುದು (3)
12. ನಡೆದುಕೊಂಡು ಹೋಗುವವನು (4)
13. ಮುತ್ತಿಗೆ ಹಾಕು ಎನ್ನುವ ಪದ (4)
15. ಮಾಡಬೇಕಾದ ಕಾರ್ಯ (3)
17. ಓದುಗನಿವನು (3)
19. ಪತ್ರಿಕೆಯಲ್ಲಿ ಬರುವ ಬರಹಗಳ ಕಾಲಂ (3)
21. ಪುಟಾಣಿ ಕಾಳು ತಿರುಗಿ ಬಂದಿದೆ (3)
22. ತ್ವರೆ, ಚುರುಕು (4)

ಮೇಲಿಂದ ಕೆಳಕ್ಕೆ

1. ಸುಡುವಿಕೆ ಎನ್ನುವ ಪದ (3)
2. ಜೂಜು ಅಥವಾ ಪಂದ್ಯ (3)
3. ಶ್ರೀಕೃಷ್ಣನ ಸಹೋದರನಿವನು (4)
4. ಪಾಕ ಸರಿಯಾಗಿ ಬೇಯಲು ಬೇಕು ಬೆಂಕಿ (3)
6. ಒಂದು ಪೀಳಿಗೆಯನ್ನು ಹೀಗೆನ್ನಬಹುದು (4)
8. ಹನ್ನೆರಡು ಮೈಲುಗಳ ಅಂತರವಿದು (3)
10. ಈ ಹುಲ್ಲು ಸಮರ್ಪಿಸಿದರೆ ಗಣೇಶ ಪ್ರಸನ್ನನಾಗುತ್ತಾನಂತೆ (3)
11. ಎಲ್ಲ ಅಥವಾ ಸಂಪೂರ್ಣವಾದ ಎನ್ನುವುದು ತಲೆಕೆಳಗಾಗಿದೆ (3)
12. ಶಾಂತಿ ಸಂಧಾನಕ್ಕೆ ಬಳಸುವ ಪಕ್ಷಿ (4)
14. ಚಿನ್ನಕ್ಕೆ ಇನ್ನೊಂದು ಹೆಸರು (3)
16. ಚಪಾತಿ ಮಾಡಲು ಬೇಕಾದ ಸಾಧನ (4)
18. ನೀರಾಗು ಎಂದರ್ಥ (3)
19. ಮತ್ತೊಂದು ಶ್ಯಾಮವಿರುವ ಆಕಾಶ (3)
20. ತಲೆಕೆಳಗಾದ ಸಾರ (3)

ಸರಿಯುತ್ತರಗಳು

ಸೋಮಾರಿ ತಿರುಕನ ಕನಸು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಂದೂರಿನಲ್ಲಿ ಒಬ್ಬ ಸೋಮಾರಿ ಮನುಷ್ಯನಿದ್ದ . ಗಟ್ಟಿ ಮುಟ್ಟಾಗಿದ್ದರೂ ಯಾವ ಕೆಲಸವನ್ನೂ ಮಾಡದೆ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದ. ಇವನಿಗೆ ಯಾವ ಬಂಧು ಬಳಗದವರೂ ಇರಲಿಲ್ಲ. ಶುದ್ಧ ಸೋಮಾರಿಯಾದ ಇಂಥವನಿಗೆ ಮದುವೆಯ ಭಾಗ್ಯವೂ ಇರಲಿಲ್ಲ. ಭಿಕ್ಷೆ ಬೇಡಿ ತಿನ್ನುವುದು, ತಿಂದು ಮಲಗೋದು ಅಷ್ಟೇ ಇವನ ಕೆಲಸ.

ಒಂದು ದಿನ ಒಬ್ಬಳು ಗೃಹಿಣಿ ಅವನಿಗೆ ಬೇಕಾಗಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಿಗೆ ಹಸಿ ಹಿಟ್ಟನ್ನು ಭಿಕ್ಷೆ ನೀಡಿದಳು. 'ಈ ದಿನ ನನ್ನ ಅದೃಷ್ಟ ಚೆನ್ನಾಗಿದೆ, ಸೀದಾ ಗುಡಿಸಲಿಗೆ ಹೋಗಿ ಅಂಬಲಿ ಮಾಡಿ ಕುಡಿದು ಚೆನ್ನಾಗಿ ನಿದ್ರೆ ಮಾಡಿಬಿಡುತ್ತೇನೆ' ಎಂದುಕೊಂಡು ಬಂದ.

ಇವತ್ತಿಗೆ ಸ್ವಲ್ಪ ಹಿಟ್ಟು ಸಾಕು ಉಳಿದದ್ದು ನಾಳೆಗೆ ಇರಲಿ, ನಾಳೆ ಭಿಕ್ಷೆ ಬೇಡುವುದು ತಪ್ಪುತ್ತದೆ ಎಂದುಕೊಂಡ. ಒಂದು ಮಡಿಕೆಯೊಳಗೆ ಉಳಿದ ಹಿಟ್ಟು ಹಾಕಿ ಇಲಿಗಳ ಕಾಟದಿಂದ ತಪ್ಪಿಸಲು ಮಡಕೆಯನ್ನು ಒಂದು ಡಬ್ಬದ ಮೇಲಿಟ್ಟ. ಅಂಬಲಿ ಕುಡಿದು ಕಾಲ ಮೇಲೆ ಕಾಲು ಹಾಕಿಕೊಂಡು ಮಲಗಿ ಯೋಚಿಸತೊಡಗಿದ. ಹಿಟ್ಟನ್ನು ಊರಲ್ಲಿ ಬರಗಾಲ ಬರುವವರೆಗೂ ಹಾಗೆ ಉಳಿಸಿಕೊಳ್ಳಬೇಕು, ಆಗ ಅದನ್ನು ಮಾರಿದರೆ ತನಗೆ ತುಂಬಾ ದುಡ್ಡು ಸಿಗುತ್ತದೆ, ಅದರಿಂದ ಒಂದು ಹೆಣ್ಣು ಆಡು, ಒಂದು ಗಂಡು ಆಡನ್ನು ಕೊಂಡರೆ ಸ್ವಲ್ಪ ಸಮಯದಲ್ಲೇ ಅವುಗಳಿಂದ ಆಡುಗಳ ಮಂದೆಯೇ ಆಗುತ್ತದೆ. ಅವುಗಳನ್ನು ಮಾರಿ ಒಂದು ಎತ್ತು, ಒಂದು ಹಸುವನ್ನು ಕೊಳ್ಳಬೇಕು. ಅವು ಕರು ಹಾಕಿದಾಗ ಜಾನುವಾರುಗಳ ಒಂದು ದೊಡ್ಡ ಹಿಂಡೇ ಆಗುತ್ತದೆ. ಅವುಗಳನ್ನು ಮಾರಿ ಒಂದು ಎಮ್ಮೆ, ಒಂದು ಕೋಣವನ್ನು ಕೊಂಡರೆ ಅವುಗಳದ್ದೂ ದೊಡ್ಡ ಹಿಂಡೇ ಆಗುತ್ತದೆ. ಮುಂದೆ ಅವುಗಳನ್ನು ಮಾರಿ ಒಂದು ಜೊತೆ ಕುದುರೆಯನ್ನು ಕೊಂಡರೆ, ಮುಂದೆ ಅವೂ ಮರಿ ಹಾಕಿ, ಕುದುರೆಗಳ ದೊಡ್ಡ ಲಾಯವೇ ಆಗುತ್ತದೆ. ಅವುಗಳನ್ನು ಮಾರಿ ದೊಡ್ಡ ಬಂಗಲೆಯನ್ನು ಕೊಳ್ಳಬಹುದು. ಹೀಗೆ ಸಾಗಿತ್ತು ಅವನ ಹಗಲುಗನಸು.

ಆಗ ಒಬ್ಬ ದೊಡ್ಡ ಶ್ರೀಮಂತ ತನ್ನ ಮಗಳನ್ನು ತನಗೆ ಕೊಟ್ಟು ಮದುವೆ ಮಾಡುತ್ತಾನೆ. ನನಗೊಬ್ಬ ರಾಜಕುಮಾರನಂತಹ ಮಗ ಹುಟ್ಟುತ್ತಾನೆ. ಆ ಮಗು ಅಂಬೆಗಾಲಿಡುತ್ತಾ, ಕುದುರೆ ಲಾಯದ ಬಳಿ ಹೋಗುತ್ತದೆ.

ಅಯ್ಯೋ ಕುದುರೆಗಳು ಮಗುವನ್ನು ತುಳಿದುಬಿಟ್ಟರೆ ಲೇ, ಇವಳೇ ಮಗುವನ್ನು ಒಳಗೆ ಕರೆದುಕೋ ಎಂದು ಕೂಗುತ್ತಾನೆ. ಅವಳಿಗೆ ತನ್ನ ಕೆಲಸದಲ್ಲಿ ಇವನ ಕೂಗು ಕೇಳಿಸುವುದಿಲ್ಲ, ತಾನೇ ಎದ್ದು ಓಡಿ ಹೋಗಿ ಮಗುವನ್ನು ಎತ್ತಿಕೊಂಡು ಬರುತ್ತಾನೆ. ಕೋಪದಿಂದ ಹೆಂಡತಿಗೆ ಕಾಲೆತ್ತಿ ಒದೆಯಲು ಹೋಗುತ್ತಾನೆ. ಅಷ್ಟರಲ್ಲೇ ಇವನ ಕಾಲು ತಗಲಿ ಡಬ್ಬದ ಮೇಲಿಟ್ಟಿದ್ದ ಹಿಟ್ಟಿನ ಮಡಕೆ ಕೆಳಗೆ ಬಿದ್ದು ಒಡೆದು ಚೂರಾಗುತ್ತದೆ. ತಕ್ಷಣ ಹಗಲುಗನಸಿನಿಂದ ಎಚ್ಚರಗೊಂಡ ಭಿಕ್ಷುಕನಿಗೆ ತಾನು ಮಾಡಿದ ಅನರ್ಥ ಕಾಣಿಸಿತು.

ಹಗಲುಗನಸು ಕಾಣುತ್ತಾ, ರಾತ್ರಿಗಿದ್ದ ಹಿಟ್ಟನ್ನೂ ಮಣ್ಣು ಪಾಲು ಮಾಡಿದ್ದ.

'ಅಯ್ಯೋ, ಎಷ್ಟು ಚಂದದ ಕನಸು ಒಡೆದು ನುಚ್ಚು ನೂರಾಗಿ ಹೋಯಿತಲ್ಲಾ' ಎಂದು ಸಪ್ಪೆಮೋರೆ ಹಾಕಿಕೊಂಡು, ರಾತ್ರಿಯ ಊಟಕ್ಕಾಗಿ ಭಿಕ್ಷೆ ಬೇಡಲು ಮತ್ತೆ ಹೊರಗೆ ಹೊರಟ.

ಕನಸು ಕಾಣುವುದು ಸುಲಭ, ಆದರೆ ಆ ಕನಸನ್ನು ನನಸಾಗಿಸಿಕೊಳ್ಳಲು ಹಗಲು-ರಾತ್ರಿಯ ನಿರಂತರ ಪರಿಶ್ರಮವಿರುತ್ತದೆ. ನಾನು ಹೀಗಿರಬೇಕು, ಹಾಗಾಗಬೇಕು ಎಂದು ಎಲ್ಲರ ಮುಂದೆ ಕೊಚ್ಚಿಕೊಳ್ಳುವವರು ಅದಕ್ಕಾಗಿ ಏನು ಮಾಡುತ್ತಿದ್ದೇವೆ ಎಂದು ಹೇಳುವುದೇ ಇಲ್ಲ. ಆದ್ದರಿಂದಲೇ ಗಾಳಿಯಲ್ಲಿ ಕತ್ತಿ ಆಡಿಸದೆ, ನಮ್ಮ ಜೀವನ ಚಂದಗಾಣಿಸಲು ಕನಸುಗಳಿರಲಿ, ರಾತ್ರಿಯ ನಿದ್ದೆಗಳನ್ನೇ ತ್ಯಾಗ ಮಾಡಬೇಕಾಗುತ್ತದೆ. ಕಷ್ಟ ಪಟ್ಟಾಗ ಸುಖ ಸಿಕ್ಕೇ ಸಿಗುತ್ತದೆ, ಆದರೆ ಆ ಕಷ್ಟದ ದಾರಿಯಲ್ಲಿ ನಮ್ಮ ನಿರಂತರ ಪ್ರಯತ್ನವನ್ನು ಎಂದೂ ಕೈ ಬಿಡಬಾರದು.

ಸೋಲಿಗೆ ಎಂದೂ ಧೃತಿಗೆಡಬಾರದು

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಸುಂದರವನೆಸಗು ಜೀವನವ ಸಾಹಸದಿಂದೆ?
ಕುಂದಿಲ್ಲವದಕೆ ಸಾಹಸಭಂಗದಿಂದೆ?
ಮುಂದಕದು ಸಾಗುವುದು ಮರಳಿ ಸಾಹಸದಿಂದೆ?
ಚೆಂದ ಧೀರೋದ್ಯಮವೆ-ಮಂಕುತಿಮ್ಮ

ಈ ಜೀವನ ಅಂದರೆ ಅದೇನೂ ಸುಲಭದ ಮಾತಲ್ಲ, ಅದೊಂದು ಕಬ್ಬಿಣದ ಕಡಲೆ ಇದ್ದ ಹಾಗೆ. ನಿನ್ನಲ್ಲಿರುವ ಹೋರಾಟದ, ಸಾಹಸದ ಮನೋಭಾವದಿಂದ ನಿನ್ನ ಜೀವನದಲ್ಲಿ ಸಂದರತೆಯನ್ನು ನೀನು ಕಾಣುವಂತಾಗು. ನಿನ್ನ ಸಾಹಸ ಹಾಗೂ ಹೋರಾಟದ ಮನೋಭಾವಕ್ಕೆ ಎಂದಿಗೂ ಕುಂದು ಎಂಬುದಿಲ್ಲ. ಪದೇ ಪದೇ ನೀನು ಸಾಹಸಪಟ್ಟಾಗ, ಕಷ್ಟ ಬಿದ್ದು ಹೋರಾಟ ಮಾಡಿದಾಗ ಮಾತ್ರವೇ ನೀನು ಪಡೆಯಲಿಚ್ಚಿಸಿದ ಗುರಿಯನ್ನು ನೀನು ಪಡೆದು ಗುರಿಯನ್ನು ಮುಟ್ಟುವೆ. ಇಂಥ ಹೋರಾಟ, ಇಂಥ ಪ್ರೇರಣೆ, ಇಂಥ ಸಾಹಸಗಳೇ ನಮ್ಮ ಜೀವನದ ಧೀರೋಧ್ಯಮವಾಗಿರುತ್ತದೆ ಎಂದು ಈ ಕಗ್ಗದಲ್ಲಿ ಹೇಳಿದ್ದಾರೆ.

ಈ ಜೀವನ ಎಂಬುದೇನೂ ದ್ರಾಕ್ಷಿಯ ಹಣ್ಣನ್ನು ಬಾಯಲ್ಲಿ ಚಪ್ಪರಿಸಿದಂತೆ ಅಲ್ಲ, ಒಂದು ರೀತಿಯಲ್ಲಿ ಅದು ಕಬ್ಬಿನ ಜಲ್ಲೆ ಇದ್ದಂತೆ. ಅದನ್ನು ಹೇಗೆ ಬಾಯಿಂದ ಜಗಿದು, ಅಗಿದಾಗ ಮಾತ್ರ ಒಂದೆರಡು ಗುಟುಕು ಕಬ್ಬಿನ ರಸ ದೊರಕುವಂತೆ, ಈ ಜೀವನದಲ್ಲಿ ಕಷ್ಟ ಬಿದ್ದಾಗ ಮಾತ್ರವೇ ನಮಗೆ ಈ ಜೀವನದ ಸಾರದ ಅರಿವು ಆಗುತ್ತದೆ. ಜೀವನದಲ್ಲಿ ಕಷ್ಟ ಬೀಳಬೇಕು, ಕಷ್ಟದಿಂದ ಗೆಲುವನ್ನು ಹರಸಬೇಕು. ಗೆಲವು ಬೇಕು ಎಂದರೆ ಆತನ ಹೃದಯದಲ್ಲಿ ಸಾಹಸದ, ಹೋರಾಟದ ಮನೋಭಾವ ಇರಲೇ ಬೇಕು. ಸಾಹಸವಿರದೆ, ಕಷ್ಟ ಬೀಳದೆ ಈ ಜೀವನದಲ್ಲಿ ಯಾವುದೂ ಸಹ ಉನ್ನತ ಮಟ್ಟ ತಲುಪುವುದಿಲ್ಲ. ಕೆಲವರಂತೂ ಯಾವುದೇ ಕಷ್ಟ ಬೀಳದೆ ಸುಖವನ್ನರಸುವವರೂ ಇರುತ್ತಾರೆ. ಅವರು ಒಂದು ರೀತಿಯಲ್ಲಿ ದನಗಳ ಮೈ ಮೇಲಿನ ಉಣ್ಣೆಯ ಹಾಗೆ, ಪರಾವಲಂಬಿ ಜೀವನವನ್ನು ಮಾಡುತ್ತಿರುತ್ತಾರೆಯೇ ಹೊರತು, ಸ್ವಂತಿಕೆಯ ಜೀವನ ನಡೆಸಲು ಅವರಿಂದ ಸಾಧ್ಯವಾಗದ ಮಾತು. ಈ ನಮ್ಮ ಜೀವನವನ್ನು ನಾವು ಗಟ್ಟಿಗೊಳಿಸಿಕೊಳ್ಳಬೇಕಾದರೆ, ಸುಂದರವಾಗಿರುವಂತೆ ಮಾಡಿಕೊಳ್ಳಬೇಕಾದರೆ ಮೊದಲಿಗೆ ನಮ್ಮ ಹೃದಯದಲ್ಲಿ ಸಾಹಸದ ಮನೋಭಾವ ಇರಲೇ ಬೇಕು. ಆ ಮನೋಭಾವದಿಂದ ಹೋರಾಟ ಮಾಡುತ್ತಾ ನಾವು ಇಟ್ಟುಕೊಂಡ ಗುರಿಗಳನ್ನು ಸಾಧಿಸಬೇಕು. ಆದುದರಿಂದ ಈ ಜೀವನದಲ್ಲಿ ನಾವು ನಡೆಸುವ ಪ್ರಾಮಾಣಿಕವಾದ ಹೋರಾಟ, ಸಾಹಸ, ಬತ್ತದ ಚೈತನ್ಯ, ಪಡೆಯುವ ಇಚ್ಛೆಗಳು ಎಂದಿಗೂ ಸಹ ಅವುಗಳು ಧೀರೋಧ್ಯಮಗಳೇ ಆಗಿರುತ್ತವೆ, ಅವುಗಳಿಗೆ ಯಾವ ಕಾಲದಲ್ಲೂ ಕುಂದುಗಳು ಬರುವುದಿಲ್ಲ. ಇದನ್ನೇ ನಮ್ಮ ಜೀವನದ ಅಗಮ್ಯವಾದ ಚೈತನ್ಯ ಎಂದು ಈ ಕಗ್ಗದಲ್ಲಿ ಕರೆದಿದ್ದಾರೆ.

ಆಡದೇ ಮಾಡುವವನು ರೂಢಿಯೊಳಗುತ್ತಮನು!
ಆಡಿ ಮಾಡುವವನು ಮಧ್ಯಮನು!
ಆಡಿಯೂ ಮಾಡದವನು ಅಧಮನು-ಸರ್ವಜ್ಞ

ಈ ವಚನವನ್ನು ನಾವು ಕೇಳಿದ್ದೇವೆ. ಕೆಲವು ಜನರು ಮಾತನ್ನು ಆಡದೆ, ತಮ್ಮ ಮಾತನ್ನೇ ಕೃತಿಯನ್ನಾಗಿಸಿ ಇತರರಿಗೆ ಮಾದರಿಯಾಗುತ್ತಾರೆ. ಇಂಥವರೇ ಜೀವನವನ್ನು ಸಾಹಸದ ಹೋರಾಟವಾಗಿ ಪರಿಗಣಿಸಿ ಜೀವನ ಮಾಡುತ್ತಾರೆ. ಇವರು ಶ್ರೇಷ್ಠ ವ್ಯಕ್ತಿತ್ವದವರಾದರೆ, ಇನ್ನು ಕೆಲವರು ಮಾತನಾಡಿ ಕೆಲಸ ಮಾಡುತ್ತಾರೆ, ಅವರೊಂದು ರೀತಿ ಮಧ್ಯಮವಾದರೆ, ಇನ್ನು ಕೆಲವರದ್ದು ಬರೀ ಲೊಳಲೊಟ್ಟೆ ಮಾತುಗಳಷ್ಟೇ! ಅವರ ಕೃತಿ ಏನೂ ಸಹ ಇರುವುದಿಲ್ಲ, ಅವರು ಅಧಮರಾಗಿರುತ್ತಾರೆ. ಇಲ್ಲಿ ಮಾತಿಗಿಂತ ಕೃತಿಯೇ ಲೇಸು ಎಂಬುದನ್ನು ನಾವು ಅರಿಯಬೇಕು. ಅಮೆರಿಕಾ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ತಮ್ಮ ಜೀವನದಲ್ಲಿ ಅದೆಷ್ಟು ಕಷ್ಟಬಿದ್ದರೂ, ಅದೆಷ್ಟೇ ಕುಂದಿ ಹೋದರೂ ಸಹ, ತನ್ನ ಸಾಹಸ ಬಿಡದೆ, ಗುರಿಯನ್ನು ಮುಟ್ಟಲಿಲ್ಲವೇ? ಚಾರ್ಲ್ಸ್ ಗುಡ್‌ಯಿಯರ್ ಅವರು ಟೈರ್ ಕಂಡುಹಿಡಿಯುವಾಗ ಅದೆಷ್ಟು ಕಷ್ಟಬಿದ್ದರೂ ಕೊನೆಗೆ ಯಶಸ್ವಿ ಆಗಲಿಲ್ಲವೇ? ಹಾಗೆಯೇ ಪುರಾಣ ಪುಣ್ಯಕಥೆಗಳಲ್ಲಿ ಬರುವ, ಇತಿಹಾಸ ಪುರುಷರ ಜೀವನ ಚರಿತ್ರೆಯಲ್ಲಿಯೂ ಸಹ ಅವರು, ಅವರಲ್ಲಿರುವ ಸಾಹಸದ ಮನೋಭಾವದಿಂದಲೇ ಇಂದು ಇತಿಹಾಸದಲ್ಲಿ ದಾಖಲಾಗಿರುವುದು ಎಂಬುದೂ ಸತ್ಯವೇ ಆಗಿದೆ. ಹಾಗಾಗಿ ಸಾಹಸದ ಹೋರಾಟದಲ್ಲಿ ಕುಂದುಂಟಾದರೂ, ಧೃತಿಗೆಡದೆ ಜೀವನದಲ್ಲಿ ಮರಳಿ ಯತ್ನವ ಮಾಡುತ್ತಾ, ಈ ಸಮಾಜಕ್ಕಾಗಿ, ಈ ಜಗತ್ತಿಗಾಗಿ, 'ಪರೋಪಕಾರಂ ಇದಂ ಶರೀರಂ' ಎಂದು ಜೀವನ ಮಾಡಿದರೆ ಅದೇ ಶ್ರೇಷ್ಠ ಜೀವನವಾಗುತ್ತದೆ ಎಂಬುದೇ ಈ ಕಗ್ಗದ ಅರ್ಥವಾಗಿದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಿಷಭ್‌ಗೆ ಎರಡು ತಿಂಗಳ ವಿಶ್ರಾಂತಿ?

ಮ್ಯಾಂಚೆಸ್ಟರ್: ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್‌ನ ಮೊದಲ ದಿನದಂದು ಗಾಯಗೊಂಡ ರಿಷಭ್ ಪಂತ್ ಅವರ ಬಲಗಾಲಿನ ಬೆರಳಿನಲ್ಲಿ ಮುರಿತ ಉಂಟಾ ಗಿದ್ದು, ಇದರಿಂದ ಚೇತರಿಸಿ ಕೊಳ್ಳಲು ಕನಿಷ್ಠ ಎರಡು ತಿಂಗಳು ಬೇಕಾಗಬಹುದು ಎಂದು ತಿಳಿದು ಬಂದಿದೆ. ಮೊದಲ ದಿನದ ಅಂತಿಮ ದಿನದ ಅವಧಿಯಲ್ಲಿ ಭಾರತದ ಉಪ ನಾಯಕ ಪಂತ್ ಅವರು ಕ್ರಿಸ್ ವೋಕ್ಸ್ ಎಸೆತವನ್ನು ರಿವರ್ಸ್ ಸ್ವೀಪ್ ಮಾಡಲು ಪ್ರಯತ್ನಿಸುವಾಗ ಅವರ ಬಲಗಾಲಿಗೆ ಹೊಡೆತ ಬಿದ್ದಿತು. ಆ ಸಮಯದಲ್ಲಿ ಅವರು 37 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಗಾಯದ ಬಳಿಕ ಪಂತ್ ಬ್ಯಾಟಿಂಗ್ ಮುಂದುವರಿಸದೆ ಪೆವಿಲಿಯನ್‌ಗೆ ತೆರಳಿದ್ದರು. ಆದರೆ ಗುರುವಾರ ಮತ್ತೆ ಬ್ಯಾಟಿಂಗ್ ಮಾಡಲು ಕ್ರೀಸ್‌ಗೆ ಬಂದರೂ, ಹಿಂದಿನ 37 ರನ್‌ಗೆ 17 ರನ್ ಪೇರಿಸಿ 54 ರನ್‌ಗಳಾಗಿದ್ದಾಗ ಆರ್ಚರ್‌ಗೆ ವಿಕೆಟ್ ಒಪ್ಪಿಸಿದರು. ಪಂತ್ ಸ್ಕ್ಯಾನಿಂಗ್‌ಗೆ ಒಳಪಟ್ಟ ವೇಳೆ ಅವರ ಮೂಳೆ ಮುರಿತಗೊಂಡಿರುವುದು ದೃಢಪಟ್ಟಿದೆ. ಮೂಳೆ ಮುರಿತಗೊಂಡ ಪಂತ್ 2 ತಿಂಗಳ ವಿಶ್ರಾಂತಿ ಪಡೆದರೆ ಅವರು ಭಾರತದ ವೈಟ್‌ಬಾಲ್ ಸರಣಿ ಮತ್ತು ಏಷ್ಯಾ ಕಪ್‌ನಿಂದ ಹೊರಗುಳಿ ಯುವ ಸಾಧ್ಯತೆ ಇದೆ. ಅಕ್ಟೋಬರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ತವರು ಟೆಸ್ಟ್ ಸರಣಿ ವೇಳೆಗೆ ಭಾರತ ತಂಡ ಸೇರುವ ಸಾಧ್ಯತೆ ಇದೆ ಎನ್ನಲಾಗಿದೆ.

ದಾಖಲೆ ಬರೆದ ಆಯುಷ್ ಮ್ಹಾತ್ರೆ

ಲಂಡನ್: ಭಾರತ ಕಿರಿಯರ ತಂಡದ ನಾಯಕ ಆಯುಷ್ ಮ್ಹಾತ್ರೆ ಅವರು 80 ಎಸೆತಗಳಲ್ಲಿ 128 ರನ್ ಗಳಿಸಿದ ಭರ್ಜರಿ ಪ್ರದರ್ಶನದ ಮೂಲಕ ಟೀಮ್ ಇಂಡಿಯಾ, ಇಂಗ್ಲೆಂಡ್ ವಿರುದ್ಧದ 2ನೇ ಯೂತ್ ಟೆಸ್ಟ್ ಪಂದ್ಯ ಡ್ರಾದಲ್ಲಿ ಅಂತ್ಯ ಕಂಡಿತು. ಆಯುಷ್ ಮ್ಹಾತ್ರೆ ಯೂತ್ ಟೆಸ್ಟ್ ಇತಿ ಹಾಸದಲ್ಲಿ ಅತಿ ವೇಗದ ಶತಕ ಗಳಿಸುವ ಹೊಸ ದಾಖಲೆಗೆ ಪಾತ್ರರಾದರು. ಪಂದ್ಯದ ಕೊನೆಯ ದಿನದಂದು ಭಾರತವು ಗೆಲ್ಲಲು 355 ರನ್‌ಗಳ ಗುರಿಯನ್ನು ಬೆನ್ನಟ್ಟುತ್ತಿದ್ದಾಗ ಆಯುಷ್ ಮ್ಹಾತ್ರೆ ಸ್ಫೋಟಕ ಬ್ಯಾಟಿಂಗ್ ಮೂಲಕ ತಂಡಕ್ಕೆ ನೆರವಾದರು. ಹಿಂದಿನ ಕಿರಿಯರ ತಂಡದ ವೇಗದ ಬ್ಯಾಟಿಂಗ್ ದಾಖಲೆಯು 2022ರಲ್ಲಿ ಶ್ರೀಲಂಕಾ ವಿರುದ್ಧ 88 ಎಸೆತಗಳಲ್ಲಿ ಶತಕ ಗಳಿಸಿದ ಇಂಗ್ಲೆಂಡ್‌ನ ಜಾರ್ಜ್ ಬೆಲ್ ಅವರ ಹೆಸರಿನಲ್ಲಿತ್ತು.

ಬೆನ್ ಸ್ಟೋಕ್ಸ್ ಮಾರಕ ಬೌಲಿಂಗ್ | 358 ರನ್‌ಗಳಿಗೆ ಆಲೌಟ್ ಆದ ಭಾರತ

ಇಂಗ್ಲೆಂಡ್ ದಿಟ್ಟ ಉತ್ತರ

ಮ್ಯಾಂಚೆಸ್ಟರ್: ಇಲ್ಲಿ ನಡೆಯುತ್ತಿರುವ ಭಾರತ–ಇಂಗ್ಲೆಂಡ್ ನಡುವಿನ 4ನೇ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಮೊದಲ ಇನ್ನಿಂಗ್ಸ್‌ನಲ್ಲಿ ಗಳಿಸಿದ 358 ರನ್‌ಗಳಿಗೆ ದಿಟ್ಟ ಉತ್ತರ ನೀಡಿರುವ ಆಂಗ್ಲರ ಪಡೆಯು ದ್ವಿತೀಯ ದಿನದ ಅಂತ್ಯಕ್ಕೆ 2 ವಿಕೆಟ್‌ಗೆ 225 ರನ್ ಗಳಿಸಿದೆ.

ಇಂಗ್ಲೆಂಡ್ ಪರ ಆರಂಭಿಕ ಜೋಡಿ ಜಾಕ್ ಕ್ರಾಲಿ ಮತ್ತು ಬೆನ್ ಡಕೆಟ್ ತಂಡಕ್ಕೆ ಭದ್ರ ಬುನಾದಿಯನ್ನೊದಗಿಸಿದರು. ಜಾಕ್ ಕ್ರಾಲಿ 84 ರನ್ ಗಳಿಸಿದರೆ, ಬೆನ್ ಡಕೆಟ್ 94 ರನ್ ಗಳಿಸಿದರು. ಗುರುವಾರದ ದಿನದಾಂತ್ಯಕ್ಕೆ ಓಲಿಪೋಪ್ 20 ರನ್ ಗಳಿಸಿ ಹಾಗೂ ಜೋ ರೂಟ್ 11 ರನ್ ಗಳಿಸಿ ಅಜೇಯರಾಗುಳಿದರು. ಇದೀಗ ಆಂಗ್ಲ ಪಡೆಯು ಭಾರತದ ಪ್ರಥಮ ಇನ್ನಿಂಗ್ಸ್‌ಗಿಂತ ಕೇವಲ 133 ರನ್‌ಗಳ ಹಿನ್ನಡೆಯನ್ನಷ್ಟೇ ಹೊಂದಿದೆ.

ಗುರುವಾರದಂದು 4 ವಿಕೆಟ್ ನಷ್ಟಕ್ಕೆ 264 ರನ್‌ಗಳಿಂದ ಇನ್ನಿಂಗ್ಸ್ ಮುಂದುವರಿಸಿದ ಟೀಮ್ ಇಂಡಿಯಾಕ್ಕೆ ಎರಡನೇ ದಿನದಂದು ಕೇವಲ 94 ರನ್‌ಗಳನ್ನು ಸೇರಿಸಿ ತನ್ನೆಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡು ನಿರಾಶದಾಯಕ ಪ್ರದರ್ಶನ ತೋರಿದರು. ರಿಷಭ್ ಪಂತ್ (54 ರನ್) ಅರ್ಧಶತಕದ ಹೊರತಾಗಿಯೂ ಬೆನ್ ಸ್ಟೋಕ್ಸ್ (72 ರನ್‌ಗೆ 5 ವಿಕೆಟ್) ಮಾರಕ ಬೌಲಿಂಗ್ ದಾಳಿಗೆ ನಲುಗಿದ ಭಾರತ ತಂಡ, ಪ್ರಥಮ ಇನಿಂಗ್ಸ್‌ನಲ್ಲಿ 358 ರನ್‌ಗಳಿಗೆ ಆಲ್‌ಔಟ್ ಆಯಿತು.

ಎರಡನೇ ದಿನದಾಟವನ್ನು ಆರಂಭಿಸಿದ್ದ ಭಾರತ ತಂಡಕ್ಕೆ ಇಂಗ್ಲೆಂಡ್ ಬೌಲರ್‌ಗಳು ಆಘಾತ ನೀಡಿದರು. ಯಾವೊಬ್ಬ ಭಾರತೀಯ ಬ್ಯಾಟ್ಸ್‌ಮನ್ 2ನೇ ದಿನ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಸಮಯವನ್ನು ಕಳೆಯಲಿಲ್ಲ. ಮೊದಲನೇ ದಿನ ಬ್ಯಾಟಿಂಗ್‌ನಲ್ಲಿ ಗಮನ ಸೆಳೆದಿದ್ದ ರವೀಂದ್ರ ಜಡೇಜಾ (20) ಎರಡನೇ ದಿನ ಬಹುಬೇಗ ವಿಕೆಟ್ ಒಪ್ಪಿಸಿದರು. ಅವರು 85ನೇ ಓವರ್‌ನಲ್ಲಿ ಜೋಫ್ರಾ ಆರ್ಚರ್ ಎಸೆತದಲ್ಲಿ ಹ್ಯಾರಿ ಬ್ರೂಕ್‌ಗೆ ಕ್ಯಾಚ್ ಕೊಟ್ಟರು.

ಪಂತ್ ಆಕರ್ಷಕ ಅರ್ಧಶತಕ

ಮೊದಲನೇ ದಿನ 37 ರನ್ ಗಳಿಸಿ ಗಾಯಕ್ಕೆ ತುತ್ತಾಗಿದ್ದ ರಿಷಭ್ ಪಂತ್, ಎರಡನೇ ದಿನ ಕ್ರೀಸ್‌ಗೆ ಬಂದು ಅಚ್ಚರಿ ಮೂಡಿಸಿದ್ದರು. ಅವರ ಬಲಗಾಲಿನ ಪಾದಕ್ಕೆ ಬುಧವಾರದಂದು ಚೆಂಡು ಬಲವಾಗಿ ತಗುಲಿತ್ತು. ಗುರುವಾರ ಕ್ರೀಸ್‌ಗೆ ಬಂದಿದ್ದ ಪಂತ್, ಬ್ಯಾಕ್‌ಫುಟ್‌ನಲ್ಲಿಯೇ ಬ್ಯಾಟ್ ಮಾಡಿದರು. ಒಟ್ಟು 75 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ ಮೂರು ಬೌಂಡರಿಗಳೊಂದಿಗೆ 54 ರನ್‌ಗಳನ್ನು ಗಳಿಸುವ ಮೂಲಕ ಈ ಸರಣಿಯಲ್ಲಿ ಮತ್ತೊಂದು ಅರ್ಧಶತಕವನ್ನು ಸಿಡಿಸಿ, ಅಂತಿಮವಾಗಿ ಅವರು ಜೋಫ್ರಾ ಆರ್ಚರ್‌ಗೆ ಕ್ಲೀನ್ ಬೌಲ್ಡ್ ಆದರು.

ನಂತರ ಆರನೇ ವಿಕೆಟ್‌ಗೆ ಜೊತೆಯಾದ ಶಾರ್ದೂಲ್ ಠಾಕೂರ್ ಹಾಗೂ ವಾಷಿಂಗ್ಟನ್ ಸುಂದರ್ ಜೋಡಿ ಕೆಲ ಕಾಲ ಆಂಗ್ಲರ ಮಾರಕ ದಾಳಿಯನ್ನು ಮೆಟ್ಟಿ ನಿಂತು, ಇಬ್ಬರೂ 48 ರನ್‌ಗಳನ್ನು ಕಲೆ ಹಾಕಿದರು. ಅತ್ಯುತ್ತಮ ಬ್ಯಾಟ್ ಮಾಡುತ್ತಿದ್ದ ಶಾರ್ದೂಲ್ ಠಾಕೂರ್ 88 ಎಸೆತಗಳಲ್ಲಿ 41 ರನ್‌ಗಳಿಸಿ ಅರ್ಧಶತಕದಂಚಿನಲ್ಲಿ ವಿಕೆಟ್ ಒಪ್ಪಿಸಿದರು. ಕೆಲ ಕಾಲ ಇಂಗ್ಲೆಂಡ್ ಬೌಲಿಂಗ್ ದಾಳಿಯನ್ನು ಎದುರಿಸಿದ್ದ ವಾಷಿಂಗ್ಟನ್ ಸುಂದರ್ 90 ಎಸೆತಗಳಲ್ಲಿ 27 ರನ್ ಗಳಿಸಿ ಉತ್ತಮ ಆರಂಭವನ್ನು ಪಡೆದಿದ್ದರು. ಆದರೆ ಅವರನ್ನು ಬೆನ್ ಸ್ಟೋಕ್ಸ್ ಔಟ್ ಮಾಡಿದರು. ಅನ್ಶುಲ್ ಕಾಂಬೋಜ್, ಜಸ್‌ಪ್ರೀತ್ ಬುಮ್ರಾ ಹಾಗೂ ಮೊಹಮ್ಮದ್ ಸಿರಾಜ್ ಬೇಗ ವಿಕೆಟ್ ಒಪ್ಪಿಸಿದರು.

ಬೆನ್ ಸ್ಟೋಕ್ಸ್‌ಗೆ 5 ವಿಕೆಟ್: ಇಂಗ್ಲೆಂಡ್ ತಂಡದ ಪರ ಮಾರಕ ಬೌಲಿಂಗ್ ದಾಳಿ ನಡೆಸಿದ ಬೆನ್ ಸ್ಟೋಕ್ಸ್ 72 ರನ್‌ಗಳಿಗೆ 5 ವಿಕೆಟ್ ಕಬಳಿಸಿದರು. ಜೋಫ್ರಾ ಆರ್ಚರ್ 73 ರನ್ ನೀಡಿ ಮೂರು ವಿಕೆಟ್ ಕಬಳಿಸಿದರು. ಉಳಿದಂತೆ ಕ್ರಿಸ್‌ವೋಕ್ಸ್, ಲಿಯಾಮ್ ಡಾಸನ್ ತಲಾ ಒಂದು ವಿಕೆಟ್ ಪಡೆದರು.

ಚೀನಾ ಓಪನ್ ಸೂಪರ್–1000 ಬ್ಯಾಡ್ಮಿಂಟನ್ ಟೂರ್ನಿ | ಪ್ರಣಯ್‌ಗೆ ಸೋಲು

ಸಾತ್ವಿಕ್–ಚಿರಾಗ್ ಜೋಡಿ ಕ್ವಾ. ಫೈನಲ್‌ಗೆ

ಗ್ವಾಂಗ್‌ಝೌ (ಚೀನಾ): ಗುರುವಾರ ನಡೆದ ಚೀನಾ ಓಪನ್ ಸೂಪರ್ 1000 ಟೂರ್ನಮೆಂಟ್‌ನಲ್ಲಿ ಭಾರತದ ಅಗ್ರಮಾನ್ಯ ಪುರುಷರ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ. ಆದರೆ ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ ಸೋತು ತಮ್ಮ ಸವಾಲು ಮುಗಿಸಿದ್ದಾರೆ.

ಚಾಂಗ್‌ಝೌನಲ್ಲಿ ನಡೆದ ಪ್ರೀ ಕ್ವಾರ್ಟರ್ ಸಾತ್ವಿಕ್ ಸಾಯಿರಾಜ್–ಚಿರಾಗ್ ಶೆಟ್ಟಿ ಸೇರಿಕೊಂಡು ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೋ ಮತ್ತು ಬಾಗಸ್ ಮೌಲಾನಾ ಅವರನ್ನು 21–19, 21–19 ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿದರು. ವಿಶ್ವದ 9ನೇ ಶ್ರೇಯಾಂಕದ ಎಚ್.ಎಸ್. ಪ್ರಣಯ್ ನಿರಾಶಾದಾಯಕ ಪ್ರದರ್ಶನ ತೋರುವ ಮೂಲಕ ಚೈನೀಸ್ ತೈಪೆಯ ಚೌ ಟಿಯೆನ್ ಚೆನ್ ವಿರುದ್ಧದ ಹೋರಾಟದಲ್ಲಿ ಸೋತರು. ಮೊದಲ ಗೇಮ್‌ನಲ್ಲಿ 21–18 ಅಂತರದಿಂದ ಗೆದ್ದ ಪ್ರಣಯ್, ಆ ಬಳಿಕ ಸಂಪೂರ್ಣ ಲಯ ಕಳೆದುಕೊಂಡರು. ಎದುರಾಳಿ ಆಟಗಾರ ಹಲವು ತಪ್ಪುಗಳಿಂದಲೇ ಅಂಕ ಗಳಿಸಿದ ಪ್ರಣಯ್ ಸತತ ಎರಡು ಗೇಮ್ ಸೋತು ಹೊರಬಿದ್ದರು.

ಆನ್‌ಲೈನ್ ಮೂಲಕ ಸಭೆಗೆ ಹಾಜರಾದ ಬಿಸಿಸಿಐ ಅಧಿಕಾರಿಗಳು

ತಟಸ್ಥ ಸ್ಥಳದಲ್ಲಿ ಏಷ್ಯಾ ಕಪ್ ಕ್ರಿಕೆಟ್

ದೆಹಲಿ: ಬಹುನಿರೀಕ್ಷಿತ 2025ರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯೋಜಿಸಲಿದೆ. ಆದರೆ ಪಾಕಿಸ್ತಾನದ ಜತೆಗಿನ ರಾಜಕೀಯ ಭಿನ್ನಭಿಪ್ರಾಯದಿಂದ ಟೂರ್ನಿಯನ್ನು ತಟಸ್ಥ ಸ್ಥಳದಲ್ಲಿ ಆಯೋಜಿಸಲು ಒಪ್ಪಿಕೊಂಡಿದೆ. ಇತ್ತೀಚೆಗೆ ಪಹಲ್ಗಾಮ್ ದಾಳಿಯ ಬಳಿಕ ಭಾರತ ಹಾಗೂ ಪಾಕಿಸ್ತಾನ ನಡುವಿನ ರಾಜಕೀಯ ಸಂಬಂಧ ಇನ್ನಷ್ಟು ಹದಗೆಟ್ಟಿತ್ತು, ಹಾಗಾಗಿ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡವು ತನ್ನೆಲ್ಲಾ ಪಂದ್ಯಗಳನ್ನು ಯುಎಇಯ ದುಬೈ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಿ, ಚಾಂಪಿಯನ್ ಆಗಿ ಹೊರಹೊಮ್ಮಿತ್ತು.

ಏಷ್ಯಾ ಕ್ರಿಕೆಟ್ ಕೌನ್ಸಿಲ್ ಗುರುವಾರ ಬಾಂಗ್ಲಾದೇಶದ ಢಾಕಾದಲ್ಲಿ ವಾರ್ಷಿಕ ಸಭೆಯನ್ನು ಏರ್ಪಡಿಸಿತ್ತು. ಬಿಸಿಸಿಐನ ಅಧಿಕಾರಿಗಳು ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು. ಮುಂದಿನ ಐಸಿಸಿ ಟಿ20 ವಿಶ್ವಕಪ್ ನಿಮಿತ್ತ ಈ ಬಾರಿ ಏಷ್ಯಾ ಕಪ್ ಟೂರ್ನಿಯನ್ನು ಟಿ20 ಸ್ವರೂಪದಲ್ಲಿ ಆಯೋಜಿಸಲಾಗಿದೆ. ಟೂರ್ನಿಯಲ್ಲಿ ಸಂಪ್ರದಾಯಿಕ ಎದುರಾಳಿಗಳಾದ ಭಾರತ ಹಾಗೂ ಪಾಕಿಸ್ತಾನ ತಂಡಗಳು ಒಂದೇ ಗುಂಪಿನಲ್ಲಿ ಕಾಣಿಸಿಕೊಳ್ಳಲಿದೆ. ಪಾಕಿಸ್ತಾನ ತಂಡದ ಪಂದ್ಯಗಳನ್ನು ಬಿಸಿಸಿಐ, ದುಬೈ ಇಂಟರ್‌ನ್ಯಾಷನಲ್ ಕ್ರೀಡಾಂಗಣದ ಹಾಗೂ ಅಬುದಾಬಿಯಲ್ಲಿ ಆಯೋಜಿಸಲು ಬಿಸಿಸಿಐ ಒಪ್ಪಿಕೊಂಡಿದೆ ಎಂದು ವರದಿಯಾಗಿದೆ.

ಎಂಟು ತಂಡಗಳ ಏಷ್ಯಾ ಕಪ್ ಟೂರ್ನಿಯ ಆತಿಥ್ಯದ ಹಕ್ಕು ಬಿಸಿಸಿಐಗೆ ಇದೆ. ಭಾರತ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಭಾಗವಹಿಸುವುದಿಲ್ಲ ಅಥವಾ ಆತಿಥ್ಯ ವಹಿಸುವುದಿಲ್ಲ ಎಂದು ಮೇ ತಿಂಗಳಲ್ಲಿ ತಿಳಿಸಿದ್ದವು. ಆದರೆ ಇದೀಗ ಬಿಸಿಸಿಐ ಏಷ್ಯಾ ಕಪ್ ಟೂರ್ನಿಯನ್ನು ಆಯೋಜಿಸುತ್ತಿದೆ. ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರು ಮುಂದಿನ ದಿನಗಳಲ್ಲಿ ಸಭೆ ಸೇರಿ ಸ್ಥಳಗಳು ಮತ್ತು ಪಂದ್ಯಾವಳಿಯ ವೇಳಾಪಟ್ಟಿಯನ್ನು ಅಂತಿಮಗೊಳಿಸಲಿದ್ದಾರೆ ಎನ್ನಲಾಗುತ್ತಿದೆ.

ಮುಂದಿನ ವರ್ಷ ಫೆಬ್ರವರಿಯಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಪೂರ್ವಸಿದ್ಧತಾ ಕಾರ್ಯಕ್ರಮವಾಗಿ ಈ ಬಾರಿ ಏಷ್ಯಾ ಕಪ್ ಟೂರ್ನಿಯನ್ನು ಸೆಪ್ಟೆಂಬರ್ 7ರಿಂದ ಮೂರನೇ ಅಥವಾ ನಾಲ್ಕನೇ ವಾರದವರೆಗೆ ತಾತ್ಕಾಲಿಕ ಅವಧಿಯನ್ನು ಪ್ರಸ್ತಾಪಿಸಲಾಗಿದೆ. ವಾಣಿಜ್ಯ ಯೋಜನೆಗೆ ಸಾಕಷ್ಟು ಸಮಯವನ್ನು ನೀಡುವ ಗುರಿಯೊಂದಿಗೆ ರಾಜೀವ್ ಶುಕ್ಲಾ ಮತ್ತು ಮೊಹ್ಸಿನ್ ನಖ್ವಿ ಕೂಡ ಆದಷ್ಟು ಬೇಗ ಪ್ರಾಯೋಜಕರೊಂದಿಗೆ ಚರ್ಚೆ ನಡೆಸಲಿದ್ದಾರೆ.

ಬಿಸಿಸಿಐ ನಿಲುವು

ಭಾರತ ಮತ್ತು ಬಾಂಗ್ಲಾದೇಶ ನಡುವಣ ದ್ವಿಪಕ್ಷೀಯ ಬಿಕ್ಕಟ್ಟನ್ನು ಉಲ್ಲೇಖಿಸಿ ಢಾಕಾದಲ್ಲಿ ಸಭೆ ನಡೆದರೆ ಸಭೆಗೆ ಹಾಜರಾಗುವುದಿಲ್ಲ ಎಂದು ಬಿಸಿಸಿಐ ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ಗೆ ಕಳೆದ ವಾರ ತಿಳಿಸಿತ್ತು. ಆದರೆ ಬುಧವಾರ, ರಾಜೀವ್ ಶುಕ್ಲಾ ಸಭೆಯಲ್ಲಿ ವರ್ಚುವಲ್ ಆಗಿ ಭಾಗವಹಿಸುತ್ತಾರೆ ಎಂದು ತಿಳಿಸಲಾಗಿತ್ತು. 2025ರ ಆಗಸ್ಟ್‌ನಲ್ಲಿ ನಿಗದಿಯಾಗಿದ್ದ ಭಾರತ ಮತ್ತು ಬಾಂಗ್ಲಾದೇಶ ನಡುವಿನ ದ್ವಿಪಕ್ಷೀಯ ಸರಣಿಯನ್ನು ರಾಜಕೀಯ ಬಿಕ್ಕಟ್ಟಿನಿಂದ ಅನಿರ್ದಿಷ್ಟವಧಿಗೆ ಮುಂದೂಡಲಾಗಿದೆ.

ಮುಂದಿನ ಆಗಸ್ಟ್‌ನಲ್ಲಿ ಮತ್ತೊಮ್ಮೆ ಭಾರತ–ಇಂಗ್ಲೆಂಡ್ ಮುಖಾಮುಖಿ

ಲಂಡನ್: ಭಾರತ ತಂಡವು ಜುಲೈ 2026ರಲ್ಲಿ ಎಂಟು ಪಂದ್ಯಗಳ ವೈಟ್‌ಬಾಲ್ ಸರಣಿಗಾಗಿ ಇಂಗ್ಲೆಂಡ್‌ಗೆ ಹಿಂತಿರುಗಲಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಗುರುವಾರ ದೃಢಪಡಿಸಿದೆ. 2026ರ ಪುರುಷರು ಮತ್ತು ಮಹಿಳೆಯರ ತವರು ವೇಳಾಪಟ್ಟಿಯನ್ನು ಅನಾ ವರಣಗೊಳಿಸುವ ಮೂಲಕ ಭಾರತ ತಂಡದ ಪ್ರವಾಸ ಖಚಿತವಾಯಿತು.

ನ್ಯೂಜಿಲೆಂಡ್ ವಿರುದ್ಧದ ತವರಿನ ಟೆಸ್ಟ್ ಪಂದ್ಯದ ನಂತರ ಭಾರತೀಯ ಪುರುಷರ ತಂಡವು ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ತಿಳಿಸಿದೆ. ಮುಂದಿನ ವರ್ಷ ಜುಲೈ 1, 2026ರಂದು ಡರ್ಹ್ಯಾಮ್‌ನ ರಿವರ್‌ಸೈಡ್ ಮೈದಾನದಲ್ಲಿ ಟಿ20 ಪಂದ್ಯವಾಡುವ ಮೂಲಕ ತಮ್ಮ ವೈಟ್‌ಬಾಲ್ ಪ್ರವಾಸವನ್ನು ಪ್ರಾರಂಭಿಸಲಿದೆ. ಐದು ಪಂದ್ಯಗಳ ಟಿ20 ಸರಣಿಯು ಮ್ಯಾಂಚೆಸ್ಟರ್, ನಾಟಿಂಗ್‌ಹ್ಯಾಮ್, ಬ್ರಿಸ್ಟಲ್ ಮತ್ತು ಸೌತಾಂಪ್ಟನ್‌ನಲ್ಲಿ ಮುಂದುವರಿಯಲಿದೆ. ನಂತರ ಬರ್ಮಿಂಗ್‌ಹ್ಯಾಮ್, ಕಾರ್ಡಿಫ್ ಮತ್ತು ಲಂಡನ್‌ನಲ್ಲಿ ಏಕದಿನ ಪಂದ್ಯಗಳು ನಡೆಯಲಿದ್ದು, ಅಂತಿಮ ಪಂದ್ಯ ಜುಲೈ 19ರಂದು ಲಾರ್ಡ್ಸ್‌ನಲ್ಲಿ ನಡೆಯಲಿದೆ.

ವಿ ಟಾಕೀಸ್

ಮಲೆನಾಡ ಮಡಿಲಲ್ಲಿ ರಿಪ್ಪನ್‌ಸ್ವಾಮಿ

ಈ ಹಿಂದೆ ಮಾಲ್ಗುಡಿ ಡೇಸ್ ಸಿನಿಮಾ ಮೂಲಕ ಪ್ರೇಮಕಾವ್ಯವನ್ನು ಪ್ರೇಕ್ಷಕರ ಮುಂದಿಟ್ಟ ನಿರ್ದೇಶಕ ಕಿಶೋರ್ ಮೂಡುಬಿದ್ರಿ, ಈಗ ಮತ್ತೊಂದು ಕಥೆಯನ್ನು ಹೊತ್ತು ಬರುತ್ತಿದ್ದಾರೆ. ಈ ಬಾರಿ ರಿಪ್ಪನ್ ಸ್ವಾಮಿಯ ರೋಚಕ ಕಥೆಯನ್ನು ತೆರೆಯಲ್ಲಿ ಕಟ್ಟಿಕೊಡಲಿ ದ್ದಾರೆ. ಕಿಶೋರ್ ತಮ್ಮ ಚಿತ್ರದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

● **ವಿ.ಸಿನಿಮಾಸ್: ರಿಪ್ಪನ್ ಸ್ವಾಮಿ ಇದು ಥ್ರಿಲ್ಲರ್ ಕಥೆಯೇ?**

ಕಿಶೋರ್ ಮೂಡುಬಿದ್ರಿ: ಇದು ಥ್ರಿಲ್ಲಿಂಗ್ ಜತೆಗೆ ಆ್ಯಕ್ಷನ್, ಕೌಟುಂಬಿಕ ಕಥೆಯನ್ನು ಒಳಗೊಂಡಿರುವ ಸಿನಿಮಾ. ನಾಯಕ ಸ್ವಾಮಿ, ಆತನನ್ನು ಎಲ್ಲರೂ ರಿಪ್ಪನ್ ಸ್ವಾಮಿ ಅಂತ ಕರೆಯುತ್ತಾರೆ ಅದು ಯಾಕೆ ಎಂಬುದೇ ಸಸ್ಪೆನ್ಸ್, ಅದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಪ್ರೇಕ್ಷಕರಿಗೆ ಹಿಡಿಸುವ ಎಲ್ಲಾ ಅಂಶಗಳು ಚಿತ್ರದಲ್ಲಿ ಬೆರೆತಿವೆ.

● **ವಿ.ಸಿ: ಇದು ನೈಜ ಘಟನೆಯಾಧಾರಿತ ಚಿತ್ರವೇ?**

ಕಿಶೋರ್: ಇದು ಕಾಲ್ಪನಿಕ ಕಥೆಯಾದಾರೂ ನೈಜತೆಗೆ ಹತ್ತಿರವಾಗುವ ಸ್ಟೋರಿ ಇದೆ. ಸಾಮಾನ್ಯವಾಗಿ ನಮ್ಮ ಸುತ್ತಮುತ್ತ ನಡೆಯುವ ಘಟನೆಯನ್ನು ಆಯ್ದು ಚಿತ್ರದ ಕಥೆ ಹೆಣೆದಿದ್ದೇನೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಸಿನಿಮಾವಾಗಿದೆ. ಮಾತ್ರವಲ್ಲ ಚಿತ್ರದಲ್ಲಿ ರೋಚಕ ತಿರುವುಗಳಿದ್ದು, ತೆರೆಯಲ್ಲಿ ಸಿನಿಮಾ ನೋಡುತ್ತಿದ್ದರೆ ಕಥೆಯ ಜತೆಗೆ ಪೇಕ್ಷಕರು ಸಾಗಲಿದ್ದಾರೆ. ಹಾಗೆಯೇ ಎಲ್ಲರಿಗೂ ಚಿತ್ರ ಕನೆಕ್ಟ್ ಆಗಲಿದೆ.

● **ವಿ.ಸಿ : ವಿಜಯ್ ರಾಘವೇಂದ್ರ ಅವರನ್ನು ವಿಭಿನ್ನ ಪಾತ್ರದಲ್ಲಿ ಕಾಣಬಹುದೆ?**

ಕಿಶೋರ್: ಖಂಡಿತವಾಗಿಯೂ ವಿಜಯ್ ರಾಘವೇಂದ್ರ ಅವರನ್ನು ಈ ಹಿಂದಿನ ಸಿನಿಮಾಗಳಿಗಿಂತಲೂ ವಿಭಿನ್ನ ಲುಕ್‌ನಲ್ಲಿ ಕಾಣಬಹುದು. ಇಲ್ಲಿ ನಾಯಕ ಹಳ್ಳಿಯ ಯುವಕ, ಗ್ರಾಮೀಣ ಭಾಗಕ್ಕೆ ಹೊಂದುವಂತೆ ಅವರ ಲುಕ್ ಇದೆ. ಈ ಹಿಂದಿನ ಸಿನಿಮಾಗಳಿಗಿಂತ ರಗಡ್ ಆಗಿ ವಿಜಯ್ ಕಂಗೊಳಿಸಿದ್ದಾರೆ. ಈ ಚಿತ್ರ ಅವರಿಗೆ ಖಂಡಿತಾ ಬಿಗ್ ಬ್ರೇಕ್ ನೀಡಲಿದೆ.

● **ವಿ.ಸಿ : ತಾರಾಗಣದ ಬಗ್ಗೆ ಹೇಳುವುದಾದರೆ?**

ಕಿಶೋರ್: ಈ ಚಿತ್ರದಲ್ಲಿ ವಿಜಯ್ ರಾಘವೇಂದ್ರ, ಸ್ವಾಮಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಶ್ವಿನಿ ಚಂದ್ರಶೇಖರ್, ಪ್ರಕಾಶ್, ಕೃಷ್ಣಮೂರ್ತಿ ಕವತಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಇಲ್ಲಿ ಪ್ರತಿ ಪಾತ್ರಕ್ಕೂ ಪ್ರಾಮುಖ್ಯತೆ ಇದ್ದು, ಎಲ್ಲಾ ಪಾತ್ರಗಳು ಕಥೆಗೆ ತಿರುವು ನೀಡಲಿವೆ. ಮಲೆನಾಡಿನ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಆಗಸ್ಟ್ 29ರಂದು ನಮ್ಮ ಚಿತ್ರ ತೆರೆಗೆ ಬರಲಿದೆ.

ಒಂದೇ ಚಿತ್ರದಲ್ಲಿ ವಿನಯ್–ಯುವ

ಯುವ ರಾಜ್‌ಕುಮಾರ್ ಅಭಿನಯದ ಎಕ್ಕ ಸೂಪರ್ ಹಿಟ್ ಆಗಿದೆ. ಎಕ್ಕ ಚಿತ್ರದ ಬಳಿಕ ಯುವ ಸ್ಯಾಂಡಲ್‌ವುಡ್‌ನ ಬೇಡಿಕೆಯ ನಟರಾಗಿದ್ದಾರೆ. ಯುವ ಮುಂದೆ ಮತ್ತೊಂದು ಬಿಗ್ ಬಜೆಟ್ ಸಿನಿಮಾದಲ್ಲಿ ನಟಿಸಲಿದ್ದಾರೆ. ಇದಕ್ಕೂ ಮುನ್ನ ಪಿಆರ್‌ಕೆ ಫಿಲಂಸ್‌ನಲ್ಲಿ ಮತ್ತೊಂದು ಚಿತ್ರ ನಿರ್ಮಾಣವಾಗಲಿದೆ. ವಿಶೇಷ ಎಂದರೆ ಈ ಸಿನಿಮಾದಲ್ಲಿ ವಿನಯ್ ರಾಜ್‌ಕುಮಾರ್ ನಾಯಕನಾಗಿ ನಟಿಸಲಿದ್ದಾರೆ. ಗ್ರಾಮೀಣ ಹಿನ್ನೆಲೆಯಲ್ಲಿ ಸಾಗುವ ಕಥೆ ಇದಾಗಿದ್ದು, ಪ್ರಸ್ತುತ ಕಾಲ ಘಟ್ಟದಲ್ಲಿ ಸಾಗಲಿದೆ. ವಿನಯ್ ರಾಜ್‌ಕುಮಾರ್‌ಗೆ ಹೇಳಿ ಮಾಡಿಸಿದ ಕಥೆ ಇದಾಗಿದ್ದು, ಖ್ಯಾತ ನಿರ್ದೇಶಕರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಹಾಗಾಗಿ ಪಿಆರ್‌ಕೆ ಪ್ರೊಡಕ್ಷನ್ ನಲ್ಲಿ ಮತ್ತೊಂದು ಸೂಪರ್ ಹಿಟ್ ಸಿನಿಮಾ ಮೂಡಿಬರುವುದು ಖಚಿತವಾಗಿದೆ.

ಈ ಚಿತ್ರದಲ್ಲಿ ದೊಡ್ಡ ತಾರಾಬಳಗವೇ ಇರಲಿದೆ. ಇನ್ನೂ ವಿಶೇಷ ಎಂದರೆ ಮುಂದೆ ವಿನಯ್ ರಾಜ್ ಕುಮಾರ್ ಹಾಗೂ ಯುವ ರಾಜ್ ಕುಮಾರ್ ಒಂದೇ ಸಿನಿಮಾದಲ್ಲಿ ಅಭಿನಯಿ ಸಲಿದ್ದಾರೆ. ದೊಡ್ಮನೆ ಮೊಮ್ಮಕಳನ್ನು ಒಂದೇ ಸಿನಿಮಾದಲ್ಲಿ ಕಾಣಲು ಸಿನಿಪ್ರಿಯರು ಕಾತರರಾಗಿದ್ದಾರೆ. ಇದಕ್ಕೆ ತಕ್ಕಂತೆ ಇಬ್ಬರಿಗೂ ಹೊಂದುವ ಕಥೆ ಬರೆಯಲು ನಿರ್ದೇಶಕರು ತಯಾರಿ ನಡೆಸಿದ್ದಾರೆ. ವಿನಯ್ ಹಾಗೂ ಯುವ ಒಟ್ಟಿಗೆ ನಟಿಸುವ ಚಿತ್ರ ಪಿಆರ್‌ಕೆ ಪ್ರೊಡಕ್ಷನ್‌ನಲ್ಲಿ ಮೂಡಿಬರುವ ಸಾಧ್ಯತೆಯೂ ಇದೆ. ಸದ್ಯ ವಿನಯ್ ಗ್ರಾಮಾಯಣ ಸಿನಿಮಾದಲ್ಲಿ ಬ್ಯುಸಿಯಾಗಿದ್ದು, ಅಂದೊಂದಿತ್ತು ಕಾಲ ಸಿನಿಮಾದ ಬಿಡುಗಡೆಗೆ ಎದಿರು ನೋಡುತ್ತಿದ್ದಾರೆ.

ಚಂದನವನದಲ್ಲಿ ಸಿನಿಮಾ ಸುಗ್ಗಿ

ಈ ವರ್ಷದ ಆರಂಭದಿಂದಲೂ ಚಂದನವನ ಮಂಕಾಗಿತ್ತು. ಯಾವುದೇ ಹಿಟ್ ಸಿನಿಮಾಗಳು ಬಾರದೆ, ಪ್ರೇಕ್ಷಕರು ಚಿತ್ರ ಮಂದಿರದಿಂದ ದೂರವೇ ಉಳಿದಿದ್ದರು. ಈಗ ಸ್ಯಾಂಡಲ್‌ವುಡ್‌ನಲ್ಲಿ ಸುಗ್ಗಿಯ ಸಂಭ್ರಮ ಮನೆಮಾಡಿದೆ. ಎಕ್ಕ ಮತ್ತು ಜೂನಿಯರ್ ಸಿನಿಮಾಗಳು ಹಿಟ್ ಆದ ಬಳಿಕ ಚಂದನವನದಲ್ಲಿ ಹೊಸ ಭರವಸೆ ಮೂಡಿದೆ. ಹಾಗಾಗಿ ಹೊಸಬರ ಸಾಲು ಸಾಲು ಸಿನಿಮಾಗಳು ತೆರೆಗೆ ಸಿದ್ಧವಾಗಿವೆ. ಆಗಸ್ಟ್‌ನಲ್ಲಿ ಸ್ಟಾರ್ ನಟರ ಸಿನಿಮಾಗಳು ರಿಲೀಸ್ ಆಗಲಿದ್ದು, ಮತ್ತಷ್ಟು ಸಂಭ್ರಮ ಹೆಚ್ಚಲಿದೆ.

ಆಗಸ್ಟ್ 1 ರಂದು ಲವ್ ಮ್ಯಾಟ್ರು, ಕೊತ್ತಲವಾಡಿ, ಎಲ್ಟು ಮುತ್ತ, ಕಮರೊ2 ಸಿನಿಮಾಗಳು ತೆರೆಗೆ ಸಿದ್ಧವಾಗಿವೆ. ಈ ಸಿನಿಮಾಗಳಿಗಿಂತ ಶಿವಣ್ಣ, ಉಪೇಂದ್ರ ಅಭಿನಯದ 45 ನಿರೀಕ್ಷೆ ಹೆಚ್ಚಿಸಿದೆ. ಇಷ್ಟು ದಿನ ಚಿತ್ರರಂಗದಲ್ಲಿ ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದ ಅರ್ಜುನ್ ಜನ್ಯ 45 ಚಿತ್ರವನ್ನು ನಿರ್ದೇಶಿಸಿದ್ದು ಈ ಚಿತ್ರದ ಮೂಲಕ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಬಹುದಿನಗಳ ಬಳಿಕ ಶಿವರಾಜ್ ಕುಮಾರ್ ಹಾಗೂ ಉಪೇಂದ್ರ ಈ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದು ಚಿತ್ರವನ್ನು ಕಣ್ತುಂಬಿಕೊಳ್ಳಲು ಸಿನಿಪ್ರಿಯರು ಕಾತರರಾಗಿದ್ದಾರೆ.

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಅಭಿನಯದ ಅಂದೊಂದಿತ್ತು ಕಾಲ ಆಗಸ್ಟ್‌ನಲ್ಲಿ ರಿಲೀಸ್ ಆಗಲಿದೆ. ಹಾಡುಗಳಲ್ಲೇ ಗಮನಸೆಳೆದಿರುವ ಅಂದೊಂದಿತ್ತು ಕಾಲ ಈ ವರ್ಷದ ನಿರೀಕ್ಷಿತ ಸಿನಿಮಾಗಳಲ್ಲಿ ಒಂದಾಗಿದೆ. ಅದಿತಿ ಪ್ರಭದೇವ ಹಾಗೂ ನಿಶಾ ಕೃಷ್ಣನ್ ಅಭಿನಯದ ಈ ಚಿತ್ರ ತಾರಾಗಣದಲ್ಲಿಯೇ ಗಮನಸೆಳೆದಿದೆ. ಅಂತೆಯೇ ವಿನಯ್ ರಾಜ್‌ಕುಮಾರ್ ನಟಿಸಿರುವ ಗ್ರಾಮಾಯಾಣ ಚಿತ್ರ ಕೂಡ ಶೂಟಿಂಗ್ ಮುಗಿಸಿದ್ದು, ಈ ವರ್ಷವೇ ರಿಲೀಸ್ ಆಗಲಿದೆ.

ಈ ವರ್ಷದ ಬಹು ನಿರೀಕ್ಷಿತ ಚಿತ್ರಗಳಲ್ಲಿ ಕೆಡಿ ಚಿತ್ರವೂ ಒಂದು. ಜೋಗಿ ಪ್ರೇಮ್ ನಿರ್ದೇಶನದ ಕೆಡಿ ಈ ಹಿಂದೆಯೇ ತೆರೆಗೆ ಬರಬೇಕಿತ್ತು. ಆದರೆ ಚಿತ್ರೀಕರಣ ಮುಗಿಯದ ಕಾರಣ ಚಿತ್ರದ ಬಿಡುಗಡೆ ತಡವಾಗಿತ್ತು. ಅಂತು ಈಗ ಶೂಟಿಂಗ್ ಮುಗಿಸಿರುವ ಕೆಡಿ ಅಕ್ಟೋಬರ್‌ನಲ್ಲಿ ಭರ್ಜರಿಯಾಗೇ ತೆರೆಗೆ ಎಂಟ್ರಿಕೊಡಲಿದ್ದಾನೆ. ಕೆಡಿ ಭೂಗತ ಲೋಕದ ಕಥೆಯನ್ನು ಒಳಗೊಂಡ ಸಿನಿಮಾವಾಗಿದ್ದು, ಧ್ರುವ ಸರ್ಜಾ ಅಂಡರ್‌ವರ್ಲ್ಡ್ ಡಾನ್ ಆಗಿ ಅಬ್ಬರಿಸಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್, ರಮೇಶ್ ಅರವಿಂದ್, ಬಾಲಿವುಡ್ ನಟ ಸಂಜಯ್ ದತ್, ಶಿಲ್ಪಾ ಶೆಟ್ಟಿ ಚಿತ್ರದ ತಾರಾಬಳಗದಲ್ಲಿದ್ದಾರೆ. ಹೀಗೆ ದೊಡ್ಡ ತಾರಾಬಳಗವೇ ಇರುವ ಕೆಡಿ, ಕೆವಿಎನ್ ಪ್ರೊಡಕ್ಷನ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಸಲಗನಾಗಿ ಅಬ್ಬರಿಸಿ, ಭೀಮನಾಗಿ ಬೊಬ್ಬಿರಿದ ದುನಿಯಾ ವಿಜಯ್ ಈಗ ಲ್ಯಾಂಡ್ ಲಾರ್ಡ್ ಆಗಿ ತೆರೆಗೆ ಎಂಟ್ರಿಕೊಡಲಿದ್ದಾರೆ. ಜಡೇಶ್‌ಕುಮಾರ್ ಹಂಪಿ ಕಥೆ ಬರೆದು ನಿರ್ದೇಶನ ಮಾಡುತ್ತಿರುವ ಲ್ಯಾಂಡ್‌ಲಾರ್ಡ್ ಪೋಸ್ಟರ್‌ನಲ್ಲಿಯೇ ಕುತೂಹಲ ಮೂಡಿಸಿದೆ. ಈ ಚಿತ್ರಕ್ಕಾಗಿ ಬೆಂಗಳೂರಿನ ಹೊರವಲಯದಲ್ಲಿ ಅದ್ದೂರಿ ಸೆಟ್ ಹಾಕಿ ಚಿತ್ರೀಕರಣ ನಡೆಸಲಾಗುತ್ತಿದ್ದು, ಚಿತ್ರತಂಡ ಅಂತಿಮ ಹಂತದ ಚಿತ್ರೀಕರಣದಲ್ಲಿದೆ. ನವೆಂಬರ್‌ನಲ್ಲಿ ಲ್ಯಾಂಡ್ ಲಾರ್ಡ್ ತೆರೆಗೆ ಬರುವ ನಿರೀಕ್ಷೆಯಿದೆ. ಇದರ ಜತೆಗೆ ಮಾರುತ ಚಿತ್ರದಲ್ಲಿಯೂ ದುನಿಯಾ ವಿಜಯ್ ನಟಿಸಿದ್ದಾರೆ. ಎಸ್.ನಾರಾಯಣ್ ನಿರ್ದೇಶನದ ಮಾರುತ ಶೀಘ್ರದಲ್ಲಿಯೇ ತೆರೆಗೆ ಅಪ್ಪಳಿಸಲಿದೆ.

ಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಕಾಂತಾರ ಚಾಪ್ಟರ್ 1 ಅಕ್ಟೋಬರ್‌ನಲ್ಲಿ ರಿಲೀಸ್ ಆಗಲಿದೆ. ಆರಂಭದಿಂದಲೇ ನಿರೀಕ್ಷೆ ಮೂಡಿಸಿರುವ ಕಾಂತಾರ ಚಾಪ್ಟರ್ 1 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ವಿಶ್ವಾದ್ಯಂತ ರಿಲೀಸ್ ಆಗಲಿದೆ.

ಕೃಷ್ಣಂ ಪ್ರಣಯ ಸಖಿ ಯಶಸ್ಸಿನ ಖುಷಿಯಲ್ಲಿರುವ ನಟ ಗಣೇಶ್ ಪಿನಾಕಧರನಾಗಿ ಅವತಾರ ತಾಳಿದ್ದಾರೆ. ಪಿನಾಕಾ ಪೌರಾಣಿಕ ಕಥೆಯ ಜತೆಗೆ ಐತಿಹಾಸಿಕ ಕಥೆಯನ್ನು ಒಳಗೊಂಡಿದ್ದು ಅದ್ದೂರಿಯಾಗಿ ಮೂಡಿಬರುತ್ತಿದೆ. ಹಿಂದೆಂದೂ ಕಾಣದ ಅವತಾರದಲ್ಲಿ ಗಣೇಶ ಕಾಣಿಸಿಕೊಳ್ಳುತ್ತಿದ್ದಾರೆ.

ಇನ್ನು ಶಿವಣ್ಣ ಹಾಗೂ ಡಾಲಿ ಧನಂಜಯ ಮತ್ತೆ ಒಂದಾಗಿದ್ದು, 666 ಆಪರೇಷನ್ ಥಿಯೇಟರ್ ಸಿನಿಮಾದಲ್ಲಿ ಒಟ್ಟಿಗೆ ನಟಿಸುತ್ತಿದ್ದಾರೆ. ಹೇಮಂತ್.ಎಂ.ರಾವ್ ನಿರ್ದೇಶನದ ಈ ಚಿತ್ರ ಪೋಸ್ಟರ್‌ನಲ್ಲಿಯೇ ಕುತೂಹಲ ಮೂಡಿಸಿದೆ. ಭರದಿಂದ ಚಿತ್ರೀಕರಣ ಸಾಗುತ್ತಿದ್ದು ಈ ವರ್ಷಾಂತ್ಯಕ್ಕೆ ಚಿತ್ರ ತೆರೆಗೆ ಬರುವ ನಿರೀಕ್ಷೆ ಇದೆ.

ಇನ್ನು ಕಿಚ್ಚ ಸುದೀಪ್ ಅಭಿನಯದ ಹೊಸ ಚಿತ್ರ ಸೆಟ್ಟೇರಿದ್ದು ಚಿತ್ರೀಕರಣವೂ ಆರಂಭವಾಗಿದೆ. ಕಳೆದ ಬಾರಿ ಮ್ಯಾಕ್ಸ್ ಯಶಸ್ಸು ಕಂಡಿತ್ತು. ಅಂತೆಯೇ ಈ ಬಾರಿ ಕಿಚ್ಚ ಸುದೀಪ್ ಅವರ ಹೊಸ ಚಿತ್ರ ಕಮಾಲ್ ಮಾಡಲಿದೆ. ಈ ಚಿತ್ರ ಡಿಸೆಂಬರ್‌ನಲ್ಲಿ ತೆರೆಗೆ ಬರಲಿದೆ. ಇದರ ಜತೆಗೆ ಹೊಸಬರ ಹೊಸ ಚಿತ್ರಗಳು ಕೂಡ ಸದ್ದು ಮಾಡಲಿವೆ.